
ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸಶಸ್ತ್ರ ಪಡೆಗಳಲ್ಲಿ ಸಿರಿಧಾನ್ಯ ಬಳಕೆಗೆ ಕೇಂದ್ರ ಉತ್ತೇಜನ: ರಾಜನಾಥ್ ಸಿಂಗ್ |೦೭

ಸಂಸತ್ ಆವರಣದಲ್ಲಿ ಮೋದಿ-ರಾಗಾ ಅಪರೂಪದ ಸಂಭಾಷಣೆ |೦೭



ಹುಬ್ಬಳ್ಳಿ

ಭಾನುವಾರ, 12 ಏಪ್ರಿಲ್ 2026

ಸಂಪುಟ 16, ಸಂಚಿಕೆ 18, ಪುಟಗಳು 12

■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ

₹5

RNI No.KARKAN/2011/64413

hosadigantha.com
epaper.hosadigantha.com
Hosadigantha Digital

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ : ದಶಮಿ, ನಕ್ಷತ್ರ: ಶ್ರವಣ

ದಿನದ ಮಾತು

ಕಷ್ಟವನ್ನು ಕಾಣದ, ಸೋಲನ್ನು ಅನುಭವಿಸದ ಮನುಷ್ಯನನ್ನು ನಂಬಬೇಡಿ.

▲ ಅರವಿಂದ

ಬಲ್ಲವನೇ ಬಲ್ಲ ಭಾಷೆಯ ಸವಿಯ

ವಕ್ರದೃಷ್ಟಿ

◆ ಎನ್.ರಾಮನಾಥ್

◆ ಪುಟ ೬

ಕಿರುಸುದ್ದಿ

ರಾಜ್ಯದ ವಂದೇ ಭಾರತ್ ಸ್ಲೀಪರ್ ರೈಲಿಗೆ ಸಮ್ಮತಿ

◆ **ಬೆಂಗಳೂರು:** ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ ರೈಲು ಕಾರ್ಯಾಚರಣೆಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅನುಮತಿ ನೀಡಿದ್ದಾರೆ. ಕೆಎಸ್ ಆರ್ ಬೆಂಗಳೂರು ಮತ್ತು ಛತ್ರಪತಿ ಶಿವಾಜಿ ಮಹಾರಾಜ್ ನಡುವೆ ಹೊಸ ವಂದೇ ಭಾರತ್ ಸ್ಲೀಪರ್ ರೈಲನ್ನು ಪರಿಚಯಿಸಲು ಅನುಮೋದನೆ ನೀಡಲಾಗಿದೆ ಎಂದು ಅಶ್ವಿನಿ ವೈಷ್ಣವ್ ತಿಳಿಸಿರುವ ಅಧಿಕೃತ ಅನುಮತಿ ಪತ್ರವನ್ನು ಸಂಸದ ಪಿ.ಸಿ.ಮೋಹನ್ ಅವರು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ➡ಪುಟ ೪

ಊಹಾ ಪತ್ರಿಕೋದ್ಯಮ ಬಿಡಿ: ಸಿಎಂ ಸಿದ್ದರಾಮಯ್ಯ

◆ ಪುಟ ೫

ಕೇರಳದಲ್ಲಿ ಬಾಲಕಿ ಶ್ರೀನಂದಾ ಅಂತ್ಯಕ್ರಿಯೆ

◆ ಪುಟ ೫

ಎಂಜಿನಿಯರ್ ಮನೆಯಲ್ಲಿ 6 ಕೆಜಿ ಚಿನ್ನ, 5 ಕೆಜಿ ಬೆಳ್ಳಿ ಪತ್ತೆ

◆ ಪುಟ ೫

ಒಬಿಸಿಗೆ ಕೊಡವರ ಸೇರ್ಪಡೆ ಯದುವೀರ್ ಭರವಸೆ

◆ ಪುಟ ೫

ದೇಶದಲ್ಲಿ ಇಂಧನ ಕೊರತೆ ಇಲ್ಲ: ಸಚಿವ ಜೋಶಿ

◆ ಪುಟ ೫

ಆರೆಸ್ಸೆಸ್ ಕಚೇರಿಗೆ ನಟ ರಣವೀರ್ ಸಿಂಗ್ ಭೇಟಿ

◆ ಪುಟ ೭

ಕನ್ನಡ ಬಳಕೆ: ಕೇರಳ ಸರ್ಕಾರಕ್ಕೆ ಹೈ ಗಡುವು

◆ ಪುಟ ೭

ಪ್ರತ್ಯೇಕ ಉಗ್ರ ವಿರೋಧಿ ಕಾರ್ಯಾಚರಣೆ: ಇಬ್ಬರ ಸೆರೆ

◆ ಪುಟ ೭

ಆರ್ಟೆಮಿಸ್ 2 ಯಶಸ್ವಿ ಸ್ಪ್ಲಾಶ್‌ಡೌನ್

◆ ಪುಟ ೭

ಫಲ ನೀಡೀತೇ ಶಾಂತಿ ಮಾತು? | ಸಂಘರ್ಷ ಅಂತ್ಯ ಯತ್ನ

ನಿರ್ಣಾಯಕ ಸಂಧಾನ

◆ **ಇಸ್ಲಾಮಾಬಾದ್:** ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ರಕ್ತಸಿಕ್ತ ಸಂಘರ್ಷಕ್ಕೆ ತೆರೆ ಎಳೆಯುವ ನಿಟ್ಟಿನಲ್ಲಿ ಅಮೆರಿಕ ಮತ್ತು ಇರಾನ್ ನಡುವಿನ ನಿರ್ಣಾಯಕ ಶಾಂತಿ ಮಾತುಕತೆ ಶನಿವಾರ ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ಆರಂಭವಾಗಿದ್ದು, ಇದರ ನಡುವೆಯೇ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಎಚ್ಚರಿಕೆಯ ಮಾತುಗಳೂ ಹೊರಬಿದ್ದಿವೆ.



ಉಭಯ ಕಡೆಯವರು ಮುಖಾಮುಖಿಯಾಗಿ ಈ ಮಾತುಕತೆ ನಡೆಸುತ್ತಿದ್ದಾರೆ. ಈ ಮಾತುಕತೆ ಫಲಪ್ರದವಾಗುವ ಬಗ್ಗೆ ಅಮೆರಿಕ ಉಪಾಧ್ಯಕ್ಷ ವ್ಯಾನ್ಸ್ ಆಶಯ ವ್ಯಕ್ತಪಡಿಸಿದ್ದಾರೆ.

ಈ ಉನ್ನತ ಮಟ್ಟದ ಮಾತುಕತೆಗೆ ಮುನ್ನ, ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ನೇತೃತ್ವದ ಅಮೆರಿಕ ನಿಯೋಗ ಹಾಗೂ ಇರಾನ್ ಸಂಸತ್ ಅಧ್ಯಕ್ಷ ಮೊಹಮ್ಮದ್ ಬಾಗೇರ್ ಗಾಲಿಬಾಫ್ ನೇತೃತ್ವದ ಇರಾನಿ ನಿಯೋಗ ಪ್ರತ್ಯೇಕವಾಗಿ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅವರನ್ನು ಭೇಟಿ ಮಾಡಿದವು. ವ್ಯಾನ್ಸ್ ಜತೆ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಳಿಯ ಜಾರೆಡ್ ಕುಶ್ನರ್ ಆಗಮಿಸಿದ್ದಾರೆ. ಇರಾನ್ ನಿಯೋಗದಲ್ಲಿ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ, ಸುಪ್ರೀಮ್ ರಾಷ್ಟ್ರೀಯ ರಕ್ಷಣಾ ಮಂಡಳಿ ಕಾರ್ಯದರ್ಶಿ ಅಲಿ ಅಕ್ಬರ್ ಅಹ್ಮದಿಯನ್ ಹಾಗೂ ಕೇಂದ್ರೀಯ ಬ್ಯಾಂಕ್ ಗವರ್ನರ್ ಅಬ್ದೊಲ್‌ನಾಸರ್ ಹೆಮ್ಮತಿ ಸೇರಿದ್ದಾರೆ. ➡ಪುಟ ೪

ಕದಡಿದ ಕದನ ವಿರಾಮ

ನಾಲ್ಕು ದಿನಗಳ ಹಿಂದೆ ಇರಾನ್ ಮತ್ತು ಅಮೆರಿಕ ಎರಡು ವಾರಗಳ ಕದನ ವಿರಾಮ ಘೋಷಿಸಿದ್ದವು. ಆದರೆ, ಲೆಬನಾನ್ ಮೇಲೆ ಇಸ್ರೇಲ್ ನಡೆಸಿದ ಭಾರೀ ವಾಯು ದಾಳಿಯಲ್ಲಿ 300ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಈ ಕದನ ವಿರಾಮ ಛಿದ್ರವಾಗಿದೆ. ಟೆಹ್ರಾನ್ ಈ ದಾಳಿಯು ಕದನ ವಿರಾಮದ ಷರತ್ತುಗಳ ಉಲ್ಲಂಘನೆ ಎಂದು ಆರೋಪಿಸಿದರೆ, ಅಮೆರಿಕ ಮತ್ತು ಇಸ್ರೇಲ್ ಲೆಬನಾನ್ ಒಪ್ಪಂದದ ಭಾಗವಲ್ಲ ಎಂದು ಸಮರ್ಥಿಸಿಕೊಂಡಿವೆ. ಇರಾನ್ ಅಧ್ಯಕ್ಷ ಮಸೂದ್ ಪೆಝೆಶ್ಕಿಯಾನ್ ಲೆಬನಾನ್ ಮೇಲಿನ ಇಸ್ರೇಲಿ ದಾಳಿಯು ಕದನ ವಿರಾಮವನ್ನು ಬಹಿರಂಗವಾಗಿ ಉಲ್ಲಂಘಿಸಿದೆ ಎಂದೂ, ಇದು ಮಾತುಕತೆಯನ್ನೇ ಅರ್ಥಹೀನಗೊಳಿಸುತ್ತದೆ ಎಂದೂ ಹೇಳಿದ್ದಾರೆ.



ಇರಾನ್‌ನ 10 ಅಂಶಗಳ ಬೇಡಿಕೆ ಪಟ್ಟಿ

ಮಾತುಕತೆಗೆ ಮುನ್ನ ಇರಾನ್ 10 ಅಂಶಗಳ ಯೋಜನೆಯನ್ನು ಮಂಡಿಸಿದ್ದು, ಅದರಲ್ಲಿ ಪಶ್ಚಿಮ ಏಷ್ಯಾದಿಂದ ಅಮೆರಿಕ ಸೇನೆಯ ವಾಪಸಾತಿ, ಇರಾನ್ ವಿರುದ್ಧದ ನಿರ್ಬಂಧಗಳ ತೆರವು ಮತ್ತು ಹಾರ್ಮುಜ್ ಜಲಸಂಧಿಯ ಮೇಲೆ ಇರಾನ್‌ಗೆ ನಿಯಂತ್ರಣ ನೀಡುವ ಬೇಡಿಕೆಗಳು ಸೇರಿವೆ. ಇರಾನ್‌ನ ಅರೆ-ಅಧಿಕೃತ ತಸ್ನಿಮ್ ಸುದ್ದಿಸಂಸ್ಥೆ, ಇಸ್ರೇಲಿ ಆಕ್ರಮಣವನ್ನು ನಿಲ್ಲಿಸುವುದು ಮತ್ತು ಇರಾನ್‌ನ ಸ್ಥಗಿತ ಆಸ್ತಿಗಳನ್ನು ಮುಕ್ತಗೊಳಿಸುವುದು ಸೇರಿದಂತೆ ಟೆಹ್ರಾನ್‌ನ ಪೂರ್ವಷರತ್ತುಗಳು ಈಡೇರುವವರೆಗೆ ನೇರ ಮಾತುಕತೆ ಆರಂಭವಾಗುವುದಿಲ್ಲ ಎಂದು ಮೊದಲು ವರದಿ ಮಾಡಿತ್ತು. ಆದರೆ ನಂತರ, ಅಮೆರಿಕವು ಇರಾನ್‌ನ ಸ್ಥಗಿತ ಆಸ್ತಿಗಳನ್ನು ಬಿಡುಗಡೆ ಮಾಡಲು ಒಪ್ಪಿದೆ ಎಂದು ತಿಳಿದ ಮೂಲವನ್ನು ಉಲ್ಲೇಖಿಸಿ ಹೇಳಿದೆ. ಆದರೆ ಈ ವರದಿಗೆ ಅಧಿಕೃತ ದೃಢೀಕರಣ ದೊರೆತಿಲ್ಲ.

- ಇಸ್ಲಾಮಾಬಾದ್‌ನಲ್ಲಿ ಅಮೆರಿಕ-ಇರಾನ್ ಶಾಂತಿ ಮಾತುಕತೆ ಆರಂಭ
- ಪಾಕಿಸ್ತಾನ ಮಧ್ಯಸ್ಥಿಕೆ; ವಿಶ್ವದ ಕಣ್ಣು ಸೆರೆನಾ ಹೋಟೆಲ್‌ನತ್ತ
- ಜಾಗತಿಕ ಇಂಧನ ಮಾರುಕಟ್ಟೆ ಮೇಲೆ ನೇರ ಪರಿಣಾಮ

ಅಮೆರಿಕ-ಇರಾನ್ ಎಚ್ಚರಿಕೆ ನುಡಿಗಳು

ಅಧ್ಯಕ್ಷ ಟ್ರಂಪ್ ಈಗಾಗಲೇ ಮಾತುಕತೆ ಫಲ ನೀಡದಿದ್ದಲ್ಲಿ ಇರಾನ್ ವಿರುದ್ಧ ಸೇನಾ ಕಾರ್ಯಾಚರಣೆ ಪುನರಾರಂಭಿಸುವ ಎಚ್ಚರಿಕೆ ನೀಡಿದ್ದಾರೆ. ಜತೆಗೆ, ಹೋರ್ಮುಜ್ ಜಲಸಂಧಿಯಿಂದ ಅಮೆರಿಕದ ಎರಡು ಯುದ್ಧ ನೌಕೆಗಳು ತೆರಳಿರುವ ಬಗ್ಗೆಯೂ ಅವರು ಮಾಹಿತಿ ಹಂಚಿಕೊಂಡಿದ್ದಾರೆ. ಇತ್ತ ಪಾಕಿಸ್ತಾನಕ್ಕೆ ಹೊರಡುವ ಮುನ್ನ ವ್ಯಾನ್ಸ್ ಅವರು, ಅಮೆರಿಕ ಅಧ್ಯಕ್ಷರು ಹೇಳಿದಂತೆ, ಇರಾನಿಯರು ಸದ್ಭಾವನೆಯಿಂದ ಮಾತುಕತೆ ನಡೆಸಲು ಸಿದ್ಧರಿದ್ದರೆ, ನಾವು ಖಂಡಿತವಾಗಿ ಸ್ನೇಹಹಸ್ತ ಚಾಚುತ್ತೇವೆ. ಆದರೆ ನಮ್ಮನ್ನು ವಂಚಿಸಲು ಯತ್ನಿಸಿದರೆ, ನಮ್ಮ ಸಂಧಾನ ತಂಡ ಅಷ್ಟು ಸಹನಶೀಲವಾಗಿರದು ಎಂದು ಹೇಳಿದ್ದಾರೆ.

ರೈತರ ಪಾಲಿಗೆ ಕೈ ಕಂಟಕ: ದೇವೇಗೌಡ

ಜೆಡಿಎಸ್ ಸಮಾವೇಶ ಭಾರೀ ಶಕ್ತಿ ಪ್ರದರ್ಶನ



◆ **ಬೆಂಗಳೂರು:** ಮುಂಬರುವ ಜಿಬಿಎ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ಗಮನದಲ್ಲಿಟ್ಟುಕೊಂಡು ಜೆಡಿಎಸ್ ಪಕ್ಷವು ಜನತಾ ಸಮಾವೇಶ, ಪಕ್ಷದ ಬೆಳ್ಳಿಹಬ್ಬ ಆಚರಣೆ ಮಾಡುವ ಮೂಲಕ ಶಕ್ತಿ ಪ್ರದರ್ಶನ ಮಾಡಿತು.

ಕೆಂಗೇರಿಯ ಕೊಮ್ಮಘಟ್ಟ ರಸ್ತೆಯಲ್ಲಿರುವ ನೈಸ್ ಮೋದಿ ಗ್ರೌಂಡ್‌ನಲ್ಲಿ ಆಯೋಜಿಸಲಾಗಿದ್ದ ಜೆಡಿಎಸ್ ಪಕ್ಷದ ಜನತಾ ಸಮಾವೇಶ ಹಾಗೂ ಬೆಳ್ಳಿಹಬ್ಬ ಮಹೋತ್ಸವ ಜೆಡಿಎಸ್ ಅಸ್ತಿತ್ವ ಕಳೆದುಕೊಳ್ಳುತ್ತಿದೆ ಎಂದು ಟೀಕಿಸುವವರಿಗೆ ಸವಾಲಾಗಿ ಪರಿಣಮಿಸಿತು. ಬೆಂಗಳೂರಿನಲ್ಲೂ ಜೆಡಿಎಸ್ ನೆಲೆ ಭದ್ರವಾಗಿದೆ ಎಂಬುದನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಈ ಬೃಹತ್ ಸಮಾವೇಶ ಸಾಕ್ಷಿಯಾಯಿತು.

ಸಮಾವೇಶದಲ್ಲಿ ಮಾತನಾಡಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು, ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಬೆಂಗಳೂರು ನಗರಕ್ಕೆ ನೀಡಿರುವ ಕೊಡುಗೆ ಅಪಾರ. ಆ ಕೊಡುಗೆ ಇಂದಿಗೂ ಮಾದರಿ ಎಂದು ಸ್ಮರಿಸಿದರು. ರೈತರು ಸಂಕಷ್ಟದಲ್ಲಿದ್ದಾಗ, ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ ಅವರ ನೆರವಿಗೆ ನಿಂತು ರೈತರ ಸಾಲ ಮನ್ನಾ ಮಾಡುವ ಮೂಲಕ ಅವರ ಕುಟುಂಬಕ್ಕೆ ಆರ್ಥಿಕ ನೆರವು ನೀಡುವ ಕೆಲಸ ಮಾಡಿದ್ದಾರೆ. ಆದರೆ ಈಗಿನ ಕಾಲಘಟ್ಟದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ರೈತರಿಗೆ ಅನುಕೂಲವಾಗುವ ಇಂತಹ ಒಂದೇ ಒಂದು ಕೆಲಸ ಮಾಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ➡ಪುಟ ೪

ನಮ್ಮ ಮನೆಗೆ ಸೂಟ್‌ಕೇಸ್ ಹಿಡಿದು ಬರುವುದಿಲ್ಲ

ಮಿಸ್ಟರ್ ಸಿದ್ದರಾಮಯ್ಯನವರೇ ನಮ್ಮ ಮನೆಗೆ ಬರುವವರು ಸೂಟ್‌ಕೇಸ್ ಇರುವವರಲ್ಲ, ಸೂಟು ಬೂಟು ಹಾಕಿಕೊಂಡು ಬರುವವರಲ್ಲ, ರೋಗಿಗಳು, ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವವರು, ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿರುವವರು ಸಹಾಯಹಸ್ತ ಕೇಳಲು ಬರುತ್ತಾರೆ. ನಿಮ್ಮ ಮನೆಗೆ ಇವರು ಬರುತ್ತಾರೆಯೇ ಎಂದು ಎಚ್‌ಡಿಕೆ ಪ್ರಶ್ನಿಸಿದರು.

> **ಜಿಬಿಎ ಚುನಾವಣೆ 2028ಕ್ಕೆ ದಿಕ್ಸೂಚಿ ಆಗಿದೆ. ನಮ್ಮ ಸರ್ಕಾರದ ಅವಧಿಯಲ್ಲಿ ಏನೇನು ಯೋಜನೆಗಳನ್ನು ಕೈಗೆತ್ತಿಕೊಂಡು ಅಭಿವೃದ್ಧಿಪಡಿಸಲಾಗಿದೆಯೋ ಅವುಗಳನ್ನು ಕರಪತ್ರಗಳ ಮೂಲಕ ಮನೆ ಮನೆಗೆ ತಲುಪಿಸುವ ಕೆಲಸವನ್ನು ಕಾರ್ಯಕರ್ತರು ಮಾಡಬೇಕು.**
>
> ■ ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಸೂಗೂರ ದೇಗುಲ ಲೋಕಾರ್ಪಣೆಗೊಳಿಸಿದ ಸಿದ್ದರಾಮಯ್ಯ

ವೈಚಾರಿಕತೆ ರೂಢಿಸಿಕೊಳ್ಳಿ: ಸಿಎಂ

◆ **ಕಲಬುರಗಿ:** ಜಾತಿ ರಹಿತ ಸಮ-ಸಮಾಜ ನಿರ್ಮಾಣವಾಗಬೇಕಾದರೆ ದ್ವೇಷ ಬಿಟ್ಟು ಎಲ್ಲರು ಪರಸ್ಪರ ಪ್ರೀತಿ ವಿಶ್ವಾಸದೊಂದಿಗೆ ಭಾವೈಕ್ಯತೆಯಿಂದ ಮನುಷ್ಯರಾಗಿ ಬಾಳಬೇಕಿದೆ. ಮೂಢನಂಬಿಕೆ ಬಿಟ್ಟು ವೈಚಾರಿಕತೆ ಬೆಳೆಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶನಿವಾರ ಜಿಲ್ಲೆಯ ಚಿತ್ತಾಪುರ ತಾಲೂಕಿನ ಸೂಗೂರ (ಎನ್) ಗ್ರಾಮದಲ್ಲಿ ಮಹಾತ್ಮ ಭೋಜಲಿಂಗೇಶ್ವರ ಸಿದ್ದ ಸಂಸ್ಥಾನ ಮಠದಿಂದ ಆಯೋಜಿಸಿದ್ದ ಶ್ರೀ ಭೋಜಲಿಂಗೇಶ್ವರರ ನೂತನ ದೇವಸ್ಥಾನ ಲೋಕಾರ್ಪಣೆ ಮತ್ತು ಮೂರ್ತಿ ಪ್ರತಿಷ್ಠಾಪನೆ, ನೂತನ ಬೆಳ್ಳಿ ರಥೋತ್ಸವ ಚಾಲನೆ ಹಾಗೂ ಕಲ್ಯಾಣ ಮಂಟಪ ಉದ್ಘಾಟಿಸಿ ಮಾತನಾಡಿದರು. ಸಮಾಜದಲ್ಲಿ ಅನೇಕ ಜಾತಿ ಧರ್ಮಗಳಿವೆ, ಅನೇಕ ಭಾಷೆ ಸಂಸ್ಕೃತಿಗಳಿವೆ. ➡ಪುಟ ೪



> **ಜಾತಿ ವ್ಯವಸ್ಥೆ ಸ್ವಲ್ಪ ಕಡಿಮೆಯಾಗಿದೆಯಾದರೂ ಇನ್ನೂ ಪೂರ್ಣವಾಗಿ ಹೋಗಿಲ್ಲ. ಪ್ರತಿಯೊಬ್ಬರೂ ವೈಚಾರಿಕತೆ, ವೈಜ್ಞಾನಿಕ ಹಿನ್ನೆಲೆಯುಳ್ಳ ವಿದ್ಯೆ ಪಡೆದುಕೊಳ್ಳಬೇಕು. ಬಸವಣ್ಣನವರು ಆ ಕಾಲದಲ್ಲಿಯೇ ಕರ್ಮ ಸಿದ್ಧಾಂತ ತಿರಸ್ಕಾರ ಮಾಡಿದ್ದರು.**
>
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ದಾವಣಗೆರೆ ವಿದ್ಯಮಾನ | ಕೈನಲ್ಲಿ ಜೋರಾಯ್ತು ಅಸಮಾಧಾನ

ಕಾಂಗ್ರೆಸ್‌ನಲ್ಲಿ ರಾಜೀನಾಮೆ ಪರ್ವ

◆ **ಬೆಂಗಳೂರು:** ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗೆ ಮತದಾನ ಮುಕ್ತಾಯಗೊಂಡ ಬೆನ್ನಲ್ಲೇ ಕಾಂಗ್ರೆಸ್ ಪಕ್ಷದಲ್ಲಿ ಅಲ್ಪಸಂಖ್ಯಾತರ ಅಸಮಾಧಾನ ಸ್ಫೋಟಗೊಂಡಿದ್ದು, ರಾಜೀನಾಮೆ ಪರ್ವ ಶುರುವಾಗಿದೆ.



ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಕೆಲವು ಅಲ್ಪಸಂಖ್ಯಾತ ನಾಯಕರುಗಳು ಸರಿಯಾಗಿ ಕೆಲಸ ಮಾಡಲಿಲ್ಲ, ಹೀಗಾಗಿ ಕಾಂಗ್ರೆಸ್ ಪಕ್ಷಕ್ಕೆ ಏನಾದರೂ ಹಿನ್ನಡೆಯಾದರೆ, ನಮ್ಮ ಪಕ್ಷದೊಳಗಿನ ಕೆಲವು ಅಲ್ಪಸಂಖ್ಯಾತ ನಾಯಕರುಗಳೇ ಕಾರಣ ಎಂದು ಶುಕ್ರವಾರವಷ್ಟೇ ಸ್ವಪಕ್ಷೀಯ ಶಾಸಕರುಗಳೇ ಆರೋಪಿಸಿದ್ದರು. ಇದರ ಬೆನ್ನಲ್ಲೇ, ಉಪ ಚುನಾವಣೆಯಲ್ಲಿ ಕೆಲವು ಅಲ್ಪಸಂಖ್ಯಾತ ನಾಯಕರುಗಳ ಭಾಗವಹಿಸುವಿಕೆ, ಹಾಗೂ ಪ್ರಚಾರದ ಕಾರ್ಯವೈಖರಿ ಕುರಿತು ಎಐಸಿಸಿಗೆ ವರದಿ ನೀಡಲಾಗಿತ್ತು. ಇದರ ಬೆನ್ನಲ್ಲೇ, ರಾಜೀನಾಮೆ ಪರ್ವ ಆರಂಭವಾಗಿದೆ. ➡ಪುಟ ೪

ರಾಜೀನಾಮೆ ಪತ್ರದಲ್ಲಿ ಜಮೀರ್ ಹೆಸರು

ಅಬ್ದುಲ್ ಜಬ್ಬಾರ್ ತಮ್ಮ ರಾಜೀನಾಮೆ ಪತ್ರದಲ್ಲಿ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಸಚಿವ ಜಮೀರ್ ಅಹ್ಮದ್ ಖಾನ್ ಅವರನ್ನು ದಾವಣಗೆರೆ ಉಪಚುನಾವಣೆ ಪ್ರಚಾರಕ್ಕೆ ಬರಬೇಡಿ ಎಂದು ಬಹಿರಂಗವಾಗಿ ಹೇಳುವ ಮೂಲಕ ಅಗೌರವ ತೋರಲಾಗಿದೆ. ಇದು ರಾಜ್ಯಾದ್ಯಂತ ಇರುವ ಅಲ್ಪಸಂಖ್ಯಾತ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುಸ್ಲಿಂ ಸಮುದಾಯದ ಮನಸ್ಸಿಗೆ ನೋವುಂಟುಮಾಡಿದೆ ಎಂದು ಪತ್ರದಲ್ಲಿ ಹೇಳಿದ್ದಾರೆ.

ಮಹಿಳಾ ಮೀಸಲಾತಿ ಬೆಂಬಲಿಸಿ



- ರಾಜಕೀಯ ಪಕ್ಷಗಳಿಗೆ ಮನವಿ
- ಜಾಗೃತಿಗೆ ಮುಂದಾದ ಶೋಭಾ ಕರಂದ್ಲಾಜೆ

◆ **ಬೆಂಗಳೂರು:** ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ನಾರಿ ಶಕ್ತಿ ವಂದನ್ ಮಸೂದೆ ಹಿನ್ನೆಲೆಯಲ್ಲಿ ಮಹಿಳೆಯರಿಗೆ ತಮ್ಮ ಹಕ್ಕಿನ ಬಗ್ಗೆ ಮುಂದಿನ 10 ದಿನಗಳಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲಾಗುವುದು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕೀಯ ಪಕ್ಷಗಳು ಮಹಿಳಾ ಮೀಸಲಾತಿ ಮಸೂದೆ ಸ್ವೀಕರಿಸಬೇಕು. ವಿವಿಧ ಕ್ಷೇತ್ರಗಳಲ್ಲಿ ಮಹಿಳೆಗೆ ಟಿಕೆಟ್ ಸಿಗುವಂತಾಗಲಿ ಎಂದು ಆಶಿಸಿದರು. ➡ಪುಟ ೪

ಟಿಎಂಸಿ ವಿರುದ್ಧ ಪ್ರಧಾನಿ ಮೋದಿ ತೀವ್ರ ವಾಗ್ದಾಳಿ

ಏನಾಸಂ ಜಾರಿ ಭರವಸೆ

◆ **ಜಂಗೀಪುರ/ಕುಶ್ಮಂಡಿ:** ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಟಿಎಂಸಿ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿ, ಚುನಾವಣೆಯನ್ನು 'ರಾಜ್ಯದ ಅಸ್ತಿತ್ವ ಮತ್ತು ಭವಿಷ್ಯ ಉಳಿಸುವ ಹೋರಾಟ' ಎಂದು ಚಿತ್ರಿಸಿದರು. ಬಿಜೆಪಿ ಅಧಿಕಾರಕ್ಕೆ ಬಂದರೆ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಜಾರಿಗೆ ತಂದು ಓಲೈಕೆಯ ರಾಜಕೀಯ ಅಂತ್ಯ ಮಾಡುವುದಾಗಿ ಅವರು ಭರವಸೆ ನೀಡಿದರು.

ಮುರ್ಶಿದಾಬಾದ್ ಜಿಲ್ಲೆಯ ಜಂಗೀಪುರದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಜನಸಂಖ್ಯಾ ಸಮತೋಲನ ಬದಲಾಗುತ್ತಿದೆ ಎಂದು ಆರೋಪಿಸಿ, 'ಬಂಗಾಳದಲ್ಲಿ ಬೆಂಗಾಲಿಗಳು ಅಲ್ಪಸಂಖ್ಯಾತರಾಗಲು ಬಿಡುವುದಿಲ್ಲ' ಎಂದರು. ಟಿಎಂಸಿ ಮಾ-ಮಾಟಿ-ಮಾನುಷ್ ಘೋಷಣೆಯಿಂದ ದೂರ ಸರಿದು, ಮತ ಬ್ಯಾಂಕ್ ರಾಜಕೀಯ ಮತ್ತು ನುಸುಳುಕೋರರ ಬೆಂಬಲಕ್ಕೆ ನಿಂತಿದೆ ಎಂದು ಟೀಕಿಸಿದರು. ➡ಪುಟ ೪



ಪ. ಬಂಗಾಳದಲ್ಲಿ ಕಟ್-ಮನಿ ಸಂಸ್ಕೃತಿ

ಪಶ್ಚಿಮ ಬಂಗಾಳ ರಾಜ್ಯದಲ್ಲಿ ಭ್ರಷ್ಟಾಚಾರ, ಅಕ್ರಮ ವ್ಯವಹಾರಗಳು ಮತ್ತು ಕಟ್-ಮನಿ ಸಂಸ್ಕೃತಿ ವ್ಯಾಪಕವಾಗಿದೆ ಎಂದು ಹೇಳಿದ ಮೋದಿ, 'ಟಿಎಂಸಿ ಆಡಳಿತವು ಭ್ರಷ್ಟಾಚಾರ ಮತ್ತು ಗೂಂಡಾಗಿರಿ ರಾಜಕಾರಣವನ್ನು ಸಂಸ್ಥಾಗತಗೊಳಿಸಿದೆ' ಎಂದು ಕಿಡಿಕಾರಿದರು.

ಮತದಾನ, ಸ್ಪರ್ಧಿಸುವ ಹಕ್ಕು ಮೂಲಭೂತವಲ್ಲ

◆ **ಹೊಸದಿಲ್ಲಿ:** ಮತದಾನ ಮಾಡುವ ಹಕ್ಕು ಹಾಗೂ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕುಗಳು ಮೂಲಭೂತ ಹಕ್ಕುಗಳಲ್ಲ ಎಂದು ಸುಪ್ರೀಂ ಕೋರ್ಟ್ ಪುನರುಚ್ಚರಿಸಿದೆ. ಇವು ಕೇವಲ ಕಾನೂನುಬದ್ಧ ಹಕ್ಕುಗಳಾಗಿದ್ದು, ಕಾನೂನು ನಿಗದಿಪಡಿಸಿದ ಮಿತಿಯೊಳಗೆ ಮಾತ್ರ ಅನ್ವಯಿಸುತ್ತವೆ ಎಂದು ಸರ್ವೋಚ್ಚ ನ್ಯಾಯಾಲಯ ಸ್ಪಷ್ಟಪಡಿಸಿದೆ.



ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಆರ್. ಮಹಾದೇವನ್ ಅವರ ಪೀಠವು ರಾಜಸ್ಥಾನದ ಜಿಲ್ಲಾ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಚುನಾವಣೆಗೆ ಸಂಬಂಧಿಸಿದ ಪ್ರಕರಣವನ್ನು ವಿಚಾರಣೆ ಮಾಡುವ ವೇಳೆ ಈ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ.

ಕೋರ್ಟ್ ಹೇಳಿದ್ದೇನು?: ಮತದಾನ ಹಕ್ಕು ಮತ್ತು ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು ಎರಡೂ ಪರಸ್ಪರ ಭಿನ್ನ ಸ್ವರೂಪದವು. ಮತದಾನ ಹಕ್ಕು ನಾಗರಿಕರಿಗೆ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡುತ್ತದೆ. ಆದರೆ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು ಹೆಚ್ಚುವರಿ ಹಕ್ಕಾಗಿದ್ದು, ಅದನ್ನು ಅರ್ಹತೆ, ಅನರ್ಹತೆ ಹಾಗೂ ಇತರ ನಿಯಮಗಳ ಮೂಲಕ ನಿಯಂತ್ರಿಸಲು ಸಾಧ್ಯವಿದೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,60,000 (2,60,000) ಅಪರಂಜಿ ಚಿನ್ನ: 1,52,840 (1,52,350) ಆಭರಣ ಚಿನ್ನ: 1,40,100 (1,39,650) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹93.09

ಕಿರುಸುದ್ದಿ

ನೂತನ ಲೇಔಟ್ ನಿರ್ಮಾಣಕ್ಕೆ ಅನುಮೋದನೆ

ಹುಬ್ಬಳ್ಳಿ: ಹು-ಧಾ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ 120ಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ನೂತನ ಲೇಔಟ್ ನಿರ್ಮಾಣಕ್ಕೆ ಅನುಮೋದನೆ ಸೇರಿದಂತೆ ವಿವಿಧ 40 ವಿಷಯಕ್ಕೆ ಶುಕ್ರವಾರ ನಡೆದ ಹುಡಾ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಸೂಚಿಸಲಾಯಿತು.



ನವನಗರದ ಹು-ಧಾ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ಅಧ್ಯಕ್ಷ ಶಾಕೀರ ಸನದಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನೂತನ ಲೇಔಟ್‌ನಲ್ಲಿ ಉತ್ತಮ ರಸ್ತೆ ಹಾಗೂ ಯುಜಿಡಿ ಸೇರಿದಂತೆ ಎಲ್ಲ ನಿಯಮಗಳನ್ನು ಪಾಲಿಸದೇ ಹೋದಲ್ಲಿ ಅಂತಹ ಲೇಔಟ್‌ಗಳ ಅನುಮೋದನೆ ರದ್ದುಪಡಿಸಲು ತೀರ್ಮಾನಿಸಲಾಯಿತು. ಸಭೆಯ ನಂತರ ಮಾತನಾಡಿದ ಅಧ್ಯಕ್ಷ ಶಾಕೀರ ಸನದಿ, ಹುಡಾ ವ್ಯಾಪ್ತಿಯಲ್ಲಿ 10 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಲೇಔಟ್ ನಿರ್ಮಾಣಕ್ಕೆ ಕಡ್ಡಾಯವಾಗಿ ಎಸ್‌ಟಿಪಿ ಪ್ಲಾಂಟ್ ಸ್ಥಾಪಿಸಬೇಕು. ಅದಕ್ಕೂ ಮುನ್ನ ಬೆಂಗಳೂರಿನ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರವಾನಗಿ ಪಡೆಯುವಂತೆ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು. ದೊಡ್ಡ ಲೇಔಟ್ ನಿರ್ಮಾಣ ಮಾಡುವ ಮಾಲೀಕರಿಂದ ಎಸ್‌ಟಿಪಿ ಸ್ಥಾಪನೆಯ ಹಣವನ್ನು ಹುಡಾಗೇ ಭರಣ ಮಾಡಿಸುವಂತೆ ಸರ್ಕಾರಕ್ಕೆ ಪತ್ರ ಬರೆಯಲು ನಿರ್ಧಾರ ಕೈಗೊಳ್ಳಲಾಗಿದೆ. ಈಗಾಗಲೇ ಹು-ಧಾ ಅವಳಿ ನಗರದ ಸುತ್ತಮುತ್ತ ಹುಡಾದಿಂದ ನಿರ್ಮಿಸಲಾದ ಲೇಔಟ್‌ನಲ್ಲಿ ನಿವೇಶನ ಪಡೆದ ಮಾಲೀಕರಿಗೆ (10 ವರ್ಷ ಅವಧಿ ಮೀರಿದ) ಹುಡಾದಿಂದಲೇ ಶುದ್ಧ ಕ್ರಿಯಾಪತ್ರ ವಿತರಿಸಲು ನಿರ್ಧಾರ ಕೈಗೊಳ್ಳಲಾಯಿತು. ಹುಡಾ ವ್ಯಾಪ್ತಿಗೆ ಒಳಪಡುವ ಹೊಸ ಗ್ರಾಮಗಳಿಗೆ ರಿಂಗ್ ರೋಡ್ ನಿರ್ಮಾಣ ಮಾಡುವುದು, 4-5 ಕಡೆ ಹುಡಾದಿಂದ ಟೌನ್ ಪ್ಲಾನಿಂಗ್ ಯೋಜನೆ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ಅದರಲ್ಲಿ ಒಳಪಡುವ ವಿವಿಧ ಜಮೀನು ಮಾಲೀಕರ ಮನವೊಲಿಸಿ ಉತ್ತಮ ಟೌನ್‌ಶಿಪ್ ನಿರ್ಮಿಸಲು ನಿರ್ಧಾರ ಕೈಗೊಳ್ಳಲಾಗಿದೆ. ಅದರಲ್ಲಿ ರಸ್ತೆ, ಯುಜಿಡಿ, ರಿಂಗ್ ರಸ್ತೆ ಹಾಗೂ ಸಮುದಾಯ ಭವನ ಸೇರಿದಂತೆ ಎಲ್ಲವೂ ಇರುವಂತೆ ಮಾಡಲಾಗುವುದು ಎಂದು ತಿಳಿಸಿದರು. ಶಾಸಕರಾದ ಅರವಿಂದ ಬೆಲ್ಲದ, ಮಹೇಶ ಟೆಂಗಿನಕಾಯಿ, ಪ್ರಸಾದ ಅಬ್ಬಯ್ಯ, ಎನ್.ಎಚ್.ಕೋನರಡ್ಡಿ ಕೆಲವು ಸಲಹೆ ಸೂಚನೆಗಳನ್ನು ನೀಡಿದರು. ಹು-ಧಾ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ದೇವರಾಜ ಆರ್. ಸೇರಿದಂತೆ ಇತರರಿದ್ದರು.

ಏ.15ರಂದು ಲಿಂಗ ದೀಕ್ಷೆ

ಹುಬ್ಬಳ್ಳಿ: ಇಲ್ಲಿನ ಆರ್.ಎಂ.ಲೋಹಿಯಾ ನಗರದ ಶ್ರೀ ವೇದ ಸಂಸ್ಕಾರ ಧಾರ್ಮಿಕ ಸೇವಾ ಸಮಿತಿ ವತಿಯಿಂದ ಉಚಿತವಾಗಿ ವೀರಶೈವ ಲಿಂಗಾಯತ ವೀರ ಮಾಹೇಶ್ವರ ಜಂಗಮ ವಟುಗಳಿಗೆ ಅಯ್ಯಾಚಾರ (ಲಿಂಗ ದೀಕ್ಷೆ) ಕಾರ್ಯಕ್ರಮವನ್ನು ಏ.15 ರಂದು ಇಲ್ಲಿನ ಗೋಕುಲ ರಸ್ತೆಯ ಮಂಜುನಾಥ ನಗರದ ಡಾ.ಕೆ.ಎಸ್.ಶರ್ಮಾ ಹಾಲ್‌ನಲ್ಲಿ ಆಯೋಜಿಸಲಾಗಿದೆ ಎಂದು ಸಮಿತಿ ಅಧ್ಯಕ್ಷ ವೆ.ಮೂ ಮಹೇಶ್ವರಯ್ಯ ಶಾಸ್ತ್ರಿಗಳು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 4.30 ರಿಂದ 9 ರವರೆಗೆ ಹಾಗೂ ಬೆಳಗ್ಗೆ 10 ರಿಂದ ಮಧ್ಯಾಹ್ನ 12 ರವರೆಗೆ ಧರ್ಮಸಭೆ ನಡೆಯಲಿದೆ. ನಂತರ ಮಹಾಪ್ರಸಾದ ನಡೆಯಲಿದೆ ಎಂದರು.

ಕಲಘಟಗಿಯ ರೇವಣಸಿದ್ಧ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಹಾವೇರಿಯ ಸಿಂದಗಿಮಠದ ಶಾಂತವೀರ ಪಟ್ಟಾಧ್ಯಕ್ಷರು, ನವನಗರದ ಪಂಚಾಕ್ಷರಿ ನಗರದ ಕಾಶಿ ಖಾಸಾ ಶಾಖಾಮಠದ ಡಾ.ರಾಜಶೇಖರ ಶಿವಾಚಾರ್ಯ ಸ್ವಾಮಿಗಳು ಸೇರಿದಂತೆ ಮುಂತಾದವರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಶ್ರೀ ವೇದ ಸಂಸ್ಕಾರ ಧಾರ್ಮಿಕ ಸೇವಾ ಸಮಿತಿಯ ಬಸಯ್ಯಶಾಸ್ತ್ರಿ ಹಿರೇಮಠ, ಜಗದೇವಯ್ಯಶಾಸ್ತ್ರಿ ಹಿರೇಮಠ, ಶಾಂತವೀರಯ್ಯ ಶಾಸ್ತ್ರಿ ಹಿರೇಮಠ, ಶಿವಶಂಕರಶಾಸ್ತ್ರಿ ಹಿರೇಮಠ, ಮಂಜಯ್ಯಶಾಸ್ತ್ರಿ ಹಿರೇಮಠ ಉಪಸ್ಥಿತರಿದ್ದರು.

ಆಭರಣಗಳ ಕಳುವು

ಹುಬ್ಬಳ್ಳಿ: ತಾಲೂಕಿನ ಕಿರೇಸೂರ ಗ್ರಾಮದ ಮನೆಯೊಂದರ ಬೀಗ ಮುರಿದ ಕಳ್ಳರು ಮನೆಯಲ್ಲಿದ್ದ 1.31 ಲಕ್ಷ ರೂ. ಮೌಲ್ಯದ ಆಭರಣಗಳನ್ನು ಕಳವು ಮಾಡಿಕೊಂಡು ಪರಾರಿಯಾಗಿದ್ದಾರೆ. ಗ್ರಾಮದ ನಿವಾಸಿ ಬಸವರಾಜ ಚಲವಾದಿ ಎಂಬುವರು ಮನೆ ಬಾಗಿಲ ಬೀಗ ಮುರಿದ ಕಳ್ಳರು ಮನೆ ಪ್ರವೇಶಿಸಿದ್ದಾರೆ. ಬಳಿಕ ಮನೆಯಲ್ಲಿದ್ದ 50 ಸಾವಿರ ಮೌಲ್ಯದ 5 ಗ್ರಾಂ ಬಂಗಾರ ಸರ, 50 ಸಾವಿರ ಮೌಲ್ಯದ ಬಂಗಾರ ಬೆಂಡವಾಲೆಗಳು, 14 ಸಾವಿರ ಹಣ ಹಾಗೂ 15 ಸಾವಿರ ಮೌಲ್ಯದ ತಾಮ್ರದ ಹಂಡೆ ಕಳವು ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಬಂಕಾಪುರದಲ್ಲಿ: ಹುಬ್ಬಳ್ಳಿಯ ಬಂಕಾಪುರ ಚೌಕ್‌ನಿಂದ ತಾಲೂಕಿನ ಅಂಚಟಗೇರಿ ಪ್ರಯಾಣ ಮಾಡಿದ ಮಹಿಳೆಯೊಬ್ಬರ 4.70ಲಕ್ಷ ರೂ.ಮೌಲ್ಯದ 52 ಗ್ರಾಂ ತೂಕದ ಬಂಗಾರ ಆಭರಣಗಳನ್ನು ಕಳುವು ಮಾಡಿದ ಪ್ರಕರಣ ಘಂಟಿಕೇರಿ ಠಾಣೆಯಲ್ಲಿ ದಾಖಲಾಗಿದೆ. ಅಂಚಟಗೇರಿ ಗ್ರಾಮದ ರೇಣುಕಾ ಪರಣ್ಣವರ ಎಂಬುವರ ಸೇರಿದ ಆಭರಣಗಳನ್ನು ಯಾರೋ ಕಳ್ಳರು ಕಳವು ಮಾಡಿದ್ದಾರೆ. ರೇಣುಕಾ ಅವರು ತಮ್ಮ ಮಕ್ಕಳೊಂದಿಗೆ ನಗರದ ಸರಾಫಗಟ್ಟಿಯಲ್ಲಿರುವ ಜೆ.ಎಚ್.ಪಟ್ಟಣ ಬಂಗಾರ ಮಳಿಗೆ ಆಗಮಿಸಿ ಬಂಗಾರ ಆಭರಣ ಖರೀದಿಸಿದ್ದಾರೆ. ಮರಳಿ ಬಂಕಾಪುರ ಚೌಕ್‌ನಿಂದ ಟಾಟಾಯೇಸ್ ಮೂಲಕ ಮನೆಗೆ ಹೋಗಿದ್ದಾರೆ. ಮನೆಗೆ ಹೋಗಿ ಬ್ಯಾಗ್ ನೋಡಿದಾಗ ಆಭರಣ ಯಾರೋ ಕಳವು ಮಾಡಿದ್ದಾರೆ. 3.05 ಲಕ್ಷ ರೂ. ಮೌಲ್ಯದ 35 ಗ್ರಾಂ. ಬಂಗಾರ ಮಾಂಗಲ್ಯ ಸರ, 1 ಲಕ್ಷ ರೂ. ಮೌಲ್ಯ 10 ಗ್ರಾಂ ಬಂಗಾರ ಸರ, 50 ಸಾವಿರ ಮೌಲ್ಯ 5 ಗ್ರಾಂ ಬಂಗಾರ ಸರ ಕಳವು ಮಾಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.



ಹುಬ್ಬಳ್ಳಿ: ನಗರದ ಸಿದ್ಧಾರೂಢ ಸ್ವಾಮಿ ಮಠ ಟ್ರಸ್ಟ್ ಕಮಿಟಿಗೆ ನೂತನವಾಗಿ ಚೇರಮ್ ಆದ ಬಾಳು ಮಗಜಿಕೊಂಡಿ ಅವರಿಗೆ ಶಾಸಕ ಮಹೇಶ ಟೆಂಗಿನಕಾಯಿ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ರವಿ ನಾಯಕ, ಪ್ರಮುಖ ಮಂಜುನಾಥ್ ಕಾಟಕರ ಇನ್ನಿತರರು ಉಪಸ್ಥಿತರಿದ್ದರು.

ಕೆಎಲ್‌ಇ ಜೆ.ಜಿ.ಕಾಮರ್ಸ್ ಕಾಲೇಜಿನ ತಂಡಕ್ಕೆ ಜಯ

ಹುಬ್ಬಳ್ಳಿ: ನಗರದ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯವು ಟರ್ಫ್ ಕ್ರಿಕೆಟ್ ಮೈದಾನದಲ್ಲಿ ಆಯೋಜಿಸಿದ್ದ ಕೆಎಲ್‌ಇ ಟಿ-20 ಕ್ರಿಕೆಟ್ ಚಾಂಪಿಯನ್‌ಶಿಪ್‌ನಲ್ಲಿ ಇಲ್ಲಿನ ಕೆಎಲ್‌ಇ ಜೆ.ಜಿ.ಕಾಮರ್ಸ್ ಕಾಲೇಜಿನ ತಂಡ ವಿಜಯಶಾಲಿಯಾಗಿ ಹೊರಹೊಮ್ಮಿತು. ರೋಚಕ ಅಂತಿಮ ಪಂದ್ಯದಲ್ಲಿ ಕೆಎಲ್‌ಇ ಜಿ.ಜಿ.ಕಾಮರ್ಸ್ ಕಾಲೇಜಿನ ತಂಡವು, ಕೆಎಲ್‌ಇ ತಾಂತ್ರಿಕ ವಿಶ್ವ-ವಿದ್ಯಾಲಯದ ತಂಡವನ್ನು ವಿಕೆಟ್‌ಗಳಿಂದ ಸೋಲಿಸಿತು. ಜೆ.ಜಿ. ಕಾಮರ್ಸ್ ಕಾಲೇಜಿನ ಪರ ಸಂಕಲ್ಪ ತೆಗ್ಗಿಹಾಳ್ 29 ರನ್ ಗಳಿಸಿ ಪ್ರಮುಖ ಪಾತ್ರವಹಿಸಿದರು. ಸಮರ್ಥ್ ರಾಹುತ್ ಅತ್ಯುತ್ತಮ ಬೌಲಿಂಗ್ ಪ್ರದರ್ಶನ ನೀಡಿ 3 ವಿಕೆಟ್ ಪಡೆದುಕೊಂಡರು. ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾ-ಲಯದ ಪರ ವಿನೋಕ್ ಎಸ್.ಜಿ. 33 ರನ್‌ಗಳನ್ನು ಗಳಿಸಿ 1 ವಿಕೆಟ್ ಪಡೆದರು. ಜೆ.ಜಿ. ಕಾಮರ್ಸ್ ಕಾಲೇಜಿನ ಸಮರ್ಥ್ ರಾಹುತ್ ಅವರಿಗೆ ಮ್ಯಾನ್ ಆಫ್ ದಿ ಮ್ಯಾಚ್, ಟೂರ್ನಮೆಂಟ್‌ನ ಅತ್ಯುತ್ತಮ ಬೌಲರ್ ಮತ್ತು ಟೂರ್ನಮೆಂಟ್‌ನ ಅತ್ಯುತ್ತಮ ಆಟಗಾರ ಪ್ರಶಸ್ತಿಗಳು ಲಭಿಸಿವೆ. ಜೆ.ಜಿ.ಕಾಮರ್ಸ್ ಗುಡಿಮನಿ ಟೂರ್ನಮೆಂಟ್‌ನ ಕಾಲೇಜಿನ ಅವರಿಗೆ ಅತ್ಯುತ್ತಮ ಆಲ್‌ರೌಂಡರ್ ಪ್ರಶಸ್ತಿ ದೊರಕಿತು. ಕೆಎಲ್‌ಇ ಸಿಬಿಎಯ ಪ್ರಥಮ್ ಭೋಸಲೆ ಅವರಿಗೆ ಟೂರ್ನಮೆಂಟ್‌ನ ಅತ್ಯುತ್ತಮ ಬ್ಯಾಟ್ಸ್‌ಮನ್ ಪ್ರಶಸ್ತಿ ನೀಡಲಾಯಿತು. ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಬಸವರಾಜ ಅನಾಮಿ ಬಹುಮಾನ ವಿತರಿಸಿದರು. ವಿದ್ಯಾರ್ಥಿ ಕಲ್ಯಾಣ ಡೀನ್ ಪ್ರೊ. ಸಂಜಯ ಕೆಎಲ್‌ಇ ಜಿಮ್ಖಾನಾ ಕೊಟಬಾಗಿ, ಕ್ರೀಡಾ ಚಟುವಟಿಕೆಗಳ ಸಂಯೋಜಕ ಪ್ರೊ. ವಿಜಯಕುಮಾರ ನಿಂಬಗಳ ಹಾಗೂ ಜಿ.ಜಿ. ಕಾಮರ್ಸ್ ಕಾಲೇಜಿನ ಪ್ರಾಂಶುಪಾಲ ಎಸ್.ಎಲ್.ಪಾಟೀಲ್ ಉಪಸ್ಥಿತರಿದ್ದರು. ವಿಜೇತ ತಂಡವಾದ ಜೆ.ಜಿ. ಕಾಮರ್ಸ್ ಕಾಲೇಜಿಗೆ 50 ಸಾವಿರ. ರನ್ನರ್ ಅಪ್ ಆಗಿದ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ 25 ಸಾವಿರ ನಗದು ಬಹುಮಾನ ನೀಡಲಾಯಿತು.



ಹುಬ್ಬಳ್ಳಿ: ನಗರದ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯವು ಟರ್ಫ್ ಕ್ರಿಕೆಟ್ ಮೈದಾನದಲ್ಲಿ ಆಯೋಜಿಸಿದ್ದ ಕೆಎಲ್‌ಇ ಟಿ-20 ಕ್ರಿಕೆಟ್ ಚಾಂಪಿಯನ್‌ಶಿಪ್‌ನಲ್ಲಿ ಇಲ್ಲಿನ ಕೆಎಲ್‌ಇ ಜಿ.ಜಿ.ಕಾಮರ್ಸ್ ಕಾಲೇಜಿನ ತಂಡ ವಿಜಯಶಾಲಿಯಾಗಿ ಹೊರಹೊಮ್ಮಿತು.

ಕಾರ್ಯಾಚರಣೆಯಲ್ಲಿ ಸುರಕ್ಷತೆ ಮುಖ್ಯ

ಹುಬ್ಬಳ್ಳಿ: ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವತಿಯಿಂದ ಭದ್ರತಾ ಹಾಗೂ ಜಾಗೃತ ಇಲಾಖೆ ಸಹಯೋಗದಲ್ಲಿ ಕಾರ್ಮಿಕರ ಪ್ರಕರಣ ನಿರ್ವಹಣೆ ಕೆಲಸದ ಸ್ಥಳದಲ್ಲಿ ಸುರಕ್ಷತೆ ಹಾಗೂ ಅಪಘಾತ ನಿರ್ವಹಣೆ ಕುರಿತು ಒಂದು ದಿನದ ಕಾರ್ಯಾಗಾರ ನಡೆಯಿತು.



ಕಾರ್ಯಾಗಾರವನ್ನು ರಾಷ್ಟ್ರೀಯ ವಿಧಿ ವಿಜ್ಞಾನ ವಿವಿ ನಿರ್ದೇಶಕ ಮಂಜುನಾಥ ಘಾಟೆ ಚಾಲನೆ ನೀಡಿ ಮಾತನಾಡಿ, ರಸ್ತೆ ಸಾರಿಗೆ ಸಂಸ್ಥೆಯ ದಿನನಿತ್ಯದ ಕಾರ್ಯಾಚರಣೆಯಲ್ಲಿ ಸುರಕ್ಷತೆ ಹಾಗೂ ರಕ್ಷಣೆಯು ಬಹಳ ಮುಖ್ಯವಾಗಿದೆ. ಇಂತಹ ಅರ್ಥಪೂರ್ಣವಾದ ಹಾಗೂ ಬಹಳ ಉಪಯುಕ್ತವಾದ ಕಾರ್ಯಾಗಾರವನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು.

ಸಂಸ್ಥೆ ವ್ಯವಸ್ಥಾಪ ನಿರ್ದೇಶಕಿ ಪ್ರಿಯಾಂಗಾ ಎಂ. ಮಾತನಾಡಿ, ಈ ಒಂದು ಕಾರ್ಯಾಗಾರದಿಂದ ಉತ್ತಮವಾದ ಹಾಗೂ ಸಮಗ್ರವಾದ ವಿಷಯವನ್ನು ಒಂದೇ ವೇದಿಕೆಯಲ್ಲಿ ಒದಗಿಸುವ ವ್ಯವಸ್ಥೆಯನ್ನು ರೂಪಿಸಲಾಗಿದೆ. ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ ಜಾಗೃತೆಯಿಂದ ಕೆಲಸ ಮಾಡಬೇಕು ಎಂದರು.

ಪ್ರಾದೇಶಿಕ ತರಬೇತಿ ಕೇಂದ್ರ ಹಾಗೂ ಮುಖ್ಯ ಭದ್ರತಾ ಅಧಿಕಾರಿ ಗಣೇಶ ರಾಥೋಡ ಮಾತನಾಡಿ, ಸಂಸ್ಥೆಯ ಕಾನೂನಿನ ಸಮಗ್ರತೆ ಕುರಿತು ತಿಳುವಳಿಕಾ ಕಾರ್ಯಾಗಾರವಾಗಿದೆ. ಈ ಕಾರ್ಯಾಗಾರದಲ್ಲಿ ಕಾರ್ಮಿಕರ ಪ್ರಕರಣಗಳ ನಿರ್ವಹಣೆ, ಕೆಲಸದ ಸ್ಥಳದಲ್ಲಿ ಸುರಕ್ಷತೆ ಹಾಗೂ ಅಪಘಾತ ನಿರ್ವಹಣೆಯ ವಿಷಯಗಳ ಉದ್ದೇಶ ಸದುಪಯೋಗ ಹಾಗೂ ಈ ಸಂಪನ್ಮೂಲ ವ್ಯಕ್ತಿಗಳಿಂದ ವಿಷಯ ಹಂಚಿಕೊಳ್ಳುವುದರ ಕುರಿತು ಹೇಳಿದರು. ಸಹಾಯಕ ಪ್ರಾಧ್ಯಾಪಕ ಡಾ. ಪ್ರಮೋದ ಎಸ್. ಜಿ., ಕಾನೂನು ಅಧಿಕಾರಿ ನರಸಿಂಹ ವರ್ಮಾ, ನೂರ್ಜಹಾನ ಕಿಲ್ಲೇದಾರ, ಹೆಚ್. ಆರ್. ರೇಣುಕಾ, ಕೆ.ಎಸ್.ಆರ್.ಟಿ.ಸಿ. ಕಾರ್ಯಾಗಾರ ನಡೆಸಿಕೊಟ್ಟರು. ಇಂಧನ ಉಳಿತಾಯ ಮಾಸಿಕದಲ್ಲಿ ಅತೀ ಹೆಚ್ಚು ಕೆ.ಎಂ.ಪಿ.ಎಲ್. ಸಾಧನೆ ಮಾಡಿದ ವಿಭಾಗೀಯ ನಿಯಂತ್ರಣಾಧಿಕಾರಿ, ವಿಭಾಗೀಯ ತಾಂತ್ರಿಕ ಶಿಲ್ಪಿ ಹಾಗೂ ಘಟಕ ವ್ಯವಸ್ಥಾಪಕರಿಗೆ ನಗದು ಮತ್ತು ಪ್ರಸಂಶನಾ ಪತ್ರಗಳನ್ನು ನೀಡಿ ಪುರಸ್ಕರಿಸಲಾಯಿತು.

ಕಾರ್ಯಾಚರಣೆಯಲ್ಲಿ ಶೂನ್ಯ ಅಪಘಾತ ಸಾಧಿಸಿ

ದಿನನಿತ್ಯದ ಕೆಲಸ ಕಾರ್ಯಗಳನ್ನು ಅತ್ಯಂತ ಅರ್ಥಗರ್ಭಿತವಾಗಿ, ಜವಾಬ್ದಾರಿ ಹಾಗೂ ಹೊಣೆಗಾರಿಕೆಯಿಂದ ನಿರ್ವಹಿಸಬೇಕು.ಅಪಘಾತ ನಿಯಂತ್ರಿಸಲು ಹಾಗೂ ತಡೆಗಟ್ಟಲು ನಾವೆಲ್ಲರೂ ಒತ್ತು ನೀಡಬೇಕು. ಸಾರಿಗೆ ಸಂಸ್ಥೆಯು ಬಸ್ ಗಳಲ್ಲಿ ಪ್ರಯಾಣಿಸುವ ಲಕ್ಷಾಂತರ ಪ್ರಯಾಣಿಕರ ಭವಿಷ್ಯವನ್ನು ರೂಪಿಸುವಲ್ಲಿ ಮಹತ್ವವಾದ ಪಾತ್ರವನ್ನು ವಹಿಸುತ್ತದೆ. ಸಂಸ್ಥೆಯು ದಿನನಿತ್ಯದ ಬಸ್ ಕಾರ್ಯಾಚರಣೆಯಲ್ಲಿ ಶೂನ್ಯ ಅಪಘಾತ ಸಾಧಿಸಬೇಕು ಎಂದು ಸಂಸ್ಥೆ ವ್ಯವಸ್ಥಾಪ ನಿರ್ದೇಶಕಿ ಪ್ರಿಯಾಂಗಾ ಎಂ. ಹೇಳಿದರು.

ಶಿಕ್ಷಕರು ತರಗತಿ ಬೋಧನೆಗೆ ಮೀಸಲಾಗಿರಲಿ

ಉಪ್ಪಿನಬೆಟಗೇರಿ: ಬೋಧನಾ ವೃತ್ತಿಗೆ ನೇಮಕಗೊಂಡ ಶಿಕ್ಷಕರು ಅನ್ಯ ಕಾರ್ಯಗಳ ಹೊರೆಯಿಂದ ಸಂಪೂರ್ಣ ಮುಕ್ತಗೊಳ್ಳಬೇಕು. ಶಾಲಾ ವೇಳೆಯ ಎಲ್ಲಾ ಅವಧಿಗಳಲ್ಲಿ ಶಿಕ್ಷಕರು ತರಗತಿ ಬೋಧನೆಗೆ ಮೀಸಲಾಗಿರಬೇಕೆಂದು ನಿವೃತ್ತ ಅಧ್ಯಾಪಕಿ ಸುರೇಖಾ ಲೋಕೂರ ಹೇಳಿದರು.

ಅವರು ಕರಡಿಗುಡ್ಡ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಾಥಮಿಕ ವಿಭಾಗದಲ್ಲಿ ಸೇವೆಸಲ್ಲಿಸಿ ನಿವೃತ್ತಿ ಹೊಂದಿದ ಸಂದರ್ಭದಲ್ಲಿ ತಮಗೆ ನೀಡಿದ ಬೀಳ್ಕೊಡುಗೆಯ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಶಿಕ್ಷಕ-ಶಿಕ್ಷಕಿಯರು ಪೂರ್ಣಕಾಲಿಕವಾಗಿ ತರಗತಿಗಳಲ್ಲಿಯೇ ಉಳಿಯಬೇಕು. ಅವರು ತಮ್ಮ ವಿದ್ಯಾರ್ಥಿಗಳ ಒಡನಾಟದಲ್ಲಿ ಅವರ ಕಲಿಕೆಯ ಗುಣಮಟ್ಟ ಸುಧಾರಣೆಗೆ ಪೂರಕವಾದ ಬೋಧನೆ ಮಾಡುವಲ್ಲಿ ಅನ್ಯಕಾರ್ಯಗಳ ಒತ್ತಡವಿಲ್ಲದ ಮುಕ್ತ ವಾತಾವರಣ ಮತ್ತು ಕಾಲಾವಕಾಶ ಅಧಿಕವಾಗಬೇಕು ಎಂದರು.

ಅತ್ಯಂತ ಪವಿತ್ರವಾದ ಶಿಕ್ಷಕ ವೃತ್ತಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮುಗಿಸುವಲ್ಲಿ ತಮ್ಮ ಬೋಧನಾ ಕೈಂಕರ್ಯಗಳಲ್ಲಿ ಸಹಕಾರ ನೀಡಿದ ಎಲ್ಲಾ ಸಹೋದ್ಯೋಗಿ ಬಂಧುಗಳಿಗೆ ಅವರು ಕೃತಜ್ಞತಾ ನಮನ ಸಲ್ಲಿಸಿದರು.

ಮಲ್ಲಿಕಾರ್ಜುನ ಜಕ್ಕಣ್ಣವರ, ಶಂಕರ ಕರವಿನಕೊಪ್ಪ, ಎನ್.ಜಿ. ಗುರುಪುತ್ರನವರ, ನಾಗರತ್ನಾ ರೇವಡಿ, ಸುಕನ್ಯಾ ಲೋಕೂರ, ಯಶೋಧಾ ದಳವಾಯಿ, ಅಜೀತ ದೇಸಾಯಿ, ಮಂಜುನಾಥ ಪೂಜಾರ, ಸಂಜನಾ ಕರವಿನಕೊಪ್ಪ, ದೀಪಾ ಗಾಣಿಗೇರ, ಬಡೇಖಾನ್ನವರ, ಲಕ್ಷ್ಮೀ ಕುರಗುಂದ ಅವರು ನಿವೃತ್ತ ಅಧ್ಯಾಪಕಿ ಸುರೇಖಾ ಲೋಕೂರ ಅವರನ್ನು ಕುರಿತು ಅಭಿನಂದನಾಪರ ಮಾತನಾಡಿದರು. ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷ ಬಸವರಾಜ ಕುರಗುಂದ ಅಧ್ಯಕ್ಷತೆ ವಹಿಸಿದ್ದರು. ಬಿ.ಎಸ್. ತಳವಾರ ಸ್ವಾಗತಿಸಿದರು. ಶಿವಾನಂದ ಹೂಗಾರ ನಿರೂಪಿಸಿದರು. ಗಣೇಶ ಕುಂದಣಗಾರ ವಂದಿಸಿದರು. ಸೇವಾ ನಿವೃತ್ತಿ ಹೊಂದಿದ ಸುರೇಖಾ ಲೋಕೂರ ಹಾಗೂ ವಿದ್ಯಾಪೋಷಕ ಸಂಸ್ಥೆಯ ವತಿಯಿಂದ ಸೇವೆಸಲ್ಲಿಸುತ್ತಿರುವ ಕೀರ್ತಿ ಪಾಟೀಲ ಮತ್ತು ಸೂರಜ ತೊರಗಲ್ಲ ಅವರನ್ನು ಸನ್ಮಾನಿಸಲಾಯಿತು.



ಎರಡು ತಂಡಗಳಿಗೆ ಬಹುಮಾನ ವಿತರಣೆ

ನವಲಗುಂದ: ಬಿಜೆಪಿ ಮುಖಂಡ ದೇವರಾಜ ಬ. ದಾಡಿಭಾವಿ ಆರ್ಪಿಸುವ ಮೊರಬ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಯುವಕರಿಗಾಗಿ ಪ್ರಧಾನಿ ನರೇಂದ್ರ ಮೋದಿಜಿ ಅವರ ಹೆಸರಿನ (ನಮೋ ಕ್ರಿಕೆಟ್ ಟ್ರೋಫಿ) ಅಂತಿಮ ಪಂದ್ಯಗಳಲ್ಲಿ ವಿಜಯಶಾಲಿಯಾದ ಮೊರಬ ಗ್ರಾಮದ ಎರಡು ತಂಡಗಳಿಗೆ ಬಹುಮಾನ ಹಾಗೂ ಕಪ್ ವಿತರಿಸಿ ಮಾತನಾಡಿದವರು.



ವಿಶ್ವದಲ್ಲಿಯೇ ಕ್ರಿಕೆಟ್ ಶ್ರೀಮಂತ ಆಟ ಎಂಬ ಹೆಗ್ಗಳಿಕೆ ಹೆಸರು ಪಡೆದಿದೆ. ನಮ್ಮ ರಾಜ್ಯದಿಂದ ಗೋಡೆ ಎಂದು ಹೆಸರು ಪಡೆದ ರಾಹುಲ್ ದ್ರಾವಿಡ್ ಹಾಗೂ ಗದಗ ಜಿಲ್ಲೆಯವರಾದ ಸುನೀಲ್ ಜೋಶಿ ಅವರಂತೆ ನಮ್ಮ ತಾಲೂಕಿನ ಯುವಕರು ಬೆಳೆಯಬೇಕು. ಬೆಂಗಳೂರಿನವರೇ ಆದ ಕೆ.ಎಲ್. ರಾಹುಲ ಕೂಡಾ ರಾಷ್ಟ್ರೀಯ ಆಟಗಳಲ್ಲಿ ಉತ್ತಮ ಪ್ರದರ್ಶನ ತೋರುತ್ತಿದ್ದಾರೆ. ಇವರು ಆಡುವ ತರಹ ನೀವು ಆಡಬೇಕು ಎಂದರು. ಮಂಡಲ ಬಿಜೆಪಿ ಅಧ್ಯಕ್ಷ ಗಂಗಪ್ಪ ಮನಮಿ, ಆಯೋಜಕರಾದ ದೇವರಾಜ ಧಾಡಿಬಾವಿ, ಹೇಮರೆಡ್ಡಿ ಅಣ್ಣಿಗೇರಿ, ಶ್ರೀಧರ್ ಪಟ್ಟಣಶೆಟ್ಟಿ, ಹರೀಶ್ ಬೆಟಸೂರ, ನಾಗರಾಜ ಮಡ್ಲಿ, ಈಶ್ವರ ಜಾಲಿಹಾಳ, ಗ್ರಾಮದ ಗುರು-ಹಿರಿಯರು, ಸ್ಪರ್ಧಾಳುಗಳು, ಮುಖಂಡರು ಇದ್ದರು.

ಮನೆ ಕಳ್ಳತನ ಪ್ರಕರಣ: ಆರೋಪಿಗಳಿಬ್ಬರ ಬಂಧನ

ಅಣ್ಣಿಗೇರಿ: ತಾಲೂಕಿನ ಬಸಾಪುರದಲ್ಲಿ ನಡೆದ ಕವಿತಾ ವೀರಯ್ಯ ಹಿರೇಮಠ ಅವರ ಮನೆ ಕಳ್ಳತನ ಪ್ರಕರಣ ಕೆಲವೇ ದಿನಗಳಲ್ಲಿ ಬೇಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.



ನಗರದ ಈರಪ್ಪ ನಾಗಪ್ಪ ಹರಿನಶಿಕಾರಿ(25) ಹಾಗೂ ಉಮೇಶ ಅರ್ಜುನ ಹರಣಶಿಕಾರಿ(30) ಬಂಧಿತರಾಗಿದ್ದಾರೆ. ತನಿಖೆ ವೇಳೆ ಈ ಹಿಂದೆ ಇವರು ಪಟ್ಟಣದ ತಹಶೀಲ್ದಾರ್ ಕಚೇರಿ ಕಳ್ಳತನ ಯತ್ನ ಮತ್ತು ಸಿಸಿ ಕ್ಯಾಮರಾ ನೋಡಿ ಅದರ ಡಿವಿಆರ್‌ಕಳ್ಳತನ ಮಾಡಿರುವ ಬಗ್ಗೆ ಹಾಗೂ ಅಣ್ಣಿಗೇರಿಯ ಹುಡ್ಕೊ ಕಾಲೋನಿಯಲ್ಲಿನ ರಮೇಶ ಶಿವಲಿಂಗಪ್ಪ ಕೊಟಗಿ ಅವರ ಮನೆಯಲ್ಲಿಯೂ ಕಳ್ಳತನ ಮಾಡಿರುವ ಬಗ್ಗೆ ಒಪ್ಪಿಕೊಂಡಿದ್ದಾರೆ. 2022 ರಲ್ಲಿ ಶಿಶ್ವಿನಹಳ್ಳಿಯಲ್ಲಿ ಮಕ್ತುಮಸಾಬ ದಾವಲಸಾಬ ಹಂಚಿನಾಳ ಮನೆಯಲ್ಲಿ ಕಳ್ಳತನ ಮಾಡಿರುವ ಬಗ್ಗೆ ತಿಳಿದು ಬಂದಿದ್ದು, ಈ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ. ಬಂಧಿತರಿಂದ ಲಕ್ಷ ಮೌಲ್ಯದ 35 ಗ್ರಾಂ. ಬಂಗಾರದ ಆಭರಣಗಳು, 720 ಗ್ರಾಂ ಬೆಳ್ಳಿ ಆಭರಣ ಹಾಗೂ ಪೂಜಾ ಸಾಮಗ್ರಿ, ಬೈಕ್ ವಶಪಡಿಸಿಕೊಳ್ಳಲಾಗಿದೆ. ಸಾಮಗ್ರಿಗಳು ಒಟ್ಟು ಅಂದಾಜು 5,00,000 ರೂ. ಹಾಗೂ ಕಳ್ಳತನಕ್ಕೆ ಉಪಯೋಗಿಸಿದ ಮೋಟರ್ ಸೈಕಲನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಸಂಶಿ ಕೆಎಲ್‌ಇ ಪಿಯು ಕಾಲೇಜು ಸಾಧನೆ

ಕುಂದಗೋಳ: ತಾಲೂಕಿನ ಸಂಶಿ ಗ್ರಾಮದ ಕೆಎಲ್‌ಇ ಸಂಸ್ಥೆಯ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ.







ಕಲಾ ವಿಭಾಗದಲ್ಲಿ ಅಶ್ವಿನಿ ಪೂಜಾರ (ಶೇ.93.50) ಪ್ರಥಮ, ರಶ್ಮಿ ಪಶುಪತಿಹಾಳ (ಶೇ.91.83) ದ್ವಿತೀಯ ಹಾಗೂ ಪ್ರಜಕ್ತಾ ಬೋಸ್ಲೆ (ಶೇ.88.33) ತೃತೀಯ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ನವ್ಯಾ ಪಾಟೀಲ (ಶೇ.92.16) ಪ್ರಥಮ, ಜ್ಯೋತಿ ಸೊರಟಿ (ಶೇ.91.00) ದ್ವಿತೀಯ ಹಾಗೂ ಅನ್ನಪೂರ್ಣಾ ಪಾಟೀಲ (ಶೇ.90.16) ತೃತೀಯ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಬಿಬಿ ಆಮೀನಾ ಅಲ್ಲಿಖಾನವರ (ಶೇ.92.66) ಪ್ರಥಮ, ಸುಶ್ಮಾ ಹಂಚಿನಾಳ (ಶೇ.88.83) ದ್ವಿತೀಯ ಹಾಗೂ ಪೂರ್ಣಿಮಾ ಕಾಳೆ (ಶೇ.88.16) ತೃತೀಯ ಸ್ಥಾನ ಪಡೆದಿದ್ದಾರೆ.

ಪರೀಕ್ಷೆಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳಲ್ಲಿ 16 ಮಂದಿ ಉನ್ನತ ಶ್ರೇಣಿಯಲ್ಲಿ, 63 ಮಂದಿ ಪ್ರಥಮ ದರ್ಜೆಯಲ್ಲಿ, 26 ಮಂದಿ ದ್ವಿತೀಯ ದರ್ಜೆಯಲ್ಲಿ ಹಾಗೂ 5 ಮಂದಿ ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಕೆಎಲ್‌ಇ ಸಂಸ್ಥೆಯ ಆಡಳಿತ ಮಂಡಳಿ, ಪ್ರಾಚಾರ್ಯರು ಹಾಗೂ ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಾಧನೆ

ಕುಂದಗೋಳ: ಪಟ್ಟಣದ ಜಗದ್ಗುರು ಶ್ರೀ ಶಿವಾನಂದ ಕಲಾ ಹಾಗೂ ವಾಣಿಜ್ಯ ಪದವಿಪೂರ್ವ ಮಹಾವಿದ್ಯಾಲಯದ 2026ನೇ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಉತ್ತಮ ಸಾಧನೆ ಮಾಡಲಾಗಿದೆ.







ಈ ಬಾರಿ ಕಾಲೇಜಿನ ಒಟ್ಟು ಫಲಿತಾಂಶ ಶೇಕಡಾ ಶೇ.78 ಆಗಿದೆ. ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಗೆ ಹಾಜರಾದವರಲ್ಲಿ 34 ಪ್ರಥಮ ದರ್ಜೆಯಲ್ಲಿ, 9 ದ್ವಿತೀಯ ದರ್ಜೆಯಲ್ಲಿ ಹಾಗೂ 2 ಮಂದಿ ತೃತೀಯ ದರ್ಜೆಯಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಲಾ ವಿಭಾಗದಲ್ಲಿ ಶಿವಾನಂದ ಮುಶನ್ನವರ (ಶೇ.81.33) ಪ್ರಥಮ, ಹನುಮಂತ ಹಾದಿಮನಿ (ಶೇ.76.16) ದ್ವಿತೀಯ ಹಾಗೂ ಭುವನೇಶ್ವರಿ ಭರಮನಾಯ್ಕರ್ (ಶೇ.73.33) ತೃತೀಯ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ವಿದ್ಯಾಶ್ರೀ ಪಾಟೀಲ (ಶೇ.79.83%) ಪ್ರಥಮ, ಸೌಮ್ಯಾ ಪಾಟೀಲ (ಶೇ.75) ದ್ವಿತೀಯ ಮತ್ತು ಪ್ರೀತಿ ಪಾಟೀಲ (ಶೇ.71.33) ತೃತೀಯ ಸ್ಥಾನ ಗಳಿಸಿದ್ದಾರೆ. ವಿಜ್ಞಾನ ವಿಭಾಗದಲ್ಲಿ ವಿಜಯಲಕ್ಷ್ಮೀ ಲಮಾಣಿ (ಶೇ.91) ಪ್ರಥಮ, ಪ್ರತಿಭಾ ಗಬ್ಬೂರಮಠ (ಶೇ.86.33) ದ್ವಿತೀಯ ಹಾಗೂ ಶಿವಲಿಂಗ ಸಣ್ಣಬೆಂಡಿಗೇರಿ (ಶೇ.84.83) ತೃತೀಯ ಸ್ಥಾನ ಪಡೆದಿದ್ದಾರೆ. ಕನ್ನಡ, ವ್ಯವಹಾರ ಅಧ್ಯಯನ, ಜೀವಶಾಸ್ತ್ರ, ಭೂಗೋಳ ಶಾಸ್ತ್ರ ಹಾಗೂ ರಸಾಯನಶಾಸ್ತ್ರ ವಿಷಯಗಳಲ್ಲಿ ಶೇಕಡಾ 100 ಫಲಿತಾಂಶ ದಾಖಲಾಗಿದೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಆಡಳಿತ ಮಂಡಯ ನಿರ್ದೇಶಕರು, ಪ್ರಾಂಶುಪಾಲರು ಹಾಗೂ ಉಪನ್ಯಾಸಕರು ಹರ್ಷವ್ಯಕ್ತಪಡಿಸಿದ್ದಾರೆ.



ಹುಬ್ಬಳ್ಳಿ: ನಗರದ ಚೇತನ ಬಿಸಿನೆಸ್ ಕಾಲೇಜ್‌ನಲ್ಲಿ ಏರ್ಪಡಿಸಿದ್ದ ಬೃಹತ್ ಉದ್ಯೋಗ ಮೇಳಕ್ಕೆ ಹು-ಧಾ ಮಹಾನಗರ ಪಾಲಿಕೆಯ ಸದಸ್ಯ ರಾಜಣ್ಣ ಕೊರವಿ ಚಾಲನೆ ನೀಡಿದರು. ನಿರ್ದೇಶಕ ಡಾ. ವಿ ಎಂ ಕೊರವಿ, ಪ್ಲೇಸ್ಮೆಂಟ್ ನಿರ್ದೇಶಕ ಅರುಣ್ ರಜಪೂತ ಮಾತನಾಡಿದರು. ಡಾ.ಎಂ ಎಸ್. ಮಾಣಿಕ್ ಸ್ವಾಗತಿಸಿದರು. ಡಾ. ರಾಮಕಾಂತ ಕುಲಕರ್ಣಿ ವಂದಿಸಿದರು. ಪ್ಲೇಸ್ಮೆಂಟ್ ಸಹಾಯಕಿ ಚೈತ್ರಾ ಬಾದಾಮಿಯವರು ಸಂಸ್ಥೆಯ ಪರಿಚಯ ಮಾಡಿದರು. ಭಾಗ್ಯಶ್ರೀ ನಿರೂಪಿಸಿದರು.



ಧಾರವಾಡ: ನಗರದ ಸಿಎಸ್‌ಐ ಪದವಿ ಕಾಲೇಜಿನಲ್ಲಿ ಶನಿವಾರ ನಡೆದ ಅಂತರ್ ಮಹಾವಿದ್ಯಾಲಯಗಳ ಕಬಡ್ಡಿಯಲ್ಲಿ ಮರಾಠ ವಿದ್ಯಾಪ್ರಸಾರಕ ಮಂಡಳದ ಛತ್ರಪತಿ ಶಿವಾಜಿ ಮಹಾರಾಜ ಪದವಿ ಕಾಲೇಜು ದ್ವಿತೀಯ ಸ್ಥಾನ ಗಳಿಸಿ ಅಂತರ್ ವಿಶ್ವವಿದ್ಯಾಲಯ ಮಟ್ಟಕ್ಕೆ ಆಯ್ಕೆಯಾಗಿದೆ. ತಂಡ ಆಯ್ಕೆಯಾಗಿದ್ದಕ್ಕೆ ಅಧ್ಯಕ್ಷ ಎಂ.ಎನ್. ಮೋರೆ, ಪದಾಧಿಕಾರಿಗಳು, ಉಪನ್ಯಾಸಕರು ಹರ್ಷವ್ಯಕ್ತಪಡಿಸಿದ್ದಾರೆ.



ಅಳ್ನಾವರ: ಡೋರಿ ಗ್ರಾಮದಲ್ಲಿ ಅರವಟಗಿ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಸದಸ್ಯರಿಗಾಗಿ ಕಣ್ಣಿನ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. ಸಂಘದ ಅಧ್ಯಕ್ಷ ಶಿವಾನಂದ ಹಿರೇಮಠ, ಉಪಾಧ್ಯಕ್ಷ ಸುರೇಶ ಕೋಲಕಾರ, ಅಶೋಕ ಜೋಡಟ್ಟಿ, ಚನ್ನಬಸಯ್ಯ ಹಿರೇಮಠ ಕಾರ್ಯದರ್ಶಿ ವಿಜಯ ಧಾರವಾಡ ಇದ್ದರು.

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.94.68ರಷ್ಟು ಫಲಿತಾಂಶ

ಹುಬ್ಬಳ್ಳಿ: ಕೆ.ಎಲ್.ಇ. ಸಂಸ್ಥೆಯ ಶ್ರೀ ಕಾಡಸಿದ್ಧೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್. ಕೋತಂಬ್ರಿ ವಿಜ್ಞಾನ ಸಂಸ್ಥೆ 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಗಮನಾರ್ಹ ಸಾಧನೆ ಮಾಡಿದ್ದು, ಒಟ್ಟು ಶೇ.94.68 ಫಲಿತಾಂಶ ದಾಖಲಿಸಿದೆ.

ಕಲಾ ವಿಭಾಗ



ವಿಜ್ಞಾನ ವಿಭಾಗ



ಕಲಾ ವಿಭಾಗದಲ್ಲಿ 119 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅವರಲ್ಲಿ 114 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಈ ಮೂಲಕ ವಿಭಾಗವು ಶೇ.95.8ರಷ್ಟು ಫಲಿತಾಂಶ ದಾಖಲಿಸಿದೆ. ಬಿ.ಬಿ. ಅಫಾನಾ ಬಶೀರ ಅಹ್ಮದ್ ನದಾಫ್ ಶೇ.97.33, ಸೋಮೇಶ್ವರ ಬಸವರಾಜ ಗುಡ್ಡಾಪುರ ಶೇ.96.5, ಸುಜಾತಾ ಜಕ್ಕಪ್ಪನವರ ಶೇ.96.33, ರಜತ ಪಿ. ಪಾಟೀಲ್ ಶೇ. 95.33, ತನಿಷ್ಕ ನಂದೀಶ ಹುಬ್ಬಳ್ಳಿ ಶೇ.95 ಅಂಕ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ 140 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 131 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವಿಭಾಗವು ಶೇ.93.57ಷ್ಟು ಫಲಿತಾಂಶ ದಾಖಲಿಸಿದೆ. ಮಿಸ್ಬಾ ಅಂಜುಮ್ ಗಿರ್ನಿ ಶೇ.97, ರೋಹಿತ್ ರವಿರಾಜ್ ಪಾಟೀಲ್ ಶೇ.95, ಶ್ರೇಯಾ ಬರಟಕ್ಕೆ ಶೇ.93.5, ಪವನ ಎಂ. ನಾಗಲೋರ ಶೇ.93, ಸಮೃದ್ಧ್ ಯು. ಗೋಡ್ಸೆ ಶೇ.92.66 ಅಂಕ ಗಳಿಸಿದ್ದಾರೆ. ಇನ್ನು ಕೆಲವು ವಿಷಯಗಳಲ್ಲಿ ವಿದ್ಯಾರ್ಥಿಗಳು 100ಕ್ಕೆ 100 ಅಂಕಗಳನ್ನು ಪಡೆದು ವಿಶೇಷ ಸಾಧನೆ ಮಾಡಿದ್ದಾರೆ. ಸಂಖ್ಯಾಶಾಸ್ತ್ರದಲ್ಲಿ ಇಬ್ಬರು ವಿದ್ಯಾರ್ಥಿನಿಯರು ಭವಾನಿ ಘಂಟಿ ಹಾಗೂ ಮಿಸ್ಬಾ ಅಂಜು ಗಿರ್ನಿ, ಇತಿಹಾಸದಲ್ಲಿ ಇಬ್ಬರು ವಿದ್ಯಾರ್ಥಿಗಳಾದ ಶಿವಾನಂದ ಎಂ. ಹೆಳವರ ಮತ್ತು ಯಮನೂರಪ್ಪ ಚಿತ್ತರಗಿ, ರಾಜ್ಯಶಾಸ್ತ್ರದಲ್ಲಿ ಐದು ವಿದ್ಯಾರ್ಥಿಗಳಾದ ಶಿವಾನಂದ ಎಂ. ಹೆಳವರ, ಸೃಷ್ಟಿ ದೋಣಿ, ಬಿ.ಬಿ. ಅಫಾನಾ, ಸುಜಾತಾ ಜಕ್ಕಪ್ಪನವರ ಹಾಗೂ ಸೋಮೇಶ್ವರ ಗುಡ್ಡಾಪುರ, ಭೂಗೋಳಶಾಸ್ತ್ರದಲ್ಲಿ ಆರು ವಿದ್ಯಾರ್ಥಿಗಳಾದ ಅಜಯ್ ಪಿ. ಮತ್ತಿಗಟ್ಟಿ, ಆಕಾಶ್ ಸೋಮಣ್ಣವರ, ಅರ್ಪಿತಾ ಮುಳುಗುಂದಮಠ, ಚೈತ್ರಾ ಎಂ. ಕರಿಯಾರ್ ಹಾಗೂ ಸೋಮೇಶ್ವರ ಗುಡ್ಡಾಪುರ 100ಕ್ಕೆ 100 ಅಂಕಗಳನ್ನು ಪಡೆದುಕೊಂಡಿದ್ದಾರೆ.

ಕಲಾ ವಿಭಾಗ: ಕನ್ನಡ ವಿಭಾಗದಲ್ಲಿ ಶೇ. 97.05, ಇಂಗ್ಲಿಷ್ ವಿಭಾಗದಲ್ಲಿ ಶೇ.96.63, ಹಿಂದಿ ವಿಭಾಗದಲ್ಲಿ ಶೇ. 100, ಇತಿಹಾಸ ವಿಭಾಗದಲ್ಲಿ ಶೇ.100, ಅರ್ಥಶಾಸ್ತ್ರ ವಿಭಾಗದಲ್ಲಿ ಶೇ.99.15, ಭೂಗೋಳಶಾಸ್ತ್ರ ವಿಭಾಗದಲ್ಲಿ ಶೇ.100, ರಾಜ್ಯಶಾಸ್ತ್ರದಲ್ಲಿ ವಿಭಾಗದಲ್ಲಿ ಶೇ.100%, ಸಮಾಜಶಾಸ್ತ್ರ ವಿಭಾಗದಲ್ಲಿ ಶೇ.100 ಅಂಕ ಗಳಿಸಿದ್ದಾರೆ.

ವಿಜ್ಞಾನ ವಿಭಾಗ: ಕನ್ನಡ ವಿಭಾಗದಲ್ಲಿ ಶೇ.99, ಇಂಗ್ಲಿಷ್ ವಿಭಾಗದಲ್ಲಿ ಶೇ.99.28, ಹಿಂದಿ ವಿಭಾಗದಲ್ಲಿ ಶೇ.100, ಭೌತಶಾಸ್ತ್ರ ವಿಭಾಗದಲ್ಲಿ ಶೇ.96.42, ರಸಾಯನಶಾಸ್ತ್ರ ವಿಭಾಗದಲ್ಲಿ ಶೇ.98.57, ಗಣಿತ ವಿಭಾಗದಲ್ಲಿ ಶೇ.97.85, ಜೀವಶಾಸ್ತ್ರ ವಿಭಾಗದಲ್ಲಿ ಶೇ. 99.15 ಸಂಖ್ಯಾಶಾಸ್ತ್ರ ವಿಭಾಗದಲ್ಲಿ, ಶೇ. 100 ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಗೌರವ ಕಾರ್ಯಾಧ್ಯಕ್ಷ ಡಾ. ಪ್ರಭಾಕರ ಬಿ. ಕೋರೆ, ನಿಕಟಪೂರ್ವ ಆಡಳಿತ ಮಂಡಳಿಯ ನಿರ್ದೇಶಕ ಶಂಕರಣ್ಣ ಮುನವಳ್ಳಿ, ಕಾರ್ಯಾಧ್ಯಕ್ಷ ಅಮಿತ ಪಿ. ಕೋರೆ, ನಿರ್ದೇಶಕರಾದ ಮಹಾಂತೇಶ ಎಂ. ಕವಟಗಿಮಠ, ಜಯಾನಂದ ಎಂ. ಮುನವಳ್ಳಿ, ಮಲ್ಲಿಕಾರ್ಜುನ ಸಿ. ಕೊಳ್ಳಿ, ಮಂಜುನಾಥ ಎಸ್. ಮುನವಳ್ಳಿ, ಪದವಿರ್ವ ಪ್ರಾಚಾರ್ಯ ಡಾ. ಬಾಜಿರಾವ ಕಾಂಬಳೆ, ಪದವಿ ಪ್ರಾಚಾರ್ಯೆ ಡಾ. ಸುಮಂಗಲಾ ಬಿ. ಪಾಟೀಲ, ಕಾಲೇಜಿನ ಉಪನ್ಯಾಸಕರು ಹಾಗೂ ಪೋಷಕರು ಸಂತಸ ವ್ಯಕ್ತಪಡಿಸಿದ್ದಾರೆ.

ಡಾ.ಬಾಬು ಜಗಜೀವನರಾಂ ಕೊಡುಗೆ ಸ್ಮರಣೀಯ

ನವಲಗುಂದ: ನಗರದ ಗಾಂಧಿ ಮಾರುಕಟ್ಟೆಯಲ್ಲಿ ಡಾ. ಬಾಬು ಜಗಜೀವನರಾಮ್ ಅವರ 119ನೇ ಜಯಂತ್ಯುತ್ಸವದ ಅಂಗವಾಗಿ ನವಲಗುಂದ ಆಚರಣೆ ಸಮಿತಿ ವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಅಜಾತ ನಾಗಲಿಂಗಸ್ವಾಮಿ ಮಠದ ವೀರೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಡಾ. ಬಾಬು ಜಗಜೀವನರಾಂ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಶಾಸಕ ಎನ್. ಎಚ್. ಕೋನರಡ್ಡಿ ಚಾಲನೆ ನೀಡಿ ಮಾತನಾಡಿದವರು.



ಮಹಾನ್ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಡಾ.ಬಾಬು ಜಗಜೀವನರಾಂ ಅವರು ದೇಶದ ಕಾರ್ಮಿಕ ವರ್ಗದ ಏಳಿಗೆಯನ್ನು ಬಯಸಿದ ನಾಯಕರು. ಆಹಾರ ಕೊರತೆಯಿಂದ ಬಳಲುತ್ತಿದ್ದ ದೇಶಕ್ಕೆ ಹಸಿರು ಕ್ರಾಂತಿಯ ಮೂಲಕ ಹೊಸ ದಾರಿ ತೋರಿದ ಅವರ ಕೊಡುಗೆ ಸದಾ ಸ್ಮರಣೀಯ ಎಂದರು.

ತಹಶೀಲ್ದಾರ್ ಸುಧೀರ ಸಾಹುಕಾರ, ಕೆಯುಡಿ ಮೌಲ್ಯಮಾಪನ ಕುಲಸಚಿವ ನಿಜಲಿಂಗಪ್ಪ ಮಟ್ಟಿಹಾಳ, ಸಿಪಿಐ ರವಿ ಕಪ್ಪತ್ತನವರ, ಕೆಯುಎನ್‌ಎಲ್ ಅಧಿಕಾರಿ ರಾಘವೇಂದ್ರ ಜಾಲಗಾರ, ಕುಡಿಯುವ ನೀರು ಬಳಕೆದಾರರ ಮಹಾಮಂಡಳ ಅಧ್ಯಕ್ಷ ಸದುಗೌಡ ಪಾಟೀಲ, ಮರೇಶ್ ನಾಗಣ್ಣವರ, ಅಣ್ಣಪ್ಪ ಬಾಗಿ, ಸಾವಿತ್ರಿಬಾಯಿ ಪೂಜಾರ, ಶೋಭಾ ಹಿರೇಮಠ್, ಸಮಾಜದ ಮುಖಂಡರಾದ ಕುಮಾರ ಮಾದರ, ಶಂಕ್ರು ಹುನಸಿಮರದ, ದುರಗಪ್ಪ ನಾಗಣ್ಣವರ, ಸಂಗಪ್ಪ ಮಾದರ, ವೆಂಕಟೇಶ್ ಸಗಬಾಲ್, ಅಲ್ಲಾ ಕಲ್ಲಕುಟ್ರಿ, ನಿಂಗಪ್ಪ ಕೆಳಗೇರಿ, ದೀಲಿಪ್ ರತ್ನಾಕರ, ಶಿವಮತ್ರಪ್ಪ ಕೆಳಗೇರಿ, ಹಣಮಂತಪ್ಪ ಕೆಳಗೇರಿ, ಮಂಜುಳಾ ಹೊಸಮನಿ, ಸಿರಾಜುದ್ದಿನ ಧಾರವಾಡ, ಅಶೋಕ ಮದಗುಣಕಿ, ರವಿ ಬೆಂಡಿಗೇರಿ, ರಾಜು ದೊಡಮನಿ, ಆನಂದ ಹವಳಕೋಡ್, ಸುಭಾಶಚಂದ್ರಗೌಡ ಪಾಟೀಲ, ಕಲ್ಮೇಶ ಹಾದಿಮನಿ, ನಾಗಲಿಂಗಪ್ಪ ದೊಡಮನಿ, ಮೈಲಾರಪ್ಪ ವೈದ್ಯ, ಕೃಷ್ಣ ಮಾದರ, ಸಮಾಜದವರು ಉಪಸ್ಥಿತರಿದ್ದರು.

ಬತ್ತಿದ ಕೊಳವೆ ಬಾವಿಗಳು | ಗ್ರಾಮೀಣ ಭಾಗದ ಜನರಲ್ಲಿ ಆತಂಕ

76 ಹಳ್ಳಿಗಳಲ್ಲಿ ಜಲಕ್ಷಾಮ ಸಾಧ್ಯತೆ

▸ ರುದ್ರಗೌಡ ಪಾಟೀಲ

ಗದಗ: ಗದಗ-ಬೆಟಗೇರಿ, ಲಕ್ಷ್ಮೇಶ್ವರ ಪಟ್ಟಣದಲ್ಲಿ ಈಗಾಗಲೇ ನೀರಿನ ಅಭಾವ ಎದುರಾಗಿದ್ದು, ಸಾರ್ವಜನಿಕರು ಪರಿತಪಿಸುವಂತಾಗಿದೆ. ಅದರ ಜೊತೆಗೆ ಜಿಲ್ಲೆಯ ಉಳಿದ ತಾಲೂಕು, ಪಟ್ಟಣಗಳಲ್ಲೂ ಏಪ್ರಿಲ್ ತಿಂಗಳ ಮಧ್ಯಭಾಗದಿಂದ ಕುಡಿಯುವ ನೀರಿನ ಸಮಸ್ಯೆ ತಲೆದೋರುವ ಸಾಧ್ಯತೆ ಇದೆ ಎನ್ನಲಾಗಿದೆ.

ಕಳೆದ ವರ್ಷ ಮುಂಗಾರಿನಲ್ಲಿ ಸುರಿದ ಭಾರೀ ಮಳೆಯಿಂದ ಅಡ್ಡಲಾಗಿ ಕಟ್ಟಿರುವ ಹಮ್ಮಿಗಿ ಬ್ಯಾರೇಜ್‌ನಲ್ಲಿ ಅಲ್ಪ ಪ್ರಮಾಣದಲ್ಲಿ ನೀರು ಲಭ್ಯವಿದ್ದು, ಮುಂಜಾಗ್ರತವಾಗಿ ನೀರಿನ ಸಮಸ್ಯೆ ಉದ್ಭವಿಸಬಹುದಾದ ಗ್ರಾಮಗಳ ಬಗ್ಗೆ ಪರಿಶೀಲನೆ ಮತ್ತು ನೀರು ಪೂರೈಕೆ ಬಗ್ಗೆ ಜಿಲ್ಲಾಡಳಿತ ಕ್ರಮ ವಹಿಸಬೇಕಿದೆ. ಜಿಲ್ಲೆಯ 76 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸುವ ಸಾಧ್ಯತೆ ಇದೆ.

ತುಂಗಭದ್ರಾ, ಮಲಪ್ರಭಾ ಕಾಲುವೆ ಮೂಲಕ ಗ್ರಾಮೀಣ ಭಾಗಕ್ಕೆ ನೀರು ಹರಿದರೂ ಕುಡಿಯುವ ನೀರು ವಿಭಾಗದಿಂದ ಜಾರಿಯಾದ ಯೋಜನೆ ತಲುಪದ ಮತ್ತು ಕಾಲುವೆ ಹಾಗೂ ನೀರಿನ ಮೂಲಗಳಿಂದ ದೂರ ಇರುವ ಮತ್ತು ಕೊಳವೆ ಬಾವಿ ಸಂಪೂರ್ಣ ಬತ್ತಿದ ಪರಿಣಾಮ 76 ಹಳ್ಳಿಗಳಲ್ಲಿ ಜಲಕ್ಷಾಮ ದಟ್ಟವಾಗಿದೆ.

ತುಂಗಭದ್ರಾ ಮತ್ತು ಮಲಪ್ರಭಾ ನದಿ ಮೂಲಗಳಿಂದ ಜಿಲ್ಲೆಯ ಗ್ರಾಮೀಣ ಭಾಗದ 342 ಹಳ್ಳಿಗಳಿಗೆ ನೀರು ಪೂರೈಸುವ ಜವಾಬ್ದಾರಿಯನ್ನು ತಹಲ್ ಮತ್ತು ಎಲ್ ಆ್ಯಂಡ್ ಟಿ ಖಾಸಗಿ ಕಂಪನಿಗಳು ವಹಿಸಿಕೊಂಡಿವೆ. ರೋಣ ಮತ್ತು ನರಗುಂದ ಭಾಗದ ಹಳ್ಳಿಗಳಿಗೆ ತಹಲ್ ಖಾಸಗಿ ಕಂಪನಿ ನೀರು ಪೂರೈಕೆ ಮತ್ತು ಪೈಪ್‌ಲೈನ್ ಜವಾಬ್ದಾರಿ ವಹಿಸಿಕೊಂಡಿದ್ದು, ಗದಗ, ಮುಂಡರಗಿ, ಶಿರಹಟ್ಟಿ ಭಾಗದ ಹಳ್ಳಿಗಳಿಗೆ ಎಲ್ ಆ್ಯಂಡ್ ಟಿ ಕಂಪನಿ ನೀರು ಪೂರೈಕೆ ಜವಾಬ್ದಾರಿ ವಹಿಸಿಕೊಂಡಿದೆ. ಜಲಕ್ಷಾಮ ಎದುರಾಗಬಹುದಾದ ಗ್ರಾಮೀಣ ಭಾಗದಲ್ಲಿ ನೀರಿನ ಸಮಸ್ಯೆ ಕೈಮೀರುವ ಮೊದಲೇ ಸಭೆ ನಡೆಸಬೇಕಾದ ಅನಿವಾರ್ಯತೆ ಇದೆ.

ರೋಣ ಮತ್ತು ನರಗುಂದ ತಾಲೂಕಿನ 123 ಹಳ್ಳಿ 129 ಜನವಸತಿ ಪ್ರದೇಶಗಳು ಒಳಗೊಳ್ಳುತ್ತವೆ. ಈ ಭಾಗದ ಹಳ್ಳಿಗಳಿಗೆ ಸವದತ್ತಿಯ ರೇಣುಕಾ ಜಲಾಶಯದಿಂದ ನೀರು ಪೂರೈಸಲಾಗುತ್ತಿದೆ. ನರಗುಂದ ತಾಲೂಕಿನಲ್ಲಿ 18 ಜನವಸತಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು.



> ಗದಗ-ಬೆಟಗೇರಿಯಲ್ಲಿ ನಿತ್ಯ 42 ಎಂಎಲ್ಡಿ ನೀರು ಅವಶ್ಯವಿದ್ದು, 24 ಎಂಎಲ್ಡಿ ನೀರು ಸರಬರಾಜು ಆಗುತ್ತಿದೆ. ಸದ್ಯ 10ರಿಂದ 12 ದಿನಗಳವರೆಗೆ ನೀರು ಪೂರೈಕೆಯಾಗುತ್ತಿದೆ. ಮಳೆಗಾಲದವರೆಗೂ ಜಿಲ್ಲಾಡಳಿತ ಹಾಗೂ ನಗರಸಭೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು.
>
> ■ ರಾಘವೇಂದ್ರ ಯಳವತ್ತಿ,
> ಗದಗ-ಬೆಟಗೇರಿ ನಗರಸಭೆ ಸದಸ್ಯ

> ಆವಳಿ ನಗರಕ್ಕೆ ನೀರು ಪೂರೈಸಲು 10 ಟ್ಯಾಂಕರ್‌ಗಳನ್ನು ಪ್ರತಿ ಟ್ರಿಪ್‌ಗೆ 550 ರೂ.ನಂತೆ ಬಾಡಿಗೆ ಪಡೆಯಲಾಗಿದೆ. ನೀರಿನ ಸಮಸ್ಯೆಯಿರುವ ವಾರ್ಡ್‌ಗಳಿಗೆ ನೀರು ಪೂರೈಸಲಾಗುತ್ತಿದೆ. ಹಮ್ಮಿಗಿ ಬ್ಯಾರೇಜ್‌ನಿಂದ ಸಿಂಗಟಾಲೂರ ವರೆಗಿನ ಮುಖ್ಯ ಕೊಳವೆ ಪೈಪ್‌ಲೈನ್ ದುರಸ್ತಿಗೊಳಿಸಿದ್ದು, ಆವಳಿ ನಗರಕ್ಕೆ ಯಥಾವತ್ತಾಗಿ ನೀರು ಪೂರೈಕೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.
>
> ■ ರಾಜಾರಾಮ್ ಪವಾರ,
> ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು

ದಿಗಂತ ವಿಶೇಷ

ಗದಗ, ಮುಂಡರಗಿ, ಶಿರಹಟ್ಟಿ ತಾಲೂಕಿನ 194 ಹಳ್ಳಿ, 213 ಜನವಸತಿ ಪ್ರದೇಶಗಳು ಒಳಗೊಳ್ಳುತ್ತವೆ. ಜಿಲ್ಲೆಯ ಮುಂಡರಗಿ ತಾಲೂಕಿನ ಸಿಂಗಟಾಲೂರು ಬ್ಯಾರೇಜ್ ಮೂಲಕ ನೀರು ಪೂರೈಸಲಾಗುತ್ತಿದೆ. ಮುಂಡರಗಿಯ 7, ಗದಗ ತಾಲೂಕಿನ 14 ಹಾಗೂ ಶಿರಹಟ್ಟಿ ತಾಲೂಕಿನ 16 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಬಹುದು.

ಕೊಳವೆಬಾವಿ ಅಂತರ್ಜಲ ಮಟ್ಟ ಏರಿಕೆ: ಜಿಲ್ಲೆಯಲ್ಲಿ ಅಂದಾಜು 6 ಸಾವಿರಕ್ಕೂ ಹೆಚ್ಚು ಕೊಳವೆ ಬಾವಿಗಳಿದ್ದು, ಕಳೆದ ವರ್ಷ ಮುಂಗಾರಿನಲ್ಲಿ ಸುರಿದ ಅಧಿಕ ಮಳೆಯಿಂದಾಗಿ ಅಂತರ್ಜಲ ಮಟ್ಟ ಏರಿಕೆ ಕಂಡು ಬಂದಿದೆ. 3,700 ಕೊಳವೆ ಬಾವಿಗಳು ರಿಚಾರ್ಜ್ ಆಗಿವೆ. ಇನ್ನು ಗದಗ-ಬೆಟಗೇರಿಯಲ್ಲಿ 742 ಬೋರ್‌ವೆಲ್‌ಗಳಿದ್ದು, ಭೀಷ್ಮಕೆರೆ ತುಂಬಿಸಿದ್ದರ ಪರಿಣಾಮ ಬಹುತೇಕ ಕೊಳವೆಬಾವಿಗಳು ರಿಚಾರ್ಜನ್ ಆಗಿವೆ. ಅಗತ್ಯ ಬಿದ್ದರೆ ಟ್ಯಾಂಕರ್ ಮೂಲಕ ನೀರು ಪೂರೈಸಲು ಕ್ರಮ ಜರುಗಿಸಲಾಗುತ್ತಿದೆ ಎನ್ನುತ್ತಾರೆ ನಗರಸಭೆ ಅಧಿಕಾರಿಗಳು.

ರಾಷ್ಟ್ರೀಯ ವಿಧಿವಿಜ್ಞಾನ ಪ್ರದರ್ಶನ | ಪ್ರದರ್ಶನದಲ್ಲಿದೆ ನ್ಯಾಯದ ಹಾದಿ

ಅಪರಾಧ ಲೋಕದ ರಹಸ್ಯ ಬಯಲು

▸ ಮಹಾಂತೇಶ ಕಣವಿ

ಧಾರವಾಡ: ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆ ಅಪರಾಧಗಳ ಸ್ವರೂಪವೂ ಬದಲಾಗುತ್ತಿದೆ. ಈ ಆಧುನಿಕ ಅಪರಾಧಗಳ ಪತ್ತೆಯಲ್ಲಿ ವಿಧಿ ವಿಜ್ಞಾನದ ಪಾತ್ರ ಎಷ್ಟು ಮುಖ್ಯ ಎಂಬುದನ್ನು ಘೌಊಖಿ ಕ್ಯಾಂಪಸ್‌ನಲ್ಲಿ ನಡೆದ ಪ್ರದರ್ಶನ ಕಣ್ಣಿಗೆ ಕಟ್ಟುವಂತೆ ತೆರೆದಿಟ್ಟಿತು.

ಕ್ರೈಂ ಸೀನ್ ಇನ್ವೆಸ್ಟಿಗೇಷನ್: ಅಪರಾಧ ನಡೆದ ಸ್ಥಳವನ್ನು ಹೇಗೆ ಸಂರಕ್ಷಿಸಲಾಗುತ್ತದೆ. ಅಲ್ಲಿಂದ ಸಾಕ್ಷ್ಯಗಳನ್ನು (ರಕ್ತದ ಕಲೆ, ಕೂದಲು, ಹೆಜ್ಜೆ ಗುರುತು) ಸಂಗ್ರಹಿಸುವ ಕುರಿತು ವಿದ್ಯಾರ್ಥಿಗಳೇ ತಯಾರಿಸಿದ ತೊಗಲು ಬೊಂಬೆ ಪ್ರದರ್ಶನದ ಮೂಲಕ ಲೈವ್ ಪ್ರಾತ್ಯಕ್ಷಿಕೆಯು ಆಕರ್ಷಕವಾಗಿತ್ತು.

ಬೆರಳಚ್ಚು ಶಾಸ್ತ್ರ ಕಣ್ಣಿಗೆ ಕಾಣದ ಬೆರಳಚ್ಚುಗಳನ್ನು ವಿವಿಧ ಪೌಡರ್‌ಗಳನ್ನು ಬಳಸಿ ಹೇಗೆ ಪತ್ತೆ ಹಚ್ಚಲಾಗುತ್ತದೆ ಎಂಬುದು ವಿದ್ಯಾರ್ಥಿಗಳು ವಿವರಿಸಿದರು. ಇಂದಿನ ಡಿಜಿಟಲ್ ವಂಚನೆಗಳು, ಹ್ಯಾಕಿಂಗ್, ಮೊಬೈಲ್ ಡೇಟಾ ರಿಕವರಿ ಬಗ್ಗೆ ಅರಿವು ಮೂಡಿಸಿತು.

ಬ್ಯಾಲಿಸ್ಟಿಕ್ಸ್ ಮತ್ತು ಡಿಎನ್‌ಎ ವಿಶ್ಲೇಷಣೆ: ವಿದ್ಯಾರ್ಥಿಗಳಲ್ಲಿ ಮತ್ತು ಜನರಲ್ಲಿ ಬಹಳ ಕುತೂಹಲ ಮೂಡಿಸಿದ ಬಂದೂಕಿನ ಗುಂಡುಗಳ ಗುರುತು ಪತ್ತೆ ಹಚ್ಚುವ ಹಾಗೂ ಡಿಎನ್‌ಎ ಪರೀಕ್ಷೆ ಮೂಲಕ ಅಪರಾಧಿ ಗುರುತಿಸುವ ಸಂಕೀರ್ಣ ಪ್ರಕ್ರಿಯೆ ಗಮನ ಸೆಳೆಯಿತು.

ವಿದ್ಯಾರ್ಥಿಗಳು ಭೇಟಿ: ವಿವಿಧ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಈ ಪ್ರದರ್ಶನಕ್ಕೆ ಭೇಟಿ ನೀಡಿದ್ದರು. ಪುಸ್ತಕದಲ್ಲಿ ಓದುತ್ತಿದ್ದ ವಿಷಯಗಳು ಪ್ರಾಯೋಗಿಕವಾಗಿ ನೋಡಿ ವಿದ್ಯಾರ್ಥಿಗಳು, ರಕ್ತದ ಮಾದರಿಗಳ ವಿಶ್ಲೇಷಣೆ ಮತ್ತು ನಕಲಿ ನೋಟು ಪತ್ತೆ ಹಚ್ಚುವ ತಂತ್ರಜ್ಞಾನದ ಮಾಹಿತಿ ಪಡೆದರು.

ಸಾರ್ವಜನಿಕರಲ್ಲಿ ಜಾಗೃತಿ: ಕೇವಲ ವಿದ್ಯಾರ್ಥಿಗಳಷ್ಟೇ ಅಲ್ಲದೆ, ಸಾರ್ವಜನಿಕರಿಗೂ ಕೂಡ ಈ ಪ್ರದರ್ಶನವು ಉಪಯುಕ್ತವಾಗಿದೆ. ಸುಳ್ಳು ಪತ್ತೆ ಪರೀಕ್ಷೆ ಹಾಗೂ ಮಾದಕ ದ್ರವ್ಯಗಳ ಪತ್ತೆ ಹಚ್ಚುವ, ಸಮಾಜದಲ್ಲಿ ಕಾನೂನು-ವಿಜ್ಞಾನದ ಅರಿವು ಮೂಡಿಸುವ ಓಊಖಿಗನ ಪ್ರಯತ್ನ ಯಶಸ್ವಿಯಾಗಿದೆ.

ಧಾರವಾಡ ವಾಲ್ಮಿ ಕಟ್ಟಡದಲ್ಲಿ ನಡೆದ ಈ ಪ್ರದರ್ಶನ ಉತ್ತರ ಕರ್ನಾಟಕ ಭಾಗದ ಜನರಿಗೆ ವಿಧಿ ವಿಜ್ಞಾನದ ವಿಸ್ತಾರವಾದ ಜಗತ್ತನ್ನು ಪರಿಚಯಿಸಿದೆ. ಭವಿಷ್ಯದಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಈ ಕ್ಷೇತ್ರದಲ್ಲಿ ವೃತ್ತಿ ಜೀವನ ರೂಪಿಸಿಕೊಳ್ಳಲು ಪ್ರೇರಣೆಯಾಗಲಿದೆ.



ಭೌತಿಕ ಪುರಾವೆ ಮುಖ್ಯ

ಲೈಂಗಿಕ ಅಪರಾಧಗಳ ತನಿಖೆಯಲ್ಲಿ ಭೌತಿಕ ಪುರಾವೆ ಮುಖ್ಯ ಪಾತ್ರ ವಹಿಸಲಿವೆ. ಹೀಗಾಗಿ ಪ್ರದರ್ಶನದಲ್ಲಿ ಹಲ್ಲಿನ ಜೋಡಣೆ, ಗಾತ್ರ, ಆಕಾರ, ಹಲ್ಲುಗಳ ನಡುವಿನ ಅಂತರ ಇವೆಲ್ಲ ಶಂಕಿತ ವ್ಯಕ್ತಿಯ ಪತ್ತೆಗೆ ಸಹಕಾರಿ. ಅಲ್ಲದೇ, ಮಣ್ಣಿನ ಮೇಲಿನ ಪಾದದ ಗುರುತು ಎಲೆಕ್ಟ್ರೋಸ್ಟಾಟಿಕ್ ಲಿಫ್ಟರ್ ಮತ್ತು ಪೌಡರ್ ಬಳಸಿ ಸಂಗ್ರಹವೂ ತನಿಖೆಗೆ ದಿಕ್ಸೂಚಿ ಎಂಬುದು ಪ್ರದರ್ಶನದಲ್ಲಿ ಮನದಟ್ಟು ಮಾಡಿಕೊಟ್ಟಿರುವುದೂ ಗಮನರ್ಹ.

> ವಿಧಿ ವಿಜ್ಞಾನ ಅಂದರೆ ಕೇವಲ ಪೋಸ್ಟ್ ಮಾರ್ಟಂ ಮಾತ್ರವಲ್ಲ, ಅದು ವಿಜ್ಞಾನದ ಮೂಲಕ ನ್ಯಾಯ ಒದಗಿಸುವ ದಾರಿ ಎಂಬುದು ಈ ಪ್ರದರ್ಶನದಿಂದ ನಮಗೆ ತಿಳಿಯಿತು.
>
> ■ ಲಕ್ಷ್ಮೀ ದುಂಡಿಗೌಡರ,
> ವಿದ್ಯಾರ್ಥಿನಿ ಶಿಯಾ ನರ್ಸಿಂಗ್ ಕಾಲೇಜು

ಅಪಾಯಕಾರಿ ಸಸ್ಯಗಳು

ಸಸ್ಯ ಲೋಕದಲ್ಲಿ ಕೆಲ ಎಲೆಗಳು ಅಥವಾ ಸಸ್ಯಗಳು ಭೀಕರ ನ್ಯೂರೋಟಾಕ್ಸಿನ್ ಹೊಂದಿವೆ. ಅವುಗಳ ಸೇವನೆ ಮನುಷ್ಯನ ನರಗಳ ಸಂವಹನ ಸ್ಥಗಿತಗೊಳಿಸಲಿವೆ. ಹೇಮ್‌ಲಾಕ್, ಒಲಿಯಾಂಡರ್(ಕಣಗಲೆ), ದತ್ತೂರಿ ಈ ಎಲೆಗಳ ಬಳಸಿಯೂ ಮನುಷ್ಯರನ್ನು ಹತ್ಯೆ ಮಾಡಲಾಗುತ್ತಿದೆ. ಈ ಎಲೆಗಳ ಸೇವನೆ ಮನುಷ್ಯನ ನರ ಮಂಡಲ ಸ್ಥಗಿತೊಳಿಸಲಿದೆ. ಇಂತಹ ಅಪಾಯಕಾರಿ ಸಸ್ಯಗಳ ಕುರಿತು ಪ್ರದರ್ಶನ ಬೆಳಕು ಚೆಲ್ಲಿತು.

ಕಲಾವಿದರ ಸಮಸ್ಯೆ ಇತ್ಯರ್ಥಕ್ಕೆ ಬದ್ಧ: ಎಚ್‌ಕೆಪಾ

ಧಾರವಾಡ: ರಾಜ್ಯದ ಕಲಾವಿದರು ಮತ್ತು ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯ ಸಮಸ್ಯೆಗಳ ಇತ್ಯರ್ಥಕ್ಕೆ ಸರ್ಕಾರ ಬದ್ಧವಿದೆ. ಈ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರೆ, ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ಸಚಿವ ಎಚ್.ಕೆ.ಪಾಟೀಲ ವಾಗ್ದಾನ ಮಾಡಿದರು.

ಸರ್ಕಾರಿ ಚಿತ್ರಕಲಾ ಕಾಲೇಜಿನ ಹಳೆಯ ವಿದ್ಯಾರ್ಥಿಗಳು ಮತ್ತು ಕಾಲೇಜು ಶಿಕ್ಷಣ ಇಲಾಖೆ ಶನಿವಾರ ಮಹಾವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಂಡ ಸುವರ್ಣ ಮಹೋತ್ಸವ ಉದ್ಘಾಟಿಸಿ, ಸರ್ಕಾರಿ ಚಿತ್ರಕಲಾ ವಿದ್ಯಾಲಯ ಮುಚ್ಚುತ್ತಿರುವ ಬಗ್ಗೆ ಬೇಸರಿಸಿದರು.

ನಾಡಿನ ಕಲೆಗಳಲ್ಲಿ ಆಯಾ ದೇಶದ ಸಂಸ್ಕೃತಿ, ಪರಂಪರೆ ಜೀವಂತಿಕೆ ಅಡಗಿದೆ. ಇಂತಹ ಕಲೆಗಳ ಉಳುವಿಗೆ ಶ್ರಮಿಸುವ ವಿದ್ಯಾಲಯ ಅಧೋಗತಿಗೆ ತಲುಪಿವೆ. ಶಿಕ್ಷಕರ ಕೊರತೆಯಿಂದ ಅದೆಷ್ಟೋ ವಿದ್ಯಾಲಯ ಬಾಗಿಲು ಹಾಕುತ್ತಿವೆ ಎಂದು ವಿಷಾದಿಸಿದರು. ಶಾಸಕ ಅರವಿಂದ ಬೆಲ್ಲದ ಮಾತನಾಡಿ, ಧಾರವಾಡ ಸಾಹಿತ್ಯ, ಸಂಗೀತ, ಕಲೆಯ ತವರೂರು. ಚಿತ್ರಕಲಾ ಮಹಾವಿದ್ಯಾಲಯ 50 ವರ್ಷ ಪೂರ್ಣಗೊಳಿಸಿರುವುದು ಮೈಲುಗಲ್ಲು. ಸರ್ಕಾರದ ಅನುದಾನ ಪಡೆಯದೆ, ಸುವರ್ಣ ಸಂಭ್ರಮದ ಆಚರಣೆಗೆ ಅಭಿನಂದಿಸಿದರು.

1935ರಲ್ಲಿ ಡಿ.ವಿ.ಹಾಲಭಾವಿ ಅವರು ಉತ್ತರ ಕರ್ನಾಟಕದಲ್ಲಿ ಚಿತ್ರಕಲಾ ಶಾಲೆ ಆರಂಭಿಸಿದರು. ಇಲ್ಲಿ ಕಲಿತ ಅನೇಕರು ರಾಷ್ಟ್ರ-ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಚಿತ್ರಕಲೆ ಉಳಿವಿಗೆ ವಿದ್ಯಾಲಯಕ್ಕೆ ಹೊಸ ರೂಪ ನೀಡಲು ಹೇಳಿದರು. ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಕಚೇರಿ ಜಂಟಿ ನಿರ್ದೇಶಕಿ ಕರಿಮುನ್ನಿಸ್ಸಾ, ಸಾಹಿತಿ ಲೋಹಿತ ನಾಯ್ಕರ್, ವರ್ಣಶಿಲ್ಪಿ ಎಂ.ಎಸ್.ಮೂರ್ತಿ, ಸಮಿತಿ ಅಧ್ಯಕ್ಷ ಶಿವಶಂಕರ ಹಿರೇಮಠ, ಎಂ.ಆರ್.ಬಾಳಿಕಾಯಿ, ಎಸ್.ಎಸ್.ಅಂಗಡಿ ಇತರರು ಇದ್ದರು.

ಹಿಪ್ಪರಗಿ ಜಲಾಶಯದಲ್ಲಿ 2.44 ಟಿಎಂಸಿ ನೀರು ಸಂಗ್ರಹ

ರಬಕವಿ-ಬನಹಟ್ಟಿ: ಹಿಪ್ಪರಗಿ ಬ್ಯಾರೇಜ್‌ನಲ್ಲಿ ಕಳೆದ ತಿಂಗಳು ಭಾರೀ ಪ್ರಮಾಣದಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿತ್ತು. ಈಗಷ್ಟೇ ಮಹಾರಾಷ್ಟ್ರದ ರಾಜಾಪೂರ ಬ್ಯಾರೇಜ್‌ನಿಂದ ಅಲ್ಪ ಪ್ರಮಾಣದಲ್ಲಿ ನೀರು ಬಂದಿದ್ದರ ಕಾರಣದಿಂದಾಗಿ ಇದೀಗ ಮತ್ತೆ 2.44 ಟಿಎಂಸಿಯಷ್ಟು ನೀರು ಸಂಗ್ರಹವಾಗಿದೆ.

ಬೆಳಗಾವಿ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳ ಸಂಜೀವನಿಯಾಗಿರುವ ಹಿಪ್ಪರಗಿ ಜಲಾಶಯದಲ್ಲಿನ ನೀರು ಬೇಸಿಗೆಯ ಬಾಷ್ಪೀಕರಣ ಹೊಡೆತಕ್ಕೆ ಸಂಗ್ರಹದಲ್ಲಿ ಭಾರೀ ಕುಸಿತಕ್ಕೆ ಕಾರಣವಾಗಿದೆ. ಹಿಪ್ಪರಗಿ ಜಲಾಶಯದಿಂದ ದಿನಂಪ್ರತಿ 0.07 ಟಿಎಂಸಿಯಷ್ಟು ನೀರು ಖಾಲಿಯಾಗುತ್ತಿದೆ. ಇತ್ತ ಜನತೆ ಬಳಕೆಗೆ ಕಾರಣವಾದರೆ, ಮತ್ತೊಂದೆಡೆ ಬಿರುಬಿಸಿಲಿನ ತಾಪಕ್ಕೆ ನೀರು ತೀವ್ರ ಕಡಿಮೆಯಾಗಲು ಕಾರಣವಾಗಿದೆ.

ನೀರಿನ ಮಟ್ಟ ಕೆಲ ದಿನಗಳಲ್ಲಿ ದಿಢೀರ್ ಆಗಿ ಭಾರಿ ಕುಸಿತ ಕಂಡ ಹಿನ್ನೆಲೆಯಲ್ಲಿ ಜನರಿಗೆ ಬೇಸಿಗೆಯ ಆತಂಕ ಶುರುವಾಗಿದೆ. ನೀರಿನ ಸಮರ್ಪಕ ಬಳಕೆಯಿಂದ ಬೇಸಿಗೆ ದಿನಗಳನ್ನು ಸಂಪೂರ್ಣ ನಿರಾಯಾಸವಾಗಿ ಕಳೆಯಬಹುದಾಗಿದೆ.



ನೀರು ಬಿಡುಗಡೆಯಾಗದಿದ್ದರೆ ಕೊಂಚ ನಿರಾಳ: ಪ್ರತಿವರ್ಷ ಬೇಸಿಗೆ ವೇಳೆ ಹಿಪ್ಪರಗಿ ಜಲಾಶಯದಿಂದ ಮುಂಭಾಗಕ್ಕೆ ಅಂದಾಜು ಸುಮಾರು 0.5 ಟಿಎಂಸಿಯಷ್ಟು ನೀರನ್ನು ಜಮಖಂಡಿ ಭಾಗಕ್ಕೆ ಕುಡಿಯುವ ನೀರಿನ ಸಲುವಾಗಿ ಬಿಡುಗಡೆಗೊಳಿಸುತ್ತಿದ್ದರು. ಪ್ರಸಕ್ತವರ್ಷ ಗೇಟ್ ನಂ.22ರಲ್ಲಿ ಆಗಿರುವ ಅವಘಡದಿಂದ 2 ಟಿಎಂಸಿಯಷ್ಟು ನೀರು ಪೋಲಾಗಿದ್ದು, ಪರಿಣಾಮವಾಗಿ ಹಿಪ್ಪರಗಿ ಬ್ಯಾರೇಜ್‌ನ ಹಿನ್ನೀನಲ್ಲಿರುವ ನಗರ, ಗ್ರಾಮ ಹಾಗೂ ರೈತ-ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವ ಉಂಟಾಗುವ ಸಾಧ್ಯತೆಗಳಿವೆ. ಬೇಸಿಗೆ ಮುಗಿಯುವವರೆಗೂ ಇದೇ ನೀರು ನಿಯಂತ್ರಣದಲ್ಲಿದ್ದರೆ ಮಾತ್ರ ಮೇ ಮಧ್ಯಂತವರೆಗೆ ಅನುಕೂಲ.

> ಹಿಪ್ಪರಗಿ ಜಲಾಶಯದಲ್ಲಿ ನೀರಿನ ಸಾಂಧ್ರತೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ನೀರನ್ನು ಕಾಳಜಿ ಪೂರ್ವಕ ಬಳಕೆ ನಾಗರಿಕರದ್ದಾಗಬೇಕು.
>
> ■ ವಿ.ಎಸ್. ನಾಯಕ,
> ಸಹಾಯಕ ಅಭಿಯಂತರ, ಹಿಪ್ಪರಗಿ

ಮಹಿಳಾ ಮೀಸಲಾತಿ ಬೆಂಬಲಿಸಿ


ಪುಟ ೧ ➜ ಮಹಿಳಾ ಮೀಸಲಾತಿ ಎಂಬುದು ಬಹಳ ವರ್ಷಗಳ ಬೇಡಿಕೆಯಾಗಿತ್ತು. ಅದು ಈಡೇರುವ ವಿಚಾರದಲ್ಲಿ ಸಂಶಯವಿತ್ತು. ಮೋದಿ ಅವರು ದೇಶದ ಪ್ರಧಾನಿಯಾದ ಮೇಲೆ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದ್ದಾರೆ ಎಂದರು. ಸುಮಾರು 15 ವರ್ಷಗಳ ಹಿಂದೆ ಇದು ಸಂಸತ್ತಿನಲ್ಲಿ ಚರ್ಚೆಗೆ ಬಂದಾಗ ಕೆಲವು ರಾಜಕೀಯ ಪಕ್ಷದವರು ಮಸೂದೆಯ ಹಾಳೆಯನ್ನು ಹರಿದು ಪ್ರಬಲ ವಿರೋಧ ವ್ಯಕ್ತಪಡಿಸಿದ್ದರು. ಕಾಂಗ್ರೆಸ್ ಹಳದಿ ಗ್ಲಾಸ್ ಹಾಕಿಕೊಂಡಿದೆ. ಆದರಿಂದ ಯಾವುದನ್ನು ನೋಡಿದರೂ ಹಳದಿ, ಚುನಾವಣೆಯೇ ಅವರಿಗೆ ಗೋಚರಿಸುತ್ತಿದೆ. ಮಹಿಳಾ ಮೀಸಲಾತಿ ಮಸೂದೆಯು ರಾಜ್ಯಗಳ ಚುನಾವಣೆ ಮೇಲೆ ಪ್ರಭಾವ ಬೀರುವುದೆಂದು ನನಗೆ ಅನಿಸುತ್ತಿಲ್ಲ ಎಂದರು.

ಇಂದಿನಿಂದ ಸಹಿ ಸಂಗ್ರಹ: ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಸಿ.ಮಂಜುಳಾ ಅವರು ಮಾತನಾಡಿ, ನಾರಿ ಶಕ್ತಿ ವಂದನ್ ಎಂಬ ಕಾಯ್ದೆ ಬಗ್ಗೆ ಎಲ್ಲ ಜಿಲ್ಲೆಗಳಲ್ಲಿ ಮಹಿಳಾ ಮೋರ್ಚಾದಿಂದ ಮಹಿಳಾ ಸಮಾವೇಶ ಆಯೋಜಿಸಲಾಗುವುದು. ಭಾನುವಾರ(ಏ.12) ಕೆ.ಆರ್. ಪುರದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ನೇತೃತ್ವದಲ್ಲಿ ಸಹಿ ಸಂಗ್ರಹ ಆರಂಭವಾಗುತ್ತದೆ. ಇದು ರಾಜ್ಯದಾದ್ಯಂತ ನಡೆಯಲಿದೆ. ಮಸೂದೆ ಬೆಂಬಲಿಸಲು ಮಿಸ್ಡ್ ಕಾಲ್ ಅಭಿಯಾನ ಮಾಡುತ್ತಿದ್ದೇವೆ ಎಂದು ತಿಳಿಸಿದರು.



ಇಂದಿರಾ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಹೊರತುಪಡಿಸಿ ಸಾಮಾನ್ಯ ಮಹಿಳೆಯರು ಸಂಸತ್ತಿಗೆ ಬರುವುದು ಕಾಂಗ್ರೆಸ್‌ನವರಿಗೆ ಬೇಕಾಗಿಲ್ಲ. ಈ ಮಾನಸಿಕತೆಯನ್ನು ಕಾಂಗ್ರೆಸ್ಸಿಗರು ಬದಲಿಸಿಕೊಳ್ಳಲಿ.
■ ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ರಾಮ ಬಾಣ



ಉದ್ಯಮಿಗೆ ₹15 ಕೋಟಿ ವಂಚನೆ

•**ಬೆಂಗಳೂರು:** ಇತ್ತೀಚೆಗೆ ಡಿಜಿಟಲ್ ಅರೆಸ್ಟ್ ಎಂಬ ಹೆಸರಿನಲ್ಲಿ ನಡೆಯುತ್ತಿರುವ ಸೈಬರ್ ವಂಚನೆ ಪ್ರಕರಣಗಳು ಹೆಚ್ಚುತ್ತಿದ್ದು, ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಉದ್ಯಮಿಯೊಬ್ಬರನ್ನು ಡಿಜಿಟಲ್ ಅರೆಸ್ಟ್ ಮಾಡುವ ಮೂಲಕ ಬರೋಬ್ಬರಿ 15.45 ಕೋಟಿ ರೂ.ಗಳನ್ನು ವಂಚಿಸಿದ್ದ ಇಬ್ಬರು ಸೈಬರ್ ವಂಚಕರನ್ನು ಸಿಇಎನ್ ಪೊಲೀಸರು ಬಂಧಿಸಿದ್ದಾರೆ.

ಸೈಬರ್ ಕಮಾಂಡ್ ವಿಭಾಗದ ಡಿಜಿಪಿ ಡಾ.ಪ್ರಣವ್ ಮೋಹಾಂತಿ ಮಾಹಿತಿ ನೀಡಿದ್ದು, ಹೈದರಾಬಾದ್ ಮೂಲದ ವೆಂಕದೋತ್ ನಾಯಿಕ, ಮತ್ತು ದೇವಾವತ್ ಶ್ರೀಪಾದ್ ನಾಯಿಕ ಬಂಧಿತ ಆರೋಪಿಗಳು. ಪ್ರಕರಣದ ರುವಾರಿ ತಲೆಮರೆಸಿಕೊಂಡಿದ್ದು, ಶೋಧ ನಡೆಸಲಾಗುತ್ತಿದೆ. ಬೆಳಗಾವಿ ಮೂಲದ ಉದ್ಯಮಿ ಅಜಿತ್ ಗೋಪಾಲಕೃಷ್ಣ ಅವರಿಗೆ ಕಳೆದ ಫೆ.7 ರಂದು ಅಪರಿಚಿತ ಕರೆ ಬಂದಿತ್ತು. ಕರೆ ಮಾಡಿದ ವ್ಯಕ್ತಿ ತನ್ನನ್ನು ಸಿಬಿಐ ನಿರ್ದೇಶಕ ಕೆ. ಸುಬ್ರಹ್ಮಣ್ಯಂ ಎಂದು ಪರಿಚಯಿಸಿಕೊಂಡಿದ್ದ. ನಿಮ್ಮ ಹೆಸರಿನಲ್ಲಿರುವ ಸಿಮ್ ಕಾರ್ಡ್‌ಗಳು ಮನಿ ಲಾಂಡರಿಂಗ್ ಪ್ರಕರಣದಲ್ಲಿ ಸಿಲುಕಿಕೊಂಡಿರುವ ನರೇಶ್ ಗೋಯಲ್ ಅವರಿಗೆ ಸಂಬಂಧಿಸಿವೆ. ನಿಮ್ಮ ಖಾತೆಯಿಂದ 25 ಲಕ್ಷ ರೂ. ವರ್ಗಾವಣೆ ಆಗಿದ್ದು, ನಿಮಗೆ 5 ಲಕ್ಷ ರೂ. ಕಮಿಷನ್ ಸಂದಾಯವಾಗಿದೆ ಎಂದು ಹೆದರಿಸಿದ್ದ ಎಂದು ತಿಳಿಸಿದರು.

2 ಕೋಟಿ ರೂ. ಹಣ ಫ್ರೀಜ್: ಬಂಧನದ ಭೀತಿ ಹುಟ್ಟಿಸಿದ ವಂಚಕರು, ಉದ್ಯಮಿಯನ್ನು ವಿಡಿಯೋ ಕಾಲ್ ಮೂಲಕ ಸುಮಾರು 1 ತಿಂಗಳು ನಿರಂತರವಾಗಿ ಕಣ್ಗಾವಲಿನಲ್ಲಿಟ್ಟಿದ್ದರು. ತನಿಖೆಗೆ ಸಹಕರಿಸದಿದ್ದರೆ ಜೈಲಿಗೆ ಹಾಕುವುದಾಗಿ ಬೆದರಿಸಿ, ಫೆ.9ರಂದು ಅಜಿತ್ ಗೋಪಾಲಕೃಷ್ಣ ಅವರಿಂದ ವಿವಿಧ ಬ್ಯಾಂಕ್ ಖಾತೆಗಳಿಗೆ 15.45 ಕೋಟಿ ರೂ.ಗಳನ್ನು ಆರ್‌ಟಿಜಿಎಸ್ ಮೂಲಕ ವರ್ಗಾಯಿಸಿಕೊಂಡಿದ್ದರು. ವಂಚನೆಗೊಳಗಾದ ಉದ್ಯಮಿ ಬೆಳಗಾವಿ ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಿದ್ದರು. ಸೈಬರ್ ಕಮಾಂಡ್ ಡಿಜಿಪಿ ಪ್ರಣವ್ ಮೋಹಂತಿ ಅವರ ಮಾರ್ಗದರ್ಶನದಲ್ಲಿ ತನಿಖೆ ನಡೆಸಿದ ಸಿಸಿಬಿಯ ಸೈಬರ್ ವಿಭಾಗದ ತಂಡ, ಆರೋಪಿಗಳು ಬಳಸಿದ್ದ 10ಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳನ್ನು ಪತ್ತೆಹಚ್ಚಿದೆ. ಹೈದರಾಬಾದ್‌ನ ಗಚ್ಚಿಬೌಲಿ ಹಾಸ್ಟೆಲ್‌ನಲ್ಲಿ ಅಡಗಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಸದ್ಯ 2 ಕೋಟಿ ರೂ. ಹಣವನ್ನು ಫ್ರೀಜ್ ಮಾಡಲಾಗಿದೆ. ಈ ಪ್ರಕರಣದಲ್ಲಿ ಮುಖ್ಯ ಆರೋಪಿ ತಲೆಮರೆಸಿಕೊಂಡಿದ್ದು, ಆತನಿಗಾಗಿ ಬಲೆ ಬೀಸಲಾಗಿದೆ ಎಂದರು.

ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

◈ ನಾನು ವಿದ್ವಾಂಸನಲ್ಲ, ಯಕ್ಷಗಾನ ಕ್ಷೇತ್ರದಲ್ಲಿ ದುಡಿಯುವ ಒಬ್ಬ ಕೆಲಸಗಾರ ಅಷ್ಟೆ
- ಡಾ. ಎಂ. ಪ್ರಭಾಕರ ಜೋಷಿ
- ವಿದ್ಯಾ ದದಾತಿ ವಿನಯಂ, ತುಂಬಿದ ಕೊಡ ತುಳುಕುವುದಿಲ್ಲ, ಫಲಭರಿತ ವೃಕ್ಷವು ಬಾಗುತ್ತದೆ ಎಂಬ ನುಡಿಗಳ ನೆನೆಪಾಗುತ್ತೆ, ಅಲ್ವಾ?

ದಿನ ಭವಿಷ್ಯ

ಮೇಷ
ನಿರ್ಧಾರ ಸೂಕ್ತ ಫಲ ನೀಡಲಿದೆ. ಹಿರಿಯರ ಜತೆ ವಾಗ್ವಾದ ತಪ್ಪಿಸಿ. ದಿನದ ಅಂತ್ಯಕ್ಕೆ ವಿಶ್ರಾಂತಿಯ ಅಗತ್ಯ ಬೀಳಬಹುದು. ಮಕ್ಕಳ ಸಾಧನೆ ತೃಪ್ತಿಕರ.

ವೃಷಭ
ನಿಮ್ಮ ಸುತ್ತಲಿನ ಜನರ ಜತೆ ಗೊಂದಲಕ್ಕೆ ಆಸ್ಪದವಾಗದಂತೆ ವರ್ತಿಸಿರಿ. ಆರ್ಥಿಕ ಗುರಿ ಸಾಧನೆ. ಇನ್ನಿತರ ಕಾರ್ಯದಲ್ಲಿ ಸಫಲತೆ.

ಮಿಥುನ
ದಂಪತಿ ಮಧ್ಯೆ ತಪ್ಪಭಿಪ್ರಾಯ ಸಂಭವ. ಉದ್ಯೋಗದಲ್ಲಿ ಬಡ್ತಿ ಸಿಗಬಹುದು. ಉದ್ಯಮದಲ್ಲಿ ಹೂಡಿದ ಹಣ ಲಾಭ ತರಲಿದೆ.

ಕಟಕ
ಧಾರ್ಮಿಕ ಕಾರ್ಯದಲ್ಲಿ ಹೆಚ್ಚು ತೊಡಗುವಿರಿ. ಸಮಸ್ಯೆಯಿಂದ ಬೆಂದ ಮನಸ್ಸಿಗೆ ಸಮಾಧಾನ. ಆತ್ಮೀಯರ ಜತೆಗಿನ ಸಂಬಂಧ ಸುಧಾರಣೆ.

ಸಿಂಹ
ಹದಗೆಟ್ಟಿದ್ದ ಸಂಬಂಧ ಸುಧಾರಿಸಲಿದೆ. ನೀವೂ ಹೊಂದಿಕೊಂಡು ನಡೆಯಿರಿ. ತಾಳ್ಮೆ ಕಳಕೊಂಡರೆ ಆರೋಗ್ಯ ಹದಗೆಡಬಹುದು.

ಕನ್ಯಾ
ಮನೆಯ ವ್ಯವಹಾರ ಹೆಚ್ಚು ಸಮಯ ಕೋರುವುದು. ಇತರ ವಿಷಯಗಳಿಗೆ ಸಮಯ ಸಾಲದು. ವೃತ್ತಿ ಒತ್ತಡ ಇಂದು ಕಡಿಮೆ.

ತುಲಾ
ನಿಮ್ಮ ಸಜ್ಜನಿಕೆ ಎಲ್ಲರ ಮೆಚ್ಚುಗೆಗೆ ಪಾತ್ರ. ಸಮಾನ ಮನಸ್ಕ ವ್ಯಕ್ತಿಗಳ ಜತೆ ಸಂವಾದದಿಂದ ನೆಮ್ಮದಿ. ಸಾಮಾಜಿಕ ಕಾರ್ಯದ ಹೊಣೆ ಬೀಳಲಿದೆ.

ವೃಶ್ಚಿಕ
ಅನಿರೀಕ್ಷಿತ ಧನಲಾಭ. ಸಣ್ಣಪುಟ್ಟ ಅವಘಡ ಆಗದಂತೆ ಎಚ್ಚರ ವಹಿಸಿ. ಕೆಲಸವನ್ನು ಬಾಕಿ ಇಡಬೇಡಿ. ಬಳಿಕ ಹೆಚ್ಚು ಒತ್ತಡ ಅನುಭವಿಸುವಿರಿ.

ಧನು
ಸೌಹಾರ್ದಕರ ಮನೆಯ ವಾತಾವರಣ. ಎಲ್ಲರ ಜತೆ ಕೂಡಿ ಕಳೆಯುವ ಅವಕಾಶ. ದುಬಾರಿ ವಸ್ತು ಖರೀದಿ ಅಸಂತೃಪ್ತಿ ತರಬಹುದು.

ಮಕರ
ಇತರರ ಕೆಲಸದ ಬಗ್ಗೆ ಅತಿಯಾದ ಟೀಕೆ ಮಾಡಬೇಡಿ. ನಿಮ್ಮ ಕೆಲಸದ ಫಲಿತಾಂಶದ ಬಗ್ಗೆ ಅಂಜಿಕೆಯೂ ಬೇಡ. ಸಮಾಧಾನದಿಂದಿರಿ.

ಕುಂಭ
ಹೊಂದಾಣಿಕೆ ಇಲ್ಲದ ನಿಮ್ಮ ಮನಸ್ಥಿತಿಯಿಂದ ಪ್ರತಿಕೂಲ ಪರಿಸ್ಥಿತಿ ಸೃಷ್ಟಿಯಾದೀತು. ಇತರರ ಮಾತು ಕೇಳುವ ವ್ಯವದಾನ ಪ್ರದರ್ಶಿಸಿ.

ಮೀನ
ಮನಸ್ಸಿನ ಒತ್ತಡ ಇಂದು ನಿವಾರಣೆ. ಆತಂಕಗೊಂಡಿದ್ದ ವಿಚಾರ ಸಮಾಧಾನಕರ ಇತ್ಯರ್ಥ. ಹೆಚ್ಚುತ್ತಿರುವ ಖರ್ಚು ನಿಯಂತ್ರಣ ಅವಶ್ಯ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 7,4,0,6

ಗಾಯಕಿ ಆಶಾ ಭೋಸ್ಲೆ ಆಸ್ಪತ್ರೆಗೆ ದಾಖಲು

•**ಮುಂಬೈ:** ಪ್ರಸಿದ್ಧ ಬಾಲಿವುಡ್‌ನ ಹಿರಿಯ ಹಿನ್ನೆಲೆ ಗಾಯಕಿ ಆಶಾ ಭೋಸ್ಲೆ ಅವರು ಅನಾರೋಗ್ಯದಿಂದ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.



92 ವರ್ಷದ ಆಶಾ ಭೋಸ್ಲೆ ಅವರನ್ನು ಶನಿವಾರ ಸಂಜೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಾಥಮಿಕ ವರದಿಗಳ ಪ್ರಕಾರ, ಹೃದಯ ಸಂಬಂಧಿತ ತೊಂದರೆ (ಕಾರ್ಡಿಯಾಕ್ ಅರೆಸ್ಟ್) ಹಾಗೂ ಉಸಿರಾಟ ಸಂಬಂಧಿತ ಸಮಸ್ಯೆಗಳ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಇದಕ್ಕೆ ಪೂರಕವಾಗಿ, ಕೆಲವು ವರದಿಗಳು ಅವರು ಸೌಮ್ಯ ಹೃದಯಾಘಾತ ಅನುಭವಿಸಿದ್ದಾರೆಯೆಂದು ತಿಳಿಸಿವೆ. ಪ್ರಸ್ತುತ ವೈದ್ಯರ ನಿಗಾದಲ್ಲಿ ಚಿಕಿತ್ಸೆ ಮುಂದುವರಿದಿದ್ದು, ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಹೇಳಲಾಗಿದೆ. ಎಂಟು ದಶಕಗಳಿಗೂ ಅಧಿಕ ಕಾಲ ಸಂಗೀತ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ಆಶಾ ಭೋಸ್ಲೆ, ಹಿಂದಿ ಸಿನೆಮಾ ಸೇರಿದಂತೆ ಅನೇಕ ಭಾಷೆಗಳ ಹಾಡುಗಳ ಮೂಲಕ ಭಾರತೀಯ ಸಂಗೀತ ಲೋಕದಲ್ಲಿ ಅಜರಾಮರ ಗುರುತು ಮೂಡಿಸಿದ್ದಾರೆ.

ನಿರ್ಣಾಯಕ ಸಂಧಾನ

ಪುಟ ೧ ➜ **ಬಿಗಿ ಭದ್ರತಾ ವ್ಯವಸ್ಥೆ:** ಮಾತುಕತೆ ಸೆರೆನಾ ಹೋಟೆಲ್‌ನಲ್ಲಿ ನಡೆಯುತ್ತಿದ್ದು, ಇಸ್ಲಾಮಾಬಾದ್‌ಗೆ 'ರೆಡ್ ಅಲರ್ಟ್' ಘೋಷಿಸಲಾಗಿದೆ. 10,000ಕ್ಕೂ ಹೆಚ್ಚು ಪೊಲೀಸ್ ಮತ್ತು ಭದ್ರತಾ ಸಿಬ್ಬಂದಿಯನ್ನು ಬಹು-ಹಂತದ ಭದ್ರತೆಗಾಗಿ ನಿಯೋಜಿಸಲಾಗಿದೆ. ಪ್ರಮುಖ ಕಟ್ಟಡಗಳಿರುವ 'ರೆಡ್ ಝೋನ್'ನ್ನು ಸೇನೆ ಮತ್ತು ರೇಂಜರ್ಸ್ ರಕ್ಷಣೆಯಲ್ಲಿ ಇರಿಸಲಾಗಿದ್ದು, ಅಧಿಕೃತ ವ್ಯಕ್ತಿಗಳು ಮತ್ತು ನಿವಾಸಿಗಳಿಗೆ ಮಾತ್ರ ಪ್ರವೇಶ ನೀಡಲಾಗುತ್ತಿದೆ. ಉಭಯ ನಿಯೋಗಗಳನ್ನು ನೂರ್ ಖಾನ್ ವಾಯುನೆಲೆಯಲ್ಲಿ ಉಪ ಪ್ರಧಾನಿ ಇಸ್ಹಾಕ್ ಡಾರ್, ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ಹಾಗೂ ಗೃಹ ಸಚಿವ ಸೈಯದ್ ಮೊಹ್ಸಿನ್ ರಝಾ ನಕ್ವಿ ಅವರು ಸ್ವಾಗತಿಸಿದರು.

ಇಸ್ರೇಲ್ ಫಸ್ಟ್ ಬೇಡ: ಇರಾನ್ ಎಚ್ಚರಿಕೆ

ಇರಾನ್‌ನ ಮೊದಲ ಉಪಾಧ್ಯಕ್ಷ ಮೊಹಮ್ಮದ್ ರೆಝಾ ಅರೆಫ್, ಅಮೆರಿಕ ಅಧ್ಯಕ್ಷ ಟ್ರಂಪ್ ಅವರ 'ಅಮೆರಿಕ ಫಸ್ಟ್' ನೀತಿಗೆ ಅನುಗುಣವಾಗಿ ಕಾರ್ಯನಿರ್ವಹಿಸಿದರೆ ಒಪ್ಪಂದ ಸಾಧ್ಯ ಎಂದಿದ್ದಾರೆ. ಆದರೆ, ನಮ್ಮ ಎದುರಿಗೆ 'ಇಸ್ರೇಲ್ ಫಸ್ಟ್' ಪ್ರತಿನಿಧಿಗಳು ಬಂದರೆ ಯಾವುದೇ ಒಪ್ಪಂದ ಆಗದು ಎಂದು ಸಾಮಾಜಿಕ ಜಾಲತಾಣದಲ್ಲಿ ಎಚ್ಚರಿಕೆ ನೀಡಿದ್ದಾರೆ. ಶಾಂತಿ ಒಪ್ಪಂದವಾಗದಿದ್ದರೆ ಇಡೀ ವಿಶ್ವ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ ಎಂದೂ ಅವರು ಹೇಳಿದ್ದಾರೆ.

ಗಾಲಿಬಾಫ್ ಭಾವುಕ ಸಂದೇಶ

ಸಂಸತ್ ಅಧ್ಯಕ್ಷ ಗಾಲಿಬಾಫ್ ಪಾಕಿಸ್ತಾನಕ್ಕೆ ಹೊರಡುವ ಮುನ್ನ ವಿಮಾನದೊಳಗಿನ ಚಿತ್ರವನ್ನು ಹಂಚಿಕೊಂಡಿದ್ದಾರೆ. ಆ ಚಿತ್ರದಲ್ಲಿ, ದಾಳಿಯಲ್ಲಿ ಹತರಾದ ಮಿನಾಬ್ ಶಾಲಾ ವಿದ್ಯಾರ್ಥಿಗಳ ಭಾವಚಿತ್ರಗಳನ್ನು ವಿಮಾನದ ಆಸನಗಳ ಮೇಲೆ ಇರಿಸಲಾಗಿತ್ತು. ಈ ಪ್ರಯಾಣದಲ್ಲಿ ನನ್ನ ಸಂಗಾತಿಗಳು - ಮಿನಾಬ್ 168 ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದಾರೆ. ಇಸ್ಲಾಮಾಬಾದ್‌ಗೆ ಬಂದ ನಂತರ ಗಾಲಿಬಾಫ್ ಸುದ್ದಿಗಾರರೊಂದಿಗೆ ಮಾತನಾಡಿ, ಒಂದು ವರ್ಷದೊಳಗೆ ಎರಡು ಬಾರಿ, ಮಾತುಕತೆ ನಡೆಯುತ್ತಿರುವಾಗಲೇ, ಇರಾನ್‌ನ ಸದ್ಭಾವನೆಯ ನಡುವೆಯೂ ಅವರು ನಮ್ಮ ಮೇಲೆ ದಾಳಿ ಮಾಡಿದರು ಎಂದು ಅಮೆರಿಕದ ಮೇಲಿನ ಅಪನಂಬಿಕೆಯನ್ನು ವ್ಯಕ್ತಪಡಿಸಿದರು. ನಮ್ಮಲ್ಲಿ ಸದ್ಭಾವನೆ ಇದೆ, ಆದರೆ ನಂಬಿಕೆ ಇಲ್ಲ ಎಂದು ಅವರು ಖಡಾಖಂಡಿತವಾಗಿ ಹೇಳಿದರು.

ವಿನಾಶಂ ಜಾರಿ ಭರವಸೆ

ಪುಟ ೧ ➜ ರಾಮನವಮಿ ಮೆರವಣಿಗೆಗಳ ವೇಳೆ ನಡೆದ ಹಿಂಸಾಚಾರಕ್ಕೂ ಟಿಎಂಸಿ ಕಾರಣ ಎಂದು ದೂರಿದರು. ಕುಶ್ಮಂಡಿಯಲ್ಲಿ ನಡೆದ ಮತ್ತೊಂದು ಸಭೆಯಲ್ಲಿ ಮಾತನಾಡಿದ ಮೋದಿ, 'ಪಶ್ಚಿಮ ಬಂಗಾಳದಲ್ಲಿ ಸರ್ಕಾರವೇ ಸಿಂಡಿಕೇಟ್, ಸಿಂಡಿಕೇಟೇ ಸರ್ಕಾರ' ಎಂದು ಆರೋಪಿಸಿದರು. ಆರ್ಥಿಕ ಕ್ಷೇತ್ರದಲ್ಲಿಯೂ ರಾಜ್ಯ ಹಿನ್ನಡೆಯಲ್ಲಿದ್ದು, 8 ಲಕ್ಷ ಕೋಟಿ ರೂ. ಸಾಲದ ಬಾಧೆ ಇದೆ ಎಂದು ಮೋದಿ ಹೇಳಿದರು. ಕೈಗಾರಿಕೆಗಳು ರಾಜ್ಯವನ್ನು ತೊರೆಯುತ್ತಿರುವುದರಿಂದ ಉದ್ಯೋಗಾವಕಾಶಗಳು ಕಡಿಮೆಯಾಗಿದ್ದು, ಯುವಕರು ವಲಸೆ ಹೋಗುವ ಸ್ಥಿತಿ ಉಂಟಾಗಿದೆ ಎಂದು ಅವರು ಆರೋಪಿಸಿದರು. ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಉಲ್ಲೇಖಿಸಿದ ಪ್ರಧಾನಿ, ಬಿಜೆಪಿ ಸರ್ಕಾರ ಬಂದರೆ ಇಂತಹ ಎಲ್ಲಾ ಪ್ರಕರಣಗಳನ್ನು ಮರುತೆರೆಯಲಾಗುವುದು ಮತ್ತು ಪ್ರತಿಯೊಬ್ಬ ಅಪರಾಧಿಗೂ ಶಿಕ್ಷೆ ಖಚಿತಪಡಿಸಲಾಗುವುದು ಎಂದು ಎಚ್ಚರಿಸಿದರು. ಆರ್‌ಜಿ ಕರ್ ಆಸ್ಪತ್ರೆ ಪ್ರಕರಣವನ್ನು ಉಲ್ಲೇಖಿಸಿ, ಟಿಎಂಸಿ ಸರ್ಕಾರ ಆರೋಪಿಗಳಿಗೆ ಬೆಂಬಲ ನೀಡಿದೆಯೆಂದು ಆರೋಪಿಸಿದರು. ಇದೇ ವೇಳೆ, ಟಿಎಂಸಿ ಸೋಲಿನ ಭಯದಿಂದ ಕೃತಕ ಬುದ್ಧಿಮತ್ತೆ (ಎಐ) ಬಳಸಿ ನಕಲಿ ವಿಡಿಯೋಗಳನ್ನು ಹರಡುತ್ತಿದೆ ಎಂದು ಆರೋಪಿಸಿದ ಮೋದಿ, ಮತದಾರರು ಇಂತಹ ಸುಳ್ಳು ಪ್ರಚಾರಕ್ಕೆ ಒಳಗಾಗಬಾರದು ಎಂದು ಮನವಿ ಮಾಡಿದರು. 'ಈ ಚುನಾವಣೆ ಟಿಎಂಸಿಯ ಭಯ ಮತ್ತು ಬಿಜೆಪಿಯ ವಿಶ್ವಾಸದ ನಡುವಿನ ಹೋರಾಟ' ಎಂದು ಹೇಳಿದ ಮೋದಿ, ಬದಲಾವಣೆಗಾಗಿ ಜನರು ಒಗ್ಗೂಡಿ ಮತ ಚಲಾಯಿಸಬೇಕು ಎಂದು ಕರೆ ನೀಡಿದರು.

ಜೆಡಿಎಸ್ ಸಮಾವೇಶ ಭಾರೀ ಶಕ್ತಿ ಪ್ರದರ್ಶನ

ಪುಟ ೧ ➜ ನಗರ, ಸ್ಥಳೀಯ ಸಂಸ್ಥೆಗಳಾದ ಜಿ.ಪಂ., ತಾ.ಪಂ.ಗಳಿಗೆ ರಾಜ್ಯ ಸರ್ಕಾರ ಅನಿವಾರ್ಯವಾಗಿ ಚುನಾವಣೆ ನಡೆಸಬೇಕಿದೆ ನ್ಯಾಯಾಲಯದ ಆದೇಶದಿಂದಾಗಿ ಸರ್ಕಾರ ಅನಿವಾರ್ಯವಾಗಿ ಚುನಾವಣೆ ನಡೆಸಬೇಕಿದೆ ಎಂದು ಹೇಳಿದರು. ದೇಶದಲ್ಲಿ ಮಹಿಳಾ ಮೀಸಲಾತಿ ಕೊಟ್ಟಿದ್ದು ಕರ್ನಾಟಕ ಸರ್ಕಾರ. ಲೀಲಾದೇವಿ ಆರ್.ಪ್ರಸಾದ್ ಅವರು ಸಚಿವರಾಗಿದ್ದಾಗ ದೆಹಲಿಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ನಾಯಕರಿಗೂ ನಿಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಮಹಿಳಾ ಮೀಸಲಾತಿ ಅಳವಡಿಸಿಕೊಳ್ಳಬೇಕು ಎಂದು ಮನವಿ ಸಲ್ಲಿಸಿದ್ದರು. ಅವರ ಪ್ರಯತ್ನದ ಕೆಲವು ಸಾಕಾರಗೊಳ್ಳುತ್ತಿವೆ ಎಂದರು.

ನನ್ನ ರಾಜಕೀಯ ಜೀವನದಲ್ಲಿ ಇಂತಹ ಕೆಟ್ಟ ಸರ್ಕಾರ ನೋಡಿಲ್ಲ, 65 ವರ್ಷದ ರಾಜಕೀಯ ಜೀವನದಲ್ಲಿ ನಾನು ಕಂಡ ಅತ್ಯಂತ ಕೆಟ್ಟ ಸರ್ಕಾರ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಗೌಡರು ಟೀಕಿಸಿದರು. ಮುಂದೆ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಹೇಳುತ್ತಿದ್ದಾರೆ. ತಮ್ಮ ಪಕ್ಷದ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಪಕ್ಷವನ್ನು ಬಲಪಡಿಸಬೇಕು. ನಮ್ಮದು ಪ್ರಾದೇಶಿಕ ಪಕ್ಷ. ರಾಷ್ಟ್ರೀಯ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿದ್ದೇವೆ. ಇತಿಮಿತಿಯಲ್ಲಿ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಸರ್ಕಾರದಿಂದ ದುಸ್ಥಿತಿ: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾತನಾಡಿ, ಕಾಂಗ್ರೆಸ್ ಸರ್ಕಾರ ಬಿಬಿಎಂಪಿ ಇದ್ದುದನ್ನು ಜಿಬಿಎ ಎಂದು ಬದಲಾಯಿಸಿ ಬೆಂಗಳೂರು ನಗರದ ಜನರ ದುಸ್ಥಿತಿಗೆ ಮುಂದಾಗಿದೆ ಎಂದು ಕಿಡಿಕಾರಿದರು. ಜೆಡಿಎಸ್ ಪಕ್ಷ ಅಧಿಕಾರದಲ್ಲಿದ್ದಾಗ ಬೇರೆಯವರ ಹಂಗಿನಲ್ಲಿತ್ತು, ಸ್ವತಂತ್ರವಾಗಿ ಸರ್ಕಾರ ನಡೆಸಲು ಸಾಧ್ಯವಾಗಲಿಲ್ಲ. ನಗರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದ ಸರ್ಕಾರವನ್ನು ಬೀಳಿಸುವಲ್ಲಿ ಕಾಣದ ಕೈಗಳು ಕೆಲಸ ಮಾಡಿದವು, ಆದರೂ ಎದೆಗುಂದದೆ ಬೆಂಗಳೂರು ನಗರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಬೆಂಗಳೂರಿಗೆ ಮೆಟ್ರೋ ರೈಲು ತರಲು ಬಹಳಷ್ಟು ಶ್ರಮಿಸಿದ್ದೇನೆ ಎಂದು ತಿಳಿಸಿದರು. ಮಾಜಿ ಸಚಿವ ಎಚ್.ಡಿ.ರೇವಣ್ಣ, ವಿಧಾನಪರಿಷತ್ ಸದಸ್ಯ ಜವರಾಯಿಗೌಡ, ಬಂಡೆಪ್ಪ ಕಾಶೆಂಪೂರ್, ವೈ.ಎಸ್.ವಿ. ದತ್ತಾ, ಡಾ. ಕೆ. ಅನ್ನದಾನಿ, ಸಾ.ರಾ. ಮಹೇಶ, ಎನ್.ಆರ್. ಸಂತೋಷ್, ಚೇತನ್ ಗೌಡ. ಎಸ್, ಕೇಶವಮೂರ್ತಿ ಉಪಸ್ಥಿತರಿದ್ದರು.



ಜಿಬಿಎ ವ್ಯಾಪ್ತಿಯಲ್ಲಿ ಇ-ಖಾತಾ ವಿಚಾರದಲ್ಲೂ ನಾಗರಿಕರಿಗೆ ತೊಂದರೆಯಾಗುತ್ತಿದೆ. ಆಸ್ತಿತೆರಿಗೆ ಶೇ.25ರಷ್ಟು ಹೆಚ್ಚಳ ಮಾಡಿದ್ದಾರೆ. ಸ್ಕೈಡೆಕ್ ನಿರ್ಮಾಣ ಮಾಡಲು ಹೊರಟಿದ್ದಾರೆ. ಆಕಾಶದಲ್ಲಿ ನಿಂತು ರಸ್ತೆ ಗುಂಡಿ, ಕಸದ ರಾಶಿ ನೋಡಬೇಕಾ.
■ ನಿಖಿಲ್ ಕುಮಾರಸ್ವಾಮಿ, ಯುವ ಘಟಕದ ಅಧ್ಯಕ್ಷ

ರಾಜ್ಯದ ವಂದೇ ಭಾರತ್ ಸ್ಲೀಪರ್ ರೈಲಿಗೆ ಸಮ್ಮತಿ

ಪುಟ ೧ ➜ ಇತ್ತೀಚೆಗಷ್ಟೇ ದೇಶದಲ್ಲಿ ಮೊದಲ ವಂದೇ ಭಾರತ್ ಸ್ಲೀಪರ್ ರೈಲು ಸಂಚಾರ ಆರಂಭಿಸಲಾಗಿದೆ. ಸುದೀರ್ಘ ಹಾಗೂ ಆರಾಮದಾಯಕ ರಾತ್ರಿ ಪ್ರಯಾಣದ ಉದ್ದೇಶದಿಂದ ಈ ರೈಲನ್ನು ಪರಿಚಯಿಸಲಾಗಿದ್ದು, ಐಷಾರಾಮಿ ಮತ್ತು ಉತ್ತಮ ಪ್ರಯಾಣದ ಅನುಭವ ನೀಡುತ್ತದೆ. ಏಕೆಂದರೆ, ಪ್ರಯಾಣಿಕ ಸ್ನೇಹಿ ವ್ಯವಸ್ಥೆ, ವಿನ್ಯಾಸ, ಆಧುನಿಕ ರೈಲ್ವೆ ಮೂಲಸೌಕರ್ಯಗಳನ್ನು ಈ ರೈಲು ಒಳಗೊಂಡಿದೆ.

ರಾಜ್ಯದ ಮೊದಲ ಸ್ಲೀಪರ್ ರೈಲು: ಕರ್ನಾಟಕಕ್ಕೆ ಮೊದಲ ವಂದೇ ಭಾರತ್ ಸ್ಲೀಪರ್ ರೈಲು ಇದಾಗಿದ್ದು, ಮುಂಬೈನಿಂದ ಬೆಂಗಳೂರು ಮಧ್ಯೆ ಸುಮಾರು 1,211 ಕಿ.ಮೀ. ದೂರವಿದೆ.

ಇಷ್ಟು ದೂರವನ್ನು ಕ್ರಮಿಸಲು ಸುಮಾರು 23.30 ಗಂಟೆ ಬೇಕಾಗುತ್ತದೆ. ಈ ರೈಲಿನ ಆಗಮನ, ನಿರ್ಗಮನ, ಸಮಯದ ಮಿತಿ, ವೇಳಾಪಟ್ಟಿಯನ್ನು ರೈಲ್ವೆ ಇಲಾಖೆ ಕೆಲವೇ ದಿನಗಳಲ್ಲಿ ಪ್ರಕಟಿಸಲಿದೆ.

ಕಾಂಗ್ರೆಸ್‌ನಲ್ಲಿ ರಾಜೀನಾಮೆ ಪರ್ವ

ಪುಟ ೧ ➜ **ನಸೀರ್ ಅಹ್ಮದ್‌ಗೂ ರಾಜೀನಾಮೆ ಸೂಚನೆ:** ಉಪ ಚುನಾವಣೆಗೆ ಟಿಕೆಟ್ ಆಕಾಂಕ್ಷಿಯಾಗಿದ್ದ ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇನ್ನೊಂದೆಡೆ ಸಿಎಂ ರಾಜಕೀಯ ಕಾರ್ಯದರ್ಶಿಯಾಗಿರುವ ನಸೀರ್ ಅಹ್ಮದ್ ಅವರಿಗೂ ರಾಜೀನಾಮೆ ನೀಡುವಂತೆ ಹೈಕಮಾಂಡ್ ಸೂಚಿಸಿದೆ ಎನ್ನಲಾಗಿದೆ.

ಈ ಕುರಿತು ಕೆಪಿಸಿಸಿ ಅಧ್ಯಕ್ಷರಿಗೆ ಪತ್ರ ಬರೆದಿರುವ ಅಬ್ದುಲ್ ಜಬ್ಬಾರ್, ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಅಲ್ಪಸಂಖ್ಯಾತರಿಗೆ ಸಿಗಬೇಕೆಂದು ಪ್ರಯತ್ನಿಸಿದರೂ, ಕಾರಣಾಂತರಗಳಿಂದ ಟಿಕೆಟ್ ಕೈತಪ್ಪಿತ್ತು. ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸುವುದು ತಮಗೆ ದೊರೆತ ಗೌರವ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಕೆ.ಅಬ್ದುಲ್ ಜಬ್ಬಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಮ್ ಅಹಮದ್, ಶಾಸಕ ರಿಜ್ವಾನ್ ಅರ್ಷದ್ ಅವರುಗಳೇ ಮೊದಲು ನನಗೆ ಚುನಾವಣೆಗೆ ನಿಲ್ಲುವಂತೆ ಹೇಳಿದ್ದರು.

ಈಗ ಅವರೇ ಉಲ್ಟಾ ಹೊಡೆದಿದ್ದಾರೆ. ಹಗಲೂ ನಮ್ಮದೇ, ಗುಂಡು ನಮ್ಮದೇ ಎಂಬಂತಾಗಿದೆ. ಕಾಂಗ್ರೆಸ್ ಕಚೇರಿಯಲ್ಲಿ ಪಕ್ಷದ ಮುಖಂಡರ ವಿರುದ್ಧವೇ ಸುದ್ದಿಗೋಷ್ಠಿ ಮಾಡಬಾರದಿತ್ತು. ಈ ವಿಚಾರದಲ್ಲಿ ನನಗೆ ದುಃಖವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹೈಕಮಾಂಡ್‌ಗೆ ವರದಿ ಬೆನ್ನಲ್ಲೇ ರಾಜೀನಾಮೆ ಪರ್ವ: ದಾವಣಗೆರೆ ಉಪಚುನಾವಣೆಯಲ್ಲಿ ನಡೆದ ಆಂತರಿಕ ಚಟುವಟಿಕೆಗಳ ಬಗ್ಗೆ ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಅಭಿಷೇಕ್ ದತ್ ಹೈಕಮಾಂಡ್‌ಗೆ ವರದಿ ಸಲ್ಲಿಸಿದ್ದರು. ಈ ವರದಿಯಲ್ಲಿ ಅಲ್ಪಸಂಖ್ಯಾತ ನಾಯಕರ ನಡವಳಿಕೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಲಾಗಿತ್ತು ಎನ್ನಲಾಗಿದೆ.

ಸಿಎಂ ರಾಜಕೀಯ ಕಾರ್ಯದರ್ಶಿಯಿಂದಲೂ ರಾಜೀನಾಮೆ?: ಅಬ್ದುಲ್ ಜಬ್ಬಾರ್ ರಾಜೀನಾಮೆ ಬೆನ್ನಲ್ಲೇ, ಹೈಕಮಾಂಡ್ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್ ಖಾನ್ ಅವರಿಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಸೂಚನೆ ನೀಡಿದೆ ಎನ್ನಲಾಗಿದೆ. ಹೈಕಮಾಂಡ್ ಸೂಚನೆ ಮೇರೆಗೆ ಶೀಘ್ರದಲ್ಲೇ ನಜೀರ್ ಅಹ್ಮದ್ ಅವರು ಸಿಎಂ ಸಿದ್ದರಾಮಯ್ಯಗೆ ರಾಜೀನಾಮೆ ಸಲ್ಲಿಸಲಿದ್ದಾರೆ ಎಂದು ತಿಳಿದುಬಂದಿದೆ.

ಅಲ್ಪಸಂಖ್ಯಾತ ಘಟಕದ ಪ್ರಮುಖ ನಾಯಕರ ರಾಜೀನಾಮೆ ಪರ್ವ ಈಗ ಸಚಿವ ಜಮೀರ್ ಅಹ್ಮದ್ ಖಾನ್ ಅವರತ್ತ ತಿರುಗಿದೆ. ದಾವಣಗೆರೆ ಉಪಚುನಾವಣೆಯ ಗೊಂದಲಗಳಿಗೆ ತಲೆದಂಡವಾಗಿ ಜಮೀರ್ ಅವರ ಸಚಿವ ಸ್ಥಾನಕ್ಕೂ ಕುತ್ತು ಬರಲಿದೆಯೇ? ಅಥವಾ ಹೈಕಮಾಂಡ್ ಅವರನ್ನು ರಕ್ಷಿಸಲಿದೆಯೇ ಎಂಬ ಪ್ರಶ್ನೆ ಈಗ ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

ಮತದಾನ, ಸ್ಪರ್ಧಿಸುವ ಹಕ್ಕು ಮೂಲಭೂತವಲ್ಲ

ಪುಟ ೧ ➜ 'ಮತದಾನ ಹಾಗೂ ಸ್ಪರ್ಧಿಸುವ ಹಕ್ಕುಗಳು ಮೂಲಭೂತ ಹಕ್ಕುಗಳಲ್ಲ; ಅವು ಕಾನೂನು ನೀಡಿದ ಮಟ್ಟಿಗೆ ಮಾತ್ರ ಅಸ್ತಿತ್ವದಲ್ಲಿವೆ' ಎಂದು ನ್ಯಾಯಾಲಯ ಹಿಂದಿನ ತೀರ್ಪುಗಳನ್ನು ಉಲ್ಲೇಖಿಸಿ ಹೇಳಿದೆ. ಈ ಪ್ರಕರಣದಲ್ಲಿ ಸಹಕಾರಿ ಸಂಘಗಳ ಚುನಾವಣೆಗೆ ಸಂಬಂಧಿಸಿದ ಕೆಲವು ನಿಯಮಗಳನ್ನು ರಾಜಸ್ಥಾನ ಹೈಕೋರ್ಟ್ ರದ್ದುಪಡಿಸಿದ್ದನ್ನು ಸುಪ್ರೀಂ ಕೋರ್ಟ್ ತಳ್ಳಿಹಾಕಿದೆ. ಆ ನಿಯಮಗಳು ಕೇವಲ ಅಭ್ಯರ್ಥಿಗಳ ಅರ್ಹತೆಯನ್ನು ನಿರ್ಧರಿಸುವುದಷ್ಟೇ ಆಗಿದ್ದು, ಮತದಾನ ಹಕ್ಕಿಗೆ ಯಾವುದೇ ಧಕ್ಕೆ ಉಂಟುಮಾಡುವುದಿಲ್ಲ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ. ಇದೇ ವೇಳೆ, ಸ್ಪರ್ಧಿಸುವ ಹಕ್ಕು ಕಟ್ಟುನಿಟ್ಟಿನ ನಿಯಮಗಳಿಗೆ ಒಳಪಟ್ಟಿರಬಹುದು ಎಂದು ಕೋರ್ಟ್ ಸ್ಪಷ್ಟಪಡಿಸಿದೆ. ಅರ್ಹತೆ, ಅನರ್ಹತೆ ಹಾಗೂ ಸಂಸ್ಥಾತ್ಮಕ ನಿಯಮಗಳನ್ನು ವಿಧಿಸುವುದು ಕಾನೂನುಸಮ್ಮತವಾಗಿದೆ ಎಂದು ನ್ಯಾಯಾಲಯ ತಿಳಿಸಿದೆ.

ವೈಚಾರಿಕತೆ ರೂಢಿಸಿಕೊಳ್ಳಿ: ಸಿಎಂ

ಪುಟ ೧ ➜ ವೈವಿಧ್ಯತೆ ಇರುವ ಸಮಾಜದಲ್ಲಿ ಏಕತೆ ಪ್ರದರ್ಶನ ಮಾಡುವುದು ಅತ್ಯವಶ್ಯ. ಯಾವುದೇ ಧರ್ಮ ದ್ವೇಷ ಮಾಡಲು ಹೇಳುವುದಿಲ್ಲ ಎಲ್ಲರನ್ನೂ ಪ್ರೀತಿಸಿದಾಗಲೇ ಮಾನವ ಸಮಾಜ ನಿರ್ಮಾಣ ಸಾಧ್ಯ ಎಂದರು.



ಸ್ವಚ್ಛ ಮನಸಿನಿಂದ ದೇವಸ್ಥಾನಕ್ಕೆ ಹೋಗಿ ನಮಗಷ್ಟೇ ಅಲ್ಲದೇ ಎಲ್ಲರಿಗೂ ಒಳ್ಳೆಯದು ಮಾಡು ಎಂದು ಪ್ರಾರ್ಥಿಸಿದಾಗ ಮಾತ್ರ ಫಲ ಸಿಗುತ್ತದೆ.

ಬಸವಣ್ಣ, ಸೂಫಿ ಸೇರಿ ಹಲವು ಸಂತರು ಇದನ್ನೇ ಪ್ರತಿಪಾದಿಸಿದ್ದಾರೆ. ಬಸವಣ್ಣ ಕಾಯಕ ಹಾಗೂ ದಾಸೋಹ ಎರಡಕ್ಕೂ ಆದ್ಯತೆ ನೀಡಿದ್ದಾರೆ. ಎಲ್ಲರೂ ಕಷ್ಟಪಟ್ಟು ದುಡಿಯಬೇಕು. ಹಾಗೆ ಬಂದುದನ್ನು ಎಲ್ಲರೂ ಸಮಾನವಾಗಿ ಹಂಚಿಕೊಳ್ಳಬೇಕು.

ಕಾಯಕ ಹಾಗೂ ದಾಸೋಹಗಳನ್ನು ಎಲ್ಲರೂ ಮಾಡಬೇಕು. ಕೆಲವರೇ ಮಾಡಿದರೆ ಅಸಮಾನತೆ ಸಮಾಜ ನಿರ್ಮಾಣವಾಗುತ್ತದೆ. ಪ್ರತಿಯೊಬ್ಬರಿಗೆ ಸಮಾನತೆ ಹಾಗೂ ಆರ್ಥಿಕ ಶಕ್ತಿ ಬಂದಾಗ ಮಾತ್ರ ಸಮಾನತೆ ಬರಲು ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಯಾತ್ರಿ ನಿವಾಸಕ್ಕೆ 1 ಕೋಟಿ ಹಣ ಸಹಾಯ ಮಾಡುವುದಾಗಿ ತಿಳಿಸಿದರು. ಸಂಸ್ಥಾನದ ಹಿರಗಪ್ಪ ತಾತನವರ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಶಾಸಕರಾದ ಎಂ.ವೈ.ಪಾಟೀಲ, ಅಲ್ಲಮಪ್ರಭು ಪಾಟೀಲ, ಚೆನ್ನಾರೆಡ್ಡಿ ತುನ್ನೂರು, ಎಂಎಲ್ಸಿ ಚಂದ್ರಶೇಖರ ಪಾಟೀಲ ಹುಮನಾಬಾದ, ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ, ಮಜಹರ್ ಆಲಂ ಖಾನ್, ಸೈಯದ್ ಮಹೆಬೂಬ್ ಚಿಸ್ತಿ ಸಾಹೇಬ್, ದೇವೆಂದ್ರಪ್ಪ ಮರತೂರು, ಮಾಲಾ ನಾರಾಯಣರಾವ, ಬಾಬು ಹೊನ್ನನಾಯಕ್, ರೇವುನಾಯಕ ಬೆಳಮಗಿ, ಶರಣಪ್ಪ ಮಾನೆಗಾರ, ಲಿಂಗಾರೆಡ್ಡಿ ಭಾಸರೆಡ್ಡಿ, ಭೀಮಣ್ಣ ಸಾಲಿ, ಭಾಗಣ್ಣಗೌಡ ಸಂಕನೂರ, ಶಿವಾನಂದ ಪಾಟೀಲ ಮರತೂರು, ಮಹೇಶ ರೆಡ್ಡಿ ಮುದ್ನಾಳ ಸೇರಿದಂತೆ ಹಲವರು ಉಪಸ್ಥಿತರಿದ್ದರು. ವಿಟಿಯು ಸಿಂಡಿಕೇಟ್ ಸದಸ್ಯ ಮಹಾಂತೇಶ ಬೀಳಗಿ ನಿರೂಪಿಸಿದರು. ಶಂಕರಗೌಡ ಲಿಂಗಸುಗೂರು ಸ್ವಾಗತಿಸಿದರು.

ವಸತಿನಿಲಯ, ಯಾತ್ರಿ ನಿವಾಸಕ್ಕೆ ಅನುದಾನ

ಪೂಜ್ಯ ಹಿರಗಪ್ಪ ತಾತನವರ ಬೇಡಿಕೆಯಂತೆ ಸುಕ್ಷೇತ್ರದಲ್ಲಿ ವಸತಿ ನಿಲಯ ನಿರ್ಮಾಣ ಹಾಗೂ ಭಕ್ತಾದಿಗಳಿಗೆ ಯಾತ್ರಿ ನಿವಾಸ ಸ್ಥಾಪಿಸಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಲಿದೆ. ಯಾತ್ರಿ ನಿವಾಸಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಅವರು 1 ಕೋಟಿ ರೂ. ಹಣ ನೀಡುವ ಭರವಸೆ ನೀಡಿದ್ದಾರೆ. ವಸತಿ ನಿಲಯ ಪ್ರಾರಂಭಕ್ಕೆ ಸರ್ಕಾರ ಸಹಾಯ ಮಾಡಲಿದೆ ಎಂದು ಭರವಸೆ ನೀಡಿದರು.

ಯುಡಿಎಫ್‌ನ ಅತ್ಯುತ್ಸಾಹಕ್ಕೆ ಬಿಜೆಪಿ ತಡೆ ಹಾಕಿದೆಯೇ?

ರಾಜಕೀಯ ವಿಶ್ಲೇಷಣೆ

•**ತಿರುವನಂತಪುರಂ:** ಕೇರಳ ವಿಧಾನಸಭೆ ಚುನಾವಣೆಯ ಭಾಗವಾಗಿ ಗುರುವಾರ ಎಲ್ಲ 140ವಿಧಾನಸಭಾ ಕ್ಷೇತ್ರಗಳಿಗೆ ಮತದಾನ ನಡೆದಿದೆ.ಕೇರಳದ ಮತದಾರರು ಉತ್ಸಾಹದಿಂದ ಮತದಾನ ಮಾಡಿದ್ದು, ಕಳೆದ ಬಾರಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಮತದಾನಗೈದಿರುವುದು ಹಲವು ರೀತಿಯ ರಾಜಕೀಯ ಲೆಕ್ಕಾಚಾರಗಳಿಗೆ ಕಾರಣವಾಗಿದೆ.ಆಳುವ ಎಲ್‌ಡಿಎಫ್ ಮತ್ತು ವಿಪಕ್ಷ ಯುಡಿಎಫ್‌ಗಳ ನಡುವೆ ಈ ಬಾರಿ ಬಿಜೆಪಿ ಬಲವಾದ ಸ್ಪರ್ಧೆ ಒಡ್ಡಿರುವುದು ರಾಜಕೀಯ ಪಂಡಿತರ ಲೆಕ್ಕಾಚಾರಗಳನ್ನು ಬುಡಮೇಲುಗೊಳಿಸೀತೇ ಎಂಬ ಚರ್ಚೆ ರಾಜಕೀಯವಲಯದಲ್ಲಿ ನಡೆದಿದೆ.

ಕೇರಳದಲ್ಲಿ ಸಾಮಾನ್ಯವಾಗಿ ಒಂದು ಬಾರಿ ಎಲ್‌ಡಿಎಫ್ ಅಧಿಕಾರಕ್ಕೆ ಬಂದರೆ ಮತ್ತಿನ ಬಾರಿ ಯುಡಿಎಫ್ ಅಧಿಕಾರಕ್ಕೆ ಬರುವುದು ನಡೆಯುತ್ತಾ ಬಂದ ವಿದ್ಯಮಾನ. ಆದರೆ 2021ರ ವಿಧಾನಸಭಾ ಚುನಾವಣೆಯಲ್ಲಿ ಈ ಪರಂಪರೆ ವ್ಯತ್ಯಾಸವಾಗಿ ಎಲ್‌ಡಿಎಫ್ ಎರಡನೇ ಬಾರಿ ಅಧಿಕಾರಕ್ಕೆ ಬಂದು ಅಚ್ಚರಿ ನಿರ್ಮಿಸಿತ್ತು.ಎಡರಂಗ 99ಸ್ಥಾನಗಳನ್ನು ಹೊಂದಿದ್ದರೆ ಯುಡಿಎಫ್ ಕೇವಲ 41ಸ್ಥಾನಗಳನ್ನಷ್ಟೇ ಪಡೆಯಲು ಶಕ್ತವಾಗಿ ಹೀನಾಯ ಸೋಲುಣ್ಣುವಂತಾಗಿತ್ತು.

2021ರಲ್ಲಿ ಸಿಪಿಎಂನೇತೃತ್ವದಎಲ್‌ಡಿಎಫ್ ಶೇ.25.38ರಷ್ಟು ಮತಗಳನ್ನು ಪಡೆದಿದ್ದರೆ, ಸೋಲುಂಡ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಶೇ.25.12ರಷ್ಟು ಮತಗಳನ್ನು ಗಳಿಸಿತ್ತು.ಇನ್ನು ಬಿಜೆಪಿ ಯಾವುದೇ ಸ್ಥಾನ ಪಡೆಯದಿದ್ದರೂ ಶೇ.11.3ರಷ್ಟು ಮತ ಗಳಿಸಿ ಗಮನ ಸೆಳೆದಿತ್ತು.

ಈ ಬಾರಿಯ ಚುನಾವಣೆಯಲ್ಲಿ ಎಡರಂಗದ ವಿರುದ್ಧ ಆಡಳಿತ ವಿರೋಧಿ ಅಲೆ ಇದ್ದು, ತಾನೇ ಅಧಿಕಾರಕ್ಕೆ ಬರುವುದಾಗಿ ಯುಡಿಎಫ್ ಅತ್ಯುತ್ಸಾಹದಿಂದ ಹೇಳಿಕೊಂಡಿದೆ. ಆದಾಗ್ಯೂ ಬಿಜೆಪಿ ಈ ಬಾರಿ ಪ್ರಬಲವಾಗಿ ಬೆಳೆದುನಿಂತಿರುವುದು ಯುಡಿಎಫ್ ಪಾಳಯದಲ್ಲಿ ಆತಂಕಕ್ಕೂ ಕಾರಣವಾಗಿದೆ. ಇತ್ತೀಚಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ರಾಜಧಾನಿ ತಿರುವನಂತಪುರಂ ಮಹಾನಗರ ಪಾಲಿಕೆಯಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್‌ಗಳ ಸವಾಲನ್ನು ಎದುರಿಸಿ ಗೆದ್ದು ಅಧಿಕಾರಕ್ಕೆ ಬಂದಿತ್ತು.ಬಿಜೆಪಿಯ ಮತಹಂಚಿಕೆಯ ಪ್ರಮಾಣ ಕೂಡ ತೀವ್ರವಾಗಿ ಏರಿಕೆಯಾಗಿತ್ತು. ಆದ್ದರಿಂದ ಈ ಬಾರಿ ಬಿಜೆಪಿಯ ಪ್ರಬಲ ಸ್ಪರ್ಧೆ ತನ್ನ ಗೆಲುವಿನ ನಾಗಾಲೋಟಕ್ಕೆ ತಡೆ ಒಡ್ಡಬಹುದೆಂಬ ಆತಂಕ ಯುಡಿಎಫ್‌ನ್ನು ಆಂತರಿಕವಾಗಿ ಕಾಡುತ್ತಿದೆ. ಈ ಬಾರಿ ಕಾಂಗ್ರೆಸ್ ಪಕ್ಷದೊಳಗಿನ ತೀವ್ರ ಅಂತಃಕಲಹವನ್ನು ತೇಪೆಹಚ್ಚಿ ಸ್ಪರ್ಧೆಗಿಳಿದಿದ್ದ ಯುಡಿಎಫ್ ಎಡರಂಗ ಬಿಜೆಪಿಯ ಬಿ ಟೀಮ್ ಎಂದು ಚುನಾವಣಾ ಪ್ರಚಾರದುದ್ದಕ್ಕೂ ಆರೋಪಿಸುತ್ತಾ ಬಂದಿರುವುದು ಇದೇ ಹಿನ್ನೆಲೆಯಲ್ಲಿ. ಅಲ್ಪಸಂಖ್ಯಾತರಲ್ಲಿ 'ಬಿಜೆಪಿ ಗುಮ್ಮ'ನನ್ನು ತೋರಿಸಿ ಮತಗಳಿಸುವುದು ಯುಡಿಎಫ್‌ನ ತಂತ್ರವಾಗಿತ್ತು.

ಅಲ್ಲದೆ ಈ ಬಾರಿ ಕೇರಳದಲ್ಲಿ ಮತೀಯ ಕಟ್ಟರ್‌ವಾದಿಗಳನ್ನು ಹೊರತುಪಡಿಸಿದರೆ , ಅಲ್ಪಸಂಖ್ಯಾತರಲ್ಲಿ ಬಿಜೆಪಿಯ ಬಗ್ಗೆ ತೀವ್ರತರವಾದ ಅಸಹನೆಯೇನೂ ಇಲ್ಲದಿದ್ದುದು ಕೂಡ ಯುಡಿಎಫ್ ಪಾಳಯದಲ್ಲಿ ಆತಂಕಕ್ಕೆ ಕಾರಣವಾಗಿತ್ತು .ಕಾಂಗ್ರೆಸ್ ಸತತವಾಗಿ ಬಿಜೆಪಿ ವಿರುದ್ಧ ಮುಸ್ಲಿಮರು ಮತ್ತು ಕ್ರೈಸ್ತ ಸಮುದಾಯಗಳಲ್ಲಿ ಅಪನಂಬಿಕೆಯನ್ನು ಬಿತ್ತುವ ಕೆಲಸವನ್ನು ಮಾಡುತ್ತಾ ಬಂದಿದ್ದರೂ,ವಿದೇಶಗಳಲ್ಲಿ ಸಿಲುಕಿಕೊಂಡ ಭಾರತೀಯರನ್ನು ಜೋಪಾನವಾಗಿ ರಕ್ಷಿಸಿ ತಾಯ್ನಾಡಿಗೆ ಕರೆತರುವಲ್ಲಿ ಮೋದಿ ಸರಕಾರದ ಪ್ರಾಮಾಣಿಕ ಕ್ರಮಗಳು ಅಲ್ಪಸಂಖ್ಯಾತರಲ್ಲಿ ಬಿಜೆಪಿ ಬಗ್ಗೆ ಇದ್ದ ಭಾವನೆಯನ್ನು ಬದಲಿಸುವಂತೆ ಮಾಡಿದೆ.ಹಾಗೆಯೇ ಮೋದಿ ಸರಕಾರದ ಅಭಿವೃದ್ಧಿ ಯೋಜನೆಗಳು ಯಾವುದೇ ತಾರತಮ್ಯ ಇಲ್ಲದೆ ದೇಶದ ಎಲ್ಲ ನಾಗರಿಕರಿಗೂ ತಲುಪುತ್ತಿರುವುದು ಕೂಡ ಅಲ್ಪಸಂಖ್ಯಾತ ಸಮುದಾಯದ ಪ್ರಜ್ಞಾವಂತರು ಮತ್ತು ಜನಸಾಮಾನ್ಯರನ್ನು ಭಿನ್ನವಾಗಿ ಯೋಚಿಸುವಂತೆ ಮಾಡಿತ್ತು. ವಿಶೇಷವಾಗಿ ಮಹಿಳೆಯರಲ್ಲಿ ಮೋದಿ ಸರಕಾರದ ಬಗ್ಗೆ ಸದಭಿಪ್ರಾಯ ಮೂಡುವಂತೆ ಮಾಡಿದ್ದ ಅಂಶ ಕಾಂಗ್ರೆಸ್ ಪಾಳಯದಲ್ಲಿ ಆತಂಕ ಉಂಟು ಮಾಡಿರುವುದನ್ನು ಆ ಪಕ್ಷದ ನಾಯಕರ ಹೇಳಿಕೆಗಳು ವ್ಯಕ್ತಗೊಳಿಸಿದ್ದವು.

ಈ ವರೆಗಿನ ಪ್ರತಿ ಚುನಾವಣೆಯಲ್ಲಿ ಬಿಜೆಪಿ ಪ್ರಬಲ ಸ್ಪರ್ಧೆ ಒಡ್ಡಿದ ಕ್ಷೇತ್ರಗಳಲ್ಲಿ ಯುಡಿಎಫ್ ಮತ್ತು ಎಲ್‌ಡಿಎಫ್‌ಗಳು ಅಡ್ಡ ಮತದಾನದ ಮೂಲಕ ಬಿಜೆಪಿಯನ್ನು ಸೋಲಿಸುತ್ತಿದ್ದವು. ಈ ಬಾರಿ ಇದೇ ತಂತ್ರ ಮುಂದುವರಿದಿದೆಯೇ ಅಥವಾ ವ್ಯತ್ಯಾಸವಾಗಿದೆಯೇ ಎಂಬುದನ್ನು ಮೇ 4ರ ಫಲಿತಾಂಶ ತೋರಿಸಿಕೊಡಲಿದೆ.

ಕೇರಳದಲ್ಲಿ ಬಿಜೆಪಿ ಒಂದು ಶಕ್ತಿಯೇ ಅಲ್ಲ, ಅದು ಗೆಲುವಿನ ಹಂತಕ್ಕೆ ಹೋಗಲು ಸಾಧ್ಯವೇ ಇಲ್ಲ ಎಂಬಂತೆ ಮಾಧ್ಯಮವರ್ಗವೂ ಬಿಂಬಿಸುತ್ತಾ ಬಂದಿದ್ದರೂ, ಈ ಬಾರಿ ಬಿಜೆಪಿ ಅನೇಕ ಕ್ಷೇತ್ರಗಳಲ್ಲಿ ಪ್ರಬಲ ಶಕ್ತಿಯಾಗಿ ಹೊರಹೊಮ್ಮಿರುವುದು ಎದ್ದು ಕಾಣುತ್ತಿರುವ ಅಂಶ. ಎಲ್‌ಡಿಎಫ್ ಮತ್ತು ಯುಡಿಎಫ್‌ಗಳ ಅದಲುಬದಲಾಗಿ ಆಡಳಿತ ನಡೆಸಿದರೂ ಕೇರಳದ ಅಭಿವೃದ್ಧಿ,ಶಿಕ್ಷಣ, ಆರೋಗ್ಯ,ಕೃಷಿ, ಯುವಜನತೆಗೆ ಉದ್ಯೋಗ ಸೇರಿದಂತೆ ಮೂಲಸೌಕರ್ಯಗಳ ಅಭಿವೃದ್ಧಿ ವಿಷಯದಲ್ಲಿ ಸಾಕ್ಷರ ಕೇರಳ ಹಿಂದೆ ಬಿದ್ದಿರುವುದು ಕೇರಳದ ಪ್ರಜ್ಞಾವಂತರಲ್ಲಿ ಈ ಬಾರಿ ಚರ್ಚೆಗೆ ಕಾರಣವಾಗಿರುವ ಒಂದು ಪ್ರಮುಖ ಅಂಶವಾಗಿತ್ತು.

ಈ ಎಲ್ಲ ಹಿನ್ನೆಲೆಯಲ್ಲಿ ಕೇರಳದಲ್ಲಿ ಈ ಬಾರಿ ಅಂಡರ್ ಕರೆಂಟ್ ಯಾವ ರೀತಿ ಕೆಲಸ ಮಾಡಿದೆ ?ಯುಡಿಎಫ್‌ನ ಆಂತರಿಕ ಗೊಂದಲದ ಪರಿಣಾಮ ಏನಾಗಿದೆ?ಆಡಳಿತ ವಿರೋಧಿ ಅಲೆ ಎಡರಂಗಕ್ಕೆ ಎಷ್ಟು ತೀವ್ರವಾಗಿ ಹೊಡೆತ ನೀಡಿದೆ ?ಬಿಜೆಪಿಯ ಸ್ಪರ್ಧೆ ಮತ್ತು ಅದರ ಮತಗಳು ಗೆಲುವಿನ ಮತಗಳಾಗಿ ಪರಿವರ್ತನೆಗೊಳ್ಳಲಿದೆಯೇ? ಬಿಜೆಪಿ ಎಷ್ಟು ಸ್ಥಾನಗಳನ್ನು ಗೆಲ್ಲಲಿದೆ ?ಅದು ಎಷ್ಟು ಪ್ರಬಲ ಸ್ಪರ್ಧೆ ಒಡ್ಡಲಿದೆ ಎಂಬಿತ್ಯಾದಿ ಅಂಶಗಳು ಕೇರಳದ ಈ ಬಾರಿಯ ಚುನಾವಣಾ ಫಲಿತಾಂಶದ ಲೆಕ್ಕಾಚಾರಗಳನ್ನೇ ಬದಲಿಸಬಹುದು ಎಂಬ ಮಾತೂ ರಾಜಕೀಯ ವಿಮರ್ಶಕರಿಂದ ಕೇಳಿಬರುತ್ತಿದೆ.

ಒಬಿಸಿಗೆ ಕೊಡವರ ಸೇರ್ಪಡೆ ಸಂಸದ ಯದುವೀರ್ ಭರವಸೆ

ಬೆಂಗಳೂರು: ಕೊಡವರು ಒಬಿಸಿಗೆ ಸೇರಲು ಸಂಪೂರ್ಣ ಅರ್ಹತೆ ಹೊಂದಿದ್ದಾರೆ. ಈ ಬಗ್ಗೆ ನಿಯಮಾನುಸಾರ ರಾಜ್ಯ ಸರ್ಕಾರದಿಂದಲೇ ಪ್ರಸ್ತಾವನೆ ಬರಬೇಕು. ಆ ನಂತರ ಚರ್ಚೆ ನಡೆಸಲಾಗುವುದು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭರವಸೆ ನೀಡಿದರು.



ಕೊಡವ ಸಮಾಜ ಬೆಂಗಳೂರು ವತಿಯಿಂದ ಶನಿವಾರ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕನ್ವೆನ್ಷನ್ ಸೆಂಟರ್‌ನಲ್ಲಿ ಹಮ್ಮಿಕೊಳ್ಳಲಾದ ಎಂ.ಸೋಮಯ್ಯ ವಿರಚಿತ ದಿವ್ಯ ಜೀವನ ಭವ್ಯ ಮಾನವ, ಕೂರ್ಗ್: ದ ಲ್ಯಾಂಡ್ ಆಫ್ ಜನರಲ್ಸ್ ಹಾಗೂ ಡಿವೈನ್ ಲೈಫ್ ಸಬ್‌ಲೈನ್ ಹ್ಯುಮಾನಿಟಿ ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು. ಕೊಡಗಿನ ಅರಣ್ಯ, ಎಸ್ಟೇಟ್, ಜನರು ವಾಸಿಸುವ ಸ್ಥಳವನ್ನು ರಕ್ಷಣೆ ಮಾಡಬೇಕಾದರೆ 294 ಕಿ.ಮೀ ರೈಲ್ವೆ ಬ್ಯಾರಿಕೇಡ್ ಮಾಡಬೇಕಾಗುತ್ತದೆ. ಇದರೊಂದಿಗೆ ಕನಕಪುರ, ಸಕಲೇಶಪುರ ಮುಂತಾದ ಕಡೆಗಳಲ್ಲಿ ರೈಲ್ವೆ ಬ್ಯಾರಿಕೇಡ್‌ಮಾಡಬೇಕೆನ್ನುವ ಬೇಡಿಕೆಯಿದೆ. ಜತೆಗೆ ಕೊಡವ ಸಮಾಜದವರು ಒಬಿಸಿ ಪಟ್ಟಿಗೆ ಸೇರಿಸುವ ಬಗ್ಗೆ ಸಂಸತ್ತಿನಲ್ಲಿ ಮಾತನಾಡಿದ್ದೇನೆ, ಈ ಬಗ್ಗೆ ರಾಜ್ಯ ಸರ್ಕಾರದಿಂದಲೇ ಪ್ರಸ್ತಾವನೆ ಬರಬೇಕು. ಒಬಿಸಿ ಪಟ್ಟಿಗೆ ಸೇರಲು ಸಂಪೂರ್ಣ ಅರ್ಹತೆಯಿದ್ದರೂ, ಈ ಬಗ್ಗೆ ನಿಯಮಾನು ಸಾರ ರಾಜ್ಯ ಸರ್ಕಾರದಿಂದಲೇ ಪ್ರಸ್ತಾ ವನೆ ಬರಬೇಕು. ಆ ನಂತರ ಚರ್ಚೆ ನಡೆಸಲಾಗುವುದು ಎಂದರು.

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, ಕೊಡವ ಸಮಾಜವು ಕೇವಲ ಕರ್ನಾಟಕ ಮಾತ್ರವಲ್ಲದೇ ಭಾರತಕ್ಕೆ ಅನೇಕ ಕೊಡುಗೆ ನೀಡಿದ ವೀರ ಸಮಾಜವಾಗಿದೆ. ಹಾಕಿ, ಸೈನ್ಯ, ನವೋದ್ಯಮಕ್ಕೆ ಕೊಡವ ಯುವಕರು ದೇಶದ ಪ್ರಗತಿಗೆ ಕೆಲಸ ಮಾಡುತ್ತಿದ್ದಾರೆ. ಈಗ ನೀಡಲಾಗಿರುವ ಮನವಿ ಪತ್ರಕ್ಕೆ ಧ್ವನಿಗೂಡಿಸುವ ಕಾರ್ಯ ಮಾಡುತ್ತೇನೆ ಎಂದು ಭರವಸೆ ನೀಡಿದರು.



1ನೇ ತರಗತಿ ಪ್ರವೇಶಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮಹತ್ವದ ಆದೇಶದಿಂದ ಮಕ್ಕಳ ಕನಿಷ್ಠ ವಯೋಮಿತಿಯನ್ನು 6 ವರ್ಷದ ಬದಲಾಗಿ 5 ವರ್ಷ 10 ತಿಂಗಳಿಗೆ ನಿಗದಿಪಡಿಸಿರುವ ಹಿನ್ನೆಲೆಯಲ್ಲಿ ಶನಿವಾರ ಸದಾಶಿವನಗರದ ನಿವಾಸದಲ್ಲಿ ಪೋಷಕರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.

ನೀರಾನೆ ಹಂಸಿಣಿಗೆ ಆರೋಗ್ಯ ವ್ಯತ್ಯಯ: ತಜ್ಞರಿಂದ ತಪಾಸಣೆ

ಶಿವಮೊಗ್ಗ: ತರಬೇತಿ ವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಅವರನ್ನು ಬಲಿ ಪಡೆದಿದ್ದ ತ್ಯಾವರೆಕೊಪ್ಪದ ಹುಲಿ ಮತ್ತು ಸಿಂಹಧಾಮದ ಗರ್ಭಾವಸ್ಥೆಯಲ್ಲಿರುವ ನೀರಾನೆ ಹಂಸಿಣಿ ಆರೋಗ್ಯದಲ್ಲಿ ಏರುಪೇರಾಗಿದ್ದು, ಬನ್ನೇರುಘಟ್ಟ ಮತ್ತು ಮೈಸೂರು ಮೃಗಾಲಯದ ತಜ್ಞ ವೈದ್ಯರ ತಂಡ ಆಗಮಿಸಿ ಹಂಸಿಣಿಯ ಆರೋಗ್ಯ ತಪಾಸಣೆ ನಡೆಸಿ ರಕ್ತ ಸೇರಿದಂತೆ ಕೆಲ ಮಾದರಿಗಳನ್ನು ಸಂಗ್ರಹಿಸಿ ತೆರಳಿದೆ.



ನೀರಾನೆಗಳು ಗರ್ಭ ಧರಿಸಿದ 250 ದಿನಗಳೊಳಗೆ ಮರಿ ಹಾಕುತ್ತವೆ. ಎಂಟು ವರ್ಷದ ಈ ಹಂಸಿಣಿ ಗರ್ಭ ಧರಿಸಿ 265 ದಿನ ಕಳೆದರೂ ಮರಿ ಹಾಕದಿರುವುದು ವೈದ್ಯರ ಆತಂಕಕ್ಕೆ ಕಾರಣವಾಗಿದೆ. ತುಂಬು ಗರ್ಭಿಣಿಯಾಗಿರುವ ಹಂಸಿಣಿ ಹೆರಿಗೆ ಅವಧಿ ಮುಗಿದ್ದರೂ ಮರಿ ಹಾಕುವುದಕ್ಕೆ ವಿಳಂಬ ಮಾಡುತ್ತಿದೆ. ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆ ಮಾಡಿಸುವುದು ಅಸಾಧ್ಯವಾಗಿದೆ. ಹಾಗಾಗಿ ತಜ್ಞ ವೈದ್ಯರ ತಂಡವನ್ನು ಕರೆಸಿ ತಪಾಸಣೆ ನಡೆಸಲಾಗಿದೆ. ವರದಿ ಬಂದ ಬಳಿಕವೇ ಹೊಟ್ಟೆಯೊಳಗೆ ಮರಿ ಯಾವ ಸ್ಥಿತಿಯಲ್ಲಿದೆ ಎಂದು ಖಚಿತವಾಗಬೇಕಿದೆ. ಈಗಾಗಲೇ ಎರಡು ಮರಿಗಳೂ ಕೂಡ ಗರ್ಭಾವಸ್ಥೆಯಲ್ಲಿಯೇ ಮೃತಪಟ್ಟಿದ್ದವು. ಹೀಗಾಗಿ 3ನೇ ಮರಿ ಉಳಿಸಿಕೊಳ್ಳಲು ಯತ್ನ ನಡೆಸಲಾಗುತ್ತಿದೆ.

> ನೀರಾನೆ ಆರೋಗ್ಯದಲ್ಲಿ ವ್ಯತ್ಯಯವಾಗಿದೆ. ಮರಿ ಹಾಕುವುದು ವಿಳಂಬವಾಗುತ್ತಿದೆ. ಹೀಗಾಗಿ ಬನ್ನೇರುಘಟ್ಟ ಮತ್ತು ಮೈಸೂರಿನಿಂದ ತಜ್ಞ ವೈದ್ಯರನ್ನು ಕರೆಯಿಸಲಾಗಿತ್ತು. ವೈದ್ಯರ ತಂಡ ಡಯಾಗ್ನಾಸಿಸ್ ಮಾಡುವ ನಿಟ್ಟಿನಲ್ಲಿ ಕೆಲವು ಮಾದರಿಗಳನ್ನು ತೆಗೆದುಕೊಂಡು ಹೋಗಿದೆ.
> ■ ಅಮರಾಕ್ಷರ, ಹುಲಿ ಮತ್ತು ಸಿಂಹಧಾಮದ ಸಿಇಒ

ಕಿರುಸುದ್ದಿ

ಐದು ವರ್ಷ ಸಿದ್ದರಾಮಯ್ಯ ಸಿಎಂ: ಸತೀಶ ಜಾರಕಿಹೊಳಿ

ಬೆಳಗಾವಿ: ರಾಜ್ಯ ರಾಜಕೀಯದಲ್ಲಿ ಸಿಎಂ ಬದಲಾವಣೆ ಕುರಿತ ಚರ್ಚೆಗಳು ಮತ್ತೆ ಮುನ್ನೆಲೆಗೆ ಬಂದ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಪೂರ್ಣಾವಧಿ ಅಧಿಕಾರದಲ್ಲಿ ಮುಂದುವರಿಯಲಿದ್ದಾರೆ ಎಂದು ಹೇಳುವ ಮೂಲಕ ಸಚಿವ ಸತೀಶ ಜಾರಕಿಹೊಳಿ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ. ಶನಿವಾರ ಹುಕ್ಕೇರಿಯಲ್ಲಿ ಬಿಜೆಪಿ ಮುಖಂಡ ರಮೇಶ್ ಕತ್ತಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿ ಸ್ಥಾನದ ಬದಲಾವಣೆ ಕುರಿತಾದ ಚರ್ಚೆಗಳಿಗೆ ಪೂರ್ಣವಿರಾಮ ಹಾಕಿದ್ದಾರೆ. ಹೈಕಮಾಂಡ್ ನಿರ್ಧಾರದಂತೆ ಸಿದ್ದರಾಮಯ್ಯನವರು ಪೂರ್ಣ ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ. ಇದರಲ್ಲಿ ಯಾವುದೇ ಗೊಂದಲಗಳಿಲ್ಲ ಎಂದು ಸ್ಪಷ್ಟಪಡಿಸಿದರು. ಸರ್ಕಾರದ ನಾಯಕತ್ವದ ಬಗ್ಗೆ ಅನಾವಶ್ಯಕವಾಗಿ ಹರಡುತ್ತಿರುವ ವದಂತಿಗಳಲ್ಲಿ ಯಾವುದೇ ಸತ್ಯಾಂಶವಿಲ್ಲ ಎಂದು ಜಾರಕಿಹೊಳಿ ವಿವರಿಸಿದರು. ಸರ್ಕಾರ ಕೇವಲ ಅಭಿವೃದ್ಧಿ ಕಾರ್ಯಗಳತ್ತ ತನ್ನ ಗಮನವನ್ನು ಕೇಂದ್ರೀಕರಿಸಿದೆ. ವಿರೋಧ ಪಕ್ಷದ ನಾಯಕರು ರಾಜಕೀಯ ಪ್ರೇರಿತ ಚರ್ಚೆಗಳನ್ನು ಹುಟ್ಟು ಹಾಕುತ್ತಿದ್ದಾರೆ. ಆದರೆ, ಸರ್ಕಾರ ತನ್ನ ಜನಪದ ಕಾರ್ಯಕ್ರಮಗಳ ಮೂಲಕ ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಂಬೇಡ್ಕರ್ ಪ್ರಶಸ್ತಿಗೆ ಘೋಷಣೆ

ಬೆಂಗಳೂರು: 2026ನೇ ಸಾಲಿನ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಗೆ ನಾಡಿನ ಐವರು ಸಾಧಕರನ್ನು ಆಯ್ಕೆ ಮಾಡಲಾಗಿದ್ದು, ಆಯ್ಕೆಯಾದ ಸಾಧಕರಿಗೆ ಏ.14ರಂದು ಆಚರಿಸಲಾಗುವ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯಂದು ಸಿಎಂ ಪ್ರದಾನ ಮಾಡಲಿದ್ದಾರೆ. ಹೋರಾಟ, ಸಾಹಿತ್ಯ ಸಾಧನೆಗೆ ಬೆಂಗಳೂರು ಕೇಂದ್ರ ವಿಭಾಗದಿಂದ ಮಂಗಳೂರು ವಿಜಯ್ ಅವರಿಗೆ, ಹೋರಾಟ ಮತ್ತು ಪತ್ರಿಕೋದ್ಯಮ ಸೇವೆಗೆ ಬೆಂಗಳೂರು ವಿಭಾಗದಿಂದ ಸಿ.ಎಂ ಮುನಿಯಪ್ಪ ಅವರಿಗೆ, ಹೋರಾಟದ ಕ್ಷೇತ್ರದಿಂದ ಮೈಸೂರು ವಿಭಾಗದಿಂದ ಎಚ್.ಎನ್. ಅಣ್ಣಯ್ಯ ಅವರಿಗೆ, ಸಾಹಿತ್ಯ ಸಂಘಟನೆ ಕ್ಷೇತ್ರದಿಂದ ಕಲಬುರಗಿ ವಿಭಾಗದಿಂದ ಹನುಮಂತರಾವ್ ಬಿ. ದೊಡ್ಡಮನಿ ಮತ್ತು ಬೆಳಗಾವಿ ವಿಭಾಗದಿಂದ ದೇವದಾಸಿ ವಿಮುಕ್ತಿಗೆ ಹೋರಾಡಿದ ಶೋಭಾ ಗಸ್ತಿ ಅವರ ಹೆಸರನ್ನು ಆಯ್ಕೆ ಮಾಡಲಾಗಿದೆ.

6 ಹಸುಗಳ ಸಜೀವ ದಹನ ಆರೋಪಿ ಇಮ್ರಾನ್ ಬಂಧನ

ಬೆಂಗಳೂರು: ಆರು ಹಸುಗಳ ಸಜೀವ ದಹನಕ್ಕೆ ಕಾರಣವಾಗಿದ್ದ ಆರೋಪಿಯನ್ನು ಡಿ.ಜೆ ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮೊಹಮ್ಮದ್ ಇಮ್ರಾನ್ (49) ಬಂಧಿತ. ಸಿಸಿಟಿವಿ ದೃಶ್ಯಗಳನ್ನು ಆಧಾರಿಸಿ ಆರೋಪಿ ಬಂಧಿಸಲಾಗಿದ್ದು, ಶಾಂಪುರ ರಸ್ತೆಯಲ್ಲಿನ ಪ್ಲೈವುಡ್ ಅಂಗಡಿಯಲ್ಲಿ ಕಳೆದ ಏ.7ರಂದು ಮುಂಜಾನೆ ಬೆಂಕಿ ಕಾಣಿಸಿಕೊಂಡಿತ್ತು. ಬೆಂಕಿಯ ಕೆನ್ನಾಲಿಗೆ ಕ್ಷಣಾರ್ಧದಲ್ಲಿ ಪಕ್ಕದಲ್ಲಿದ್ದ ಶ್ರೀನಿವಾಸ್ ಎಂಬುವರಿಗೆ ಸೇರಿದ ದನದ ಕೊಟ್ಟಿಗೆಗೆ ವ್ಯಾಪಿಸಿದ ಪರಿಣಾಮ ಆರು ಹಸುಗಳು ಹೊರಬರಲಾಗದೆ ಸ್ಥಳದಲ್ಲೇ ಸಜೀವ ದಹನವಾಗಿದ್ದವು ಎಂದು ಪೊಲೀಸರು ಹೇಳಿದರು. ಬೆಂಕಿ ಅವಘಡ ಆಕಸ್ಮಿಕವಲ್ಲ, ಬದಲಾಗಿ ಕಿಡಿಗೇಡಿಯೊಬ್ಬನ ಕೃತ್ಯ ಎಂಬುದು ಪೊಲೀಸರ ತನಿಖೆಯಲ್ಲಿ ತಿಳಿದುಬಂದಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಕೆ.ಜಿ ಹಳ್ಳಿ ನಿವಾಸಿಯಾದ ಆರೋಪಿ, ಮನೆ ಬಳಿ ರಾತ್ರಿ ವೇಳೆ ಓಡಾಡುತ್ತಿದ್ದ. ಹಾಗೆಯೇ, ಓಡಾಡುವಾಗ ನಾಯಿಗಳು ನನ್ನನ್ನು ಅಟ್ಟಾಡಿಸಿದ್ದವು, ಅವುಗಳನ್ನು ಹೆದರಿಸಲು ರಸ್ತೆಯ ಬದಿಯಲ್ಲಿದ್ದ ಕಸಕ್ಕೆ ಬೆಂಕಿ ಹಚ್ಚಿದೆ. ಹಸುಗಳನ್ನು ಕೊಲ್ಲುವ ಉದ್ದೇಶ ಇರಲಿಲ್ಲ ಎಂದು ಪೊಲೀಸರ ತನಿಖೆ ವೇಳೆ ಆರೋಪಿ ಹೇಳಿಕೊಂಡಿದ್ದಾನೆ. ಸದ್ಯ ತನಿಖೆ ಮುಂದುವರೆದಿದೆಂದು ಬೆಂ.ಪೂರ್ವ ವಿಭಾಗದ ಡಿಸಿಪಿ ವಿಕ್ರಮ್ ಅಮಟೆ ತಿಳಿಸಿದ್ದಾರೆ.

ಪತ್ರಕರ್ತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು
ಊಹಾ ಪತ್ರಿಕೋದ್ಯಮ ಬಿಡಿ

ಬೀದರ್: ಪತ್ರಕರ್ತರು ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವ ಕೆಲಸ ಮಾಡುತ್ತಿದ್ದೇವೆಯೇ ಎಂದು ಒಮ್ಮೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕು ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಅವರು ಶನಿವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಬೀದರ್ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಊಹಾಪತ್ರಿಕೋದ್ಯಮಸಮಾಜಕ್ಕೆ ಅತ್ಯಂತ ಅಪಾಯಕಾರಿಯಾದದ್ದು. ಕ್ಷುಲ್ಲಕ ವಿಚಾರವನ್ನು ದಿನವಿಡೀ ತೋರಿಸುವವರು ಅದರ ಪರಿಣಾಮದ ಬಗ್ಗೆಯೂ ಯೋಚಿಸಬೇಕು. ಗಂಡ ಹೆಂಡತಿ ಜಗಳವನ್ನು ಇಡೀ ದಿನ ತೋರಿಸಿದರೆ ಅದರಿಂದ ಸಮಾಜಕ್ಕೆ ಏನು ಪ್ರಯೋಜನ ಎಂದು ಪ್ರಶ್ನಿಸಿದರು.

ಅಂಬೇಡ್ಕರ್ ಮತ್ತು ಮಹಾತ್ಮಗಾಂಧಿ ಇಬ್ಬರೂ ಪತ್ರಕರ್ತರಾಗಿ ಧ್ವನಿ ಇಲ್ಲದವರ ಧ್ವನಿಯಾಗಿದ್ದರು. ಸಮಾಜದಲ್ಲಿರುವ ನ್ಯೂನ್ಯತೆಗಳನ್ನು ಹೋಗಲಾಡಿಸಿ ಸಮಾಜವನ್ನು ಕಟ್ಟುವ ಕಾಯಕವನ್ನು ಬಸವಾದಿ ಶರಣರು ಮಾಡಿದ್ದರು. ಶರಣರ ಆಶಯದ ಸಮ ಸಮಾಜ ಆಗದಿದ್ದರೆ ಅಸಮಾನತೆ ಮುಂದುವರೆಯುತ್ತದೆ. ಮುಂದುವರೆಯಲಿ ಎನ್ನುವುದು ಪಟ್ಟಭದ್ರರ ಹಿತಾಸಕ್ತಿಯಾಗಿದೆ .ಬಸವಣ್ಣ ತಿರಸ್ಕರಿಸಿದ್ದ ಕರ್ಮಸಿದ್ಧಾಂತವನ್ನು ಪಾಲಿಸುವವರು ಈಗ ಹೆಚ್ಚಾಗಿದ್ದಾರೆ. ಈ ಮೌಢ್ಯ ಆಚರಿಸುವವರೆಲ್ಲಾ ವಿದ್ಯಾವಂತರೇ ಎನ್ನುವುದು ಬೇಸರದ ಸಂಗತಿ. ಪತ್ರಕರ್ತರು ಕೇವಲ ಮಾಹಿತಿ ಕೊಡುವವರಾಗದೆ, ಸಮಾಜ ಸುಧಾರಣೆಗೂ ಒತ್ತು ನೀಡಬೇಕು ಎಂದರು.

ಜಾತಿ ಸಮಾಜ ಚಲನೆ ಇಲ್ಲದ್ದು. ಸಮಾಜವನ್ನು ಚಲನಶೀಲಗೊಳಿಸಲು ವಸ್ತುನಿಷ್ಠವಾದ ವೃತ್ತಿಪರತೆಯನ್ನು ಪತ್ರಕರ್ತರು ಪಾಲಿಸಬೇಕು. ಪತ್ರಕರ್ತರು ಸತ್ಯ ಬರೆದರೂ ಕೆಲವೊಮ್ಮೆ ಸಂಪಾದಕರುಗಳು ಮಾಲೀಕರ ಒತ್ತಡಕ್ಕೆ ಮಣಿದು ಬದಲಾಯಿಸಿಬಿಡುತ್ತಾರೆ. ನಾನು ಮಂತ್ರಿಯಾಗಿ 40 ವರ್ಷ ಆಯ್ತು. ನಮ್ಮ ಸರ್ಕಾರದಪರವಾಗಿಬರೆಯಿರಿ ಎಂದು ಇವತ್ತಿನ ವರೆಗೂ ನಾನು ಯಾರನ್ನೂ ಕೇಳಿಲ್ಲ ಎಂದರು.



> ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡುವ ಸವಲತ್ತನ್ನು ಜಾರಿ ಮಾಡಿದ್ದೇ ನಾನು. ಇದರಲ್ಲಿನ ನಿಯಮಗಳಲ್ಲಿ ತೊಂದರೆ ಇದ್ದರೆ, ಆ ಬಗ್ಗೆ ಚರ್ಚಿಸಿ ನಿವಾರಣೆಗೊಳಿಸಲಾಗುವುದು.
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ರಾಜ್ಯ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶಿವಾನಂದ ತಗಡೂರ್ ಮಾತನಾಡಿ, ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಆರಂಭಿಸಿ ಕಳೆದ ಐದು ವರ್ಷಗಳಲ್ಲಿ 1.1 ಕೋಟಿ ರೂ. ಉಳಿಕೆ ಮಾಡಿ ಠೇವಣಿ ಇಡಲಾಗಿದೆ. ಪತ್ರಕರ್ತರು ಅಪಘಾತಕ್ಕೀಡಾದಾಗ, ತೊಂದರೆಯಲ್ಲಿದ್ದಾಗ ನೆರವಾಗಲು ಆಪತ್ಬಾಂಧವ ಯೋಜನೆ ಆರಂಭಿಸಲಾಗಿದೆ. ಮುಖ್ಯಮಂತ್ರಿಗಳ ಕಾಳಜಿಯಿಂದ ಆಯವ್ಯಯದಲ್ಲಿ ಮಾಧ್ಯಮ ಸಂಜೀವಿನಿ (ಮಾಧ್ಯಮ ಆರೋಗ್ಯ ಸಂಜೀವಿನಿ) ಯೋಜನೆ ಘೋಷಿಸಿದ್ದು, ಸಮರ್ಪಕ ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಸೂಚಿಸುವಂತೆ ಮನವಿ ಮಾಡಿದರು.

ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಸಮ್ಮೇಳನ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು.ಸಚಿವರುಗಳಾದ ರಹೀಂ ಖಾನ್, ಶರಣ ಪ್ರಕಾಶ್ ಪಾಟೀಲ್, ಸಿಎಂ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್, ಜಿಲ್ಲಾಧ್ಯಕ್ಷರಾದ ಆನಂದ್ ದೇವಪ್ಪ, ಸಮ್ಮೇಳನದ ಪ್ರಧಾನ ಭಾಷಣಕಾರರಾಗಿರುವ ಹಿರಿಯ ಸಂಪಾದಕರಾದ ವಿಶ್ವೇಶ್ವರ ಭಟ್, ಸಂಸದರಾದ ಸಾಗರ್ ಖಂಡ್ರೆ, ಮಾಜಿ ಸಚಿವರಾದ ರಾಜಶೇಖರ್ ಪಾಟೀಲ್, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ್ ಇದ್ದರು. ಹಾರಕುಡ ಹಿರೇಮಠ ಸಂಸ್ಥಾನದ ಡಾ.ಚನ್ನವೀರ ಶಿವಾಚಾರ್ಯರು, ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದೇವರು ಇವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪತ್ರಕರ್ತರ ಸಂಘದ ರಾಜ್ಯ ಮತ್ತು ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಲ್ಪಸಂಖ್ಯಾತ ಘಟಕಕ್ಕೆ ಜಬ್ಬಾರ್ ರಾಜೀನಾಮೆ

ದಾವಣಗೆರೆ: ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಮತದಾನ ಮುಕ್ತಾಯಗೊಂಡ ಬೆನ್ನಲ್ಲೇ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ವಿಧಾನ ಪರಿಷತ್ ಸದಸ್ಯ ಕೆ.ಅಬ್ದುಲ್ ಜಬ್ಬಾರ್ ರಾಜೀನಾಮೆ ನೀಡಿದ್ದಾರೆ.



ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಅಲ್ಪಸಂಖ್ಯಾತರಿಗೆ ಸಿಗಬೇಕೆಂದು ಪ್ರಯತ್ನಿಸಿದರೂ, ಕಾರಣಾಂತರಗಳಿಂದ ಟಿಕೆಟ್ ಕೈತಪ್ಪಿತ್ತು.

ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸುವುದು ತಮಗೆ ದೊರೆತ ಗೌರವ ಎಂದು ಅಬ್ದುಲ್ ಜಬ್ಬಾರ್ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. ಕಾಂಗ್ರೆಸ್‌ನ ಆಂತರಿಕ ತೀರ್ಮಾನ, ಸ್ಥಳೀಯ ನಾಯಕರ ನಡುವಿನ ಸಮನ್ವಯದ ಕೊರತೆಯಿಂದಾಗಿ ಅಬ್ದುಲ್ ಜಬ್ಬಾರ್ ಈ ನಿರ್ಧಾರ ಕೈಗೊಂಡಿದ್ದಾರೆ. ಜಿಲ್ಲಾ ನಾಯಕರ ನಿರ್ಲಕ್ಷ್ಯ ಮತ್ತು ಅಲ್ಪಸಂಖ್ಯಾತ ಸಮುದಾಯವನ್ನು ನಡೆಸಿಕೊಳ್ಳುತ್ತಿರುವ ರೀತಿಯ ಬಗ್ಗೆ ಅಸಮಾಧಾನಗೊಂಡು, ಪ್ರತಿಭಟನೆಯ ರೂಪದಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಎಂಎಲ್‌ಸಿ ಕೆ.ಅಬ್ದುಲ್ ಜಬ್ಬಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಮ್ ಅಹಮದ್, ಶಾಸಕ ರಿಜ್ವಾನ್ ಅರ್ಷದ್ ಅವರುಗಳೇ ಮೊದಲು ನನಗೆ ಚುನಾವಣೆಗೆ ನಿಲ್ಲುವಂತೆ ಹೇಳಿದ್ದರು. ಈಗ ಅವರೇ ಉಲ್ಟಾ ಹೊಡೆದಿದ್ದು, ಹೆಗಲೂ ನಮ್ಮದೇ ಗುಂಡು ನಮ್ಮದೇ ಎಂಬಂತಾಗಿದೆ. ಕಾಂಗ್ರೆಸ್ ಕಚೇರಿಯಲ್ಲಿ ಪಕ್ಷದ ಮುಖಂಡರ ವಿರುದ್ಧವೇ ಸುದ್ದಿಗೋಷ್ಠಿ ಮಾಡಬಾರದಿತ್ತು. ಈ ವಿಚಾರದಲ್ಲಿ ನನಗೆ ದುಃಖವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

> ದಾವಣಗೆರೆ ದಕ್ಷಿಣ ಮತದಾನ ಮುಕ್ತಾಯ ಬೆನ್ನಲ್ಲೇ ಕಾಂಗ್ರೆಸ್ ಭಿನ್ನಮತ ಸ್ಫೋಟ

ಕಾಂಗ್ರೆಸ್ ಪಕ್ಷಕ್ಕೆ ನಮ್ಮ ಕೈಲಾದಷ್ಟು ಕೆಲಸ ಮಾಡಿದ್ದೇವೆ. ನನಗೆ ಆರೋಗ್ಯ ಸರಿ ಇರಲಿಲ್ಲ, 20–30 ದಿನ ದಾವಣಗೆರೆಯಲ್ಲಿದ್ದ ಇವರ್‍ಯಾರೂ ಬಂದು ನನ್ನೊಂದಿಗೆ ಮಾತಾಡಲಿಲ್ಲ, ಅಭ್ಯರ್ಥಿ (ಸಮರ್ಥ್ ಶಾಮನೂರು), ಅವರ ತಂದೆ (ಸಚಿವ ಎಸ್.ಎಸ್.ಮಲ್ಲಿಕಾರ್ಜುನ್) ಅಥವಾ ತಾಯಿ(ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್) ಕೂಡ ನನ್ನನ್ನು ಪ್ರಚಾರಕ್ಕೆ ಕರೆದಿಲ್ಲ, ನಾನು ಮೂರು ಬಾರಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ, ಮೂರು ಸಲ ವಿಧಾನ ಪರಿಷತ್ ಸದಸ್ಯನಾಗಿದ್ದೇನೆ. ಆದರೂ ನಮ್ಮನ್ನು ಬಳಸಿಕೊಂಡಿಲ್ಲ, ಅಂದ್ರೆ ಜನಪ್ರಿಯತೆ ಬಗ್ಗೆ ಸಲೀಂ, ರಿಜ್ವಾನ್ ಬಳಿ ಕಲಿಯುವ ಅಗತ್ಯವಿದೆ ಅಂತಾ ಅನಿಸುತ್ತದೆ ಎಂದರು.

ಒಂದೇ ವರ್ಷದಲ್ಲಿ 55 ಗಿಗಾ ವ್ಯಾಟ್ ವಿದ್ಯುತ್ ಹೆಚ್ಚಳ
ದೇಶದಲ್ಲಿ ಇಂಧನ ಕೊರತೆ ಇಲ್ಲ

ಧಾರವಾಡ: ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಒಂದೇ ವರ್ಷದಲ್ಲಿ ಗಿಗಾವ್ಯಾಟ್ ಲೆಕ್ಕದಲ್ಲಿ ವಿದ್ಯುತ್ ಹೆಚ್ಚಳ ಮಾಡುತ್ತಿದೆ. ಇದರಲ್ಲಿ 55 ಗಿಗಾ ವ್ಯಾಟ್ ಸೇರಿಸಿದ್ದು ದೇಶದ ಇತಿಹಾಸದಲ್ಲಿಯೇ ಪ್ರಥಮ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿದರು.



ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 2014ರಲ್ಲಿ 250 ಗಿಗಾವ್ಯಾಟದ್ದ ವಿದ್ಯುತ್ ಉತ್ಪಾದನೆಯು ಇಂದು 20ರಷ್ಟು ದ್ವಿಗುಣವಾಗಿದೆ. ಸರಿಯಾದ ಯೋಜನೆ ಮಾಡಿದರೆ, ದೇಶದಲ್ಲಿ ವಿದ್ಯುತ್ ಕಡಿತವೇ ಆಗದ ಸ್ಥಿತಿಗೆ ಬಂದಿದ್ದಾಗಿ ತಿಳಿಸಿದರು.

44 ಗಿಗಾ ವ್ಯಾಟ್ ಸೋಲಾರ್ ಮತ್ತು ಉಳಿದ ಬಯೋ ಎನರ್ಜಿ ಆಗಿ ಸಮಸ್ಯೆ ಇದ್ದಾಗಲೂ ನಾವು ಭದ್ರವಾಗಿದ್ದೇವೆ. 2014ರಲ್ಲಿ 22ರಷ್ಟು ವಿದ್ಯುತ್ ಲೈನ್ ಇತ್ತು. ಇಂದು 63 ಸಾವಿರ ಕಿಲೋ ಮೀಟರ್ ಉದ್ದದ ಲೈನ್, 1.5 ಲಕ್ಷ ಉದ್ದವಾಗಿದೆ ಎಂದರು.

ಇಂಧನಕೊರತೆಬಗ್ಗೆಕೆಲವುವಿಪಕ್ಷದನಾಯಕರುಬೊಬ್ಬೆ ಹಾಕುತ್ತಿದ್ದು, ನಾವು ಸುರಕ್ಷಿತವಾಗಿದ್ದೇವೆ. ಪೆಟ್ರೋಲ್, ಡೀಸೆಲ್ ಸಿಗುತ್ತಿದೆ ಅಲ್ಲವೇ? ಮನೆಗೂ ಕೂಡ ಎಲ್‌ಪಿಜಿ ಲಭಿಸುತ್ತಿದೆ ಅಲ್ಲವೇ? ತೈಲ ಸಮಸ್ಯೆ ಯಾರಿಗೆ ಆಗಿದೆ? ಎಂದು ಪ್ರಶ್ನೆ ಮಾಡಿದರು.

ಭೂಮಿ ಒಳಗಿರುವ ಎಲ್‌ಪಿಜಿ ತೆಗೆಯಬೇಕು. ನಮ್ಮಲ್ಲಿ ಎಲ್‌ಪಿಜಿ ಉತ್ಪಾದನೆಗೆ ಬೇಕಾದ ಭೂಮಿ ಇಲ್ಲ, ಅದು ನೈಸರ್ಗಿಕವಾಗಿ ಇರುವುದು. ಆದರೂ ಕಚ್ಚಾ ತೈಲ ಆಮದು ಮಾಡಿಕೊಂಡು, ನಮ್ಮಲ್ಲಿ ಎಲ್‌ಪಿಜಿ ಶೇ.20ರಷ್ಟು ಉತ್ಪಾದಿಸುತ್ತಿದೆ ಎಂದರು.

ದೇಶದಲ್ಲಿ ಏನೂ ಸಮಸ್ಯೆ ಆಗಿಲ್ಲ, 2014ರಲ್ಲಿ ಪವನ ವಿದ್ಯುತ್ ಕಡಿಮೆ ಇತ್ತು. ಈಗ ಗಿಗಾ ವ್ಯಾಟ್‌ನಲ್ಲಿ ವಿದ್ಯುತ್ ಹೆಚ್ಚಳ ಜತೆ ರಿಫೈನಿಂಗ್ ಸಾಮರ್ಥ್ಯ ಹೆಚ್ಚಿಸಿದೆ. ಆಟೋ ರಿಕ್ಷಾ ಎಲ್‌ಪಿಜಿ ಸಮಸ್ಯೆಗೆ 300 ಖಾಸಗಿ ಔಟ್‌ಲೆಟ್ ಕಾರಣ ಎಂದು ಹೇಳಿದರು.

70 ಸರ್ಕಾರಿ ಬಂಕ್‌ಗಳಿವೆ. ಸಾಕಷ್ಟು ಸಂಗ್ರಹ ಇದ್ದರೂ, ದರ ಹೆಚ್ಚಿಸಿಲ್ಲ, ಆದರೆ, 300 ಬಂಕ್‌ಗಳಲ್ಲಿ ದರದ ಸಮಸ್ಯೆ ಉಂಟಾಗಿದೆ. ದರವೂ ಹೆಚ್ಚಿಸಿದೆ. ಹೀಗಾಗಿ ಸಭೆ ನಡೆಸಿ, ದರಪಟ್ಟಿ ಪ್ರಚುರಪಡಿಸಲು ಸೂಚಿಸಿದ್ದಾಗಿ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದರು.

ಯುದ್ಧ ನಿಲ್ಲಿಸಲು ಪಾಕಿಸ್ತಾನ ಮಧ್ಯಸ್ಥಿಕೆ ಬಗ್ಗೆ ಪ್ರತಿಕ್ರಿಯಿಸಿದ ಜೋಶಿ, ಕಾಂಗ್ರೆಸ್ ಮೋದಿ ವಿರೋಧಿಸುವ ಬರದಲ್ಲಿ ದೇಶವನ್ನೇ ವಿರೋಧಿಸುತ್ತಿದೆ. ಪಾಕಿಸ್ತಾನದ ಪಾತ್ರದ ಬಗ್ಗೆ ಎಲ್ಲರಿಗೂ ಗೊತ್ತಿರುವ ವಿಚಾರ. ಯುದ್ಧ ಆಗದಂತೆ ತಡೆಯಬೇಕಿದೆ. ಭಾರತದ ದಿಕ್ಕು ದೆಸೆ ನೇತೃತ್ವ ಸರಿ ಇದೆ ಎಂದ ಜೋಶಿ, ರಾಜಕಾರಣದ ಹಿನ್ನೆಲೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಉತ್ತರಿಸಲಿದೆ ಎಂದರು.

ಕೇರಳದಲ್ಲಿ ಬಾಲಕಿ ಶ್ರೀನಂದಾ ಅಂತ್ಯಕ್ರಿಯೆ

ಚಿಕ್ಕಮಗಳೂರು: ಇಡೀ ಜಿಲ್ಲೆಯಲ್ಲಿ ಸಂಚಲನ ಉಂಟು ಮಾಡಿದ್ದ ಕೇರಳ ಬಾಲಕಿ ಶ್ರೀನಂದಾ ನಾಪತ್ತೆ ಹಾಗೂ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರಿಂದ ತನಿಖೆ ಮುಂದುವರಿದಿದೆ.ಶನಿವಾರಶ್ರೀನಂದಾಮೃತದೇಹವನ್ನು ಆಕೆಯ ಹುಟ್ಟೂರು ಕೇರಳದ ಪಾಲಕ್ಕಾಡ್‌ಗೆ ಕೊಂಡೊಯ್ಯಲಾಗಿದ್ದು, ಅಲ್ಲಿಯೇ ಅಂತ್ಯಕ್ರಿಯೆ ನಡೆಸಲಾಗಿದೆ.

ಚಂದ್ರದ್ರೋಣ ಪರ್ವತ ಸಾಲಿನ ಮಾಣಿಕ್ಯಧಾರದ ಬಳಿಯಿಂದ ಏ.7ರ ಸಂಜೆ 5.30ಕ್ಕೆ ಶ್ರೀನಂದಾ ನಾಪತ್ತೆಯಾಗಿ, ಏ.10ರಂದು ಶವವಾಗಿ ಪತ್ತೆಯಾಗಿದ್ದಳು. ಪ್ರವಾಸದ ಸಮಯದಲ್ಲಿ ಸದಾ ಮೊಬೈಲ್ ಫೋನ್ ಬಳಸುತ್ತಿದ್ದ ಮಗಳಿಗೆ ತಂದೆ ಬುದ್ಧಿ ಹೇಳಿ ಗದರಿಸಿದ್ದೇ ಆತ್ಮಹತ್ಯೆಗೆ ಪ್ರಚೋದನೆ ನೀಡಿರಬಹುದು ಎನ್ನುವ ಮಾತುಗಳು ಕೇಳಿಬರುತ್ತಿದೆ. ಆಕೆ ನಾಪತ್ತೆಯಾಗುವ ಮೊದಲು ತನ್ನ ಸ್ನೇಹಿತೆಯೊಂದಿಗೆ ಸುಮಾರು 15 ನಿಮಿಷಗಳ ಕಾಲ ದೂರವಾಣಿ ಕರೆಯಲ್ಲಿ ಮಾತನಾಡಿದ್ದಾಳೆ ಎನ್ನಲಾಗಿದ್ದು, ಪೊಲೀಸರು ಈ ಕುರಿತು ತಾಂತ್ರಿಕ ತನಿಖೆ ಕೈಗೊಂಡಿದ್ದಾರೆ.

ಆಕೆಯ ಸಾವಿನ ಬಗ್ಗೆ ಹಲವು ಅನುಮಾನ ವ್ಯಕ್ತವಾದ ಹಿನ್ನೆಲೆಯಲ್ಲಿ ಪ್ರಕರಣವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದಾರೆ. ಇದೇ ಕಾರಣಕ್ಕೆ ಇಬ್ಬರು ತಜ್ಞ ವೈದ್ಯರ ತಂಡದಿಂದ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಸಂಪೂರ್ಣ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಮಾಡಲಾಗಿದೆ.

ಎಂಜಿನಿಯರ್ ಮನೆಯಲ್ಲಿ 6 ಕೆಜಿ ಚಿನ್ನ, 5 ಕೆಜಿ ಬೆಳ್ಳಿ ಪತ್ತೆ

ಬೆಳಗಾವಿ: ನಗರಾಭಿವೃದ್ಧಿ ಕೋಶದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅಜಯಸಿಂಗ್ ರಜಪೂತ್ ಮನೆ ಮೇಲೆ ನಡೆದಿದ್ದ ಲೋಕಾಯುಕ್ತ ಅಧಿಕಾರಿಗಳ ದಾಳಿ ಶನಿವಾರ ಅಂತ್ಯಗೊಂಡಿದೆ.



ದಾಳಿ ವೇಳೆ ಅಜಯ್ ಸಿಂಗ್ ರಜಪೂತ್‌ನಿವಾಸಹಾಗೂ ಕಚೇರಿಗಳಲ್ಲಿ ಒಟ್ಟು 14 ಕೋಟಿ ರೂಪಾಯಿಗೂ ಅಧಿಕ ಮೊತ್ತದ ಅಕ್ರಮ ಆಸ್ತಿ ಪತ್ತೆಯಾಗಿದೆ.

ಇದುಅವರಸಂಪಾದನೆಗಿಂತ ಎಷ್ಟೋ ಪಟ್ಟು ಹೆಚ್ಚಾಗಿದೆ ಎಂದು ಲೋಕಾ ಅಧಿಕಾರಿಗಳು ತಿಳಿಸಿದ್ದಾರೆ. ಬೆಳಗಾವಿಯ ಆಂಜನೇಯ ನಗರ ಸೇರಿದಂತೆ ಒಟ್ಟು ಏಳು ಕಡೆಗಳಲ್ಲಿ ಏಕಕಾಲಕ್ಕೆ ದಾಳಿ ನಡೆಸಲಾಗಿತ್ತು. ಈ ವೇಳೆ 6 ಕೆಜಿ ಚಿನ್ನ, 5 ಕೆಜಿ ಬೆಳ್ಳಿ ಆಭರಣಗಳು ಪತ್ತೆಯಾಗಿವೆ. ಅಲ್ಲದೇ 3.12 ಕೋಟಿ ರೂಪಾಯಿ ಬ್ಯಾಂಕ್ ಡೆಪಾಸಿಟ್ ಇಟ್ಟಿರುವುದು ಬೆಳಕಿಗೆ ಬಂದಿದೆ. 18 ಖಾಲಿ ನಿವೇಶನಗಳ ದಾಖಲೆ ವಶ: ಸವದತ್ತಿ, ಹುಕ್ಕೇರಿ ಹಾಗೂ ಹುಬ್ಬಳ್ಳಿಯ ವಿವಿಧೆಡೆ ಒಟ್ಟು 18 ನಿವೇಶನಗಳನ್ನು ಅಜಯಸಿಂಗ್ ಖರೀದಿಸಿರುವುದು ದಾಖಲೆಗಳಿಂದ ಸಾಬೀತಾಗಿದೆ. ಜೊತೆಗೆ ರಜಪೂತ ಐಷಾರಾಮಿ ಕಾರು ಮತ್ತು ಬೈಕ್‌ಗಳನ್ನು ಹೊಂದಿದ್ದರು ಎಂದು ದಾಳಿ ಮಾಡಿದ ಅಧಿಕಾರಿಗಳು ತಿಳಿಸಿದರು.

ತಲಾ ₹3 ಕೋಟಿ ಅನುದಾನ ಬಿಡುಗಡೆಯಾದರೂ ದಿನಾಂಕ ನಿಗದಿಯಾಗಿಲ್ಲ
ಆನೆಗೊಂದಿ, ಕನಕಗಿರಿ ಉತ್ಸವಕ್ಕೆ ನಿರಾಸಕ್ತಿ!

ಮಂಜುನಾಥ ಗಂಗಾವತಿ

ಕೊಪ್ಪಳ: ಜಿಲ್ಲೆಯಲ್ಲಿ ಆನೆಗೊಂದಿ, ಕನಕಗಿರಿ ಉತ್ಸವಕ್ಕೆ ಜಿಲ್ಲಾ ಜನಪ್ರತಿನಿಧಿಗಳು ನಿರುತ್ಸಾಹ ತೋರಿದ್ದು, ಇನ್ನು ದಿನಾಂಕ ನಿಗದಿಯಾಗಿಲ್ಲ.



ಬೇಸಿಗೆ ಆರಂಭವಾಗಿದ್ದು, ರಾಜ್ಯದಲ್ಲಿ ಈಗಾಗಲೇ ಎಲ್ಲ ಉತ್ಸವಗಳು ನಡೆದಿವೆ. ಆದರೆ, ಆನೆಗೊಂದಿ, ಕನಕಗಿರಿ ಉತ್ಸವಕ್ಕೆ ಮಾತ್ರ ಮುಹೂರ್ತ ಕೂಡಿ ಬಂದಿಲ್ಲ. 2024ರಲ್ಲಿ ಆದ ಉತ್ಸವಗಳು 2025ರಲ್ಲಿ ಆಗಲೇ ಇಲ್ಲ. ಈ ಹಿಂದೆ ಇದ್ದ ಬರ, ಚುನಾವಣೆ ಸೇರಿ ಇನ್ನಿತರ ಯಾವುದೇ ಬಲವಾದ ಕಾರಣಗಳಿರಲಿಲ್ಲ, ಉತ್ಸವ ಮಾಡುತ್ತೇವೆ ಎನ್ನುತ್ತಲೇ ಸರ್ಕಾರ, ಜಿಲ್ಲಾಡಳಿತ ದಿನಗಳನ್ನು ದೂಡಿದ್ದು ವಿಪರ್ಯಾಸವಾಗಿದೆ.

ಕನಕಗಿರಿ ಉತ್ಸವಕ್ಕೆ ಆಸಕ್ತಿ ತೋರಿದರೂ ಜಾತ್ರೆ ಮತ್ತು ಉತ್ಸವ ಆಯೋಜನೆ ಸಂಬಂಧ ಕೆಲವೇ ಜನರು ಆಡಿದ ಮಾತುಗಳಿಗೆ ಸಚಿವರು ಜಿಲ್ಲೆಯ ಜನರ ಆಶಯ ಬಲಿಕೊಟ್ಟಿದ್ದು ಖೇದಕರ. ಉತ್ಸವಗಳು ನಾಡು, ಜಿಲ್ಲೆ ರಾಜ್ಯಭಾರ ನಡೆಸಿದ ರಾಜಮನೆತನ, ಜನಸಾಮಾನ್ಯರ ಕಾರ್ಯಕ್ರಮ. ಅವುಗಳನ್ನು ಕೇವಲ ಒಂದು ಊರು, ತಾಲೂಕು, ಕ್ಷೇತ್ರಕ್ಕೆ ಸೀಮಿತಗೊಳಿಸುತ್ತಿರುವುದು ಸಂಕುಚಿತತೆಯ ಸಂಕೇತವಾಗಿದೆ.

3 ಕೋಟಿ ರೂ.ಅನುದಾನ

ಜಿಲ್ಲೆಯ ಸಾಂಸ್ಕೃತಿಕ, ಐತಿಹಾಸಿಕ ಪ್ರತಿಬಿಂಬವಾಗಿರುವ ಕನಕಗಿರಿ, ಆನೆಗೊಂದಿ ಉತ್ಸವ ಆಚರಣೆಗೆ ಸರ್ಕಾರ ಅಷ್ಟಾಗಿ ಉತ್ಸಾಹ ತೋರುತ್ತಿಲ್ಲ. ಎರಡೂ ಉತ್ಸವಕ್ಕೆ ತಲಾ ಮೂರು ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಆದರೆ, ಇನ್ನು ದಿನಾಂಕ ನಿಗದಿ ಆಗಿಲ್ಲ. ಇನ್ನು ಅನುದಾನ ಕಡಿಮೆ ಬಂದಿದ್ದರಿಂದ ಉತ್ಸವ ವಿಜೃಂಭಣೆಯಾಗಿ ನಡೆಯುವುದು ಕಷ್ಟಸಾಧ್ಯವಾಗಿದೆ.



> ಮುಂದಿನ ವಾರ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ಅವರು ಸಭೆ ನಡೆಸಲಿದ್ದಾರೆ. ಅಂದು ಉತ್ಸವದ ದಿನಾಂಕ ನಿಗದಿಯಾಗಲಿದೆ. ಸರ್ಕಾರದಿಂದ ತಲಾ 3 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಜಿಲ್ಲಾಡಳಿತ ದಿಂದ ಹೆಚ್ಚಿನ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.
> ■ ಡಾ.ಸುರೇಶ್ ಇಟ್ನಾಳ್, ಜಿಲ್ಲಾಧಿಕಾರಿ

ಬಿಸಿಲಿನ ಬೇಗೆಯ ಸವಾಲು

ಬಿಸಿಲ ನಾಡಿನಲ್ಲಿ ಕೊಪ್ಪಳವೂ ಒಂದು. ಈ ಬಾರಿ ಬಿಸಿಲು ಹೆಚ್ಚಾಗಿದ್ದು, ಮೇನಲ್ಲಿ ಉತ್ಸವಗಳು ನಡೆದರೆ, ಬಿಸಿಲಿನಲ್ಲಿ ಜನರನ್ನು ಕರೆ ತರುವುದು ಸವಾಲಿನ ಪ್ರಶ್ನೆಯಾಗಿದೆ. ಜಿಲ್ಲಾಡಳಿತ ಬೇಸಿಗೆ ಮೊದಲೇ ಮಾಡಬೇಕಾದ ಉತ್ಸವಗಳನ್ನು ಬೇಸಿಗೆಯಲ್ಲಿ ಆಚರಿಸುವುದಕ್ಕೆ ಜನರು ವಿರೋಧ ವ್ಯಕ್ತಪಡಿಸಿದ್ದಾರೆ.

ಫೈರೋಜ್ ಪಠಾಣ್ ಹತ್ಯೆ | ಪೊಲೀಸರ ಜತೆ ಮಾತಿನ ಚಕಮಕಿ
ಹಂತಕರ ಬಂಧನಕ್ಕೆ ಕುಟುಂಬಸ್ಥರ ಆಗ್ರಹ

ಧಾರವಾಡ: ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಮತ್ತು ಹಾಶ್ಮಿನಗರ ನಿವಾಸಿ ಫೈರೋಜ್ ಖಾನ್ ಪಠಾಣ್ ಹತ್ಯೆ ತೀವ್ರ ಸ್ವರೂಪ ಪಡೆದಿದ್ದು, ಶನಿವಾರ ಉಪನಗರ ಠಾಣೆ ಮುಂದೆ ಪ್ರತಿಭಟನೆಗೆ ಯತ್ನಿಸಿದ ವೇಳೆ ಪೊಲೀಸರು ಮತ್ತು ಕುಟುಂಬಸ್ಥರ ಮಧ್ಯೆ ಮಾತಿನ ಚಕಮಕಿ ನಡೆದಿದೆ.



ಶುಕ್ರವಾರ ತಡರಾತ್ರಿ ಫೈರೋಜ್ ಖಾನ್ ಪಠಾಣ್ (28) ಹತ್ಯೆ ಬಳಿಕ ಶವವನ್ನು ಮರಣೋತ್ತರ ಪರೀಕ್ಷೆಗೆ ಕಿಮ್ಸ್‌ಗೆ ರವಾನಿಸಿತ್ತು. ಶನಿವಾರ ಬೆಳಗ್ಗೆ ಮರಣೋತ್ತರ ಪರೀಕ್ಷೆ ಪ್ರಕ್ರಿಯೆ ಆರಂಭದ ವೇಳೆಗೆ ಕುಟುಂಬಸ್ಥರ ಮತ್ತು ಆತನ ಬೆಂಬಲಿಗರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು.

ಪೊಲೀಸರ ಜತೆ ವಾಗ್ವಾದ: ಮರಣೋತ್ತರ ಪರೀಕ್ಷೆ ನಂತರ ಶವವನ್ನು ಉಪನಗರ ಠಾಣೆಗೆ ತೆಗೆದುಕೊಂಡು ಹೋಗಿ ಪ್ರತಿಭಟನೆಗೆ ಯತ್ನಿಸಿದರು. ಈ ವೇಳೆ ಪೊಲೀಸರು ಮತ್ತು ಫೈರೋಜ್ ಖಾನ್ ಕುಟುಂಬಸ್ಥರು ಮಧ್ಯೆ ಮಾತಿನ ಚಕಮಕಿ ನಡೆಯಿತು. ಅಲ್ಲದೇ, ಸ್ಥಳದಲ್ಲಿ ಬಿಗುವಿನ ವಾತಾವರಣ ಕೂಡ ನಿರ್ಮಾಣವಾಗಿತ್ತು.

ರಾಜಕೀಯ ಸಂಚಿನ ಆರೋಪ: ಏ.24ಕ್ಕೆ ಫೈರೋಜ್ ಅವರ ಮದುವೆ ನಿಶ್ಚಯವಾಗಿತ್ತು. ಮದುವೆ ಸಂಭ್ರಮದ ಮನೆಯಲ್ಲಿ ಸೂತಕ ಆವರಿಸಿದೆ. ಹಿರಿಯ ಕಾಂಗ್ರೆಸ್ ಮುಖಂಡರೊಬ್ಬರ ಕುಮ್ಮಕ್ಕಿನಿಂದ ಫೈರೋಜ್ ಖಾನ್ ಅವರ ಹತ್ಯೆ ನಡೆದಿದೆ ಎಂದು ಕುಟುಂಬದ ಸದಸ್ಯರು ಗಂಭೀರವಾದ ಆರೋಪ ಮಾಡಿದರು.

> ಕಾಂಗ್ರೆಸ್ ಯುವ ಧುರೀಣ ಫೈರೋಜ್ ಖಾನ್ ಪಠಾಣ ಹತ್ಯೆ ಪ್ರಕರಣ ಕುರಿತು ಈಗಾಗಲೇ ಆರು ಜನರನ್ನು ವಿಚಾರಣೆ ಮಾಡಿದೆ. ಆದರೆ, ಯಾರನ್ನೂ ಕೂಡ ಬಂಧಿಸಿಲ್ಲ.
> ■ ಎನ್.ಶಶಿಕುಮಾರ, ಹು-ಧಾ ಪೊಲೀಸ್ ಆಯುಕ್ತರು

> ಯುವ ನಾಯಕನ ಬರ್ಬರ ಹತ್ಯೆ ಖಂಡನೀಯ. ಆರೋಪಿಗಳನ್ನು ಶೀಘ್ರವೇ ಬಂಧಿಸಿ, ಕಠಿಣ ಶಿಕ್ಷೆಗೆ ಗುರಿಪಡಿಸಬೇಕು.
> ■ ಅಬ್ದುಲ್ ದೇಸಾಯಿ, ಫೈರೋಜ್ ಆಪ್ತ

ಹತ್ಯೆಯ ಹಿನ್ನಲೆ: ಶುಕ್ರವಾರ ರಾತ್ರಿ ನಾಲ್ವರು ದುಷ್ಕರ್ಮಿಗಳು ದಾಳಿ ನಡೆಸಿದ್ದರು. ತಪ್ಪಿಸಿಕೊಳ್ಳಲು ಮನೆಯೊಳಗೆ ಓಡಿದರೂ, ಬಿಡದ ಹಂತಕರು ಒಳನುಗ್ಗಿ ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆ ಮಾಡಿದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಪೊಲೀಸ್ ಬಿಗಿ ಬಂದೋಬಸ್ತ್: ಘಟನೆಯ ನಂತರ ಧಾರವಾಡದ ಹಾಸ್ಮಿನಗರ ಮತ್ತು ಕಿಮ್ಸ್ ಆಸ್ಪತ್ರೆ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಹಂತಕರ ಪತ್ತೆಗಾಗಿ ಪೊಲೀಸರು ವಿಶೇಷ ತಂಡಗಳನ್ನು ರಚಿಸಿದ್ದು, ತನಿಖೆ ಚುರುಕುಗೊಳಿಸಿದ್ದಾರೆ.

ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ವಿದ್ವಾಂಸರನ್ನು ಪೂಜಿಸಲು ಯೋಗ್ಯರಾದವರು ಯಾರು?

▶ ಉ. ಸ್ವಭಾವದಿಂದ ಯಾವಾಗಲೂ ವಿನಯವುಳ್ಳವನು.

ವಿದ್ವಾನ್ ಸರ್ವತ್ರ ಪೂಜ್ಯತೇ – ವಿದ್ವಾಂಸರಿಗೆ ಎಲ್ಲ ಕಡೆ, ಯಾವಾಗಲೂ ಗೌರವ ಇದೆ ಎಂದರ್ಥ. ವಿದ್ವಾಂಸನಿಗೆ ಗೌರವ ಬರಲು ಕಾರಣ, ಅವನು ಸಂಪಾದಿಸಿದ ವಿದ್ಯೆಯೇ ಆಗಿದೆ. ಈ ವಿದ್ಯೆ ಇರುವುದರಿಂದ ಅವನಿಗೆ ವಿದ್ವಾನ್ ಎಂಬುದಾಗಿ ಕರೆಯಲಾಗುತ್ತದೆ. ವಸ್ತುತಃ ವಿದ್ಯೆ ಯಾವುದು? ಎಂಬುದರ ಬಗ್ಗೆ ಇಂದು ಸ್ಪಷ್ಟವಾದ ಅರಿವು ಇಲ್ಲವಾಗಿದೆ. ಈ ವಿಷಯದಲ್ಲಿ ಶ್ರೀರಂಗ ಮಹಾಗುರುಗಳ ವಿದ್ಯೆಗೆ ಸಂಬಂಧಿಸಿದ ಮಾತು ನಿಜವಾದ ವಿದ್ಯೆ ಯಾವುದು? ಎಂಬುದನ್ನು ತಿಳಿಸುತ್ತದೆ. ವಿದ್ಯೆ ಎಂದರೆ ವಿದ್– ಜ್ಞಾನ, ಯಾ – ಪ್ರಾಪಣ. ಯಾವುದು ಜ್ಞಾನದ ಕಡೆ ನಮ್ಮನ್ನು ಕರೆದುಕೊಂಡು ಹೋಗುತ್ತದೆಯೋ ಅದಕ್ಕೆ ವಿದ್ಯೆ ಎಂಬುದಾಗಿ ಕರೆಯಬೇಕು ಎಂದು. ಇಂತಹ ವಿದ್ಯೆ ಉಳ್ಳವನು ವಿದ್ವಾಂಸ ಎಂಬುದಾಗಿ ಕರೆಸಿಕೊಳ್ಳುತ್ತಾನೆ. ಪ್ರಣವದಿಂದ ವಿಕಾಸವಾದ ಗಾಯತ್ರೀ, ವೇದಗಳು, ಶಾಸ್ತ್ರಗಳು, ಇತಿಹಾಸ ಪುರಾಣಗಳು ಮೊದಲಾದವುಗಳನ್ನು ಈ ನೇರದಲ್ಲಿ ವಿದ್ಯೆ ಎಂಬುದಾಗಿ ಕರೆಯಲಾಗುತ್ತದೆ. ಇವುಗಳ ತಾತ್ತ್ವಿಕಜ್ಞಾನ ಉಳ್ಳವನನ್ನು ವಿದ್ವಾನ್ ಎಂಬುದಾಗಿ ಕರೆಯಬಹುದು. ಇಂತಹ ವಿದ್ವಾಂಸನಿಗೆ ಮನ್ನಣೆ ಎಲ್ಲ ಕಾಲದಲ್ಲೂ, ಎಲ್ಲ ದೇಶದಲ್ಲೂ ಸಿಗುವುದು ಅತ್ಯಂತ ಸಹಜ. ಈ ಬಗೆಯ ವಿದ್ವಾಂಸನಿಗೆ ಮನ್ನಣೆ ಬರಬೇಕು ಎಂಬುದಾದರೆ ಏನು ಬೇಕು? ಎಂಬ ಪ್ರಶ್ನೆ ಇಲ್ಲಿದೆ. ಅಂದರೆ ಇಂತಹ ಗುಣವಿಶಿಷ್ಟನಾದ ಒಬ್ಬ ವ್ಯಕ್ತಿಗೆ ಶೋಭಿಸುವಂತೆ ಮಾಡುವ ಇನ್ನೊಂದು ಗುಣ ಬೇಕೆ? ಎಂಬುದಾಗಿ ಸಂಶಯ ಬರಬಹುದು. ಅದಕ್ಕೆ ಪರಿಹಾರವನ್ನು ಈ ಉತ್ತರದಲ್ಲಿ ಕಾಣಬಹುದು. ಇದನ್ನೇ ಸಾರುವ ಸುಭಾಷಿತ ಹೀಗಿದೆ – ''ವಿದ್ಯಾ ವಿನಯೇನ ಶೋಭತೇ'', ''ವಿದ್ಯಾ ದದಾತಿ ವಿನಯಂ'' ಎಂದು. ಅಂದರೆ ವಿದ್ಯೆ ಮತ್ತು ವಿನಯ ಈ ಎರಡು ಅನ್ಯೋನ್ಯವಾಗಿ ಇರುವಂಥವುಗಳು. ಒಂದನ್ನು ಬಿಟ್ಟು ಇನ್ನೊಂದಕ್ಕೆ ಅಸ್ತಿತ್ವವಿಲ್ಲ, ಮೌಲ್ಯವಿಲ್ಲ ಎಂಬುದು ಇದರ ತಾತ್ಪರ್ಯ. ಎಲ್ಲಿ ವಿದ್ಯೆ ಇದೆಯೋ ಅಲ್ಲಿ ವಿನಯ ಇರಬೇಕು ಎಂಬುದೇ ಅರ್ಥ. ಹಾಗಿಲ್ಲದಿದ್ದರೆ ಆ ವಿದ್ಯೆಯು ಅಪರಿಪೂರ್ಣ ಎಂದರ್ಥ. ಆಗ ಕೇವಲ ವಿದ್ಯೆ ಉಳ್ಳವರಿಗೆ ಗೌರವವೂ ಸಿಗದು. ಸಿಕ್ಕಿದ ಗೌರವವೂ ಉಳಿಯದು. ಹಾಗಾಗಿ ವಿದ್ಯೆಯಿಂದ ಬರುವ ಗೌರವವು ಉಳಿಯಬೇಕಾದರೆ ವಿನಯ ಅತ್ಯಂತ ಮುಖ್ಯ ಎಂಬುದು ಸಾರಾಂಶ.

ಹಾಗಾದರೆ ವಿದ್ಯೆಯಿದ್ದವರಿಗೆ ವಿನಯ ಅಷ್ಟು ಮುಖ್ಯ ಏಕೆ? ಎಂದರೆ, ಸಾಮಾನ್ಯವಾಗಿ ವಿದ್ಯೆ ಇರುವವನು ಗರ್ವಕ್ಕೆ ಅಥವಾ ಮದಕ್ಕೆ ಈಡಾಗುತ್ತಾನೆ. ವಿದ್ಯೆಯು ಸರಿಯಾದ ಮಾರ್ಗದಲ್ಲಿ ಬರದಿದ್ದರೆ ಅದು ಅಹಂಕಾರಕ್ಕೆ ಕಾರಣವಾಗುತ್ತದೆ. ಹಾಗಾಗಿ ವಿದ್ಯೆಯ ಜೊತೆ ಎಲ್ಲಿ ವಿನಯ ಬಂದಿರುತ್ತದೆಯೋ, ಅಲ್ಲಿ ಬಂದ ವಿದ್ಯೆಯು ಸನ್ಮಾರ್ಗದಲ್ಲಿ ಬಂದಿದೆ ಎಂದರ್ಥ. ಆದ್ದರಿಂದ ವಿದ್ಯೆ ಮತ್ತು ವಿನಯಗಳಿಗೆ ಪರಸ್ಪರ ಸಂಬಂಧವಿರುವುದನ್ನು ಕಾಣಬಹುದು. ವಿದ್ಯೆಯಿಂದ ಬರುವ ವಿನಯವು ಪಾತ್ರತ್ವವನ್ನು ಅಂದರೆ ಮನ್ನಣೆಯನ್ನು ಕೊಡುತ್ತದೆ; ಆ ಮನ್ನಣೆಯು ಅವನಿಗೆ ಭದ್ರತೆಯನ್ನು ಉಂಟುಮಾಡುತ್ತದೆ. ಈ ಭದ್ರತೆಯು ಅವನಿಗೆ ಧರ್ಮ ಮತ್ತು ಶಾಶ್ವತವಾದ ಸುಖವನ್ನು ಕೊಡುತ್ತದೆ ಎಂಬುದಾಗಿ ಒಂದು ಸುಭಾಷಿತ ಸಾರುತ್ತದೆ. ಇವೆಲ್ಲವನ್ನು ಗಮನಿಸಿದಾಗ ವಿದ್ಯೆ ಮತ್ತು ವಿನಯಗಳಿಗೆ ಇರುವ ಸಂಬಂಧ ತಿಳಿಯುತ್ತದೆ. ಹಾಗಾಗಿ ವಿದ್ಯಾವಂತನಿಗೆ ಗೌರವ ಸಿಗಬೇಕಾದರೆ ಅವನು ವಿನಯ ಸ್ವಭಾವ ಉಳ್ಳವನಾಗಿರಬೇಕು ಎಂಬುದು ಪರಮ ಸತ್ಯವಾದ ವಿಷಯ.

ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಭೀಮ-ಜರಾಸಂಧ-ದ್ವಂದ್ವ-ಯುದ್ಧಾರಂಭ

ಸೈನ್ಯಸಮೇತನಾಗಿಯಾಗಲಿ, ಒಬ್ಬನೊಂದಿಗಾಗಲಿ, ಇಬ್ಬಿಬ್ಬರೊಂದಿಗಾಗಲಿ, ಮೂವ ರೊಂದಿಗೂ ಆಗಲಿ–ಯುದ್ಧ ಮಾಡಲು ತಾನು ಸಿದ್ಧನೆಂದು ಜರಾಸಂಧನು ಕೃಷ್ಣಭೀಮಾರ್ಜುನರ ಮುಂದೆ ಘೋಷಿಸಿಕೊಂಡನಷ್ಟೆ?

ಹಾಗೆ ಹೇಳಿದ್ದೇ ಅಲ್ಲದೆ, ಭಯಂಕರವಾದ ಕಾರ್ಯವನ್ನು ಮಾಡಹೊರಟಿದ್ದ ಈ ಮೂವರೊಂದಿಗೆ ಸೆಣಸಲು ಸಿದ್ಧನೂ ಆದನು. ನನ್ನ ಪುತ್ರನಾದ ಸಹದೇವನಿಗೆ ಪಟ್ಟಾಭಿಷೇಕವನ್ನು ನೆರವೇರಿಸಿ ಎಂಬುದಾಗಿ ತನ್ನ ಕಡೆಯವರಿಗೆ ಆಜ್ಞೆಯಿತ್ತನು. ಹಾಗೆ ಹೇಳಿದವನೇ ತನ್ನ ಹಿಂದಿನ ಸೇನಾಪತಿಗಳಾದ ಕೌಶಿಕ ಹಾಗೂ ಚಿತ್ರಸೇನ – ಇವರಿಬ್ಬರನ್ನೂ ಸ್ಮರಿಸಿಕೊಂಡನು. ಅವರಿಬ್ಬರೇ ಹಿಂದೆ ಹಂಸ–ಡಿಂಭಕ ಎಂದು ಹೆಸರಾಗಿದ್ದವರು. ಅವರಿಬ್ಬರೂ ಬದುಕಿದ್ದಾಗ ಪುರುಷರೆಲ್ಲರೂ ಅವರನ್ನು ಆದರಿಸುತ್ತಿದ್ದರು, ಕೊಂಡಾಡುತ್ತಿದ್ದರು.

ಜರಾಸಂಧನು ಬಲಶಾಲಿಗಳಲ್ಲಿ ಶ್ರೇಷ್ಠನಾದ ರಾಜನು. ಆತನ ಪರಾಕ್ರಮ ಭೀಕರವಾದದ್ದು. ಯದುವಂಶದವರಾರಿಂದಲೂ ಆತನು ನಾಶಹೊಂದಬಾರದು – ಎಂಬುದು ಬ್ರಹ್ಮನ ಆಜ್ಞೆಯಾಗಿತ್ತು. ಶ್ರೀಕೃಷ್ಣನಾದರೂ ಪುರುಷಶಾರ್ದೂಲ, ಎಂದರೆ ನರಶ್ರೇಷ್ಠ ಹಾಗೂ ಸತ್ಯಸಂಧ. ಎಂದೇ ತಾನೇ ಕೊಲ್ಲಲು ಸಮರ್ಥನಾಗಿದ್ದರೂ ಹಾಗೆ ಮಾಡಲಿಲ್ಲ. ಜರಾಸಂಧನಂತೂ ಯುದ್ಧ ಮಾಡುವುದೆಂದು ನಿಶ್ಚಯಿಸಿಕೊಂಡಿದ್ದನಷ್ಟೆ. ಆತನನ್ನು ಕುರಿತು ಯದುನಂದನನಾದ ಶ್ರೀಕೃಷ್ಣನು ಹೀಗೆ ಹೇಳಿದನು: ರಾಜನೇ, ನಮ್ಮೀ ಮೂವರಲ್ಲಿ ಯಾರೊಂದಿಗೆ ಯುದ್ಧಮಾಡಲು ನಿನಗೆ ಮನಸ್ಸಿದೆ? ನಮ್ಮಲ್ಲಿ ಯಾರು ನಿನ್ನೊಡನೆ ಯುದ್ಧ ಮಾಡಲು ಸಿದ್ಧರಾಗಬೇಕು? ಕೃಷ್ಣನು ಹೀಗೆ ಹೇಳಲಾಗಿ, ಆ ಮಹಾತೇಜಸ್ವಿಯಾದ ಜರಾಸಂಧನು ಭೀಮಸೇನನೊಡನೆ ಸೆಣಸಲು ಬಯಸಿದನು.

ಒಡನೆಯೇ ಜರಾಸಂಧನ ಪುರೋಹಿತನು ಹಲವು ಮಂಗಲಕಾರ್ಯಗಳನ್ನು ನೆರವೇರಿಸಿದನು: ಗೋರೋಚನ–ಮಾಲೆಗಳು, ಇನ್ನಿತರ ಮಂಗಲದ್ರವ್ಯಗಳು, ಹಾಗೂ ಕೆಲವು ಔಷಧಿಗಳು – ತುಂಬ ನೋವಾದಾಗ ಅದನ್ನು ನಿವಾರಿಸತಕ್ಕವು, ಹಾಗೂ ಮೂರ್ಛಿತನಾದಾಗ ಎಚ್ಚರವಾಗಿಸುವಂತಹವು – ಇವುಗಳನ್ನೂ ತಂದನು. ಯುಯುತ್ಸುರಾಜನ ಮುಂದೆ, ಎಂದರೆ ಯುದ್ಧ ಮಾಡಲು ಬಯಸಿರುವ ಜರಾಸಂಧನ ಮುಂದೆ, ಇವುಗಳೊಡನೆ ಉಪಸ್ಥಿತನಾದನು.

ಹೀಗೆ ಬ್ರಾಹ್ಮಣನಿಂದ ಸ್ವಸ್ತಿವಾಚನವಾದ ಬಳಿಕ, ಕ್ಷತ್ರಧರ್ಮವನ್ನು ಸ್ಮರಿಸಿದ ಜರಾಸಂಧನು ಯುದ್ಧಕ್ಕೆ ಸನ್ನದ್ಧನಾದನು. ಕಿರೀಟವನ್ನು ತೆಗೆದನು. ಕೇಶಗಳನ್ನು ಕಟ್ಟಿದನು. ಹಾಗೆ ಸಿದ್ಧನಾದ ಜರಾಸಂಧನು, ತನ್ನ ದಡವನ್ನೇ ಮೀರಿ ಬರುವ ಸಮುದ್ರದ ಹಾಗೆ ತೋರಿದನು! ಭಯಂಕರವಾದ ಪರಾಕ್ರಮವುಳ್ಳ ಆ ಧೀಮಂತ ಜರಾಸಂಧನು ಭೀಮನನ್ನು ಕುರಿತು, ಭೀಮನೇ, ನಿನ್ನೊಡನೆ ನಾನು ಯುದ್ಧಮಾಡುವೆ. ಏಕೆಂದರೆ ಶ್ರೇಷ್ಠರೊಡನೆ ಹೋರಾಡಿ ಸೋಲುವುದು ಸಹ ಶ್ರೇಷ್ಠವಾದದ್ದೇ! ಎಂದನು.

ಹೀಗೆ ಹೇಳಿ ಅವನು ಭೀಮಸೇನನನ್ನು ಎದುರ್ಗೊಂಡನು. ಬಲ ಎಂಬ ಅಸುರನು ಇಂದ್ರನನ್ನು ಹೇಗೆ ಎದುರ್ಗೊಂಡನೋ ಹಾಗೆಯೇ ಇದಿತ್ತು.

ಅಷ್ಟರಲ್ಲಿ ಶ್ರೀಕೃಷ್ಣನಿಂದ ಸ್ವಸ್ತ್ಯಯನವನ್ನು ಪಡೆದು, ಭೀಮಸೇನನೂ ಸಹ ಇತ್ತ ಸಿದ್ಧನಾದನು, ಜರಾಸಂಧನನ್ನು ಸಮೀಪಿಸಿದನು. ಆಗ ಇಬ್ಬರೂ ವೀರರು ಮಹಾ–ಹರ್ಷದಿಂದ ಕೂಡಿದವರಾಗಿ ಪರಸ್ಪರ–ಜಯಾಕಾಂಕ್ಷಿಗಳಾಗಿ, ತಮ್ಮ ಬಾಹುಗಳನ್ನೇ ಶಸ್ತ್ರಗಳನ್ನಾಗಿಸಿಕೊಂಡು ಸೆಣಸಿದರು. ಮೊದಲು ಕೈಕೈ ಹಿಡಿದರು. ಪರಸ್ಪರ ಪಾದಾಭಿವಂದನ ಮಾಡಿದರು. ಕಂಕುಳಿನಿಂದ ಕಂಕುಳನ್ನು ತಳ್ಳಿದರು. ಮಹಾಶಬ್ದಸಹಿತವಾಗಿ ತಮ್ಮ ತೋಳುಗಳನ್ನು ತಟ್ಟಿಕೊಂಡರು. ಒಬ್ಬರು ಮತ್ತೊಬ್ಬರ ಕತ್ತಿಗೆ ಇಕ್ಕಿದರು, ಮತ್ತೆ ಮತ್ತೆ ಹೊಡೆತವಿತ್ತರು. ಒಬ್ಬರ ಅಂಗವನ್ನು ಮತ್ತೊಬ್ಬರು ಅದುಮಿ ಹಿಡಿದರು. ಪರಸ್ಪರ ಆಸ್ಫಾಲನ ಮಾಡಿದರು, ಎಂದರೆ ಅಪ್ಪಳಿಸಿದರು. ಚಿತ್ರಹಸ್ತ, ಕಕ್ಷಾಬಂಧ ಮುಂತಾದ ಪಟ್ಟುಗಳನ್ನು ಹಾಕಿದರು. ಒಬ್ಬರ ಕತ್ತು–ತಲೆಗಳಿಗೊಬ್ಬರು ಇಡಿದರು: ಆ ಏಟುಗಳು ಎಷ್ಟು ತೀವ್ರವಾಗಿದ್ದವೆಂದರೆ ಕಿಡಿಗಳು ಬಂದಂತಾಯಿತು; ಸಿಡಿಲು ಬಡಿದಂತಾಯಿತು!

ಕದನವಿರಾಮದಮರ್ಮ

ಪತ್ರ ಮಿತ್ರ

ಪಾಕಿಸ್ತಾನವು ಕೊಲ್ಲಿಯಲ್ಲಿ ಕದನವಿರಾಮ ಏರ್ಪಡಿಸಲು ಶಕ್ತವಾಯಿತು ಎಂಬುದೇ ಭಾರತದಲ್ಲಿನ 'ರಾಷ್ಟ್ರವಿರೋಧಿ'ಗಳಿಗೆ ಬಹುದೊಡ್ಡ ಸಂಭ್ರಮದ ಸುದ್ದಿಯಾಗಿದೆ. ಅದೇ ವಿಷಯವನ್ನು ಮೋದಿ ಸರಕಾರ ಹಳಿಯಲೂ ಅವರು ಬಳಸಿಕೊಳ್ಳುತ್ತಿದ್ದಾರೆ. ವಿಶ್ವಗುರು ಭಾರತವು ಕದನ ವಿರಾಮ ಏರ್ಪಡಿಸಲು ಶಕ್ತವಾಗಲಿಲ್ಲ ಎಂಬುದಾಗಿ ಕಾಂಗ್ರೆಸ್ ವ್ಯಂಗ್ಯವಾಡಿದೆ. ಭಾರತವಷ್ಟೇ ಅಲ್ಲ, ರಷ್ಯಾ, ಬ್ರಿಟನ್, ಜಪಾನ್, ಫ್ರಾನ್ಸ್, ಕೆನಡಾ ಮುಂತಾಗಿ ಯಾವುದೇ ಸಂಪನ್ನ ರಾಷ್ಟ್ರವೂ ಇರಾನ್ ಮತ್ತು ಅಮೆರಿಕ ನಡುವೆ ಸಂಧಾನ ಏರ್ಪಡಿಸಲು ಮುಂದಾಗಲಿಲ್ಲ, ಅದಕ್ಕೂ ಕಾರಣವಿದೆ. ರಾಷ್ಟ್ರನಾಯಕರನ್ನು ಬಹಿರಂಗವಾಗಿ ಹಳಿಯುವ, ಲೇವಡಿ ಮಾಡುವ ಟ್ರಂಪ್, ಕದನ ವಿರಾಮಕ್ಕೆ ಮುಂದಾದವರನ್ನು ಕೂಡಾ ಹೀಯಾಳಿಸದೆ ಬಿಡುವವರಲ್ಲ. ಹಾಗಾಗಿ ಟ್ರಂಪ್‌ರ ವಿಷಯದಲ್ಲಿ ಕದನವಿರಾಮಕ್ಕೆ ಮುಂದಾಗುವುದಕ್ಕಿಂತ ಸುಮ್ಮಗೆ ಉಳಿಯುವುದೇ ಲೇಸು ಎಂಬುದು ಎಲ್ಲರ ಅಭಿಪ್ರಾಯವಾಗಿದೆ. ಇನ್ನು ಕದನವಿರಾಮದಲ್ಲಿ 'ನಿಜವಾಗಿ' ಪಾಕಿಸ್ತಾನದ ಪಾತ್ರವೇನು ಎಂಬುದು ಅದರ ಹಿಂದಿನ ಮರ್ಮ ಅರಿತವರಿಗೆ ಅರ್ಥವಾದೀತು. ಈ ಕದನವಿರಾಮವನ್ನು ಪಾಕಿಸ್ತಾನ ಏರ್ಪಡಿಸಿದ್ದು ಎನ್ನುವುದಕ್ಕಿಂತಲೂ ಟ್ರಂಪ್ ಅವರೇ ತಮ್ಮ ಮುಖ ಉಳಿಸಿಕೊಳ್ಳಲು ನಡೆಸಿದ್ದು ಹಾಗೂ ಅದಕ್ಕೆ ಪಾಕ್ ಮೇಲೆ ಒತ್ತಡ ಹಾಕಿದರು ಎನ್ನುವುದು ತೆರೆಯ ಹಿಂದಿನ ಸತ್ಯಕತೆ.

–ಚಿದಂಬರ ರಾವ್, ಕುಂದಾಪುರ

ಬಲ್ಲವನೇ ಬಲ್ಲ ಭಾಷೆಯ ಸವಿಯ

ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com

'ಮಹಾಪ್ರಾಣವನ್ನು ಕಿತ್ತೊಗೆಯಿರಿ ಎಂದೊಬ್ಬ ಫೇಸ್ಬುಕ್ ಪಂಡಿತ ಹೇಳಿದ್ದಾನೆ ಸೀನು' ಎಂದೆ.

''ಇಂಷೂರೆನ್ಸ್ ಮುಗಿಯುವವರೆಗೆ ಎಲ್ಲರ ಪ್ರಾಣವೂ ಮಹಾಪ್ರಾಣವೇ. ಇಂಷುರೆನ್ಸ್ ಲಿಮಿಟ್ ಮೀರಿದ ದಿನ ಅದು ಅಲ್ಪಪ್ರಾಣ'' ಎಂದನೊಬ್ಬ 'ಪಲ್ಪಿ ಸ್ಪೆಷಾಲಿಟಿ' ವೈದ್ಯ. 'ಇಂಷುರೆನ್ಸ್ ಇದ್ರೆ ವಾರ್ಡ್ ಕಡೆ, ಇಲ್ಲವಾದ್ರೆ ಹೊರಗಡೆ' ಎನ್ನುವುದೇ ಆ ವೈದ್ಯನ ಪಾಲಿಸಿಯಂತೆ'' ಎಂದ ಸೀನು.

''ಉಸಿರಾಟದ ಪ್ರಾಣದ ಬಗ್ಗೆ ಅಲ್ಲ, ಉಚ್ಚಾರದ ಪ್ರಾಣದ ಬಗ್ಗೆ'' ಎಂದೆ.

''ನನ್ನ ಹೆಸರಿಗೇನೂ ಧಕ್ಕೆ ಆಗದು ಸದ್ಯ!'' ಎಂದ ಸೀನು.

''ವೈಡ್ ಆಂಗಲ್ ಲೆನ್ಸ್ ಹಾಕಿಕೊಂಡು ವಿಷಯವನ್ನು ನೋಡೋ'' ಎಂದು ಗೋಗರೆದೆ. ಸೀನು ತಲೆ ಕೆರೆದುಕೊಂಡ. ಕೆರೆದುಕೊಂಡ ಬೆರಳುಗಳನ್ನು ಸೂಕ್ಷ್ಮದರ್ಶಕ ಯಂತ್ರದಿಂದ ವೀಕ್ಷಿಸುವಂತೆ ಕೂಲಂಕಷವಾಗಿ ನೋಡಿಕೊಂಡ. ಆಗಷ್ಟೇ ಎಣ್ಣೆನೀರು ಹಾಕಿಕೊಂಡು ಬಂದಿದ್ದರಿಂದ ನೆತ್ತಿಯಲ್ಲಿ ಉಳಿದಿದ್ದ ಕೊಂಚ ಎಣ್ಣೆಯ ಹೊರತು ಇನ್ನಾವ ಕಲುಷಗಳೂ ಕಾಣದೆ 'ಸ್ವಚ್ಛ ಉಗುರು ಅಭಿಯಾನ್' ಯಶಸ್ವಿಯಾಗಿತ್ತು.

''ಗಂಗೆ ಮೇಲಿಂದ ಬಂದದ್ದು, ಕೆಳಗಿನಿಂದಲ್ಲ'' ಸೀನು ನಖವೀಕ್ಷಣೆ ಮುಗಿಸಿ ತಲೆಯೆತ್ತಿ ನುಡಿದ. ''ಮಹಾಪ್ರಾಣಕ್ಕೂ, ಗಂಗೆಗೂ...'' ಮೂಗೆಳೆದೆ.

''ಗಂಗೆಯನ್ನು ಭೂಮಿಗೆ ತಂದವನು ಭಗೀರಥ. ಭ ಎಂದರೆ ಗಗನ, ಗ ಎಂದರೆ ಗಮನ; ಗಗನದಿಂದ ಗಮಿಸಲಿಕ್ಕೆ ತನ್ನ ತಪವನ್ನೇ ರಥವಾಗಿ ಬಳಸಿದವನೇ ಭಗೀರಥ. 'ಬಗೀರತ' ಎಂದರೆ ಬಗಿ ಅಥವಾ ಬಗೆ ಅರ್ಥಾತ್ ತೋಡುವುದರಲ್ಲಿ ನಿರತನಾದವನು ಎಂದು ಅರ್ಥವಾಗುತ್ತದೆ. ಬೋರ್‌ವೆಲ್ ಕೊರೆಯುವವನು 'ಬಗೀರತ' ಆದಾನು. ಗಗನದಿಂದ ಗಂಗೆಯನ್ನು ತಂದವನ ತಪೋನಿಷ್ಠೆಗಾದರೂ ಅವನು ಭಗೀರಥನೇ ಆಗಬೇಕು. ಆದ್ದರಿಂದ ಭ ಅಕ್ಷರವನ್ನು, ಥ ಅಕ್ಷರವನ್ನು ಬಿಡುವಂತಿಲ್ಲ'' ಘೋಷಿಸಿದ ಸೀನು.

''ಭಘೀರಥ ಎನ್ನಬಹುದಲ್ಲ!'' ಛೇಡಿಸಿದೆ.

''ಘೀಂಕೃತಿಘಂಟಾನಾದದ ಸದ್ದು. ಭಗೀರಥನ ದೇವಾಲಯವೊಂದಿದೆ. ಅಲ್ಲಿ ಘೀಕಾರ ಸರಿ ಹೊಂದುತ್ತದೆ. ಮಿಕ್ಕೆಡೆ ಅವನ ಹೆಸರಲ್ಲಿ ಗೀಗೀ ಪದ ಹಾಡುವುದು ಸರಿಯಾದೀತು.''

ನನಗಂತೂ ಇನ್ನಾವುದೇ ಮಹಾಪ್ರಾಣವನ್ನು ಕಳೆದುಕೊಂಡಾಗ ಆಗಬಹುದಾದ ನೋವಿಗಿಂತ ಭಕಾರವನ್ನು ಕಳೆದುಕೊಂಡರೆ ಹೆಚ್ಚು ನೋವಾಗುತ್ತದೆ. ಭಕಾರವೇ ಇಲ್ಲದಿದ್ದರೆ ಭಕ್ಷ್ಯಗಳೂ ಇಲ್ಲ, ಭೋಜನವೂ ಇಲ್ಲವಾಗುವುದಲ್ಲ!

ಭಕಾರದ ಸೊಬಗು ಸಂಸ್ಕೃತದಲ್ಲಿ ಜನಿಸಿ ಕನ್ನಡದಲ್ಲಿ ಹರಿದು ಬಂದಿದೆ. ಇದೋ ಭಕಾರವನ್ನೊಳಗೊಂಡ ಒಂದು ಸುಂದರ ಪ್ರಸಂಗ:

ಬಿಲ್ಹಣನೆಂಬ ಕವಿಯು ರಾಜಕುವರಿಗೆ ಸಂಸ್ಕೃತವನ್ನು ಕಲಿಸುತ್ತಿದ್ದ. ರಾಜನಿಗೆ ತನ್ನ ಮಗಳನ್ನು ಕವಿಯು ಹಾರಿಸಿಕೊಂಡು ಹೋಗುವನೆಂಬ ಸುದ್ದಿ ತಲುಪಿತು. ತಾನೆಲ್ಲಿ, ಕವಿಯೆಲ್ಲಿ! ಆ ಕಾಲದ ರಾಜರಿಗೆ ತಿಳಿದ ಏಕೈಕ ಉಗ್ರಶಿಕ್ಷೆಯಾದ 'ತಲೆದಂಡ'ವನ್ನು ಕವಿಗೂ ವಿಧಿಸಲು ತೀರ್ಮಾನಿಸಿದ. ಇದನ್ನು ಅರಿತ ಕವಿಯು ರಾಜನಿಗೆ ಶ್ಲೋಕಸಂದೇಶವೊಂದನ್ನು ಕಳುಹಿಸಿದ:

> ಭಟ್ಟಿರ್ನಷ್ಟೋ ಭಾರವಿಶ್ಚಾಪಿ ನಷ್ಟೋ
> ಭಿಕ್ಷುರ್ನಷ್ಟೋ ಭೀಮಸೇನಾಪಿ ನಷ್ಟಃ।
> ಭುಕ್ಕುಂಡಃ ಅಹಂ ಭೂಪತಿಃ ತ್ವಂ ಚ ರಾಜನ್
> ಭಭ್ಭಾವಲ್ಯಾಂ ಅಂತಕಃ ಸನ್ನಿವಿಷ್ಟಃ ॥

ಇದನ್ನೇ ಕನ್ನಡದಲ್ಲಿ ಬರೆದಾಗ:

> ಭಟ್ಟಿಯು ಹೋದನು ಭಾರವಿಯೂ ಸಹ
> ಭಿಕ್ಷುವೂ ಗತಿಸಿದ ಭೀಮಸೇನನೂ
> ಭುಕ್ಕುಂಡನಾದ ನನ್ನ ಸರದಿಯಿಂದು
> ಭೂಪತಿಯೇ ಸರದಿ ನಿನ್ನದು ಮುಂದು
> ಭಭಾಭಿಭಿಯ ಹಿಂದೆ ಬಿದ್ದಿಹನು ಅಂತಕನೀಗ ॥

(ಅರಸಕೇಳ್, ಭಟ್ಟಿಯೆಂಬ ಕವಿಯನ್ನು ಯಮನು ಸೆಳೆದ; ಭಾರವಿಯೆಂಬ ಕವಿಯನ್ನೂ ತದನಂತರ. ಮುನ್ನಡೆದು ಅವನು ಭಿಕ್ಷುವೆಂಬ ಶ್ರೇಷ್ಠನನ್ನೂ, ಭೀಮಸೇನನನ್ನೂ ಸೆಳೆದೊಯ್ದ. ಈಗ ಭುಕ್ಕುಂಡನಾದ (ಬಿಲ್ಹಣನ ಮತ್ತೊಂದು ಹೆಸರು. ಕವಿಯಾದ್ದರಿಂದ ಈಗಿನ ಕಾಲದವರು ಬುಕ್ ಉಂಡ ಎಂದು ಕರೆದು ಅಲ್ಪಪ್ರಾಣಿಗೆ ಪ್ರಿಯವಾದಾರು!) ನನ್ನ ಸರದಿ. ಮುಂದೆ ಭೂಪತಿಯಾದ ನಿನ್ನ ಸರದಿ. ಯಮನು ಈಗ ಭಭಾಭಿಭೀ ಅಕ್ಷರಮಾಲೆಯನ್ನು ಅನುಸರಿಸಿ ಒಬ್ಬೊಬ್ಬರನ್ನೇ ಒಯ್ಯುತ್ತಿದ್ದಾನೆ.)

ಕವಿಯ ಚಮತ್ಕಾರಕ್ಕೆ ಮೊದಲು ಮಗಳು ಆಕರ್ಷಿತಳಾಗಿದ್ದಳು. ಈಗ ಅಪ್ಪನೂ ಆದ. ತಲೆ ಉಳಿಯಿತು. ಇಂತಹ ಭಕಾರಭರಿತ ಕವನಗಳು ಭಾಷೆಯ ಸಮೃದ್ಧಿಯನ್ನು ತೋರುತ್ತವೆ. ಹಾಸ್ಯೋತ್ಪಾದಕ ಎಮ್ಮೆಸ್ಸೆನ್ ಅಲ್ಲಲ್ಲಿ ಹೇಳುವ ವಿನೋದದ ಪ್ರಸಂಗವೊಂದು ಇಂತಿದೆ:

ಬರೆಹಗಾರನೊಬ್ಬನಿಗೆ ''ಭಾಗೀರಥಿ''ಯಲ್ಲಿನ ಕೊನೆಯ ಅಕ್ಷರ 'ತಿ'ಯೋ, 'ಥಿ'ಯೋ ಎಂಬ ಸಂದೇಹ ಮೂಡಿ ಎಮ್ಮೆಸ್ಸೆನ್‌ಗೆ ಕರೆ ಮಾಡಿದ. ಇವರು ನಡೆದಾಡುವ ನಿಘಂಟೆಂದೇ ಖ್ಯಾತರಾದ ಜಿ. ವೆಂಕಟಸುಬ್ಬಯ್ಯನವರಿಗೆ ಫೋನಾಯಿಸಿ, ''ಭಾಗೀರಥಿ ಎನ್ನಬೇಕೋ, ಭಾಗೀರತಿಯೋ'' ಎಂದು ಕೇಳಿದರು. ಪ್ರೊಫೆಸರ್ ಜಿವಿಯವರು, ''ಭಾಷೆಯ ದೃಷ್ಟಿಯಿಂದಾದರೆ ರಥಿ ಎನ್ನಿ, ಪ್ರೀತಿಯ ದೃಷ್ಟಿಯಿಂದಾದರೆ ರತಿ ಎನ್ನಿ. ನಿಮ್ಮ ಹೆಂಡತಿಯ ಹೆಸರು ಭಾಗೀರಥಿಯೇನು?'' ಎಂದು ಕೇಳಿದರು.

''ಅಲ್ಲ.''

''ಯಾರ್ಯಾರದೋ ಹೆಂಡತಿಯನ್ನು ರತಿ ಎಂದು ಕರೆದು ತೊಂದರೆಗೆ ಸಿಲುಕಬೇಡಿ. ಭಾಗೀರಥಿ ಎಂದೇ ಕೂಗಿ!''

ಸಂಸ್ಕೃತದಂತೆಯೇ ಕನ್ನಡದ ಸೊಬಗೂ ಇರುವುದು ಅದರ ಮಹಾಪ್ರಾಣ, ಒತ್ತಕ್ಷರಗಳಲ್ಲಿ. 'ತತ್ತ್ವಮಸಿ' ಪದವನ್ನು ಅಂತೆಯೇ ಬರೆದರೆ 'ಅದು ನೀನೇ ಆಗಿದ್ದೀಯೇ' ಎಂದಾಯಿತು. ಅದನ್ನೇ 'ತತ್ವಮಸಿ' ಎಂದು ಬರೆದರೆ ತತ್ವಕ್ಕೆ ಮಸಿ ಬಳಿದಂತೆ ಮರ್ಮಜ್ಞ!

ಕನ್ನಡದ ಪ್ರತಿ ಅಕ್ಷರಕ್ಕೂ ತನ್ನದೇ ಆದ ಉಚ್ಚಾರಚೆಲುವಿದೆ. 'ದನ'ವು ಹಾಲನ್ನು ನೀಡಿದರೆ 'ಧನ'ವು ನಮ್ಮ ಹಾಲತ್ತನ್ನು ನಿರ್ಧರಿಸುತ್ತದೆ. 'ಕರ'ವು ಹಿಡಿಯಲು ಅನುಕೂಲವಾದುದಾದರೆ 'ಖರ'ವು ಒದೆಯಲು ಅನುವಾದ ಪ್ರಾಣಿಯೆಂದಾಗುತ್ತದೆ. 'ತರ' ಎಂದರೆ ವಿಧ; 'ಥರ' ನಡುಗುವಿಕೆಯ ವಿಧ. 'ತಳ' ಕೆಳಭಾಗವನ್ನು ಸೂಚಿಸಿದರೆ 'ಥಳ' ಮೆರುಗನ್ನು ಸೂಚಿಸುತ್ತದೆ. ಬಾರಕ್ಕೂ ಭಾರಕ್ಕೂ ವ್ಯತ್ಯಾಸವನ್ನು ಹೆಣ್ಣಲ್ಲೇ ಕಾಣುವ ಗಂಡಸರೂ ಇದ್ದಾರೆ. ಪ್ರೀತಿಸುವ ಸಮಯದಲ್ಲಿ 'ಬಾ ಬಾರೆ ಚೆಲುವೆ, ಬಾರೇ ಒಲವೆ, ಬಾರಾ...' ಎನ್ನುವವರು, ಮದುವೆಯಾಗಿ ಲತೆಯು ವೃಕ್ಷವಾದಾಗ ಕಡೆಯ ಪದವನ್ನು 'ಭಾರಾ' ಎಂದೇ ನುಡಿಯುವವರಂತೆ. 'ಮಟ'ವು ಮಟಮಟ ಮಧ್ಯಾಹ್ನದ ಬಿರುಬಿಸಿಲನ್ನು ನೆನಪಿಸಿದರೆ 'ಮಠ'ವು ಧರ್ಮ, ಭೋಜನಗಳ ತಂಪನ್ನು ಚಿತ್ತಕ್ಕೊಡುತ್ತದೆ. 'ಮಠ'ದ ಊಟದ ನೆನಪಾದಾಗ ನನಗೆ ಆ ಪದದಲ್ಲಿನ 'ಠ' ಅಕ್ಷರದ 'ಂ' ಆಕಾರವು ತಟ್ಟೆಯಂತೆಯೂ, ಮಧ್ಯದಲ್ಲಿನ ಚುಕ್ಕಿಯು ಬರಬರುತ್ತಾ ಬೆಳೆಯುವ ಅನ್ನದ ರಾಶಿಯ ಮೊದಲ ಅಗುಳಿನಂತೆಯೂ ಕಾಣುತ್ತದೆ. ಕನ್ನಡ ವರ್ಣಮಾಲೆಯಲ್ಲಿ 'ಠ' ಮೊದಲು ಬಂದು ನಂತರ 'ಂ' ಬರುವುದರಿಂದ 'ಠ' ಹಿರಿಯಳೆಂದು, 'ಂ' ಕಿರಿಯಳೆಂದು ಕವಿಗಳೊಬ್ಬರ ಅಂಬೋಣ. ಹಿರಿಯಳಾದ 'ಠ' ಅಕ್ಷರವು ಠ ಅಕ್ಷರದ ಬಗ್ಗೆ ದೂರುತ್ತಾ, 'ಈಗಿನ ಹೆಣ್ಣುಮಕ್ಕಳಿಗೆ ಸಂಸ್ಕಾರವೇ ಇಲ್ಲ. ನನ್ನ ಹಾಗೆಯೇ ಅವಳೂ ಲಕ್ಷಣವಾಗಿ ಕುಂಕುಮ ಇಟ್ಟುಕೊಳ್ಳಬಾರದೇ?'' ಎಂದು ಗೊಣಗಿದಳಂತೆ!

ಮಹಾಪ್ರಾಣಕ್ಕೆ ಒತ್ತುಕೊಡುವುದು ನಾಟಕಕಾರರ ಸತ್ಸಂಪ್ರದಾಯವಾಗಿತ್ತು. ಈಗ ಅದು ಸತ್ತ ಸಂಪ್ರದಾಯವಾಗಿದೆ. ಅಂದಿನ ಒಂದು ಸನ್ನಿವೇಶ. ಪ್ರಸಿದ್ಧ ನಾಟಕಕಾರರೊಬ್ಬರು ನಾಟಕವೊಂದರ ತಾಲೀಮು ನಡೆಸುತ್ತಿದ್ದರು. ಭೀಮನ ಪಾತ್ರಧಾರಿಯೊಬ್ಬನು ''ನಿನ್ನ ಊರು ಭಂಗ ಮಾಡದಿದ್ದರೆ ನನ್ನ ಹೆಸರು ಭೀಮನೆ ಅಲ್ಲ'' ಎಂದು ನುಡಿಯಬೇಕಾಗಿತ್ತು. ಎಷ್ಟೇ ಯತ್ನಿಸಿದರೂ ಅವನ ಬಾಯಲ್ಲಿ 'ಭೀ' ಹೊರಡುತ್ತಿರಲಿಲ್ಲ.

''ಸರಿ. ಇದು ನಿನ್ನ ಕೈಯಲ್ಲಾಗಲ್ಲ. ಸ್ಕ್ರಿಪ್ಟ್ ಚೇಂಜ್ ಮಾಡ್ತೀನಿ ಇರು'' ಎನ್ನುತ್ತಾ 'ನಿನ್ನ ತೊಡೆಯನ್ನು ಮುರಿಯದಿದ್ದರೆ ನನ್ನ ಹೆಸರು ಭೀಮನೆ ಅಲ್ಲ' ಎಂದು ಬರೆದುಕೊಟ್ಟರು. 'ಊರುಭಂಗ'ದ ಭ ಹೇಳುವುದು ತಪ್ಪಿತಲ್ಲ!

'ಬೀಮನೆ ಅಲ್ಲ'' ಎಂದನವ.

''ಅದಲ್ಲವೋ, ದೊಡ್ಡ ಬಿ ಹೇಳೋ'' ಎಂದರು ನಿರ್ದೇಶಕರು.

ಮತ್ತೆ ಅವನು ''ಬೀೀೀಮನೆ ಅಲ್ಲ'' ಎಂದ.

''ಆ ಬೀ ಅಲ್ಲ ಕಣೋ. ಊರುಬಂಗದ ಬದಲು ಬೇರೆ ಬರೆದುಕೊಟ್ಟೆ, ಪಾಂಡವನನ್ನು ಹೇಗಪ್ಪಾ ಬದಲಿಸುವುದು! ಇಲ್ಲಿ ಯಾರಾದರೂ ಸರಿಯಾದ ಬೀಮನನ್ನು ಹೇಳುವವರು ಇದ್ದೀರನಪ್ಪಾ?'' ಎಂದು ಕೇಳಿದರು.

ಇವನ್ನೆಲ್ಲ ವೀಕ್ಷಿಸುತ್ತಾ ಅಲ್ಲೇ ಕುಳಿತಿದ್ದ ಮಾಸ್ಟರ್ ಹಿರಣ್ಣಯ್ಯನವರು ''ಭೀಮ'' ಎಂದರು. ''ಕರೆಕ್ಟ್, ಲೋ, ಹಿರಣ್ಣಯ್ಯನ ಬಾಯಲ್ಲಿ ಬಂದ ಬೀಮನನ್ನು ಹೇಳೋ, ನನ್ನ ಬಾಯಲ್ಲಿ ಬಂದದ್ದನ್ನಲ್ಲ ಕಣೋ'' ಎಂದ ನಿರ್ದೇಶಕರು ಹಿರಣ್ಣಯ್ಯನವರತ್ತ ತಿರುಗಿ, 'ಹಿರಣ್ಣೆ, ನನ್ನ ಮನಸ್ಸಲ್ಲೂ ನಿನ್ನ ಬೀಮನೇ ಇದ್ದಾನೆ. ನನ್ನ ಬರವಣಿಗೆಯಲ್ಲಿಯೂ ನಿನ್ನ ಬೀಮನೇ ಇದ್ದಾನೆ. ಆದರೆ ಈ ನಾಲಿಗೆಗೆ ಮೊದಲಿನಿಂದಲು ಸಂಸ್ಕಾರ ನೀಡದೆ ಆ ಬೀಮ ಮಾತಿನಲ್ಲಿ ಕಳೆದುಹೋಗ್ತಾನೆ ಕಣೋ'' ಎಂದು ಅಲವತ್ತಿಕೊಂಡರು.

ಕಂಠ್ಯ, ತಾಲವ್ಯ, ಮೂರ್ಧನ್ಯ, ದಂತ್ಯ, ಓಷ್ಠ್ಯ ಉಚ್ಚಾರಗಳನ್ನು ಕಲಿಸುವ ಗುರುಗಳು ಇದ್ದರು. ಇಂದು ಅನೇಕ ಗುರುಗಳು 'ಕಂಠ್ಯ' ಎಂದರೆ 'can't ya' ಎನ್ನುವರು, 'ತಾಲವ್ಯ'ಕ್ಕೆ ತಾಳ ಸಿಗದು, ಮೂರ್ಧನ್ಯ ಎಂದರೆ ಮೂರು ಧ್ವನಿಗಳು ಎನ್ನುವರು, ದಂತ್ಯ ಎಂದರೆ ಕಾಡುಗಳ್ಳ ವೀರಪ್ಪನ್ ಭಾಷೆಯೆಂದೋ, ಡೆಂಟಿಸ್ಟ್ ಭಾಷೆಯೆಂದೋ ತಿಳಿಯುವರು, ಓಷ್ಠ್ಯವನ್ನು ಓಷ್ಟೂ (ರವಷ್ಟೂ–ರವೆಯಷ್ಟೂ ಎನ್ನುವುದರ ಅಪಭ್ರಂಶ) ಅರಿಯರು. ಇಂತಿರುವಾಗ ಮಹಾಪ್ರಾಣಕ್ಕೆ ಗೇಟ್ ಪಾಸ್ ಸಿಕ್ಕರೂ ಅಚ್ಚರಿಯಿಲ್ಲ.

ತಂತ್ರಜ್ಞಾನ ಮತ್ತು ಭವಿಷ್ಯದ ಯುದ್ಧಗಳು!

▶ ದಿನಕರ

ಯುದ್ಧದ ಸ್ವರೂಪವೇ ಈಗ ಬದಲಾಗಿದೆ. ಯುದ್ಧವೆಂದ ಕೂಡಲೇ ಟ್ಯಾಂಕ್‌ಗಳು, ಸೈನಿಕರು ಬಂದೂಕು ಹಿಡಿದು ಕಾದಾಡುವ ದೃಶ್ಯ ಮರೆಯಾಗುತ್ತಿದೆ. ಯುದ್ಧವಿಮಾನಗಳ 'ಡಾಗ್‌ಫೈಟ್' ಕೂಡಾ ಕಣ್ಮರೆಯಾಗುತ್ತಿದೆ. ಈಗೇನಿದ್ದರೂ ತಂತ್ರಜ್ಞಾನಾಧಾರಿತ ಸಮರ. ವಿವಿಧ ತಾಂತ್ರಿಕ ಉಪಕರಣಗಳೇ ಈಗ ದೇಶವೊಂದರ ಮೇಲುಗೈಯನ್ನು ನಿರ್ಧರಿಸುತ್ತವೆ. ಕತೆ, ಸಿನಿಮಾಗಳಲ್ಲಿದ್ದ 'ಭವಿಷ್ಯದ ಯುದ್ಧ'ದ ಪರಿಕಲ್ಪನೆಗಳು ಈಗ ನಿಜವಾಗುತ್ತಿವೆ....

ಇರಾನ್– ಇಸ್ರೇಲ್ –ಅಮೆರಿಕವನ್ನೊಳಗೊಂಡು ನಡೆಯುತ್ತಿದ್ದ ಸಮರಕ್ಕೆ ತಾತ್ಕಾಲಿಕ ವಿರಾಮ ಬಿದ್ದಿದೆ. ಆದರೆ ಒಂದೂವರೆ ತಿಂಗಳ ಕಾಲದ ಯುದ್ಧದ ನಡೆದ ಬೆಳವಣಿಗೆಗಳನ್ನು ಗಮನಿಸಿದರೆ ಯುದ್ಧದ ಸ್ವರೂಪ ಬದಲಾಗುತ್ತಿರುವುದು ನಿಚ್ಚಳವಾಗಿದೆ. ತಂತ್ರಜ್ಞಾನದ ಪ್ರಗತಿಯು ಯುದ್ಧದ ಗತಿಯನ್ನೇ ಬದಲಿಸಿದೆ.

ಇರಾನ್ ಕಳೆದ ನಾಲ್ಕು ದಶಕಗಳಿಂದ ಅತೀ ಹೆಚ್ಚು ನಿರ್ಬಂಧಗಳನ್ನು ಎದುರಿಸಿದ್ದರೂ ಅತೀ ಹೆಚ್ಚು ಸಾಕ್ಷರತೆ ಹೊಂದಿರುವ ಗಲ್ಫ್ ದೇಶವದು. ಅಲ್ಲಿ ಶೇ. 95ರಷ್ಟು ಸಾಕ್ಷರತೆ ಇದೆ. ಮಹಿಳಾ ಸಾಕ್ಷರತೆಯಂತೂ ಶೇ. 99ರಷ್ಟಿದೆ. ಹಾಗಾಗಿ ತಂತ್ರಜ್ಞಾನದಲ್ಲೂ ಇರಾನ್ ಹಿಂದೆ ಬಿದ್ದಿಲ್ಲ. ವೈಮಾನಿಕ ಕ್ಷೇತ್ರ, ರಕ್ಷಣೆ ಮತ್ತು ಪರಮಾಣು ತಂತ್ರಜ್ಞಾನದಲ್ಲಿ ಇರಾನ್‌ನ ಪ್ರಗತಿ ಗಮನಾರ್ಹವಾಗಿದೆ. ಅದುವೇ ಅದರ ವೈರಿ ರಾಷ್ಟ್ರಗಳಿಗೆ ಆತಂಕ ಸೃಷ್ಟಿಸಿದ್ದು.

ಇರಾನಿನ ಕ್ಷಿಪಣಿ ಮತ್ತು ಪರಮಾಣು ತಂತ್ರಜ್ಞಾನಕ್ಕೆ ಉ.ಕೊರಿಯಾ, ರಷ್ಯಾ ಮತ್ತು ಚೀನಾಗಳು ನೆರವು ನೀಡಿವೆಯೆಂದು ಹೇಳಲಾಗುತ್ತದೆ. ಅದೆಷ್ಟು ನಿಜವೋ ಗೊತ್ತಿಲ್ಲ. ಆದರೆ ಇರಾನಿನ ಪರಮಾಣು ತಂತ್ರಜ್ಞಾನವು ಇಸ್ರೇಲ್, ಅಮೆರಿಕಗಳಿಗೆ ಆಂತಕ ಸೃಷ್ಟಿಸಿದ್ದು ಸುಳ್ಳಲ್ಲ. ಈ ಬಗ್ಗೆ ಇಸ್ರೇಲ್ ಎಷ್ಟು ಕಳವಳಗೊಂಡಿತ್ತೆಂದರೆ ಕಳೆದ ಕೆಲವು ವರ್ಷಗಳಲ್ಲಿ ಇರಾನಿನ ಪರಮಾಣು ವಿಜ್ಞಾನಿಗಳನ್ನೇ ಗುರಿಯಾಗಿಸಿ ದಾಳಿ ನಡೆಸಿ ಅವರನ್ನು ಹತ್ಯೆಗೈಯಲಾರಂಭಿಸಿತ್ತು. 2025ರ ಜೂನ್‌ನಲ್ಲಿ ನಡೆಸಿದ ವೈಮಾನಿಕ ದಾಳಿಯಲ್ಲಿ 11 ವಿಜ್ಞಾನಿಗಳು ಸಾವಿಗೀಡಾಗಿದ್ದರು. ಒಟ್ಟಾರೆಯಾಗಿ 20 ವಿಜ್ಞಾನಿಗಳನ್ನು ಇಸ್ರೇಲ್ ಹತ್ಯೆಗೈದಿದೆ. ಇದಕ್ಕೆ ಸಡ್ಡು ಹೊಡೆದ ಇರಾನ್ ''ಹುತಾತ್ಮರಾದ ವಿಜ್ಞಾನಿಗಳ ಜಾಗವನ್ನು ನೂರಾರು ಪರಮಾಣು ವಿಜ್ಞಾನಿಗಳು ತುಂಬುತ್ತಾರೆ'' ಎಂದು ಹೇಳಿತ್ತು.

ಯುದ್ಧದಲ್ಲಿ ಎಐ ಪಾತ್ರ

ಈ ಬಾರಿಯ ಸಮರದ ಗಮನಾರ್ಹ ವಿಷಯವೆಂದರೆ ಕೃತಕ ಬುದ್ಧಿಮತ್ತೆ (ಎಐ) ವಹಿಸುತ್ತಿರುವ ಪಾತ್ರ. ಯುದ್ಧನಿರತ ಎಲ್ಲಾ ದೇಶಗಳೂ ಎಐ ತಂತ್ರಜ್ಞಾನ ಬಳಸಿದ್ದು ಕಂಡುಬರುತ್ತದೆ. ಅಮೆರಿಕವು 2017ರಲ್ಲಿ ಅನುಷ್ಠಾನಿಸಿದ 'ಸ್ಮಾರ್ಟ್ ಸಿಸ್ಟಮ್ ಯೋಜನೆ'ಯ ಮೂಲಕ ವೈಮಾನಿಕ ದಾಳಿ ನಡೆಸಿತು. ಎಐ ಅತ್ಯಂತ ಕ್ಷಿಪ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವುದರಿಂದ ದಾಳಿಯ ಪ್ರಮಾಣ ಮತ್ತು ನಿಖರತೆಯು ಹೆಚ್ಚಿದೆ. ಇರಾನ್‌ನಲ್ಲಿ ಹುಡುಗಿಯರ ಶಾಲೆಯ ಮೇಲೆ ನಡೆದ ಅಮೆರಿಕದಿಂದ ನಡೆದ ದಾಳಿಗೂ ಎಐ ಆಧಾರಿತ ತಂತ್ರಜ್ಞಾನ ಕಾರಣವೇ ಅಥವಾ ಅಮೆರಿಕದ ಉನ್ನತಾಧಿಕಾರಿಗಳು ತೆಗೆದುಕೊಂಡ ತಪ್ಪು ನಿರ್ಧಾರ ಕಾರಣವೇ ಎಂಬುದು ಸ್ಪಷ್ಟವಾಗಿಲ್ಲ.

ಇಸ್ರೇಲ್ 2021ರಲ್ಲಿ ಹಮಾಸ್ ವಿರುದ್ಧದ ಸಮರದ ಕಾಲದಿಂದಲೇ ಎಐಯನ್ನು ಬಳಸಿಕೊಳ್ಳುತ್ತಿದೆ. ತನ್ನ ದಾಳಿಯ ಗುರಿಯನ್ನು ಪಟ್ಟಿ ಮಾಡಲು ಹಾಗೂ ಯಾವ ವ್ಯಕ್ತಿಗಳನ್ನು ಹತ್ಯೆಗೈಯ್ಯಬೇಕು ಎಂದು ನಿರ್ಧರಿಸಲು ಎಐ ನೆರವು ಪಡೆಯುತ್ತಿದೆ. ಹತ್ಯೆಯ ಪ್ರಮಾಣ ಹೆಚ್ಚಿಸಲು ಎಐ ತಂತ್ರಜ್ಞಾನವನ್ನು ಶಸ್ತ್ರಾಸ್ತ್ರ ವ್ಯವಸ್ಥೆಯೊಂದಿಗೆ ಜೋಡಿಸಿಕೊಂಡಿದೆ. 'ಲ್ಯಾವೆಂಡರ್' ಎಂಬ ವ್ಯವಸ್ಥೆಯು ಎಐಯನ್ನು ಆಧರಿಸಿ ಕ್ಷಿಪ್ರ ನಿರ್ಧಾರ ತಾಳುತ್ತದೆ. 'ಗೋಸ್ಪೆಲ್' ಎಂಬ ಎಐ ತಂತ್ರಜ್ಞಾನವು ಹತ್ಯೆ ಮಾಡಬೇಕಾದವರ ಪಟ್ಟಿ ತಯಾರಿಸುತ್ತದೆ. ಮತ್ತೊಂದು ತಂತ್ರಜ್ಞಾನವು ದಾಳಿಗೆ ಆಯ್ದುಕೊಂಡ ವ್ಯಕ್ತಿಯ ಚಲನವಲನಗಳ ಮೇಲೆ ನಿರಂತರ ನಿಗಾ ಇಡುತ್ತದೆ.



ಮಾಹಿತಿ ಸಮರ ಮತ್ತು ಸೈಬರ್ ಕಾರ್ಯಾಚರಣೆಯಲ್ಲಿ ಇರಾನ್ ಕೂಡ ಎಐ ಬಳಸಿಕೊಳ್ಳುತ್ತಿದೆ. ಅದರ ಶಹೀದ್ ಡ್ರೋನ್‌ಗಳು ನಿಖರ ಗುರಿ ಸಾಧಿಸುವಲ್ಲಿ ಸಫಲತೆ ಕಾಣಲು ಎಐ ತಂತ್ರಜ್ಞಾನ ಬಳಸಿದ್ದೂ ಕಾರಣವಾಗಿದೆ.

ಈ ಶಹೀದ್ ಡ್ರೋನ್‌ಗಳನ್ನು ಈ ಮೊದಲು ರಷ್ಯಾವು ಉಕ್ರೇನ್ ಸಮರದಲ್ಲೂ ಬಳಸಿತ್ತು. ಈಗ ಇರಾನ್ ಅದೇ ಡ್ರೋನ್‌ಗಳನ್ನು ಇಸ್ರೇಲ್ ಮತ್ತು ಅಮೆರಿಕದ ವಿರುದ್ಧ ಬಳಸಿದೆ. ಇವೆರಡು ದೇಶಗಳ ರಕ್ಷಣಾ ವ್ಯವಸ್ಥೆಯನ್ನು ಭೇದಿಸಿ ದಾಳಿ ಮಾಡಲೂ ಈ ಕ್ಷಿಪಣಿಗಳು ಸಫಲವಾಗಿವೆ. ಬಹುತೇಕವಾಗಿ ಈ ಡ್ರೋನ್‌ಗಳನ್ನು ಕ್ಷಿಪಣಿಯ ಜತೆಗೇ ಹಾರಿಸಲಾಗುತ್ತದೆ. ಆ ಮೂಲಕ ಅಮೆರಿಕ ಮತ್ತು ಇಸ್ರೇಲ್‌ನ ಕ್ಷಿಪಣಿ ನಿರೋಧಕ ವ್ಯವಸ್ಥೆಯನ್ನು ಭೇದಿಸಲು ಸಫಲವಾಗುತ್ತದೆಯಲ್ಲದೆ ಅವನ್ನು ಹೊಡೆದುರುಳಿಸಲು ಇವೆರಡು ದೇಶಗಳು ದುಬಾರಿ ಕ್ಷಿಪಣಿಗಳನ್ನು ಬಳಸಬೇಕಾಗುತ್ತದೆ.

ಇಸ್ರೇಲ್‌ನ ಬಳಿ ಉನ್ನತಶಕ್ತಿಯ ಲೇಸರ್ ಆಧಾರಿತ ಡ್ರೋನ್‌ನಾಶಕ ವ್ಯವಸ್ಥೆ ಇದೆ. ಅದನ್ನು ಕಳೆದ ವರ್ಷ ಯಶಸ್ವಿಯಾಗಿ ಪರೀಕ್ಷೆಗೊಳಪಡಿಸಲಾಗಿತ್ತು. ಆದರೆ ಪ್ರಸಕ್ತ ಸಮರದಲ್ಲಿ ಇಸ್ರೇಲ್ ಅದನ್ನು ಉಪಯೋಗಿಸುತ್ತಿಲ್ಲ. ಕಾರಣವೇನೆಂದು ತಿಳಿದಿಲ್ಲ.

ರಷ್ಯಾ ಉಕ್ರೇನ್‌ನ ಮೇಲೆ ಶಹೀದ್ ಡ್ರೋನ್‌ಗಳ ಹಿಂಡನ್ನೇ ಪ್ರಯೋಗಿಸಿದ್ದಲ್ಲದೇ ತನ್ನದೇ ಆದ ಗೇರನ್ ಡ್ರೋನ್‌ಗಳನ್ನೂ ಪ್ರಯೋಗಿಸಿತ್ತು. ಇವು ಶತ್ರು ರಾಷ್ಟ್ರದ ಜಾಮಿಂಗ್ ವ್ಯವಸ್ಥೆಯನ್ನು ವಿಫಲಗೊಳಿಸುವ ಸಾಮರ್ಥ್ಯವನ್ನು ಹೊಂದಿವೆ. ಕ್ಷಿಪಣಿಗಳ ಜತೆಗೇ ಹಲವಾರು ಡ್ರೋನ್‌ಗಳನ್ನೂ ಪ್ರಯೋಗಿಸುವುದರಿಂದ ಶತ್ರು ರಾಷ್ಟ್ರಕ್ಕೆ ಹೆಚ್ಚು ನಷ್ಟವಾಗುವುದು. ಏಕೆಂದರೆ ಇಂತಹ ಡ್ರೋನ್‌ಗಳನ್ನು ಹೊಡೆದು ಹಾಕಲು ಮಿಸೈಲ್ ನಾಶಕ ದುಬಾರಿ ಕ್ಷಿಪಣಿಗಳನ್ನೇ ಬಳಸಬೇಕಾಗುತ್ತದೆ. ಇರಾನ್‌ನ ಅಲ್ಪವೆಚ್ಚದ ಶಹೀದ್ ಡ್ರೋನ್‌ಗಳನ್ನು ಹೊಡೆದುರುಳಿಸಲು ಅಮೆರಿಕ ಮತ್ತು ಇಸ್ರೇಲ್ ದುಬಾರಿ ವೆಚ್ಚದ ಕ್ಷಿಪಣಿಗಳನ್ನು ಬಳಸಬೇಕಾಗಿತ್ತು. ಇದೇವೇಳೆ ಅಮೆರಿಕ ಕೂಡಾ ಶಹೀದ್ ಮಾದರಿಯ ಲೂಕಾಸ್ ಡ್ರೋನ್‌ಗಳನ್ನು ಇರಾನ್‌ನ ರೆವಲೂಷನರಿ ಗಾರ್ಡ್‌ಗಳ ಮೇಲೆ ಪ್ರಯೋಗಿಸಿತ್ತು. ಸಣ್ಣ ಗಾತ್ರದ ಡ್ರೋನ್‌ಗಳನ್ನು ಪತ್ತೆ ಹಚ್ಚುವುದು ಕಷ್ಟ. ಇದಕ್ಕಾಗಿ ಉಕ್ರೇನ್ ಶಬ್ದಾಸ್ತ್ರ ವ್ಯವಸ್ಥೆಯೊಂದನ್ನು ಕಂಡುಹಿಡಿದಿತ್ತು. ಇದನ್ನು ಕ್ಷಿಪಣಿ ರಕ್ಷಣಾ ವ್ಯವಸ್ಥೆಯೊಂದಿಗೆ ಜೋಡಿಸಲಾಗಿದೆ. ಇದೀಗ ಕೊಲ್ಲಿ ರಾಷ್ಟ್ರಗಳೂ ತಮ್ಮ ಪ್ರಮುಖ ನೆಲೆಗಳ ಸುತ್ತ ಇದನ್ನು ಅಳವಡಿಸಿವೆ. ಇಸ್ರೇಲ್ ಕೂಡಾ ಉಕ್ರೇನ್‌ನಿಂದ ಇದನ್ನು ಪಡೆಯುವ ಕುರಿತಂತೆ ಮಾತುಕತೆ ನಡೆಸುತ್ತಿದೆ. ಇವು ಭವಿಷ್ಯದ ಡ್ರೋನ್ ವಿರೋಧಿ ವ್ಯವಸ್ಥೆಯಾಗಿ ರೂಪುಗೊಳ್ಳಬಹುದು. ಅಗ್ಗದ ಡ್ರೋನ್‌ಗಳನ್ನು ದುಬಾರಿ ಕ್ಷಿಪಣಿಗಳಿಂದ ಹೊಡೆದುರುಳಿಸಬೇಕಾದ ಅನಿವಾರ್ಯತೆಯನ್ನು ಇದು ತಪ್ಪಿಸಿ ಖರ್ಚು ನಿಯಂತ್ರಣಕ್ಕೆ ನೆರವಾಗಬಲ್ಲದು.

ಡ್ರೋನ್, ಕ್ಷಿಪಣಿಗಳ ಪಾತ್ರ

ಇನ್ನು ಮುಂದೆ ಯುದ್ಧದಲ್ಲಿ ಕ್ಷಿಪಣಿ ಮತ್ತು ಡ್ರೋನ್‌ಗಳ ಬಳಕೆಯ ಸಾಧ್ಯತೆ ಹೆಚ್ಚಲಿದೆ. ಇರಾನ್‌ನ ಕ್ಲಸ್ಟರ್ ಕ್ಷಿಪಣಿಗಳು ಮತ್ತು ಹೌತಿಗಳು ಪ್ರಯೋಗಿಸಿದ ಕ್ಷಿಪಣಿಗಳು ಇಸ್ರೇಲ್‌ನ ಆಯರ್ನ್ ಡೋಮ್ ಕವಚವನ್ನು ಭೇದಿಸಲು ಸಫಲವಾಗಿದ್ದವು. ಭವಿಷ್ಯದ ಸಮರಗಳಲ್ಲಿ ಡ್ರೋನ್‌ಗಳು ಮತ್ತು ಕ್ಷಿಪಣಿಗಳ ಪಾತ್ರ ಇನ್ನಷ್ಟು ವಿಸ್ತರಣೆಯಾಗಬಹುದು. ಹೌತಿಯಂತೆ ಇನ್ನಿತರ ಭಯೋತ್ಪಾದಕ ಸಂಘಟನೆಗಳೂ ಇಂತಹ ಡ್ರೋನ್‌ಗಳನ್ನು ಹೊಂದಲಾರಂಭಿಸಿದರೆ ಅದು ಸೃಷ್ಟಿಸುವ ಅಪಾಯ ಅನೂಹ್ಯವಾದೀತು.

ಈಗಿನ ಸಮರ ಬಾಹ್ಯಾಕಾಶಕ್ಕೂ ವ್ಯಾಪಿಸಿದೆ. ಅಮೆರಿಕದ ಬಾಹ್ಯಾಕಾಶದ ಉಪಗ್ರಹಗಳು ಮತ್ತು ಸೈಬರ್ ಕಮಾಂಡ್‌ಗಳು ಇರಾನಿನ ಉಪಗ್ರಹ ಜಾಲವನ್ನು ನಾಶಪಡಿಸಲು ಸಫಲವಾಗಿದ್ದವು. ಇರಾನ್‌ನ ಕ್ಷಿಪಣಿ ಲಾಂಚರ್‌ಗಳನ್ನು ಪತ್ತೆ ಹಚ್ಚುವಲ್ಲಿ ಅಮೆರಿಕದ ಉಪಗ್ರಹಗಳು ನೆರವು ನೀಡಿದ್ದವು. ವಾಣಿಜ್ಯಿಕ ಉಪಗ್ರಹಗಳ ಮಾಹಿತಿಗಳನ್ನು ಕೂಡಾ ಈ ಯುದ್ಧದಲ್ಲಿ ಬಳಸಲಾಗಿದೆ. ಇರಾನ್ ಮಾತ್ರ ಈ ವಿಷಯದಲ್ಲಿ ರಷ್ಯಾ ಮತ್ತು ಚೀನಾದ ಉಪಗ್ರಹ ಚಿತ್ರಗಳನ್ನು ಅವಲಂಬಿಸಬೇಕಾಗಿ ಬಂದಿತು. ಅಮೆರಿಕದ ನಿರ್ದಿಷ್ಟ ನೆಲೆಗಳ ಮೇಲೆ ದಾಳಿ ನಡೆಸಲು ಅದಕ್ಕೆ ಈ ಉಪಗ್ರಹ ಚಿತ್ರಗಳು ನೆರವಿಗೆ ಬಂತು. ಮುಂಬರುವ ಯುದ್ಧಗಳಲ್ಲಿ ಬಾಹ್ಯಾಕಾಶ ಕೂಡಾ ರಣಾಂಗಣವಾಗಿ ಪರಿವರ್ತಿಸಲ್ಪಡುವುದು ಸ್ಪಷ್ಟವಾಗಿದೆ.

ನರೇಟಿವ್ ಸಮರ

ಯುದ್ಧದ ಸಮಯದಲ್ಲಿ ಸರಿಯಾದ ಸಂಕಥನ(ನರೇಟಿವ್)ವನ್ನು ಪ್ರಸಾರಿಸುವುದು ಕೂಡಾ ಮುಖ್ಯವಾಗಿದೆ. ಇಂತಹ ಸಂಕಥನಗಳು ಜಾಗತಿಕ ಅಭಿಪ್ರಾಯವನ್ನು ರೂಪಿಸುತ್ತವೆ. ಬಹಳಷ್ಟು ಮಾಧ್ಯಮಗಳು ಪಾಶ್ಚಿಮಾತ್ಯರಿಂದ ನಿಯಂತ್ರಿಸಲ್ಪಡುತ್ತಿವೆ. ಆದರೆ ಸಾಮಾಜಿಕ ಮಾಧ್ಯಮ ಮುಕ್ತವಾಗಿದೆ. ಇರಾನ್‌ನಿಂದ ತಮಗಾದ ಹಾನಿಯು ಜಗತ್ತಿಗೆ ತಿಳಿಯದಂತೆ ಅಮೆರಿಕ ಮತ್ತು ಗಲ್ಫ್ ರಾಷ್ಟ್ರಗಳು ಮಾಧ್ಯಮಗಳ ಮೇಲೆ ನಿರ್ಬಂಧ ಹಾಕಿದರೂ ಇರಾನ್ ಸಾಮಾಜಿಕ ಮಾಧ್ಯಮಗಳ ಮೂಲಕ ಇದನ್ನು ಹರಡುವಲ್ಲಿ ಸಫಲವಾಯಿತು. ಸಾಮಾನ್ಯ ಜನರು ಯಾವಾಗಲೂ ದುರ್ಬಲರ ಪರವಾಗಿ ಅನುಕಂಪ ಹೊಂದಿರುತ್ತಾರೆ. ಉಕ್ರೇನ್ ಸಮರದಲ್ಲಿ ಜನರು ಉಕ್ರೇನ್‌ನ್ನು ಬೆಂಬಲಿಸುತ್ತಿದ್ದರು. ಇದೀಗ ಜನರ ಅನುಕಂಪ ಇರಾನ್‌ನ ಪರವಾಗಿದೆ. ಹಾಗಾಗಿ ನರೇಟಿವ್‌ಗಳ ಸಮರದಲ್ಲಿ ಅಮೆರಿಕಕ್ಕೆ ಹಿನ್ನಡೆಯಾಗಿರುವುದು ಸ್ಪಷ್ಟವಾಗಿದೆ. ಅದಕ್ಕೆ ಟ್ರಂಪ್‌ರ ಎಡಬಿಡಂಗಿ ವರ್ತನೆ ಮತ್ತು ಬಡಾಯಿ ಕೊಚ್ಚಿಕೊಳ್ಳುವಿಕೆ ಕೂಡಾ ಕಾರಣವಾಗಿದೆ. ಸ್ವತಹ ಅಮೆರಿಕದಲ್ಲೇ ಟ್ರಂಪ್‌ಗೆ ಬೆಂಬಲ ಕ್ಷೀಣಿಸುತ್ತಿದೆ.

ಈಗ ಏರ್ಪಟ್ಟಿರುವ ಕದನ ವಿರಾಮ ಮುರಿಯುವುದೇ ಮುಂದುವರಿಯುವುದೇ ಸ್ಪಷ್ಟವಾಗಿಲ್ಲ. ತಮ್ಮಲ್ಲಿ ಇನ್ನೂ ರಹಸ್ಯ ಹಾಗೂ ಮಾರಕ ಅಸ್ತ್ರಗಳಿವೆಯೆಂದು ಅತ್ತ ಅಮೆರಿಕವೂ ಇತ್ತ ಇರಾನ್ ಕೂಡಾ ಹೇಳಿಕೊಂಡಿವೆ. ಅವು ಎಂತಹ ಪರಿಣಾಮ ಬೀರಬಹುದೆಂಬುದು ನಮಗಂತೂ ತಿಳಿದಿಲ್ಲ. ಪರಮಾಣ ಬಾಂಬುಗಳನ್ನು ಪ್ರಯೋಗಿಸುವ ಬೆದರಿಕೆಯನ್ನು ಇನ್ನೂ ಯಾವುದೇ ದೇಶ ಒಡ್ಡಿಲ್ಲ. ಅದು ಸಮಾಧಾನಕರವಾದರೂ ಈಗಿನ ಸಾಂಪ್ರದಾಯಿಕ ಅಸ್ತ್ರಗಳೇ ತಂತ್ರಜ್ಞಾನವನ್ನು ಮೇಳೈಸಿಕೊಂಡು ಹೆಚ್ಚು ವಿನಾಶ ಸೃಷ್ಟಿಸುತ್ತಿರುವುದಂತೂ ಹೌದು.

ಭವಿಷ್ಯದಲ್ಲಿ ಯುದ್ಧವೆದುರಿಸಲು ಯಾವ ರೀತಿ ಸಿದ್ಧತೆ ನಡೆಸಬೇಕಾಗುತ್ತದೆ ಎಂಬುದನ್ನು ಈಗ ನಡೆಯುತ್ತಿರುವ ಸಮರ ತೋರಿಸಿ ಕೊಟ್ಟಿದೆ. ಭಾರತವು ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸುತ್ತಿರುವುದು, ಭವಿಷ್ಯದ ಯುದ್ಧವೆದುರಿಸಲು ಸೂಕ್ತ ಸಿದ್ಧತೆ ನಡೆಸಿಕೊಳ್ಳುವುದು ಸಹಜವೇ ಆಗಿದೆ.

ಸೈನಿಕನನ್ನು ಪತ್ತೆ ಹಚ್ಚಿದ 'ಘೋಸ್ಟ್ ಮರ್ಮರ್'

ಇತ್ತೀಚೆಗೆ ಅಮೆರಿಕದ ಯುದ್ಧ ವಿಮಾನವೊಂದು ಇರಾನಿನ ದಾಳಿಗೀಡಾಗಿ ಪತನಗೊಂಡಿತು. ಪೈಲಟ್‌ಗಳು ಸೀಟಿನ ಸಮೇತ ಎಜೆಕ್ಟ್ ಆದರು. ಒಬ್ಬ ಪೈಲಟ್ ಸುರಕ್ಷಿತವಾಗಿ ಅಮೆರಿಕದ ಕೈಗೆ ಸಿಕ್ಕಿದನಾದರೂ ಇನ್ನೊಬ್ಬ ಮಾತ್ರ ಶತ್ರುದೇಶದಲ್ಲಿ ಬಿದ್ದ. ಆತನನ್ನು ಪತ್ತೆ ಹಚ್ಚಿ ಕರೆತರಲು ಅಮೆರಿಕವು ಹರಸಾಹಸವನ್ನೆ ನಡೆಸಿತು. ಕೋಟ್ಯಂತರ ಡಾಲರ್ ವ್ಯಯಿಸಿತು. ದೊಡ್ಡ ಸೈನ್ಯದ ತಂಡವನ್ನು, ವಾಯುಪಡೆಯನ್ನು ಬಳಸಿಕೊಂಡಿತು.

ಆದರೆ ಇರಾನಿನ ಗುಡ್ಡ ಪ್ರದೇಶಗಳಲ್ಲಿ ಇರುವ ಅಮೆರಿಕನ್ ಸೈನಿಕನ ಇರವನ್ನು ನಿಖರವಾಗಿ ಪತ್ತೆ ಹಚ್ಚಲು ನೆರವಾದುದು ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎ ಅಭಿವೃದ್ಧಿಪಡಿಸಿದ 'ಘೋಸ್ಟ್ ಮರ್ಮರ್' ಎಂಬ ತಂತ್ರಜ್ಞಾನ. ಇದು ಅಮೆರಿಕನ್ ಸೈನಿಕನ ಎದೆಬಡಿತವನ್ನು ಪತ್ತೆ ಹಚ್ಚಿ ಆತ ಇಂತಹುದೇ ಜಾಗದಲ್ಲಿ ಇದ್ದಾನೆಂದು ನಿಖರವಾಗಿ ಕಂಡುಹಿಡಿಯಿತು. ಮೈಲು ದೂರದಿಂದಲೇ ಮಾನವನ ಹೃದಯ ಬಡಿತವನ್ನು ಪತ್ತೆ ಹಚ್ಚಬಲ್ಲ ಅತ್ಯಾಧುನಿಕ ಸಾಧನವದು. ಮನುಷ್ಯನ ಎದೆಬಡಿತದ ಎಲೆಕ್ಟ್ರೋ ಮ್ಯಾಗ್ನೆಟಿಕ್ ಸಂದೇಶವನ್ನು ಪತ್ತೆ ಹಚ್ಚುತ್ತದೆ ಇದು.




ಈ ಸಾಧನವು ವಾತಾವರಣದ ಇತರ ಸದ್ದುಗಳನ್ನೆಲ್ಲ ಸ್ತಬ್ಧಗೊಳಿಸಿ, ಕೇವಲ ಮನುಷ್ಯನ ಎದೆಬಡಿತವನ್ನು ಮಾತ್ರ ಆಲಿಸುವ ಸಾಮರ್ಥ್ಯ ಪಡೆದಿದೆ. ಈ ಸಾಧನವನ್ನು ಅಮೆರಿಕದ ಲಾಕ್‌ಹೀಡ್ ಮಾರ್ಟಿನ್ಸ್ ಕಂಪೆನಿಯ ಅತ್ಯಂತ ರಹಸ್ಯ ಸಂಶೋಧನಾ ಘಟಕವಾದ 'ಸ್ಕಂಕ್ ವರ್ಕ್ಸ್' ಆವಿಷ್ಕರಿಸಿದ್ದು, ಅದರ ಬಳಕೆ ಇದೇ ಮೊದಲನೆಯದು.

ಎದೆಬಡಿತವನ್ನು 'ಮರ್ಮರ್' (ಗುನುಗು) ಎಂದು ಕರೆಯುತ್ತಾರೆ. ಘೋಸ್ಟ್ ಅಂದರೆ ಒಂದರ್ಥದಲ್ಲಿ ಎಲ್ಲರ ಕಣ್ಣಲ್ಲಿ ಮಾಯವಾದವನು ಎಂದರ್ಥ. ಅದಕ್ಕಾಗಿಯೇ ಇದಕ್ಕೆ ಈ ಹೆಸರನ್ನು ಇಡಲಾಗಿದೆಯಂತೆ.

'ಡ್ರೋನ್ ಹಿಂಡು'ಗಳೇ ದಾಳಿಗೆ ಬಂದರೆ...

ಕ್ಷಿಪಣಿಗಳು, ರಾಕೆಟ್‌ಗಳಿಗಿಂತಲೂ ಹೆಚ್ಚು ಈಗ ಡ್ರೋನ್‌ಗಳನ್ನು ವೈಮಾನಿಕ ದಾಳಿಗೆ ಬಳಸಲಾಗುತ್ತಿರುವುದು ಇತ್ತೀಚಿನ ಬೆಳವಣಿಗೆ. ಡ್ರೋನ್‌ಗಳನ್ನು ಹಿಂಡು ಹಿಂಡಾಗಿ (drone swarms) ದಾಳಿಗೆ ಬಳಸುವುದು ಈಗಿನ ಹೊಸ ತಂತ್ರ. ಕ್ಷಿಪಣಿ ದಾಳಿ ತಡೆಯಬಲ್ಲ ವಾಯು ರಕ್ಷಣಾ ಕವಚವನ್ನು ಭೇದಿಸಲು ಈ ತಂತ್ರ ಈಗ ಬಳಸಲಾಗುತ್ತಿದೆ.

ಸುಮಾರು 1000 ಡ್ರೋನ್‌ಗಳು ಅಥವಾ 10,000 ಡ್ರೋನ್‌ಗಳು ಏಕಕಾಲದಲ್ಲಿ ದಾಳಿಯೆಸಗಲು ಬಂದರೆ ಹೇಗಿರಬಹುದು ಯೋಚಿಸಿ. ವಾಯು ರಕ್ಷಣಾ ಕವಚವು ಶೇ.90ರಷ್ಟು ಡ್ರೋನ್‌ಗಳನ್ನು ಹೊಡೆದು ಹಾಕಿದರೂ ಉಳಿದ ಶೇ.10ರಷ್ಟು ಡ್ರೋನ್‌ಗಳೇ ಸಾಕಷ್ಟು ಹಾನಿ ಮಾಡಬಲ್ಲವು. ಅದರಲ್ಲೂ ತಾವಾಗಿ ಸ್ಫೋಟಿಸಬಲ್ಲ ಕ್ಯಾಮಿಕಾಸಿ ಡ್ರೋನ್‌ಗಳಾದರೆ ಇನ್ನಷ್ಟು ಹೆಚ್ಚಿನ ಹಾನಿಯೆಸಗಬಲ್ಲವು.




ಈ ಡ್ರೋನ್ ನಿರ್ಮಾಣಕ್ಕಾಗುವ ವೆಚ್ಚವೂ ಕಡಿಮೆಯೆ. ಕಳೆದ ವರ್ಷ ಉಕ್ರೇನ್ ಇಂತಹ ಕಡಿಮೆ ವೆಚ್ಚದ 117 ಡ್ರೋನ್‌ಗಳನ್ನು ಕಳಿಸಿ ರಷ್ಯಾದ ಕೆಲವಾರು ವಾಯುನೆಲೆಗಳನ್ನು ನಾಶಪಡಿಸಿತ್ತು.

ಜಾಮಿಂಗ್ ವ್ಯವಸ್ಥೆಯ ಮೂಲಕ ಡ್ರೋನ್‌ಗಳು ಕಾರ್ಯವೆಸಗದಂತೆ ಮಾಡುವ ತಂತ್ರಜ್ಞಾನ ಅಭಿವೃದ್ಧಿ ಪಡಿಸಲಾಗುತ್ತಿದೆಯಾದರೂ ಇದೇವೇಳೆ, ಇಂತಹ ಸಂದರ್ಭದಲ್ಲಿ ಡ್ರೋನ್‌ಗಳು ಸ್ವಯಂ ದುರಸ್ತಿ ಮಾಡಿಕೊಂಡು ತಾವೇ ಕಾರ್ಯವೆಸಗುವಂತೆ ಮಾಡುವ ರೀತಿಯಲ್ಲಿ ಡ್ರೋನ್‌ಗಳಲ್ಲೂ ಸುಧಾರಣೆ ಮಾಡಲಾಗುತ್ತಿದೆ.

ಮೀನಾಬ್ ಶಾಲೆ ಮೇಲೆ ನಡೆದ ದಾಳಿಯಲ್ಲಿ ಹತ್ಯೆಯಾದ ಮಕ್ಕಳಿಗೆ ಗೌರವ ನೀಡಿದ ಇರಾನ್

ಸಂತ್ರಸ್ತರ ಚಿತ್ರಗಳನ್ನು ಹೊತ್ತ ಇರಾನ್ ನಿಯೋಗ



ಇಸ್ಲಾಮಾಬಾದ್: ಅಮೆರಿಕದೊಂದಿಗೆ ಶಾಂತಿ ಮಾತುಕತೆ ನಡೆಸಲು ಪಾಕಿಸ್ತಾನಕ್ಕೆ ಪ್ರಯಾಣಿಸುತ್ತಿದ್ದ ಇರಾನ್ ನಿಯೋಗ ಶನಿವಾರ ತನ್ನ ವಿಮಾನದಲ್ಲಿ ಮೀನಾಬ್ ಶಾಲೆಯ ಮೇಲಿನ ದಾಳಿಗೆ ಬಲಿಯಾದವರ ಭಾವಚಿತ್ರಗಳು ಮತ್ತು ವೈಯಕ್ತಿಕ ವಸ್ತುಗಳನ್ನು ಪ್ರದರ್ಶಿಸಿತು. ಈ ಮೂಲಕ ಮಾತುಕತೆ ಆರಂಭಕ್ಕೂ ಮೊದಲೇ ಅಮೆರಿಕನ್ನರಿಗೆ ಪ್ರಬಲ ಸಂದೇಶ ರವಾನಿಸುವ ಪ್ರಯತ್ನ ಮಾಡಿದೆ.

ಸಾಂಕೇತಿಕ ಪ್ರಯಾಣ: ರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಗರ್ ಗಾಲಿಬಾಫ್ ವಿಮಾನದ ಒಳಗಿನ ಚಿತ್ರಗಳನ್ನು ಹಂಚಿಕೊಂಡಿದ್ದು, ನಿಯೋಗ ಆ ವಿಮಾನಕ್ಕೆ ''ಮೀನಾಬ್ 168'' ಎಂದು ಹೆಸರಿಸಿದೆ. ಫೆ.28 ರಂದು ಮೀನಾಬ್‌ನ ಶಜರೆ ತಯ್ಯೆಬೆ ಪ್ರಾಥಮಿಕ ಶಾಲೆಯ ಮೇಲೆ ನಡೆದ ದಾಳಿಯಲ್ಲಿ ಮೃತಪಟ್ಟ ಮಕ್ಕಳು ಮತ್ತು ಸಿಬ್ಬಂದಿಗೆ ಸೇರಿದ ಭಾವಚಿತ್ರಗಳು, ರಕ್ತಸಿಕ್ತ ಶಾಲಾ ಬ್ಯಾಗ್‌ಗಳು, ಬೂಟುಗಳು ಮತ್ತು ಬಿಳಿ ಹೂವುಗಳನ್ನು ವಿಮಾನದ ಸೀಟುಗಳಲ್ಲಿ ಇರಿಸಲಾಗಿತ್ತು. ಗಾಲಿಬಾಫ್ ಈ ಸಂತ್ರಸ್ತರನ್ನು ತಮ್ಮ ಈ ಪ್ರಯಾಣದ ''ಸಹ ಪ್ರಯಾಣಿಕರು'' ಎಂದು ಕರೆದಿದ್ದಾರೆ.

ರಾಜತಾಂತ್ರಿಕ ನಿಲುವು: ಪಾಕಿಸ್ತಾನಕ್ಕೆ ಆಗಮಿಸಿದ ನಂತರ ಮಾತನಾಡಿದ ಗಾಲಿಬಾಫ್, ಇರಾನ್ ಉತ್ತಮ ಉದ್ದೇಶಗಳೊಂದಿಗೆ ಮಾತುಕತೆಗೆ ಪ್ರವೇಶಿಸಿದೆ, ಆದರೆ ನಮಗೆ ಯಾರ ಮೇಲೂ ನಂಬಿಕೆಯಿಲ್ಲ ಎಂದು ತಿಳಿಸಿದರು. ಅಮೆರಿಕದೊಂದಿಗಿನ ಮಾತುಕತೆಗಳಲ್ಲಿನ ಹಿಂದಿನ ವೈಫಲ್ಯಗಳು ಮತ್ತು ಒಪ್ಪಂದದ ಉಲ್ಲಂಘನೆಗಳಿಂದ ತಾವು ಅವರ ಬಗ್ಗೆ ನಂಬಿಕೆ ಕಳೆದುಕೊಂಡಿರುವುದಾಗಿ ಹೇಳಿದ್ದಾರೆ. ಇರಾನ್ ನಿಯೋಗದಲ್ಲಿ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಮತ್ತು ಕೇಂದ್ರ ಬ್ಯಾಂಕ್ ಗವರ್ನರ್ ಅಬ್ದೋಲ್ನಾಸರ್ ಹೆಮ್ಮತಿ ಕೂಡ ಇದ್ದಾರೆ.

ಸಂಘರ್ಷದ ಹಿನ್ನೆಲೆ: ಕನಿಷ್ಠ 165 ಜನರನ್ನು ಬಲಿ ಪಡೆದ ಮತ್ತು 100 ಕ್ಕೂ ಹೆಚ್ಚು ಜನರನ್ನು ಗಾಯಗೊಳಿಸಿದ ಮೀನಾಬ್ ದಾಳಿ, ಇರಾನ್‌ನ ವಾದಕ್ಕೆ ಪ್ರಮುಖ ಕೇಂದ್ರಬಿಂದುವಾಗಿದೆ. ಈ ದಾಳಿಯನ್ನು ಅಮೆರಿಕ-ಇಸ್ರೇಲ್ ಪಡೆಗಳು ನಡೆಸಿವೆ ಎಂದು ಇರಾನ್ ಆರೋಪಿಸಿದರೆ, ಅಮೆರಿಕ ಈ ವಾದವನ್ನು ತಿರಸ್ಕರಿಸಿದೆ. ಇರಾನ್‌ನ ಯುದ್ಧಸಾಮಗ್ರಿಗಳೇ ಇದಕ್ಕೆ ಕಾರಣ, ಎಂದು ಯುಎಸ್ ಹೇಳಿಕೊಂಡಿದೆ. ಇಸ್ಲಾಮಾಬಾದ್ ಮಾತುಕತೆಗಳು ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಜಾರಿಗೆ ಬಂದಿರುವ ಎರಡು ವಾರಗಳ ಕದನ ವಿರಾಮದ ಸಮಯದಲ್ಲಿ ನಡೆಯುತ್ತಿವೆ.

ಚೇತರಿಸುತ್ತಿರುವ ಇರಾನ್ ಸರ್ವೋಚ್ಚ ನಾಯಕ ಮೊಜ್ತಬಾ?


ಟೆಹ್ರಾನ್: ಯುದ್ಧದ ಆರಂಭದ ದಿನಗಳಲ್ಲೇ ಇರಾನ್‌ನ ಈಗಿನ ಸರ್ವೋಚ್ಚ ನಾಯಕ ಮತ್ತು ಆಯತ್ತೊಲ್ಲಾ ಅಲಿ ಖಮೇನಿ ಅವರ ಪುತ್ರ ಮೊಜ್ತಬಾ ಖಮೇನಿಯವರ ಮುಖ ಮತ್ತು ಕಾಲಿಗೆ ಗಂಭೀರ ಗಾಯಗಳಾಗಿದ್ದವು. ಆದರಿಂದ ಚೇತರಿಸಿಕೊಳ್ಳದ ಹಿನ್ನೆಲೆ ಮೊಜ್ತಬಾ ಅವರನ್ನು ನೂತನ ಸರ್ವೋಚ್ಚ ನಾಯಕನೆಂದು ಘೋಷಿಸಿದರೂ ಅವರು ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ. ಮೊಜ್ತಬಾ ಅವರ ಆರೋಗ್ಯ ಸ್ಥಿತಿ ಹೇಗಿದೆ? ಮತ್ತು ಅವರು ಎಲ್ಲಿದ್ದಾರೆಂಬ ಪ್ರಶ್ನೆಗಳು ಹೆಚ್ಚಾಗುತ್ತಿವೆ. ತಂದೆಯನ್ನು ಬಲಿ ತೆಗೆದುಕೊಂಡಿದ್ದ ಅಮೆರಿಕದ ಬಾಂಬ್ ದಾಳಿಯಿಂದ ಪುತ್ರ ಮೊಜ್ತಬಾಗೂ ಗಂಭೀರ ಗಾಯವನ್ನು ಉಂಟುಮಾಡಿದೆ ಎನ್ನಲಾಗುತ್ತಿದೆ.



ಮೊಜ್ತಬಾರ ಆಂತರಿಕ ಮೂಲಗಳ ಪ್ರಕಾರ, ತಂದೆ ಅಲಿ ಖಮೇನಿ ಮೃತಪಟ್ಟಿದ್ದ ವೈಮಾನಿಕ ದಾಳಿಯಲ್ಲಾದ ಗಂಭೀರ ಗಾಯಗಳಿಂದ ಇನ್ನೂ ಚೇತರಿಸಿಕೊಳ್ಳುತ್ತಿದ್ದಾರೆ. ಟೆಹ್ರಾನ್‌ನಲ್ಲಿನ ಸರ್ವೋಚ್ಚ ನಾಯಕರ ನಿವಾಸದ ಮೇಲೆ ಅಮೆರಿಕ ಬಾಂಬ್ ದಾಳಿ ನಡೆಸಿದ್ದಾಗ, ಮೊಜ್ತಬಾ ಮುಖ ಹಾಗೂ ಒಂದು ಅಥವಾ ಎರಡೂ ಕಾಲುಗಳಿಗೆ ಗಂಭೀರ ಗಾಯಗಳಾಗಿವೆ. ದಾಳಿ ಪರಿಣಾಮ ಅವರ ಮುಖ ವಿಕೃತಗೊಂಡಿದೆ. ಆದಾಗ್ಯೂ, 56 ವರ್ಷದ ಮೊಜ್ತಬಾ ಮಾನಸಿಕವಾಗಿ ಚುರುಕಾಗಿದ್ದು, ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ ಎಂದು ತಿಳಿದುಬಂದಿದೆ.

ತಾತ್ಕಾಲಿಕ ಕದನ ವಿರಾಮ ಘೋಷಣೆ ಬಳಿಕ ಬಂದ ಮೊದಲ ಎಲ್‌ಪಿಜಿ ಹಡಗು

ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಮಧ್ಯೆ ಎಲ್‌ಪಿಜಿ ಹೊತ್ತ ಮತ್ತೊಂದು ಭಾರತದ ಹಡಗು, ಜಾಗ್ ವಿಕ್ರಮ್, ಹಾರ್ಮುಜ್ ಜಲಸಂಧಿಯನ್ನು ದಾಟಿದೆ. ಅಮೆರಿಕ ಮತ್ತು ಇರಾನ್ ನಡುವೆ 2 ವಾರಗಳ ತಾತ್ಕಾಲಿಕ ಕದನ ವಿರಾಮ ಘೋಷಿಸಿದ ಬಳಿಕ ಹಾರ್ಮುಜ್ ದಾಟಿದ ಮೊದಲ ಭಾರತೀಯ ಹಡಗು ಎಂದು ಹಡಗು ಇದಾಗಿದೆ. ಶುಕ್ರವಾರ ರಾತ್ರಿ ಮತ್ತು ಶನಿವಾರ ಬೆಳಗ್ಗೆ ನಡುವೆ ಎಲ್ ಪಿಜಿ ಹೊತ್ತ ಭಾರತದ ಕಾರ್ಯತಂತ್ರದ ಜಲಮಾರ್ಗದ ಮೂಲಕ ಚಲಿಸಿತು ಮತ್ತು ಶನಿವಾರ ಮಧ್ಯಾಹ್ನ ಜಲಸಂಧಿಯ ಪೂರ್ವಕ್ಕೆ ಒಮನ್ ಕೊಲ್ಲಿಯಲ್ಲಿದ್ದು, ಪೂರ್ವಕ್ಕೆ ಸಾಗುತ್ತಿದೆ.



ಹಾರ್ಮುಜ್ ದಾಟಿದ 2 ಅಮೆರಿಕ ಯುದ್ಧ ನೌಕೆ

ಯುದ್ಧ ಶಾಂತಿ ಮಾತುಕತೆ ಮಧ್ಯೆ ಎರಡು ಅಮೆರಿಕ ಯುದ್ಧನೌಕೆಗಳು ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಿವೆ ಎಂದು ವರದಿಯಾಗಿದೆ. ಇದು ಇರಾನ್‌ನೊಂದಿಗಿನ ಯುದ್ಧ ಪ್ರಾರಂಭವಾದ ನಂತರದ ಮೊದಲ ಸಾರಿಗೆಯಾಗಿದೆ. ಅಮೆರಿಕದ ನೌಕಾಪಡೆಯ ಮಾರ್ಗದರ್ಶಿ ಕ್ಷಿಪಣಿ ವಿಧ್ವಂಸಕಗಳು ಜಲಸಂಧಿಯ ಮೂಲಕ ಹಾದು ಹೋದವು. ಯಾವುದೇ ಸಮಸ್ಯೆಗಳ ಬಗ್ಗೆ ವರದಿಯಾಗಿಲ್ಲ ಎಂದು ಅಮೆರಿಕದ ಮೂವರು ಅಧಿಕಾರಿಗಳನ್ನು ಉಲ್ಲೇಖಿಸಿ ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ. ಈ ಕಾರ್ಯಾಚರಣೆಯನ್ನು ಟೆಹ್ರಾನ್ನ ಅಧಿಕಾರಿಗಳೊಂದಿಗೆ ಸಮನ್ವಯಗೊಳಿಸಲಾಗಿಲ್ಲ ಎಂದು ಅಮೆರಿಕದ ಮಾಧ್ಯಮ ಸಂಸ್ಥೆ ಆಕ್ಸಿಯೋಸ್ ಹೇಳಿದೆ.



ಹಾರ್ಮುಜ್ ಜಲಸಂಧಿ ಶೀಘ್ರವೇ ಮುಕ್ತ: ಟ್ರಂಪ್

ವಾಷಿಂಗ್ಟನ್: ಪಶ್ಚಿಮ ಏಷ್ಯಾ ಯುದ್ಧವನ್ನು ಕೊನೆಗಾಣಿಸುವ ನಿಟ್ಟಿನಲ್ಲಿ ಇರಾನ್ ಜೊತೆಗಿನ ಶಾಂತಿ ಮಾತುಕತೆಗಳು ಪಾಕಿಸ್ತಾನದಲ್ಲಿ ಆರಂಭವಾಗಿವೆ, ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಇದೇ ವೇಳೆ ಹಾರ್ಮುಜ್ ಜಲಸಂಧಿಯಲ್ಲಿ ಶೀಘ್ರದಲ್ಲೇ ಸಂಚಾರ ಸಹಜವಾಗಲಿದೆ, ಎಂದು ಅವರು ಪ್ರತಿಪಾದಿಸಿದ್ದಾರೆ.

ಹಾರ್ಮುಜ್ ಜಲಸಂಧಿ ಮತ್ತು ಇಂಧನ ಪ್ರಭಾವ: ಇರಾನ್‌ನಿಂದ ನಿರ್ಬಂಧಿಸಲ್ಪಟ್ಟಿರುವ ಹಾರ್ಮುಜ್ ಜಲಸಂಧಿಗೆ ಪರ್ಯಾಯ ಮಾರ್ಗಗಳನ್ನು ಜಾಗತಿಕ ತೈಲ ಸಾಗಣೆ ಸಂಸ್ಥೆಗಳು ಈಗಾಗಲೇ ಕಂಡು ಕೊಳ್ಳುತ್ತಿವೆ ಎಂದು ಅಧ್ಯಕ್ಷ ಟ್ರಂಪ್ ತಿಳಿಸಿದ್ದಾರೆ. ವಿಶ್ವದ ಕಚ್ಚಾ ತೈಲದ ಐದನೇ ಒಂದು ಭಾಗವು ಈ ಕಾರಿಡಾರ್ ಮೂಲಕ ಹಾದುಹೋಗುತ್ತದೆಯಾದರೂ, ಹಲವು ರಾಷ್ಟ್ರಗಳು ಇತರ ಇಂಧನ ಆಯ್ಕೆಗಳನ್ನು ಅನ್ವೇಷಿಸುತ್ತಿವೆ. ಅಮೆರಿಕದ ಬಳಿ ಸಾಕಷ್ಟು ತೈಲ ದಾಸ್ತಾನು ಇದ್ದು, ಅನೇಕ ಖಾಲಿ ಟ್ಯಾಂಕರ್‌ಗಳು ತೈಲವನ್ನು ತುಂಬಿಸಿಕೊಳ್ಳಲು ಅಮೆರಿಕದತ್ತ ಬರುತ್ತಿವೆ ಎಂದಿದ್ದಾರೆ.



ರಾಜತಾಂತ್ರಿಕ ಎಚ್ಚರಿಕೆ

ಇಸ್ಲಾಮಾಬಾದ್ ಮಾತುಕತೆಗಳು ಫಲ ನೀಡದಿದ್ದರೆ ಅಮೆರಿಕ ತನ್ನ ಹಾದಿ ಬದಲಿಸಲು ಸಿದ್ಧವಾಗಿದೆ, ಎಂದು ಟ್ರಂಪ್ ಎಚ್ಚರಿಸಿದ್ದಾರೆ. ಇರಾನ್ ಅನ್ನು ವಿಫಲ ರಾಷ್ಟ್ರ ಎಂದು ಕರೆದ ಅವರು, ಜಲಸಂಧಿಯ ಮುಕ್ತ ಸಂಚಾರದ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಉಭಯ ದೇಶಗಳು ರಚನಾತ್ಮಕವಾಗಿ ತೊಡಗಿಸಿಕೊಳ್ಳಬೇಕೆಂದು ಪಾಕಿಸ್ತಾನದ ವಿದೇಶಾಂಗ ಸಚಿವರು ಆಗ್ರಹಿಸಿದ್ದಾರೆ. ಅಂತರಾಷ್ಟ್ರೀಯ ಇಂಧನ ಮಾರುಕಟ್ಟೆಗಳು ಮತ್ತು ಜಾಗತಿಕ ಹಡಗು ಸಾಗಣೆ ಮಾರ್ಗಗಳ ಮೇಲೆ ಯುದ್ಧ ಪ್ರಭಾವ ಬೀರಿದ ಹಿನ್ನೆಲೆಯಲ್ಲಿ ಈ ಚರ್ಚೆಗಳು ಮಹತ್ವ ಪಡೆದಿವೆ.

ಇರಾನ್‌ಗೆ ಶಸ್ತ್ರಾಸ್ತ್ರ ಕಳುಹಿಸಲು ಚೀನಾ ಸಿದ್ಧತೆ

- ಅಮೆರಿಕ ಗುಪ್ತಚರ ಸಂಸ್ಥೆಯಿಂದ ವರದಿ
- ಯುದ್ಧ ಸ್ಥಗಿತ ಅನಿಶ್ಚಿತ; ಮಧ್ಯಪ್ರಾಚ್ಯ ಉದ್ವಿಗ್ನತೆ ತೀವ್ರಗೊಳ್ಳುವ ಭೀತಿ
- ಶತ್ರು ವಿಮಾನ ನಿರೋಧಕ ಕ್ಷಿಪಣಿ

ವಾಷಿಂಗ್ಟನ್: ಅಮೆರಿಕ ಮತ್ತು ಇರಾನ್ ನಡುವಿನ ಎರಡು ವಾರಗಳ ಕದನ ವಿರಾಮ ಒಪ್ಪಂದ ಅತ್ಯಂತ ದುರ್ಬಲ ಸ್ಥಿತಿಯಲ್ಲಿದ್ದು, ಸಂಘರ್ಷ ಮತ್ತಷ್ಟು ಉಲ್ಬಣಗೊಳ್ಳುವ ಸಾಧ್ಯತೆ ತಳ್ಳಿಹಾಕುವಂತಿಲ್ಲ. ಈ ಮಧ್ಯೆ, ಚೀನಾ ಶೀಘ್ರದಲ್ಲೇ ಇರಾನ್‌ಗೆ ಹೊಸ ವಾಯು ರಕ್ಷಣಾ ವ್ಯವಸ್ಥೆಗಳನ್ನು ಕಳುಹಿಸಲಿದೆ ಎಂದು ಅಮೆರಿಕದ ಗುಪ್ತಚರ ಇಲಾಖೆ ತಿಳಿಸಿದ್ದು, ಸಿಎನ್‌ಎನ್ ವರದಿ ಮಾಡಿದೆ.

ಚೀನಾ ಇರಾನ್‌ಗೆ ಮ್ಯಾನ್‌ಪ್ಯಾಡ್ ಎಂದು ಕರೆಯಲ್ಪಡುವ ಭುಜದ ಮೇಲೆ ಇರಿಸಿ ಹಾರಿಸಬಹುದಾದ ಶತ್ರು ವಿಮಾನ ನಿರೋಧಕ ಕ್ಷಿಪಣಿ ವ್ಯವಸ್ಥೆಗಳನ್ನು ಕಳಿಸಲು ಸಿದ್ಧತೆ ನಡೆಸಿದೆ ಎಂದು ಹೇಳಲಾಗಿದೆ. ಇದು ಮುಂಬರುವ ಕೆಲವು ವಾರಗಳಲ್ಲಿ ನಡೆಯಬಹುದೆಂದು ಅಂದಾಜಿಸಲಾಗಿದೆ.

ಚೀನಾ ನಿರಾಕರಣೆ

ಈ ಗುಪ್ತಚರ ವರದಿಯನ್ನು ಚೀನಾ ಸ್ಪಷ್ಟವಾಗಿ ನಿರಾಕರಿಸಿದೆ. ವಾಷಿಂಗ್ಟನ್‌ನಲ್ಲಿರುವ ಚೀನಾ ರಾಯಭಾರ ಕಚೇರಿ, ಚೀನಾ ಯಾವತ್ತೂ ಯಾವ ಸಂಘರ್ಷ ಪಕ್ಷಕ್ಕೂ ಶಸ್ತ್ರಾಸ್ತ್ರಗಳನ್ನು ಒದಗಿಸಿಲ್ಲ. ಅಮೆರಿಕ ನಿರಾಧಾರ ಆರೋಪಗಳನ್ನು ಮಾಡುವುದನ್ನು ನಿಲ್ಲಿಸಬೇಕು. ಉದ್ವಿಗ್ನತೆ ತಗ್ಗಿಸಲು ಎಲ್ಲ ಪಕ್ಷಗಳೂ ಪ್ರಯತ್ನಿಸಬೇಕು ಎಂದು ಹೇಳಿಕೆ ನೀಡಿದೆ.

ಕಿರುಸುದ್ದಿ

ಧುರಂಧರ್ 2 ಗೆಲುವು: ಆರೆಸ್ಸೆಸ್ ಕಚೇರಿಗೆ ರಣವೀರ್ ಸಿಂಗ್ ಭೇಟಿ

ನಾಗ್ಪುರ: ಬಾಲಿವುಡ್ ನಟ ರಣವೀರ್ ಸಿಂಗ್ ನಟಿಸಿರುವ ಆದಿತ್ಯ ಧರ್ ನಿರ್ದೇಶನ ಮಾಡಿದ ಧುರಂಧರ್ 2 ಸಿನಿಮಾ ಕಳೆದ ತಿಂಗಳು ಬಿಡುಗಡೆ ಆಗಿದ್ದು ಎಲ್ಲೆಡೆ ಭಾರೀ ಪ್ರಶಂಸೆಗೆ ಪಾತ್ರವಾಗುತ್ತಿದೆ. ಈ ಬೆನ್ನಲ್ಲೇ ನಟ ರಣವೀರ್ ಸಿಂಗ್ ಆರ್‌ಎಸ್‌ಎಸ್ ಕಚೇರಿಗೆ ಭೇಟಿ ನೀಡಿ, ಆರ್‌ಎಸ್‌ಎಸ್ ಸರಸಂಘಚಾಲಕ್ ಮೋಹನ್ ಭಾಗವತ್ ಅವರನ್ನು ಭೇಟಿ ಮಾಡಿದ್ದಾರೆ. ಇದೇವೇಳೆ ನಾಗ್ಪುರದ ರೇಶಿಮ್‌ಬಾಗ್‌ನಲ್ಲಿರುವ ಡಾ.ಹೆಡ್ಗೆವಾರ್ ಸ್ಮೃತಿ ಮಂದಿರಕ್ಕೆ ಭೇಟಿ ನೀಡಿದ ಸಿಂಗ್, ಆರ್‌ಎಸ್‌ಎಸ್ ಸಂಸ್ಥಾಪಕ ಕೆ.ಬಿ ಹೆಡ್ಗೆವಾರ್ ಮತ್ತು ಎಂಎಸ್ ಗೋಲ್ವಾಲ್ಕರ್ ಅವರ ಸ್ಮಾರಕಗಳಿಗೆ ಪುಷ್ಪ ನಮನ ಸಲ್ಲಿಸಿದ್ದಾರೆ.ಈ ವೇಳೆ ಆರ್‌ಎಸ್‌ಎಸ್ ಪ್ರತಿನಿಧಿಗಳು ಅವರಿಗೆ ಸ್ಮೃತಿ ಮಂದಿರದ ಇತಿಹಾಸ ತಿಳಿಸಿಕೊಟ್ಟಿದ್ದಾರೆ. ಅವರು ಸುಮಾರು 1.5 ಗಂಟೆಗಳ ಕಾಲ ಕಳೆದಿದ್ದು, ರಣವೀರ್ ಮೋಹನ್ ಭಾಗವತ್ ಅವರನ್ನು ಭೇಟಿ ಮಾಡಿ ತಮ್ಮ ಚಿತ್ರದ ಬಗ್ಗೆ ಚರ್ಚಿಸಿದ್ದಾರೆ ಎಂದು ವರದಿಯಾಗಿದೆ.

ಕೇರಳ ಸರ್ಕಾರಕ್ಕೆ ಗಡುವು ನೀಡಿದ ಹೈ

- ಕಾಸರಗೋಡು ತಾಲ್ಲೂಕಿನಲ್ಲಿ ಕನ್ನಡ ಬಳಕೆ ಅರ್ಜಿ
- ಎರಡು ತಿಂಗಳಲ್ಲಿ ತೀರ್ಮಾನಿಸಿ

ಕೊಚ್ಚಿ: ಕಾಸರಗೋಡು ತಾಲ್ಲೂಕಿನಲ್ಲಿ ಅಧಿಕೃತ ವ್ಯವಹಾರಗಳಲ್ಲಿ ಕನ್ನಡ ಭಾಷೆಯ ಬಳಕೆಗೆ ಸಂಬಂಧಿಸಿದ ಮನವಿಯನ್ನು ಎರಡು ತಿಂಗಳೊಳಗೆ ಪರಿಶೀಲಿಸಿ ತೀರ್ಮಾನಕ್ಕೆ ಗೊಳ್ಳುವಂತೆ ಕೇರಳ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ. ಮುಖ್ಯ ನ್ಯಾ.ಸೌಮೆನ್ ಸೇನ್ ಹಾಗೂ ನ್ಯಾ.ಶ್ಯಾಮ್ ಕುಮಾರ್ ವಿ.ಎಂ. ಅವರನ್ನೊಳಗೊಂಡ ಪೀಠವು ಕಾಸರಗೋಡು ಮೂಲದ ವಕೀಲರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆ ನಡೆಸಿ ಈ ಆದೇಶ ನೀಡಿದೆ. ಅರ್ಜಿದಾರರ ವಾದದ ಪ್ರಕಾರ, ಕಾಸರಗೋಡು ಮತ್ತು ಮಂಜೇಶ್ವರ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವು ಸರ್ಕಾರಿ ಕಚೇರಿಗಳು ಕನ್ನಡದಲ್ಲಿ ಸಲ್ಲಿಸಲಾದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ ಹಾಗೂ ಅವುಗಳನ್ನು ಪ್ರಕ್ರಿಯೆಗೊಳಿಸುವುದಿಲ್ಲ ಎಂಬುದು ಬೆಳಕಿಗೆ ಬಂದಿದೆ.

1982ರ ಮಾ.5ರಂದು ಕಣ್ಣೂರು ಜಿಲ್ಲೆಯ ಜಿಲ್ಲಾಧಿಕಾರಿ ಹೊರಡಿಸಿದ್ದ ಸರ್ಕ್ಯೂಲರ್‌ನಲ್ಲಿ ಆಗಿನ ಕಾಸರಗೋಡು ತಾಲ್ಲೂಕನ್ನು ಕನ್ನಡ ಭಾಷಾಭಿಮಾನಿಗಳ ಪ್ರದೇಶವೆಂದು ಘೋಷಿಸಿ, ಅಧಿಕೃತ ಪತ್ರ ವ್ಯವಹಾರಗಳಲ್ಲಿ ಕನ್ನಡ ಬಳಕೆಗೆ ಅನುಮತಿ ನೀಡಲಾಗಿತ್ತು. ಆದರೆ, ಈ ನಿರ್ದೇಶನಗಳು ಜಾರಿಗೆ ಬರದೆ ಉಳಿದಿವೆ ಎಂದು ಅರ್ಜಿದಾರರು ದೂರಿದ್ದಾರೆ. ಈ ಸಂಬಂಧ ಅರ್ಜಿದಾರರು ಜನವರಿಯಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿ, ಸಂಬಂಧಿತ ಎಲ್ಲಾ ಇಲಾಖೆಗಳಿಗೆ ಅಗತ್ಯ ಸೂಚನೆ ನೀಡುವಂತೆ ಕೋರಿದ್ದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲವೆಂದು ತಿಳಿಸಿದ್ದಾರೆ.

ಸಂಸತ್ ಆವರಣದಲ್ಲಿ ಮೋದಿ-ರಾಗಾ ಅಪರೂಪದ ಸಂಭಾಷಣೆ



ಹೊಸದಿಲ್ಲಿ: ಪ್ರಧಾನಮಂತ್ರಿ ನರೇಂದ್ರ ಮೋದಿ ಶನಿವಾರ ಸಂಸತ್ತಿನ ಆವರಣದಲ್ಲಿ ತಮ್ಮ ಕಾರನ್ನು ನಿಲ್ಲಿಸಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಕೆಲಕಾಲ ಮಾತುಕತೆ ನಡೆಸಿದ್ದು ಗಮನ ಸೆಳೆಯಿತು.

ಇಬ್ಬರೂ ನಾಯಕರು ತಮ್ಮ ಮುಂದಿನ ಕಾರ್ಯಕ್ರಮಗಳಿಗೆ ತೆರಳುವ ಮುನ್ನ ಸೌಜನ್ಯಯುತವಾಗಿ ಮಾತನಾಡುತ್ತಿರುವ ದೃಶ್ಯಗಳು ಕಂಡುಬಂದವು. ಪ್ರಧಾನಮಂತ್ರಿ ಸಂಸತ್ ಸಂಕೀರ್ಣಕ್ಕೆ ಆಗಮಿಸುತ್ತಿದ್ದಾಗ ಈ ಅನೌಪಚಾರಿಕ ಸಂವಹನ ನಡೆದಿದೆ. ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷ ಕಾಂಗ್ರೆಸ್‌ನ ಉನ್ನತ ನಾಯಕರ ನಡುವಿನ ಅಪರೂಪದ ನೇರ ಮಾತುಕತೆ, ಎಂದು ಅನೇಕರು ಬಣ್ಣಿಸಿದ್ದಾರೆ. ಯಾವ ವಿಚಾರದ ಕುರಿತು ಈ ಇಬ್ಬರೂ ಮಾತನಾಡಿದ್ದಾರೆ ಎಂಬುದು ಬಹಿರಂಗವಾಗಿಲ್ಲ, ಸಮಾಜ ಸುಧಾರಕ ಮಹಾತ್ಮ ಜ್ಯೋತಿಬಾ ಫುಲೆ ಅವರ 200ನೇ ಜನ್ಮದಿನದ ಅಂಗವಾಗಿ ಪಾರ್ಲಿಮೆಂಟ್ ಆವರಣದಲ್ಲಿರುವ ಪ್ರೇರಣಾ ಸ್ಥಳಕ್ಕೆ ಆಗಮಿಸಿದ ಪ್ರಧಾನಿ ಮೋದಿ ಪುಷ್ಪ ನಮನ ಸಲ್ಲಿಸಿದರು. ಶಿಕ್ಷಣ ಮತ್ತು ಸಾಮಾಜಿಕ ನ್ಯಾಯಕ್ಕೆ ಫುಲೆ ಅವರು ನೀಡಿದ ಕೊಡುಗೆಗಳನ್ನು ಗೌರವಿಸಲು ಈ ಕಾರ್ಯಕ್ರಮದಲ್ಲಿ ಹಲವಾರು ಗಣ್ಯರು ಭಾಗವಹಿಸಿದ್ದರು.

ಪ್ರತ್ಯೇಕ ಉಗ್ರ ವಿರೋಧಿ ಕಾರ್ಯಾಚರಣೆ: ಇಬ್ಬರ ಸೆರೆ

ಡೆಹ್ರಾಡೂನ್: ಭಯೋತ್ಪಾದನಾ ಚಟುವಟಿಕೆಗಳು ಮತ್ತು ದೇಶವಿರೋಧಿ ಗುಂಪುಗಳೊಂದಿಗೆ ಸಂಪರ್ಕ ಹೊಂದಿದ್ದ ಆರೋಪದ ಮೇಲೆ ಡೆಹ್ರಾಡೂನ್ ಮತ್ತು ಭುವನೇಶ್ವರದಲ್ಲಿ ಕಾನೂನು ಜಾರಿ ಸಂಸ್ಥೆಗಳು ನಡೆಸಿದ ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಇಬ್ಬರನ್ನು ಬಂಧಿಸಿವೆ.

ಡೆಹ್ರಾಡೂನ್‌ನಲ್ಲಿ ಗೂಢಚರ್ಯೆ: ಸರ್ಕಾರಿ ಮತ್ತು ರಕ್ಷಣಾ ಸಂಸ್ಥೆಗಳ ಛಾಯಾಚಿತ್ರಗಳನ್ನು ಪಾಕಿಸ್ತಾನದ ಹ್ಯಾಂಡ್ಲರ್‌ಗಳಿಗೆ ಕಳುಹಿಸುತ್ತಿದ್ದ ಆರೋಪದ ಮೇಲೆ ಉತ್ತರಾಖಂಡ್ ವಿಶೇಷ ಕಾರ್ಯ ಪಡೆ (ಎಸ್‌ಟಿಎಫ್) ವಿಕ್ರಾಂತ್ ಕಶ್ಯಪ್ ಎಂಬಾತನನ್ನು ಬಂಧಿಸಿದೆ. ಪಾಕಿಸ್ತಾನಿ ಭಯೋತ್ಪಾದಕ ಶೆಹಜಾದ್ ಭಟ್ಟಿ ಸೂಚನೆಯಂತೆ ಕಶ್ಯಪ್ ಕಾರ್ಯನಿರ್ವಹಿಸುತ್ತಿದ್ದ ಎಂದು ಹಿರಿಯ ಪೊಲೀಸ್ ಅಧೀಕ್ಷಕ ಅಜಯ್ ಸಿಂಗ್ ತಿಳಿಸಿದ್ದಾರೆ. ಆರೋಪಿ, ಇನ್‌ಸ್ಟಾಗ್ರಾಮ್ ಮತ್ತು ವಾಟ್ಸಾಪ್ ಮೂಲಕ ಪೊಲೀಸ್ ಪ್ರಧಾನ ಕಚೇರಿ ಮತ್ತು ಬಸ್ ನಿಲ್ದಾಣದ ವಿವರಗಳನ್ನು ಹಂಚಿಕೊಂಡಿದ್ದ ಎನ್ನಲಾಗಿದೆ. ಬಂಧನದ ವೇಳೆ ಆತನಿಂದ ಪಿಸ್ತೂಲ್, ಗುಂಡುಗಳು ಮತ್ತು ಸ್ಪ್ರೇ ಪೇಂಟ್ ವಶಪಡಿಸಿಕೊಳ್ಳಲಾಗಿದೆ.

ಭುವನೇಶ್ವರದಲ್ಲಿ ಉಗ್ರಗಾಮಿ ಚಟುವಟಿಕೆ: ಮತ್ತೊಂದು ಕಾರ್ಯಾಚರಣೆಯಲ್ಲಿ, ದೆಹಲಿ ಮತ್ತು ಒಡಿಶಾ ಪೊಲೀಸರು ಭುವನೇಶ್ವರದಲ್ಲಿ 22 ವರ್ಷದ ಶೇಖ್ ಇಮ್ರಾನ್ ಎಂಬಾತನನ್ನು ಬಂಧಿಸಿದ್ದಾರೆ. ರಾಷ್ಟ್ರೀಯ ಭದ್ರತೆಗೆ ಹಾನಿಕಾರಕವಾದ ವಿಷಯಗಳನ್ನು ಹಂಚಿಕೊಳ್ಳುತ್ತಿದ್ದ ಆರೋಪಿ ಭಯೋತ್ಪಾದಕರ ಸಾಮಾಜಿಕ ಮಾಧ್ಯಮ ಗ್ರೂಪ್‌ನ ಸಕ್ರಿಯ ಸದಸ್ಯ, ಎಂದು ಅಧಿಕಾರಿಗಳು ಹೇಳಿದ್ದಾರೆ. ದಿಲ್ಲಿಯಲ್ಲಿ ಈ ಹಿಂದೆ ವಶಕ್ಕೆ ಪಡೆಯಲಾಗಿದ್ದ ಯುವಕರ ವಿಚಾರಣೆಯ ನಂತರ ಈ ಬಂಧನ ನಡೆದಿದೆ. ಅಧಿಕಾರಿಗಳು ಆತನಿಂದ ಮೊಬೈಲ್ ಫೋನ್ ಮತ್ತು ಲ್ಯಾಪ್‌ಟಾಪ್ ವಶಪಡಿಸಿಕೊಂಡಿದ್ದಾರೆ.

ಸಶಸ್ತ್ರ ಪಡೆಗಳಲಿ ಸಿರಿಧಾನ್ಯ ಬಳಕೆಗೆ ಕೇಂದ್ರ ಉತ್ತೇಜನ

ರಾಯ್ಸೆನ್: ಸಶಸ್ತ್ರ ಪಡೆಗಳಲ್ಲಿ ಸಿರಿಧಾನ್ಯಗಳ ಬಳಕೆಯನ್ನು ಉತ್ತೇಜಿಸುವ ಮೂಲಕ ಜೈ ಜವಾನ್ ಜೈ ಕಿಸಾನ್ ಘೋಷವಾಕ್ಯದಂತೆ ರೈತರ ಆರ್ಥಿಕ ಬಲವರ್ಧನೆಗಾಗಿ ಕೇಂದ್ರ ಸರ್ಕಾರ ಕೆಲಸ ಮಾಡುತ್ತಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶನಿವಾರ ಹೇಳಿದ್ದಾರೆ. 1965ರಲ್ಲಿ ಇಂಡೋ-ಪಾಕ್ ಯುದ್ಧ ಸಂದರ್ಭದಲ್ಲಿ ಆಹಾರ ಕೊರತೆ ಉಂಟಾಗಿದ್ದ ಸಂದರ್ಭ ಮಾಜಿ ಪ್ರಧಾನಿ ಲಾಲ್ ಬಹದೂರ್ ಶಾಸ್ತ್ರಿಯವರು ಜೈ ಜವಾನ್ ಜೈ ಕಿಸಾನ್ ಘೋಷವಾಕ್ಯದೊಂದಿಗೆ ಸೈನಿಕರ ಆತ್ಮಸ್ಥೈರ್ಯ ಮತ್ತು ಉತ್ಪಾದನೆ ಹೆಚ್ಚಿಸಲು ರೈತರಿಗೆ ಸ್ಫೂರ್ತಿ ತುಂಬಿದ್ದರು. ತಕ್ಷಣವೇ ಈ ಘೋಷವಾಕ್ಯವು ಆತ್ಮನಿರ್ಭರ (ಸ್ವಾವಲಂಬಿ) ಭಾರತದ ಚಿಹ್ನೆಯಾಗಿ ಬದಲಾಯಿತು. 3 ದಿನಗಳ ಉನ್ನತ ಕೃಷಿ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಸಿಂಗ್, ಜೋಳ, ಸಜ್ಜೆ ಮತ್ತು ರಾಗಿ ಹಿಟ್ಟಿನಿಂದ ತಯಾರಿಸಲಾದ ಆಹಾರಗಳನ್ನು ಸಶಸ್ತ್ರ ಪಡೆಗಳಲ್ಲಿ ಪರಿಚಯಿಸಲಾಗಿದೆ.

ಚಂದ್ರನ ಕಕ್ಷೆಯಿಂದ ಹಿಂತಿರುಗಿದ ನಾಲ್ವರು ಗಗನಯಾತ್ರಿಗಳು

ಆರ್ಟೆಮಿಸ್ 2 ಯಶಸ್ವಿ ಸ್ಪ್ಲ್ಯಾಶ್‌ಡೌನ್

ವಾಷಿಂಗ್ಟನ್: ಆರ್ಟೆಮಿಸ್-2 ಗಗನಯಾನ ಯೋಜನೆಯ ನಾಲ್ವರು ಗಗನಯಾತ್ರಿಗಳು ಐತಿಹಾಸಿಕ ಚಂದ್ರ ಪರಿಭ್ರಮಣ ಮಿಷನ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಶುಕ್ರವಾರ ಪೆಸಿಫಿಕ್ ಮಹಾಸಾಗರದಲ್ಲಿ ರೋಮಾಂಚಕ ಸ್ಪ್ಲಾಶ್‌ಡೌನ್ ನಡೆಸಿ ಇಳಿದರು. ಐದು ದಶಕಗಳ ನಂತರ ಮಾನವಕುಲ ಮತ್ತೆ ಚಂದ್ರನ ಮಡಿಲಿಗೆ ತೆರಳಿ ಸುರಕ್ಷಿತವಾಗಿ ಮರಳಿದ ಈ ಕ್ಷಣ ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಯಿತು.

ಈ ಯಾನದಲ್ಲಿ ಕೇವಲ ಗಗನಯಾನ ದಾಖಲೆಗಳಷ್ಟೇ ಅಲ್ಲ ಚಂದ್ರನ ದೂರದ ಭಾಗದ ಅಪರೂಪದ ದೃಶ್ಯಗಳು, ಸಂಪೂರ್ಣ ಸೂರ್ಯಗ್ರಹಣ, ಮತ್ತು ಕಪ್ಪು ಆಕಾಶದ ಹಿನ್ನೆಲೆಯಲ್ಲಿ ಹೊಳೆಯುತ್ತಿದ್ದ ನಮ್ಮ ನೀಲಿ ಭೂಮಿಯ ದೃಶ್ಯ ಇವೆಲ್ಲ ಜಗತ್ತಿನ ಮನಸ್ಸನ್ನು ಆವರಿಸಿದವು.

ಇತಿಹಾಸ ಬರೆದ ನಾಲ್ವರು: ಕಮಾಂಡರ್ ರೀಡ್ ವೈಸ್‌ಮನ್, ಪೈಲಟ್ ವಿಕ್ಟರ್ ಗ್ಲೋವರ್, ಕ್ರಿಸ್ಟಿನಾ ಕೋಚ್ ಮತ್ತು ಕೆನಡಾದ ಜೆರೆಮಿ ಹ್ಯಾನ್ಸನ್ ಈ ನಾಲ್ವರು ಸ್ಯಾನ್‌ಡಿಯೆಗೋ ಕರಾವಳಿಯ ಬಳಿ ಸಮುದ್ರಕ್ಕಿಳಿದ ಕ್ಯಾಪ್ಸೂಲ್‌ನಿಂದ ಹೊರಬಂದರು. ಮಿಲಿಟರಿ ಹೆಲಿಕಾಪ್ಟರ್‌ಗಳ ಮೂಲಕ ಒಬ್ಬೊಬ್ಬರನ್ನಾಗಿ ಮೇಲೆತ್ತಿ ಯುಎಸ್‌ಎಸ್ ಜಾನ್ ಪಿ. ಮರ್ಥಾ ಎಂಬ ನೌಕಾ ಹಡಗಿಗೆ ಕರೆದೊಯ್ಯಲಾಯಿತು. ಇದಾದ ಮೇಲೆ ನಾಸಾ ಮಿಷನ್ ಕಂಟ್ರೋಲ್‌ನಲ್ಲಿ ಸಂಭ್ರಮ ಉಕ್ಕಿ ಹರಿಯಿತು.



ಚಂದ್ರನ ದಾಖಲೆ ಮತ್ತು ಅಪರೂಪದ ದೃಶ್ಯ

ಏ.1ರಂದು ಫ್ಲೋರಿಡಾದಿಂದ ಉಡಾವಣೆಗೊಂಡ ಈ ತಂಡ ಭೂಮಿಯಿಂದ 4,06,771 ಕಿ.ಮೀ. ದೂರ ತಲುಪಿ ಅಪೊಲೊ-13ರ ಅಂತರದ ದಾಖಲೆ ಮುರಿಯಿತು ಇದು ಮನುಷ್ಯರು ಇದುವರೆಗೆ ಭೂಮಿಯಿಂದ ಅತ್ಯಂತ ದೂರ ತೆರಳಿದ ಕ್ಷಣ. ಸೋಮವಾರ ನಡೆದ ದಾಖಲೆ ಫ್ಲೈಬೈ ವೇಳೆ ಚಂದ್ರನ ದೂರದ ಭಾಗದ ಕಣಿವೆಗಳನ್ನು ಮನುಷ್ಯ ಕಣ್ಣಿಗೆ ಮೊದಲ ಬಾರಿ ತೋರಿದರು.

ದಾಖಲೆ ವೇಗದ ಮರುಪ್ರವೇಶ

ಇಂಟೆಗ್ರಿಟಿ ಎಂದು ನಾಮಕರಣಗೊಂಡ ಓರಿಯನ್ ಕ್ಯಾಪ್ಸೂಲ್ ಭೂಮಿಯ ವಾತಾವರಣವನ್ನು ಮ್ಯಾಕ್ 33 ವೇಗದಲ್ಲಿ (ಶಬ್ದದ ವೇಗಕ್ಕಿಂತ 33 ಪಟ್ಟು) ಪ್ರವೇಶಿಸಿತು. ಅಂದರೆ ಸೆಕೆಂಡಿಗೆ ಸುಮಾರು 11,026 ಮೀಟರ್ ವೇಗ. 1960-70ರ ಅಪೊಲೊ ಯುಗದ ನಂತರ ಇಷ್ಟು ವೇಗದಲ್ಲಿ ಬಂದ ಮೊದಲ ಕ್ಯಾಪ್ಸೂಲ್ ಇದೇ. ಕ್ಯಾಪ್ಸೂಲ್ ಕೆಂಪು-ಕೆಂಡದ ಪ್ಲಾಸ್ಮಾ ಮಳೆಯಲ್ಲಿ ಮುಳುಗಿ ಆರು ನಿಮಿಷ ಸಂಪರ್ಕ ಕಡಿದುಕೊಂಡಾಗ ಮಿಷನ್ ಕಂಟ್ರೋಲ್‌ನಲ್ಲಿ ಉಸಿರು ಬಿಗಿಹಿಡಿದ ನಿಶ್ಶಬ್ದ ತುಂಬಿತ್ತು. ಸ್ಪ್ಲಾಶ್‌ಡೌನ್ ಕ್ಷಣ ಕ್ಯಾಪ್ಸೂಲ್ ಗಂಟೆಗೆ 30 ಕಿಮೀ ವೇಗಕ್ಕೆ ಇಳಿದು ಸಮುದ್ರ ತಲುಪಿತು.

ಮತದಾರರ ಪಟ್ಟಿಗೆ ತೀವ್ರ ಶುದ್ಧೀಕರಣ ಪೂರ್ಣ

ಎಸ್‌ಐಆರ್: ಶೇ.10 ಮತದಾರರ ಕಡಿತ

ಹೊಸದಿಲ್ಲಿ: ಚುನಾವಣಾ ಆಯೋಗ ನಡೆಸಿದ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ದ್ವಿತೀಯ ಹಂತದ ಬಳಿಕ ಒಂಬತ್ತು ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳ ಒಟ್ಟು ಮತದಾರರ ಪಟ್ಟಿಯಲ್ಲಿ ಶೇ.10.2 ಇಳಿಕೆ ಕಂಡುಬಂದಿದೆ. ಈ ಪ್ರಕ್ರಿಯೆಯಲ್ಲಿ 60 ಲಕ್ಷಕ್ಕೂ ಹೆಚ್ಚು ಮೃತ ಮತದಾರರ ಹೆಸರುಗಳನ್ನು ತೆಗೆಯಲಾಗಿದೆ ಎಂದು ಆಯೋಗ ಮತ್ತು ರಾಜ್ಯಾಧಿಕಾರಿಗಳ ಮಾಹಿತಿ ತಿಳಿಸಿದೆ.

ಅಕ್ಟೋಬರ್ 27ರಂದು ದ್ವಿತೀಯ ಹಂತದ ಎಸ್‌ಐಆರ್ ಘೋಷಣೆಯ ವೇಳೆಗೆ, ಈ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು ಮತದಾರರ ಸಂಖ್ಯೆ 50.99 ಕೋಟಿಗೂ ಹೆಚ್ಚು ಇತ್ತು. ಪರಿಷ್ಕರಣೆ ಬಳಿಕ ಇದು 45.81 ಕೋಟಿಗೆ ಇಳಿದು, ಒಟ್ಟು 5.18 ಕೋಟಿ ಮತದಾರರ ಕಡಿತ ದಾಖಲಾಗಿದೆ.

ಈ ಅವಧಿಯಲ್ಲಿ ಒಟ್ಟು 66,88,636 ಮೃತ ಮತದಾರರ ಹೆಸರುಗಳು ತೆಗೆದುಹಾಕಲ್ಪಟ್ಟಿವೆ. ಇದರಲ್ಲಿ ಉತ್ತರ ಪ್ರದೇಶದಲ್ಲಿ ಗರಿಷ್ಠ 25.47 ಲಕ್ಷ, ಬಳಿಕ ಚುನಾವಣೆಗೆ ಸಜ್ಜಾಗಿರುವ ಪಶ್ಚಿಮ ಬಂಗಾಳದಲ್ಲಿ 24.16 ಲಕ್ಷ ಹೆಸರುಗಳು ಸೇರಿವೆ. ಇದಷ್ಟೇ ಅಲ್ಲದೆ, ಎಸ್‌ಐಆರ್ ಪ್ರಕ್ರಿಯೆಯಲ್ಲಿ ಸಲ್ಲಿಸಲಾದ ಆಕ್ಷೇಪಣೆಗಳು ಹಾಗೂ ಪರಿಶೀಲನೆಯ ನಂತರ ಇನ್ನೂ 63.16 ಲಕ್ಷ ಹೆಸರುಗಳನ್ನು ತೆಗೆದುಹಾಕಲಾಗಿದೆ. ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ತಮಿಳುನಾಡು, ರಾಜಸ್ಥಾನ, ಛತ್ತೀಸ್‌ಗಢ, ಕೇರಳ, ಪುದುಚೇರಿ, ಅಂಡಮಾನ್- ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ಗುಜರಾತ್, ಮಧ್ಯಪ್ರದೇಶ ಮತ್ತು ಗೋವಾ ರಾಜ್ಯಗಳ ಅಂತಿಮ ಮತದಾರರ ಪಟ್ಟಿಗಳನ್ನು ವಿವಿಧ ದಿನಗಳಲ್ಲಿ ಪ್ರಕಟಿಸಲಾಗಿದೆ. ಇವುಗಳಲ್ಲಿ ಉತ್ತರ ಪ್ರದೇಶವೇ ಕೊನೆಯದಾಗಿ ಶುಕ್ರವಾರ ತನ್ನ ಅಂತಿಮ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಈಗಾಗಲೇ ಬಿಹಾರದಲ್ಲಿ ಪೂರ್ಣಗೊಂಡಿದ್ದ ಎಸ್‌ಐಆರ್ ಪ್ರಕ್ರಿಯೆಯ ನಂತರ, ಸುಮಾರು 51 ಕೋಟಿ ಮತದಾರರನ್ನು ಒಳಗೊಂಡ ದ್ವಿತೀಯ ಹಂತವೂ ಮುಕ್ತಾಯಗೊಂಡಿದೆ. ಇನ್ನೂ ಉಳಿದಿರುವ ಸುಮಾರು 40 ಕೋಟಿ ಮತದಾರರನ್ನು 17 ರಾಜ್ಯಗಳು ಹಾಗೂ ಐದು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮುಂದಿನ ಹಂತದಲ್ಲಿ ಒಳಪಡಿಸಲಾಗುವುದು. ಈ ಪ್ರಕ್ರಿಯೆ ಈ ತಿಂಗಳ ಐದು ವಿಧಾನಸಭಾ ಚುನಾವಣೆಗಳ ನಂತರ ಆರಂಭವಾಗುವ ಸಾಧ್ಯತೆ ಇದೆ.

ಆಂಧ್ರ ಪ್ರದೇಶ, ಅರುಣಾಚಲ ಪ್ರದೇಶ, ಚಂಡೀಗಢ, ದಾದ್ರಾ ಮತ್ತು ನಗರ ಹವೇಳಿ-ದಮನ ದಿಯು, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು-ಕಾಶ್ಮೀರ, ಜಾರ್ಖಂಡ್, ಕರ್ನಾಟಕ, ಲಡಾಖ್, ಮಹಾರಾಷ್ಟ್ರ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ದೆಹಲಿ, ಒಡಿಶಾ, ಪಂಜಾಬ್, ಸಿಕ್ಕಿಂ, ತ್ರಿಪುರಾ, ತೆಲಂಗಾಣ ಮತ್ತು ಉತ್ತರಾಖಂಡ ರಾಜ್ಯಗಳು ಮುಂದಿನ ಹಂತದಲ್ಲಿ ಒಳಗೊಳ್ಳಲಿವೆ. ಇದಲ್ಲದೆ, ಅಸ್ಸಾಂನಲ್ಲಿ ಎಸ್‌ಐಆರ್ ಬದಲಿಗೆ ವಿಶೇಷ ಪರಿಷ್ಕರಣೆ ಪ್ರಕ್ರಿಯೆ ಫೆಬ್ರವರಿ 10ರಂದು ಪೂರ್ಣಗೊಂಡಿದೆ.

ಕಿರುಸುದ್ದಿ

ಎ.14ರಂದು ಅಂಬೇಡ್ಕರ್ ಜಯಂತಿ

ಕೊಪ್ಪಳ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ರವರ 135ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಏಪ್ರಿಲ್ 14 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಸಾಹಿತ್ಯ ಭವನದಲ್ಲಿ ಆಯೋಜಿಸಲಾಗಿದೆ. ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ತಂಗಡಗಿ ಶಿವರಾಜ ಸಂಗಪ್ಪ ಅವರು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸುವರು. ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರಡ್ಡಿ ಅವರು ಘನ ಉಪಸ್ಥಿತಿ ವಹಿಸುವರು. ರಾ.ಬ.ಕೊ.ವಿ ಹಾಲು ಒಕ್ಕೂಟದ ಅಧ್ಯಕ್ಷರು ಆಗಿರುವ ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದ ಅಂಗವಾಗಿ ಅಂದು ಬೆಳಿಗ್ಗೆ 8 ಗಂಟೆಗೆ ಕೊಪ್ಪಳ ನಗರದ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಲ್‌ನಿಂದ ಅಶೋಕ ವೃತ್ತದ ಮೂಲಕ ಸಾಹಿತ್ಯ ಭವನದವರೆಗೆ ಡಾ.ಅಂಬೇಡ್ಕರ್ ಅವರ ಭಾವಚಿತ್ರದ ಮೆರವಣಿಗೆ ನಡೆಯಲಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಅಜ್ಜಪ್ಪ ಸೊಗಲದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾವಿಯಲ್ಲಿ ಮೊಸಳೆ ಪ್ರತ್ಯಕ್ಷ

ಬೈಲಹೊಂಗಲ: ಸಮೀಪದ ಹೊಸೂರ ಗ್ರಾಮದ ಸಮೀಪ ರೈತ ನಾಗಪ್ಪ ಯಲ್ಲಪ್ಪ ಸತ್ತಿಗೇರಿ ಅವರ ಹೊಲದ ಬಳಿಯ ಬಾವಿಯಲ್ಲಿ ಎರಡು ಮೊಸಳೆಗಳು ಕಾಣಿಸಿಕೊಂಡಿರುವುದು ಜನರನ್ನು ಬೆಚ್ಚಿ ಬೀಳುವಂತೆ ಮಾಡಿದೆ. ಬೆಳಗಿನ ವೇಳೆ ಹೊಲಕ್ಕೆ ತೆರಳಿದ್ದ ರೈತರು ಬಾವಿಯೊಳಗೆ ಚಲನವಲನ ಗಮನಿಸಿ ಪರಿಶೀಲನೆ ನಡೆಸಿದಾಗ ಮೊಸಳೆಗಳು



ಇರುವುದನ್ನು ಕಂಡು ಆತಂಕಗೊಂಡರು. ವಿಷಯ ತಿಳಿಯುತ್ತಿದ್ದಂತೆಯೇ ಗ್ರಾಮದಲ್ಲಿ ಹರಡಿದ್ದು, ಹಲವರು ಸ್ಥಳಕ್ಕೆ ಧಾವಿಸಿ ದೃಶ್ಯ ವೀಕ್ಷಿಸಿದರು. ಬಾವಿಯಲ್ಲಿ ನೀರು ಇರುವ ಕಾರಣ ಮೊಸಳೆಗಳು ಅಲ್ಲಿ ನೆಲೆಸಿರುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರೈತರು ತಮ್ಮ ದೈನಂದಿನ ಕೃಷಿ ಚಟುವಟಿಕೆಗಳಿಗೂ ಅಂಜುವ ಪರಿಸ್ಥಿತಿ ಉಂಟಾಗಿದೆ. ಘಟನೆಯ ಮಾಹಿತಿ ಅರಣ್ಯ ಇಲಾಖೆಗೆ ನೀಡಲಾಗಿದ್ದು, ತಕ್ಷಣವೇ ಕ್ರಮ ಕೈಗೊಂಡು ಮೊಸಳೆಗಳನ್ನು ಸುರಕ್ಷಿತವಾಗಿ ಹಿಡಿದು ಬೇರೆಡೆಗೆ ಸಾಗಿಸುವಂತೆ ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಪಿಯುಸಿಯಲ್ಲಿ ಕಡಿಮೆ ಅಂಕ: ವಿದ್ಯಾರ್ಥಿನಿ ಆತ್ಮಹತ್ಯೆ

ಹುಬ್ಬಳ್ಳಿ: ದ್ವಿತೀಯ ಪಿಯುಸಿಯಲ್ಲಿ ಕಡಿಮೆ ಅಂಕ ಪಡೆದ ಕಾರಣಕ್ಕೆ ಮನನೊಂದ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಉಣಕಲ್‌ನಲ್ಲಿ ನಡೆದಿದೆ. ಶ್ರಾವಣಿ ಕಾಳೆ(17) ಮೃತ ಪಟ್ಟಿರುವ ವಿದ್ಯಾರ್ಥಿನಿ. ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸುವ ನಿರೀಕ್ಷೆ ಹೊಂದಿದ್ದಳು. ಆದರೆ, ಕಡಿಮೆ ಅಂಕ ಬಂದಿದ್ದರಿಂದ ತಾವು ವಾಸವಿರುವ ಉಣಕಲ್ ಸಿದ್ಧ ಕಲ್ಯಾಣ ನಗರದ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿದ್ದಾಳೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿಜಿಟಲ್ ಅರೆಸ್ಟ್‌ನಲ್ಲಿ 15.45 ಕೋಟಿ ರೂ. ವಂಚಿಸಿದ್ದ ಇಬ್ಬರ ಬಂಧನ

ಬೆಳಗಾವಿ: ನಗರದಲ್ಲಿರುವ ಉದ್ಯಮಿಯೊಬ್ಬರನ್ನ ಡಿಜಿಟಲ್ ಅರೆಸ್ಟ್ ಮಾಡಿ 15.45 ಕೋಟಿ ರೂ. ವಂಚಿಸಿದ್ದ ಇಬ್ಬರನ್ನ ಬೆಳಗಾವಿ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ. ಉದ್ಯಮಿ ಅಜಿತ್ ಗೋಪಾಲಕೃಷ್ಣ ಅವರಿಗೆ ಫೆಬ್ರವರಿ 7ರಿಂದ ಮಾರ್ಚ್ 9ರ ವರೆಗೆ ಡಿಜಿಟಲ್ ಅರೆಸ್ಟ್ ಮಾಡಲಾಗಿತ್ತು. ಈ ಅವಧಿಯಲ್ಲಿ ಹಂತ ಹಂತವಾಗಿ ಬರೋಬ್ಬರಿ 15.45 ಕೋಟಿ ರೂ. ಹಣವನ್ನು ಅವರ ಬ್ಯಾಂಕ್ ಖಾತೆಯಿಂದ ವಂಚಕರು ವರ್ಗಾಯಿಸಿಕೊಂಡಿದ್ದರು. ಈ ಕುರಿತು ಬೆಳಗಾವಿ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸೈಬರ್ ಕಮಾಂಡ್ ಅಧಿಕಾರಿಗಳು ತೀವ್ರ ತನಿಖೆ ಕೈಗೊಂಡಿದ್ದರು. ತನಿಖೆ ನಡೆಸಿದ ಪೊಲೀಸರು, ವೆಂಕದೋತ ಶರತ್ ನಾಯಕ್ ಮತ್ತು ದೇಗಾವತ ಶ್ರೀಪಾದ ನಾಯಕ್ ಎಂಬ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತ ಆರೋಪಿಗಳ ಬ್ಯಾಂಕ್ ಖಾತೆಗಳಿಂದ ಎರಡು ಕೋಟಿ ರೂಪಾಯಿಗಳನ್ನು ಜಪ್ತಿ ಮಾಡಲಾಗಿದೆ. ಈ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿ ಸೈಬರ್ ಕ್ರೈಂ ಪೊಲೀಸರಿಂದ ಹೆಚ್ಚಿನ ತನಿಖೆ ಮುಂದುವರಿದಿದೆ.

ಪೊಲೀಸರಿಂದ ತಡೆ | ಸಿಎಂ ಭೇಟಿಗೆ ಸಿಗದ ಅವಕಾಶ

ಬೀದರ ಕಾರಂಜಾ ಸಂತ್ರಸ್ತರ ಆಕ್ರೋಶ

ಬೀದರ: ರಾಜ್ಯ ಪತ್ರಕರ್ತರ ಸಮ್ಮೇಳನ ಉದ್ಘಾಟನೆಗೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಲು ಹೊರಟಿದ್ದ ಕಾರಂಜಾ ಸಂತ್ರಸ್ತರನ್ನು ಪೊಲೀಸರು ತಡೆದಿದ್ದಾರೆ.

ಸಿಎಂ ಆಗಮಿಸುತ್ತಿರುವುದನ್ನೇ ಕಾಯುತ್ತಿದ್ದ ಜಿಲ್ಲೆಯ ರೈತರಿಗೆ ಸಿಎಂ ಭೇಟಿಗೆ ಅವಕಾಶ ಸಿಗದಿರುವುದರಿಂದ ರೈತರು ತೀವ್ರ ಅಸಮಾಧಾನ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಳೆದ ಐದು ದಶಕಗಳಿಂದ ಕಾರಂಜಾ ಯೋಜನೆ ಸಂತ್ರಸ್ತರು ವೈಜ್ಞಾನಿಕ ಪರಿಹಾರ ಒದಗಿಸುವಂತೆ ಹೋರಾಟ ನಡೆಸುತ್ತಿದ್ದಾರೆ. ಸಿಎಂ ನಗರಕ್ಕೆ ಆಗಮಿಸಿದ್ದ ವೇಳೆ ಸಿಎಂ ಭೇಟಿ ಮಾಡಿ ಆದಷ್ಟು ಬೇಗ ಕಾರಂಜಾ ಸಂತ್ರಸ್ತರಿಗೆ ಪರಿಹಾರ ಒದಗಿಸುವಂತೆ ಮನವಿ ಪತ್ರ ಹಾಗೂ ಕಾರಂಜಾ ಸಂತ್ರಸ್ತ 29 ಹಳ್ಳಿಗಳ 50 ಸಾವಿರಕ್ಕೂ ಅಧಿಕ ರೈತ ಪರಿವಾರದವರ ಸಹಿ ಸಂಗ್ರಹಿಸಿದ ಪ್ರತಿಯನ್ನೂ ಸಹ ಸಲ್ಲಿಸುವ ಉದ್ದೇಶವಾಗಿತ್ತು.

ಇಲ್ಲವಾದಲ್ಲಿ ಸಿಎಂ ಬರುವ ಮಾರ್ಗದಲ್ಲಿ ರಸ್ತೆ ತಡೆ ನಡೆಸಿ ಸಿಎಂ ಸಿದ್ದರಾಮಯ್ಯ ಭೇಟಿ ಮಾಡಬೇಕೆಂದಿದ್ದ ರೈತರಿಗೆ ಪೊಲೀಸರು ಅವಕಾಶ ನೀಡಲಿಲ್ಲ. ಇದಲ್ಲದೇ ಬಿಎಸ್‌ಎಸ್ಕೆ ಪುನಶ್ಚೇತನಕ್ಕೆ ವಿಶೇಷ ಪ್ಯಾಕೇಜ್ ನೀಡುವ ಕುರಿತು ಚುನಾವಣೆ ಮುನ್ನ ವಾಗ್ದಾನ ನೀಡಿದ್ದ ಸಿಎಂಗೆ ಬಿಎಸ್‌ಎಸ್ಕೆ ಕಾರ್ಖಾನೆಗೆ ಕಬ್ಬು ಪೂರೈಸುವ ರೈತರು ಸಹ ಸಿಎಂ ಭೇಟಿಗೆಂದು ಕಾದು ಕುಳಿತಿದ್ದರು. ಏರ್ಪೋರ್ಟ್‌ನಿಂದ ಸಮ್ಮೇಳನ



ನಡೆದ ಝಿರಾ ಫಂಕ್ಶನ್ ಹಾಲ್ ವರೆಗೂ ಒಂದೂ ಕಡೆಯೂ ರೈತರಿಗೆ ಸಿಎಂ ಭೇಟಿಗೆ ಅವಕಾಶ ಸಿಗದ ಕಾರಣ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಹೊಸ ದಿಗಂತಕ್ಕೆ ಪ್ರತಿಕ್ರಿಯಿಸಿದ ರೈತರಾದ ವಿ.ಕೆ.ದೇಶಪಾಂಡೆ, ರೈತರ ಮಗನೆಂದು ಹೇಳಿಕೊಳ್ಳುವ ಸಿದ್ದರಾಮಯ್ಯರಿಗೆ ರೈತರ ನೋವು ಆಲಿಸಲು ಒಂದು ನಿಮಿಷವೂ ಸಮಯ ಇಲ್ಲದಿರುವುದು ನೋವಿನ ಸಂಗತಿ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹಾಗೂ ಪೌರಾಡಳಿತ ಸಚಿವ ರಹೀಂ ಖಾನ್ ಇವರಿಬ್ಬರೂ ರೈತರ ಸಮಸ್ಯೆಯನ್ನು ಸಿಎಂ ಗಮನಕ್ಕೆ ತರುವಲ್ಲಿ ವಿಫಲರಾಗಿದ್ದು, ಇವರಿಬ್ಬರೂ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕಾರಂಜಾ ಸಂತ್ರಸ್ತರ ರಕ್ಷಣಾ ವೇದಿಕೆಯ ರೈತರಾದ ಚಂದ್ರಶೇಖರ ಪಾಟೀಲ, ಸೋಮನಾಥ ಪಾಟೀಲ, ಬಳವಂತರಾವ, ಸಂಗಮೇಶ ಡಾಕುಳಗಿ, ರಂಜೋಳ ಶ್ರೀನಿವಾಸ, ಪ್ರದೀಪ ಹಿಲಾಲಪುರ, ಪವನ ಮೊಗದಾಳ್, ಅಣ್ಣಾಸಾಬ್, ಶೀಲವಂತ ಮಠಪತಿ, ಏಕನಾಥ್ ರಾಠೋಡ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಎಸ್‌ಪಿ ಕಚೇರಿ ಮೆಟ್ಟಿಲೇರಿದ ಹಿಂದು-ಮುಸ್ಲಿಂ ನವಜೋಡಿ

ಕೊಪ್ಪಳ: ಬಸ್‌ನಲ್ಲಿ ಪರಿಚಯವಾಗಿ ಪ್ರೀತಿಸಿ ಮದುವೆಯಾಗಿರುವ ಹಿಂದು ಯುವಕ ಹಾಗೂ ಮುಸ್ಲಿಂ ಯುವತಿಯ ನವಜೋಡಿ ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಮೆಟ್ಟಿಲೇರಿದ್ದಾರೆ.

ಕನಕಗಿರಿ ತಾಲೂಕಿನ ಹುಲಿಹೈದರ್ ನಿವಾಸಿ ಕೇಶವ್ ಹಾಗೂ ಗಂಗಾವತಿ ತಾಲೂಕಿನ ಸುಳೇಕಲ್ ಗ್ರಾಮದ ತಸ್ಲೀಮಾ ಕಳೆದ ಎರಡು ವರ್ಷಗಳಿಂದ ಪ್ರೀತಿಸುತ್ತಿದ್ದರು. ಬಸ್‌ನಲ್ಲಿ ಓಡಾಡುವಾಗ ಇವರ ಪರಿಚಯವಾಗಿತ್ತು. ಇತ್ತ ತಸ್ಲೀಮಾ ಮನೆಯಲ್ಲಿ ಆಕೆಗೆ ಬೇರೆಯವರ ಜೊತೆ ಮದುವೆ ಮಾಡಲು ಒತ್ತಾಯಿಸುತ್ತಿದ್ದ ಹಿನ್ನೆಲೆಯಲ್ಲಿ, ಈ ಜೋಡಿ ಕನಕಗಿರಿಯ ಲಕ್ಷ್ಮೀ ದೇವಸ್ಥಾನದಲ್ಲಿ ಮದುವೆಯಾಗಿದ್ದಾರೆ.

ಮದುವೆಯ ನಂತರ ಮುಸ್ಲಿಂ ಯುವತಿ ತಸ್ಲೀಮಾ ಹಣೆಗೆ ಕುಂಕುಮ ಇಟ್ಟು, ಅರಿಶಿಣ ಕೊಂಬು ಕಟ್ಟಿಕೊಂಡು ಹಿಂದು ಧರ್ಮದ ಸಂಪ್ರದಾಯದಂತೆ ಕೇಶವ್ ಕೈ ಹಿಡಿದಿದ್ದಾರೆ. ಮದುವೆಯಾದ ಬೆನ್ನಲ್ಲೇ ತಮಗೆ ಕುಟುಂಬದವರಿಂದ ತೊಂದರೆಯಾಗಬಹುದು ಎಂಬ ಭೀತಿಯಲ್ಲಿರುವ ಈ ಜೋಡಿ, ವಕೀಲರೊಂದಿಗೆ ಕೊಪ್ಪಳ ಎಸ್ಪಿ ಕಚೇರಿಗೆ ಬಂದು ರಕ್ಷಣೆ ನೀಡುವಂತೆ ಮನವಿ ಮಾಡಿದ್ದಾರೆ.

ನಮ್ಮ ಮನೆಯವರಿಂದ ಏನಾದರೂ ತೊಂದರೆಯಾಗಬಹುದು ಎಂಬ ಭಯವಿದೆ. ಯಾರೂ ನಮಗೆ ಏನೂ ಮಾಡಬಾರದು, ನಮ್ಮ ಪಾಡಿಗೆ ನಮ್ಮನ್ನು ಬದುಕಲು ಬಿಡಬೇಕು ಎಂದು ತಸ್ಲೀಮಾ ಮಾಧ್ಯಮಗಳ ಮುಂದೆ ಅಳಲು ತೋಡಿಕೊಂಡರು.



ದೇವಸ್ಥಾನಗಳಲ್ಲಿ ಧರ್ಮ ಶಿಕ್ಷಣ ಪೂರ್ವಜರ ಸಂಕಲ್ಪ: ಸೂಲಿಬೆಲೆ

ಯಲ್ಲಾಪುರ: ಜಗತ್ತಿನ ಎಲ್ಲ ಜೀವಕೋಟಿಗಳನ್ನು ಪೂಜಿಸುವ ಪ್ರತಿಯೊಬ್ಬನಲ್ಲೂ ಭಗವಂತನನ್ನು ಕಾಣುವ ಏಕೈಕ ಧರ್ಮ ಹಿಂದೂ ಧರ್ಮವಾಗಿದೆ. ಜಗತ್ತಿನ ಯಾವದೇ ಮತ,ಪಂಥ ಹೇಳದೇ ಇರುವ ಯೋಗ, ಯಜ್ಞ, ಪರಂಪರೆ ಯನ್ನು ಜಗತ್ತಿಗೆ ಪರಿಚಯಿಸಿದ್ದು ಹಿಂದೂ ಧರ್ಮ ಮಾತ್ರ ಎಂದು ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಹೇಳಿದರು.



ತಾಲೂಕಿನ ಆನಗೋಡದಲ್ಲಿರುವಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ನಡೆದ ಅಷ್ಟಬಂಧ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು, ದೇವಸ್ಥಾನಗಳಲ್ಲಿ ಧರ್ಮ ಶಿಕ್ಷಣ ನಡೆಯಬೇಕು ಎಂಬುದು ನಮ್ಮ ಪೂರ್ವಜರ ಸಂಕಲ್ಪವಾಗಿದ್ದು, ಇಂದಿನ ಕಾಲದಲ್ಲೂ ಅದನ್ನು ಪುನರುಜ್ಜೀವನಗೊಳಿಸುವ ಅಗತ್ಯವಿದೆ ಎಂದರು.

ಮಂದಿರಗಳ ಪುನರುತ್ಥಾನಗಳ ಮೂಲಕವೇ ಭಾರತ ಪುನರ್‌ನಿರ್ಮಾಣಗೊಂಡಿದೆ. ಅಯೋಧ್ಯೆ ರಾಮ ಮಂದಿರ ನಿರ್ಮಾಣಕ್ಕೂ ಶತ ಶತಮಾನಗಳ ಹೋರಾಟ ನಡೆದಿದೆ. ಆದರೆ ಇದೀಗ ಮಂದಿರ ನಿರ್ಮಾಣ ವಾಗಿರುವದನ್ನು ನೋಡುವ ಪುಣ್ಯನಮ್ಮದಾಗಿದೆ. ನಿಜವಾದ ಸಂಕಲ್ಪ ಬಂದಾಗ ಅದು ಸಾಧ್ಯವಾಗುತ್ತದೆ ಮುಂದೆಯೂ ಹೀಗೆ ಕೃಷ್ಣ ಮಥುರಾದಲ್ಲೂ ಆಸೀನನಾಗುತ್ತಾನೆ

ನಮ್ಮ ಹಿರಿಯರ ಕನಸುಗಳನ್ನು ಸಾಕಾರಗೊಳಿಸುವ ಜೊತೆಗೆ, ಸಮಾಜದ ಮೇಲೆ ಆಗುವ ಪ್ರಹಾರಗಳನ್ನು ತಡೆಯಲು ನಾವು ಸಿದ್ದರಾಗಬೇಕು ಎಂದರಲ್ಲದೆ, ಇಂದಿನ ಯುವ ಪೀಳಿಗೆಯ ಮೊಬೈಲ್‌ಗಳ ಮಾಯಾ ಜಾಲದಲ್ಲಿ ಮಕ್ಕಳು ಸಿಲುಕುತ್ತಿದ್ದಾರೆ. ಇದರಿಂದ ಅವರ ಬದುಕು ತಪ್ಪು ದಿಕ್ಕಿಗೆ ಹೋಗುವ ಸಾಧ್ಯತೆ ಇದೆ ಹಾಗಾಗದಂತೆ ಸೂಕ್ತ ಮಾರ್ಗದರ್ಶನ ನೀಡಬೇಕು. ದೇವಸ್ಥಾನಗಳು ಸಮಾಜವನ್ನು ಜಾಗೃತಿಗೊಳಿಸಿ, ಮನಸ್ಸುಗಳನ್ನು ಕಟ್ಟುವ ಕೇಂದ್ರಗಳಾಗಬೇಕು ಎಂದು ಹೇಳಿದರು.

ವಿಶ್ವದರ್ಶನಸಂಸ್ಥೆಅಧ್ಯಕ್ಷಹರಿಪ್ರಕಾಶ ಕೋಣೆಮನೆ ಪ್ರಾಸ್ತವಿಕ ಮಾತನಾಡಿ ಈ ದೇವಸ್ಥಾನ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ವಾಗಿಯೂ ವಿಶೇಷತೆ ಹೊಂದಿದೆ.ದೇವಸ್ಥಾನದ ಅಭಿವೃದ್ಧಿ ಯಲ್ಲಿ ಗಣಪತಿ ಮನಿಗದ್ದೆ ಯವರ ಇಡೀ ಕುಟುಂಬ ವೆ ತನುಮನ ಧನದಿಂದ ಸಮರ್ಪಿಸಿಕೊಂಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ನಾರಾಯಣ ಕಾಮೇಶ್ವರ ಭಟ್ಟ ಅಗ್ಗಾಶಿಕುಂಬ್ರಿ, ವಿದ್ವಾನ್ ಗಣಪತಿ ರಾ.ಭಟ್ಟ ಅಂಗಭಟ್ರಮನೆ, ಸತೀಶ ಯಲ್ಲಾಪುರ, ಗಿರೀಶ ಭಟ್ಟ ಅಗ್ಗಾಶಿಮನೆ, ಅರ್ಚಕ ಗೋಪಾಲಕೃಷ್ಣ ಭಟ್ಟ ಮತ್ತು ಮಹಾದೇವಿ ಭಟ್ಟ ಅವರನ್ನು ಸನ್ಮಾನಿಸಲಾಯಿತು.

ದೇವಸ್ಥಾನ ಸಮಿತಿಯ ಅಧ್ಯಕ್ಷ ಗಣಪತಿ ಮಾನಿಗದ್ದೆ ಅಧ್ಯಕ್ಷತೆ ವಹಿಸಿ, ದೇವಾಲಯ ನಿರ್ಮಾಣ ಕಾರ್ಯದಲ್ಲಿ ಸಹಕರಿಸಿದವರನ್ನು ಸ್ಮರಿಸಿದರು. ಗಣೇಶ ಹೆಗಡೆ ನೆರ್ಲೆಮನೆ ಸ್ವಾಗತಿಸಿದರು. ಸತೀಶ ಯಲ್ಲಾಪುರ ನಿರ್ವಹಿಸಿದರು. ಕಾರ್ಯದರ್ಶಿನರಸಿಂಹವಡಗಿರಿಪಾಲ್ ವಂದಿಸಿದರು.

47ನೇ ದಿನಕ್ಕೆ ಮುಂದುವರಿದ ಪ್ರಜಾಸೌಧ ಧರಣಿ

ತಾಳಿಕೋಟೆ: ಪ್ರಜೆಗಳಿಗಾಗಿ ನಿರ್ಮಾಣವಾಗುವ ಸೌಧವು ಪ್ರಜೆಗಳ ಕೈಗೆಟುಕುವಂತಿರಬೇಕೇ ಹೊರತು, ನಿರ್ಜನ ಪ್ರದೇಶದ ಪಾಲಿಗಲ್ಲ, ಇದು ಕಳೆದ 46 ದಿನಗಳಿಂದ ತಾಳಿಕೋಟೆಯ ಬಸವೇಶ್ವರ ವೃತ್ತದಲ್ಲಿ ಪ್ರತಿಧ್ವನಿಸುತ್ತಿರುವ ಆಕ್ರೋಶದ ನುಡಿಗಳು.



ಮೈಲೇಶ್ವರ ಗ್ರಾಮದ ಬಳಿ ಉದ್ದೇಶಿತ 'ಪ್ರಜಾಸೌಧ'ದ ಸ್ಥಳ ಆಯ್ಕೆಯನ್ನು ವಿರೋಧಿಸಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು ಶನಿವಾರ 46ನೇ ದಿನಕ್ಕೆ ಕಾಲಿಟ್ಟಿದ್ದು, ಹೋರಾಟದ ಕಿಚ್ಚು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ತಾಲೂಕಿನ ಸಮಸ್ತ ಹಿರಿಯರು, ಯುವಜನತೆ ಮತ್ತು ವಿವಿಧ ಸಂಘಟನೆಗಳು ಈ ನ್ಯಾಯಯುತ ಹೋರಾಟಕ್ಕೆ ಕೈಜೋಡಿಸಿವೆ.

ಹೋರಾಟ ಸಮಿತಿಯ ಪದಾಽಕಾರಿಗಳಾದ ರವಿ ಕಟ್ಟಿಮನಿ ಹಾಗೂ ಸಿರಸಕುಮಾರ ಹಜೇರಿ ಮಾತನಾಡಿ, ''ಅಲ್ಲಿ ಹೋಗಲು ಸರಿಯಾದ ಸಾರಿಗೆ ವ್ಯವಸ್ಥೆಯಿಲ್ಲ, ಸುರಕ್ಷತೆಯೂ ಇಲ್ಲ, ವೃದ್ಧರು, ಮಹಿಳೆಯರು ಮತ್ತು ಅಂಗವಿಕಲರು ಕಿಲೋಮೀಟರ್‌ಗಟ್ಟಲೆ ದೂರದ ಕಾಡು ದಾರಿಯಲ್ಲಿ ಓಡಾಡಲು ಸಾಧ್ಯವೇ? ಇದು ಅಽಕಾರಿಗಳ ಮತ್ತು ಶಾಸಕರ ಹಠಮಾರಿತನಕ್ಕೆ ಸಾಕ್ಷಿ,'' ಎಂದು ಆಕ್ರೋಶ ವ್ಯಕ್ತಪಡಿಸಿದರು.

?ಜಿಲ್ಲಾ ಉಸ್ತುವಾರಿ ಸಚಿವರ ನಡೆಯನ್ನು ತೀವ್ರವಾಗಿ ಖಂಡಿಸಿದ ಮುಖಂಡರು, ಸಚಿವರು ಜಿಲ್ಲೆಯ ಜನರ ದನಿಯಾಗಬೇಕಿತ್ತು. 46 ದಿನಗಳಿಂದ ಜನರು ಬೀದಿಯಲ್ಲಿ ಕುಳಿತಿದ್ದರೂ ಸಚಿವರ ಮೌನ ಮುರಿಯದಿರುವುದು ಅವರ ಬೇಜವಾಬ್ದಾರಿತನವನ್ನು ತೋರಿಸುತ್ತದೆ ಎಂದು ಕಿಡಿಕಾರಿದರು.

ಈ ಸಂಧರ್ಭದಲ್ಲಿ ಹೋರಾಟ ಸಮಿತಿಯ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್.ಬಿ. ಕಟ್ಟಿಮನಿ, ಆರ್.ಎಸ್. ಪಾಟೀಲ (ಕುಚಬಾಳ) ಮುತ್ತಪ್ಪ ಚಮಲಾಪುರ, ಕಾಶೀನಾಥ ಮುರಾಳ, ಮಾಸುಮಸಾಬ ಕೆಂಭಾವಿ, ಮುರಿಗೆಪ್ಪ ಸರಶೆಟ್ಟಿ, ದತ್ತು ಹೆಬಸೂರ, ಮೈನು ಬೆಪಾರಿ, ಪರಶುರಾಮ ತಂಗಡಗಿ, ನಾಗೇಶ ಕಟ್ಟಿಮನಿ, ದೇವೇಂದ್ರ ಹಾದಿಮನಿ, ವಿಜಯಸಿಂಗ್ ಹಜೇರಿ, ರಾಮಣ್ಣ ಕಟ್ಟಿಮನಿ, ಸಂಜು ಬರದೇನಾಳ, ಕಳಕುಸಾ ರಂಗರೇಜ್, ಸುರೇಶ ಹಜೇರಿ, ಮಹಿಂದ್ರಕರ ಮಹೇಶ ಛಲವಾದಿ, ಪ್ರಕಾಶ್ ಹಜೇರಿ ಮುದಕಪ್ಪ ಬಡಿಗೇರ, ಸುರೇಶ ಪುಲುಸ್, ಅಮಿತಸಿಂಗ್ ಮನಗೂಳಿ, ಮಲ್ಲು ಮೇಟಿ, ಸದ್ದಾಂ ಹುಸೇನ್ ಬೀಳಗಿ, ಸೇರಿದಂತೆ ಅನೇಕರು ಮತ್ತು ಪಟ್ಟಣದ ಗಣ್ಯರು ಭಾಗವಹಿಸಿದ್ದರು.

ದಡ್ಡೇನವರ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಇಂದು ಲೋಕಾರ್ಪಣೆ

ಬಾಗಲಕೋಟೆ: ವೈದ್ಯಕೀಯ ಕ್ಷೇತ್ರದಲ್ಲಿ ವಿಶ್ವಾಸರ್ಹ ಸೇವೆ ಮೂಲಕ ಮನ್ನಣೆಗಳಿಸಿರುವ ನಗರದ ದಡ್ಡೇನವರ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಿಂದ ನಿರ್ಮಾಣಗೊಂಡಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಬಾಗಲಕೋಟೆ ಹೃದಯ ಕೇಂದ್ರವು ಎ.12ರ ಭಾನುವಾರ ಬೆಳಗ್ಗೆ 10.30ಕ್ಕೆ ಲೋಕಾರ್ಪಣೆಗೊಳ್ಳಲಿದೆ.

ಕೊಪ್ಪಳ ಗವಿಸಿದ್ದೇಶ್ವರ ಮಠದ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ, ಬಾಗಲಕೋಟೆ ಚರಂತಿಮಠದ ಶ್ರೀ ಪ್ರಭುಸ್ವಾಮೀಜಿ ಅವರಿಂದ ನೂತನ ಆಸ್ಪತ್ರೆ ಲೋಕಾರ್ಪಣೆಗೊಳ್ಳಲಿದ್ದು, ಸಮಾರಂಭದ ಅಧ್ಯಕ್ಷತೆಯನ್ನು ಬವಿವ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಲೋಕಾರ್ಪಣೆಗೊಳಿಸುವರು. ಜಿಲ್ಲೆಯ ಸಚಿವರು, ಶಾಸಕರು, ಮಾಜಿ ಶಾಸಕರು ಸಮಾರಂಭದಲ್ಲಿ ಪಾಲ್ಗೊಳ್ಳುವರು ಎಂದು ಆಸ್ಪತ್ರೆಯ ಮುಖ್ಯಸ್ಥ, ಹಿರಿಯ ತಜ್ಞ ಡಾ.ಎಂ.ಎಸ್.ದಡ್ಡೇನವರ ಮಾಹಿತಿ ನೀಡಿದರು.

ನೂತನ ಆಸ್ಪತ್ರೆಯೂ ಉತ್ತರ ಕರ್ನಾಟಕದಲ್ಲೇ ಹಲವು ಪ್ರಥಮಗಳಿಗೆ ಸಾಕ್ಷಿಯಾಗುತ್ತಿದ್ದು, ಅಂತಾರಾಷ್ಟ್ರೀಯ ಗುಣಮಟ್ಟದ ಚಿಕಿತ್ಸೆಯನ್ನು ಒದಗಿಸುವ ನಿಟ್ಟಿನಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ತೆರೆಯಲಾಗುತ್ತಿದೆ. ಹೃದ್ರೋಗ ಶಸ್ತ್ರಚಿಕಿತ್ಸೆಗಾಗಿಯೇ ವಿಶೇಷ ಶಸ್ತ್ರಚಿಕಿತ್ಸಾ ಕೊಠಡಿಯಿದ್ದು, ಅತ್ಯಾಧುನಿಕ ತಂತ್ರಜ್ಞಾನವನ್ನು ಒಳಗೊಂಡಿದೆ ಎಂದು ವಿವರಿಸಿದರು.

ಐದುದಶಕಗಳಸೇವೆಯಅನುಭವವನ್ನು ಆಧರಿಸಿ ಬಾಗಲಕೋಟೆಗೆ ಅಗತ್ಯವಿರುವ ರೀತಿಯಲ್ಲಿ ಆಸ್ಪತ್ರೆ ನಿರ್ಮಿಸಿದ್ದೇವೆ. ಹಿಂದಿನಿಂದಲೂ ಅಲ್ಪಲಾಭ ಅಧಿಕ ಸೇವೆ ಎಂಬುದು ನಮ್ಮ ಆಸ್ಪತ್ರೆಯ ಧ್ಯೇಯ. ರೋಗಿಗಳಿಗೆ ಎಲ್ಲ ಬಗೆಯ ಆಧುನಿಕ ಸೇವೆಗಳ ಜತೆಗೆ ಸಿಬ್ಬಂದಿಯಿಂದ ಮಾತೃ ವಾತ್ಸಲ್ಯದ ಸೇವೆ ಲಭಿಸಲಿದೆ ಎಂದು ವಿವರಿಸಿದರು.



ಹೃದ್ರೋಗ ತಜ್ಞ ಡಾ.ಸಂತೋಷ ಚಿಕ್ಕೋಡಿ ಮಾತನಾಡಿ, ಹೃದ್ರೋಗಕ್ಕೆ ಸಂಬಂಽಸಿದಂತೆ ತಕ್ಷಣ ಚಿಕಿತ್ಸೆ ಸಿಗುವ ಎಲ್ಲ ವ್ಯವಸ್ಥೆ ನಮ್ಮಲ್ಲಿದೆ. ಈ ಭಾಗದಲ್ಲಿ ಮೊದಲ ಬಾರಿಗೆ ಎನ್ನುವಂತೆ ಅನೇಕ ತಂತ್ರಜ್ಞಾನಗಳನ್ನು ನಾವು ನಮ್ಮ ಆಸ್ಪತ್ರೆ ಮೂಲಕ ಒದಗಿಸುತ್ತಿದ್ದೇವೆ. 24★7 ರೋಗಿ ಬಂದಾಗ ವಿಶೇಷ ಪರಿಣಿತ ತಜ್ಞರೇ ರೋಗಿಗಳನ್ನು ಉಪಚರಿಸಲಿದ್ದಾರೆ ಸರ್ಕಾರದ ಎಲ್ಲ ಸೌಲಭ್ಯಗಳನ್ನು ಅಳವಡಿಸಿಕೊಂಡು ಚಿಕಿತ್ಸೆ ನೀಡಲಾಗುತ್ತಿದೆ ಎಂದರು.

ಆಸ್ಪತ್ರೆಯ ಇನ್ನೋರ್ವ ಮುಖ್ಯಸ್ಥ ಡಾ.ವಿಜಯ ದಡ್ಡೇನವರ ಮಾತನಾಡಿ, ಮೊಣಕಾಲು ಚಿಪ್ಪು ಜೋಡಣೆಯೂ ಸೇರಿದಂತೆ ಎಲವು, ಮೂಳೆಗಳಿಗೆ ಸಂಬಂಧಿಸಿದ ಚಿಕಿತ್ಸೆಗೂ ಅತ್ಯಾಧುನಿಕ ವ್ಯವಸ್ಥೆ ನಮ್ಮಲ್ಲಿದೆ. ಡಿಲಕ್ಸ್, ಅಲ್ಟ್ರಾ ಡಿಲಕ್ಸ್ ರೂಮುಗಳ ವ್ಯವಸ್ಥೆಯಿದ್ದು, ಆಸ್ಪತ್ರೆಯ ವಾತಾವರಣದಿಂದ ರೋಗಿಗಳನ್ನು ಹೊರಗೆ ತಂದು ಅವರಿಗೆ ನೆಮ್ಮದಿ ಸಿಗುವ ರೀತಿಯಲ್ಲಿ ಆಸ್ಪತ್ರೆ ರೂಪಗೊಂಡಿದೆ. ನಮ್ಮ ಬಹುದಿನಗಳ ಕನಸು ಈ ಮೂಲಕ ಸಾಕಾರಗೊಂಡಿದೆ. ದಡ್ಡೇನವರ ಆಸ್ಪತ್ರೆ ಹಿಂದಿನಿಂದಲೂ ತನ್ನ ಬದ್ಧತೆ ಮೂಲಕವೇ ಜನರಿಗೆ ಹತ್ತಿರವಾಗಿದೆ. ನೂತನ ಆಸ್ಪತ್ರೆಯೂ ಎ.20ರಿಂದ ರೋಗಿಗಳ ಸೇವೆಗೆ ಮುಕ್ತಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ಡಾ.ನೇಹಾ ದಡ್ಡೇನವರ ಮಾತನಾಡಿ, ಬಂಜೆತನ ನಿವಾರಣೆಯಲ್ಲಿ ನಮ್ಮ ಆಸ್ಪತ್ರೆ ಶೇ.70 ಮೀರಿದ ಸಾಧನೆ ಮಾಡಿದೆ. ನಾನು ಡಾ.ಕಾಮಿನಿರಾವ್ ಅವರ ಅಡಿಯಲ್ಲಿ ಕೆಲಸ ಮಾಡಿ ಬಂದು, ಅದೇ ಶಿಸ್ತು ಅಳವಡಿಸಿಕೊಂಡಿದ್ದೇನೆ. ನಮ್ಮ ಬಳಿ ಬಂದವರು ಗರ್ಭಧರಿಸುವುಷ್ಟೇ ಅಲ್ಲ ಮಗುವಿನೊಂದಿಗೆ ಖುಷಿಯ ಜೀವನ ಸಾಗಿಸಬೇಕೆಂಬುದು ನಮ್ಮ ಗುರಿ ಅದಕ್ಕಾಗಿ ಕಾಳಜಿ ಪೂರ್ವಕವಾಗಿ ನಾವು ಸೇವೆ ಸಲ್ಲಿಸುತ್ತ ಬಂದಿದ್ದೇವೆ. ಇನ್ನು ಮುಂದೆ ಅತ್ಯಾಧುನಿಕ ಸೇವೆಗಳೊಂದಿಗೆ ಅದು ಮುಂದವರಿಯಲಿದೆ ಎಂದರು.

ವಿರ್ಯಾಣು ಬ್ಯಾಂಕ್, ಬಾಡಿಗೆ ತಾಯಿಯಂಥ ಸೇವೆಗಳಿಗೆ ಸರ್ಕಾರದ ಅಧಿಕೃತ ಪರವಾನಿಗೆ ಹೊಂದಿದ್ದೇವೆ. ಚಿಕ್ಕ ವಯಸ್ಸಿನಲ್ಲಿ ಕ್ಯಾನ್ಸರ್‌ಗೆ ಗುರಿಯಾಗಿ ಚಿಕಿತ್ಸೆಗೆ ಒಳಗಾಗುವವರು ಅದರ ಚಿಕಿತ್ಸೆ ನಂತರ ವೀರ್ಯಾಣು ಕಳೆದುಕೊಳ್ಳುವ ಸಂಭವವಿರುತ್ತದೆ ಅಂಥವರು ಮೊದಲೇ ವಿರ್ಯಾಣು ಸಂಗ್ರಹಿಸಿಟ್ಟರೆ ಮುಂದೆ ಅವರಿಗೆ ಮಕ್ಕಳು ಪಡೆಯಲು ಅನುಕೂಲವಾಗುತ್ತದೆ. ಆದರೆ ಅದರ ಸಂಗ್ರಹ ವೈಜ್ಞಾನಿಕವಾಗಿರಬೇಕು. ಅಂಥ ಸೇವೆಗಳು ದಡ್ಡೇನವರ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆಯಲ್ಲಿ ಲಭ್ಯವಿವೆ ಎಂದರು.

ಡಾ.ಸುಮಂಗಲಾ ದಡ್ಡೇನವರ, ಡಾ.ಆನಂದ ದಡ್ಡೇನವರ, ಡಾ. ಬಸವರಾಜ ದಡ್ಡೇನವರ, ಡಾ.ಶಶಿಧರ ಖಾನಾಪುರ ಮತ್ತಿತರರು ಇದ್ದರು.



ಕಲಬುರಗಿ: ಜಿಲ್ಲೆಯ ಚಿತ್ತಾಪುರ ತಾಲೂಕಿನ ನಾಲ್ವಾರ ಸದ್ಗುರು ಶ್ರೀ ಕೋರಿಸಿದ್ದೇಶ್ವರ ಮಹಾಸಂಸ್ಥಾನಕ್ಕೆ ಸಿಎಂ ಸಿದ್ದರಾಮಯ್ಯ ಶನಿವಾರ ಸಂಜೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಸಚಿವರಾದ ಶರಣಪ್ರಕಾಶ್ ಪಾಟೀಲ, ಪ್ರಿಯಾಂಕ್ ಖರ್ಗೆ ಸೇರಿ ಹಲವು ಪ್ರಮುಖರು ಇದ್ದರು.

ಪ್ರತಿಯೊಬ್ಬರೂ ರಕ್ತದಾನ ಮಾಡಿ: ಡಾ.ತಿವಾರಿ

ಮುದ್ದೇಬಿಹಾಳ: ರಕ್ತದಾನ ಮಹಾದಾನ ಎನ್ನುವ ಮಾತು ಕೇವಲ ಮಾತಲ್ಲ, ಅದು ಅಕ್ಷರಶಃ ಸತ್ಯ. ಪ್ರತಿಯೊಬ್ಬರೂ ಆರೋಗ್ಯವಾಗಿರುವಾಗ ನಿಯಮಿತವಾಗಿ ರಕ್ತದಾನ ಮಾಡುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಇದು ಸಮಾಜದ ಜವಾಬ್ದಾರಿಯೂ ಹೌದು ಎಂದು ತಾಲೂಕು ಆರೋಗ್ಯ ಅಧಿಕಾರಿ ಡಾ.ಸತೀಶ ತಿವಾರಿ ಹೇಳಿದರು.

ತಾಲೂಕಿನ ಮುದ್ನಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ, ಹಡಲಗೇರಿ ವಸತಿಯುಕ್ತ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ರಾಷ್ಟ್ರಿಯ ಸೇವಾ ಯೋಜನೆಯ ವಾರ್ಷಿಕ ಶಿಬಿರದ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ರಕ್ತದಾನ ಶಿಬಿರದಲ್ಲಿ ಅವರು ಮಾತನಾಡಿದರು. ರಕ್ತವು ನಮ್ಮ ದೇಹದ ಅತ್ಯಂತ ಅಮೂಲ್ಯವಾದ ಭಾಗ. ರಕ್ತವನ್ನು ಯಾವುದೇ ಕಾರ್ಖಾನೆಯಿಂದ ತಯಾರಿಸಲಾಗುವದಿಲ್ಲ, ಅದು ಮನುಷ್ಯನಲ್ಲಿ ಮಾತ್ರ ಉತ್ಪಾದನೆಯಾಗುತ್ತದೆ. ಅಪಘಾತಗಳಲ್ಲಿ ಗಾಯಗೊಂಡವರು, ಶಸ್ತ್ರಚಿಕಿತ್ಸೆಗೊಳಗಾದವರು, ಗರ್ಭಿಣಿಯರು, ಕ್ಯಾನ್ಸರ್ ರೋಗಿಗಳಿಗೆ ರಕ್ತದ ಅವಶ್ಯಕತೆ ಇದ್ದಾಗ ಮತ್ತೊಬ್ಬ ಮನುಷ್ಯನ ದೇಹದಿಂದ ತೆಗೆದ ರಕ್ತವನ್ನು ಹಾಕುವದು ಅನಿವಾರ್ಯ. ಮುಖ್ಯವಾಗಿ



ಒಂದು ಜೀವ ಉಳಿಸಲು ಕಾರಣರಾಗಿದ್ದೇವೆ ಎಂಬ ಆತ್ಮತೃಪ್ತಿ ಹೊಂದುತ್ತೇವೆ. ಹಾಗಾಗಿ ಪ್ರತಿಯೊಬ್ಬರೂ ಇಂತಹ ಶಿಬಿರಗಳಲ್ಲಿ ರಕ್ತದಾನ ಮಾಡುವ ಅವಕಾಶಗಳನ್ನು ಕಳೆದುಕೊಳ್ಳಬೇಡಿ ಎಂದರು.

ಎನ್.ಎಸ್.ಎಸ್. ಕಾರ್ಯಕ್ರಮ ಅಽಕಾರಿ ಪ್ರೊ. ರವಿ ಕಟ್ಟಿಮನಿ, ಕಾಲೇಜಿನ ಸಹ ಪ್ರಾಧ್ಯಾಪಕಿ ಮಹೇಶ್ವರಿ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮಾಽಕಾರಿ ಚೆನ್ನಮ್ಮ ಚಿಲಮೂರ, ನ್ಯಾಯವಾದಿ ಚೇತನಶಿವಶಿಂಪಿಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿದರು.

ಅತಿಥಿ ಉಪನ್ಯಾಸಕರಾದ ವನಿತಾ ಕಲಾದಗಿ, ಮಹಾಂತೇಶ ಹುಣಶ್ಯಾಳ, ವಿನಯ ಗಡೇದ, ಪ್ರದೀಪ ಜಗ್ಗಲ, ಉಮೇಶ ರಾಠೋಡ, ಮಂಜುನಾಥಸಕ್ರೆಪ್ಪಗೋಳ, ಆಡಳಿತವೈದ್ಯಾಧಿಕಾರಿ ಡಾ.ಸಂಗಮೇಶ ದಶವಂತ, ಶಾಲೆಯ ಮುಖ್ಯಗುರು ಎಸ್.ಎ.ಮೆರೆಯೋರ್, ಸಹ ಶಿಕ್ಷಕಿ ಬಿ.ಎಸ್.ಕಡು, ಎಸ್.ಡಿ.ಎಂ.ಸಿ ಸದಸ್ಯರಾದ ಅಬ್ದುಲ್‌ರಜಾಕ ನದಾಫ್, ವಿಠ್ಠಲ ನ್ಯಾಯನೇಗಲಿ, ಮಹಾಂತೇಶ ಇಟಗಿ, ಆರೋಗ್ಯ ಇಲಾಖೆಯ ಅನುಸೂಯಾ ತೇರದಾಳ, ಭಾಗ್ಯಶ್ರೀ ಬಿರಾದಾರ, ಮಲ್ಲಿಕಾರ್ಜುನ ಉಗಲವಾಟ, ರೇವಣಸಿದ್ದಪ್ಪ ಅಮ್ಮಣ್ಣಿ, ಅನಿಲ ಡಿಗ್ಗಿ, ಯಲ್ಲಪ್ಪ ಚಲವಾದಿ, ಐ.ಸಿ.ಮಾನಕರ, ಚರಲಿಂಗೇಶ ಬಿದರಕುಂದಿ, ಮಂಜುನಾಥ ಹಡಪದ, ಶಾಲಾ ವಿದ್ಯಾರ್ಥಿಗಳು ಸೇರಿದಂತೆ ಹಲವರು ಭಾಗಿಯಾಗಿ ಶಿಬಿರವನ್ನು ಯಶಸ್ವಿಗೊಳಿಸಿದರು.

ಮಾನವ ಹಕ್ಕುಗಳ ಅರಿವು ಅಗತ್ಯ: ಡಾ.ಕುಲಕರ್ಣಿ

ವಿಜಯಪುರ: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಬದುಕುವ ಅವಕಾಶವಿದೆ ಅದರಂತೆ ಸಂವಿಧಾನದಲ್ಲಿ ವಿಶೇಷವಾಗಿ ಮಾನವ ಹಕ್ಕುಗಳಡಿಯಲ್ಲಿ ಇಂದು ಬದುಕಲು ಅವಕಾಶ ಮಾಡಿಕೊಡಲಾಗಿದೆ ಎಂದು ಬಿಎಲ್‌ಡಿಇ (ಡಿಯು) ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ರಘುವೀರ ಜಿ.ಕುಲಕರ್ಣಿ ಹೇಳಿದರು.

ನಗರದ ಬಿಎಲ್.ಡಿ.ಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಕಾಲೇಜಿನಲ್ಲಿ ಐಕ್ಯೂಎಸಿ ,ಮಾನವ ಹಕ್ಕುಗಳ ಕೋಶ ಮತ್ತು ರಾಜ ಶಾಸ್ತ್ರ ವಿಭಾಗದ ಸಹಯೋಗದಲ್ಲಿ ಎ.10 ರಂದು ಜರುಗಿದ ಯುದ್ಧದ ಪರಿಣಾಮ: ಮಾನವ ಹಕ್ಕುಗಳ ದೃಷ್ಟಿಕೋನ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ಇಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುತ್ತಿರುವ ನಾವುಗಳು ಮಾನವ ಹಕ್ಕುಗಳು ಅಡಿಯಲ್ಲಿ ಬದುಕುತ್ತಿದ್ದೇವೆ. ಅದರ ಅರಿವು ನಮಗಿರಬೇಕು. ಸಂವಿಧಾನದಲ್ಲಿರುವ ಮಾನವ ಹಕ್ಕುಗಳು ಮತ್ತು ವಿವಿಧ ಆರ್ಟಿಕಲ್ ಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದರು.ಸದ್ಯ ಮಾನವ ಹಕ್ಕುಗಳನ್ನು ದಮನಿತ ಗೊಳಿಸಲಾಗುತ್ತಿದೆ ಎಂಬುದು ಶೋಚನೀಯ ಸಂಗತಿಯಾಗಿದೆ.ಮೊದಲನೇ ಮತ್ತು ಎರಡನೇ ಜಾಗತಿಕ ಯುದ್ದಗಳು ಅಲ್ಲದೆ ವಾಸ್ತವದಲ್ಲಿ ಅಮೇರಿಕ,ಇಸ್ರೇಲ್ ಮತ್ತು ಇರಾನ್,ಲೆಬನಾನ್, ದೇಶಗಳ ನಡುವಿನ ಯುದ್ದದ ಪರಿಣಾಮದಿಂದಾಗಿ ಅಪಾರವಾದ ಹಾನಿಯನ್ನು ಇಲ್ಲಿ ಗಮನಿಸಬಹುದಾಗಿದೆ.ಇದರಲ್ಲಿ ಮಹಿಳೆಯರು ಮತ್ತು ಮಕ್ಕಳು ಬಲಿಗಾಗುತ್ತಿದ್ದಾರೆ. ವಿವಿಧ ದೇಶಗಳ ತಮ್ಮ ಅಂತರಿಕ ಕಲಹಗಳಿಂದ ಜೀವ ಸಂಕುಲ ನಷ್ಟಕ್ಕೀಡಾಗುತ್ತಿದೆ. ಇದರಿಂದ ಅನಾರೋಗ್ಯ,ಆಹಾರದ ಕೊರತೆ, ಮೂಲಸೌಲಭ್ಯಗಳ ಕೊರತೆ ಉಂಟಾಗಿ ಇದರಿಂದ ಮಾನವ ಹಕ್ಕಗಳ ಮೇಲೆ ದೊಡ್ಡ ಪರಿಣಾಮ ಬೀರುತ್ತಿದೆ,ಇಂತಹ ಸಂದರ್ಭದಲ್ಲಿ ಆರೋಗ್ಯದ ಹಿತದೃಷ್ಟಿಯಿಂದ ತುರ್ತು ಪ್ರಥಮ ಚಿಕಿತ್ಸೆ ಕ್ರಮ ಕೈಗೊಳ್ಳುವುದು ಅಗತ್ಯ.ಯುದ್ದದಿಂದಾಗಿ ಪರಿಸರ ವಿನಾಶ,ಅಲ್ಲದೆ ಶೈಕ್ಷಣಿಕ



ಚಟುಚವಟಿಕೆಗಳಿಗೆ ಧಕ್ಕೆಯಾಗಿ ಮಕ್ಕಳು ಮತ್ತೊಂದು ಚಟಕ್ಕೆ ದಾಸರಾಗಿ ಭಯುತ್ಪಾದಕರಾಗಿ ಹೊರಹೊಮ್ಮುತ್ತಾರೆ. ಇಂತಹ ಸಂದಭದಲ್ಲಿ ಮಾನವ ಹಕ್ಕಗಳನ್ನು ಉಲ್ಲಂಘನೆಯಾಗುತ್ತದೆ ಎಂಬುದು ಗಮನಿಸಬಹುದು.ಅಂತಹ ಸಂದರ್ಭದಲ್ಲಿ ಕಠಿಣ ಕಾನೂನು ಕ್ರಮಕ್ಕೂ ಅವಕಾಶವಿದೆ ಎಂದು ಹೇಳಿದರು.

ಅಲ್ಲದೆ ನಮ್ಮ ದೇಶದಲ್ಲಿ ಕೋವಿಡ್ ಸಂದರ್ಭಲ್ಲಿ ನಾವು ಎದುರಿಸಿದ ಕೆಟ್ಟ ಪರಿಸ್ಥಿಯನ್ನು ಮರೆಯುವಂತಿಲ್ಲ ಅಂತಹ ಸಂದರ್ಭದಲ್ಲಿ ಮಾನವ ಹಕ್ಕುಗಳ ಮೇಲೆ ಕೆಟ್ಟ ಪರಿಣಾಮ ಬೀರಿದ್ದನ್ನು ಗಮನಿಸಬಹದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಅನಿಲ್ ಬಿ. ನಾಯಕ,ಐಕ್ಯೂಎಸಿ ಸಂಯೋಜಕ ಡಾ. ಪಿ. ಎಸ್. ಪಾಟೀಲ,ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ತರನ್ನುಮ್ ಜಬೀನ್ ಖಾನ್. ಮಾನವ ಹಕ್ಕುಗಳ ಕೋಶದ ಅಧ್ಯಕ್ಷೆ ಪ್ರೊ.ರೂಪಾ ಎಸ್. ಮೋಟಗಿ, ಡಾ.ಗಿರೀಶ.ಹನಮರೆಡ್ಡಿ, ಡಾ.ಆರ್.ಜಿ.ಕಮತರ, ಡಾ.ಎಂ.ಬಿ.ಪಾಟೀಲ, ಮಹಾವಿದ್ಯಾಲಯದ ಇನ್ನಿತರ ಬೋಧಕ,ಬೋಧಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಭೀಮಶಿ ಮದರಕಂಡಿ ಕಾರ್ಯಕ್ರಮ ನಿರ್ವಹಿಸಿದರು.

ಕಿರುಸುದ್ದಿ

ರಾಜ್ಯದಲ್ಲಿ ಹದಗೆಟ್ಟ ಕಾನೂನು ಸುವ್ಯವಸ್ಥೆ: ಜೋಶಿ

ಧಾರವಾಡ: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ಇದಕ್ಕೆ ಯೂಥ್ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಹತ್ಯೆಯೇ ಸಾಕ್ಷಿ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಆರೋಪಿಸಿದರು. ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಪೊಲೀಸ್ ವರ್ಗಾವಣೆಯಲ್ಲಿ ಸರ್ಕಾರವೇ ಭ್ರಷ್ಟಾಚಾರದಲ್ಲಿ ತೊಡಗಿದಾಗ ಇಂತಹ ಕೃತ್ಯಗಳು ನಡೆಯುವುದು ಬಹಳ ಸಹಜ ಎಂದು ಬೇಸರ ವ್ಯಕ್ತಪಡಿಸಿದರು. ಓರ್ವ ಕಾಂಗ್ರೆಸ್ ಮುಖಂಡ ಮೊತ್ತಬ್ಬ ಕಾಂಗ್ರೆಸ್ ಮುಖಂಡನ ಹತ್ಯೆ ಮಾಡಿಸಿದ್ದು ದುರದೃಷ್ಟಕರ. ಕಾಂಗ್ರೆಸ್ ಮುಖಂಡನಿಗೆ ರಕ್ಷಣೆ ಇಲ್ಲ. ಇನ್ನು ಸಾಮಾನ್ಯ ಜನರ ಗತಿ ಏನು? ಎಂದು ಜೋಶಿ ಪ್ರಶ್ನಿಸಿದರು. ಹುಬ್ಬಳ್ಳಿ ಲವ್ ಜಿಹಾದ್ ಪ್ರಕರಣಕ್ಕೆ ಪ್ರತಿಕ್ರಿಯಿಸಿ, ಲವ್ ಜಿಹಾದ್ ಬಗ್ಗೆ ದೇಶದಲ್ಲಿ ವ್ಯವಸ್ಥಿತ ಜಾಲ ಕೆಲಸ ಮಾಡುತ್ತಿದೆ. ಕಾಂಗ್ರೆಸ್ ಸರ್ಕಾರ ಇರುವ ಕಡೆಗೆ ಇದು ಹೆಚ್ಚಾಗಿ ನಡೆಯುತ್ತದೆ ಎಂದು ದೂರಿದರು. ರಾಜ್ಯ ಸರ್ಕಾರ ಜನರು ಬೀದಿಗೆ ಇಳಿಯುವ ಸ್ಥಿತಿ ತರಬಾರದು. ಹೀಗಾಗಿ ಲವ್ ಜಹಾದ್ ಗಂಭೀರವಾಗಿ ಪರಿಗಣಿಸಬೇಕು. ಇದಕ್ಕೆ ಕಡಿವಾಣ ಹಾಕಲು ಆಗ್ರಹಿಸಿದ ಜೋಶಿ, ಉಪಚುನಾವಣೆ ಫಲಿತಾಂಶದ ಬಳಿಕ ಉತ್ತರ ಸಿಗಲಿದೆ ಎಂದರು.

ಹೋಟೆಲ್‌ನಲ್ಲಿ ಅಗ್ನಿ ಅವಘಡ

ಬೆಳಗಾವಿ: ನಗರದಲ್ಲಿರುವ ಕ್ಲಬ್ ರಸ್ತೆಯಲ್ಲಿರುವ ಪ್ರತಿಷ್ಠಿತ ಈಫಾ ಹೋಟೆಲ್‌ನಲ್ಲಿ ಭಾರೀ ಅಗ್ನಿ ಅವಘಡ ಸಂಭವಿಸಿದೆ. ಬೆಂಕಿ ಹೊತ್ತಿಕೊಂಡ ತಕ್ಷಣ ಸಿಬ್ಬಂದಿ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದು, ಸ್ಥಳಕ್ಕೆ



ಧಾವಿಸಿದ ಸಿಬ್ಬಂದಿ ಬೆಂಕಿ ನಂದಿಸಲು ಹರಸಾಹಸ ಪಟ್ಟಿದ್ದಾರೆ. ಹೋಟೆಲ್‌ನಲ್ಲಿದ್ದ ಪ್ರವಾಸಿಗರು ಮತ್ತು ಸಿಬ್ಬಂದಿ ಅಪಾಯದಿಂದ ಪಾರಾಗಿದ್ದಾರೆ. ಆದರೆ, ಭಾರೀ ಪ್ರಮಾಣದ ಹಾನಿಯಾಗಿದೆ. ಅಗ್ನಿಶಾಮಕ ದಳದವರು ಬೆಂಕಿಯನ್ನು ನಿಯಂತ್ರಣಕ್ಕೆ ತಂದಿದ್ದಾರೆ. ಇನ್ನು ಘಟನೆಯ ವಿಡಿಯೋ ಮಾಡುತ್ತಿದ್ದ ಸಾರ್ವಜನಿಕರನ್ನು ಹೋಟೆಲ್ ಸಿಬ್ಬಂದಿ ತಡೆದಿದ್ದಾರೆ.

ಈ ಘಟನೆಯು ಶಾರ್ಟ್ ಸರ್ಕ್ಯೂಟ್ ಅಥವಾ ಅಡುಗೆಮನೆಯಲ್ಲಿನ ಅನಿಲ ಸೋರಿಕೆಯಿಂದ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ. ಆದರೆ, ನಿಖರ ಕಾರಣ ತನಿಖೆ ನಂತರ ತಿಳಿಯಬೇಕಿದೆ.

ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶದ ಯಶಸ್ಸಿಗೆ ಸಚಿವ ಶಿವಾನಂದ ಪಾಟೀಲ ಕೃತಜ್ಞತೆ

ಆರೋಗ್ಯ, ನೀರಾವರಿ ನನ್ನ ಕನಸು

ಹಾವೇರಿ: ಸುಧಾರಿತ ವೈದ್ಯಕೀಯ ಸೇವೆ, ಒಳ್ಳೆಯ ಶಿಕ್ಷಣ, ಕುಡಿವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಹಾಗೂ ನೀರಾವರಿ ಸೌಲಭ್ಯ ಕಲ್ಪಿಸುವುದು ನನ್ನ ಕನಸು. ಈ ದೃಷ್ಟಿಕೋನದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಹೇಳಿದರು.

ಜಿಲ್ಲೆಯಲ್ಲಿ ಆಯೋಜಿಸಿದ್ದ ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶದ ಯಶಸ್ಸಿನ ಹಿನ್ನೆಲೆಯಲ್ಲಿ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಕೃತಜ್ಞತೆ ಸಲ್ಲಿಸಲು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ಉಸ್ತುವಾರಿ ಸಚಿವನಾಗಿ ಈ ಜಿಲ್ಲೆಗೆ ಕೆಲವು ಸಮಸ್ಯೆಗಳಿಗಾದರೂ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಶ್ರಮಿಸುತ್ತೇನೆ. ಈ ಹಾದಿಯಲ್ಲಿ ನಿಮ್ಮ ಸಹಕಾರ ಅಗತ್ಯ. ಹಿಮ್ಸ್ ಕಟ್ಟಡಕ್ಕೆ ರಾಜ್ಯ ಸರ್ಕಾರ ಸುಮಾರು 200ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದು, ಕಾಲೇಜು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ವಿದ್ಯಾರ್ಥಿಗಳ ಪ್ರವೇಶ ಮಿತಿ 150ರಿಂದ 200ಕ್ಕೆ ಹೆಚ್ಚಳವಾಗಲಿದೆ. ಪ್ಯಾರಾ ಮೆಡಿಕಲ್ ಕಾಲೇಜು, ಟ್ರಾಮಾ ಸೆಂಟರ್ ಕೂಡಾ ನಿರ್ಮಾಣವಾಗಲಿದೆ ಎಂದು ವಿವರಿಸಿದರು.

ಉಸ್ತುವಾರಿ ಸಚಿವನಾಗಿ ಜವಾಬ್ದಾರಿ ವಹಿಸಿಕೊಂಡ ವೇಳೆ ಜಿಲ್ಲಾಸ್ಪತ್ರೆಯ ಹೊರರೋಗಿಗಳ ಸಂಖ್ಯೆ 800ರಷ್ಟಿತ್ತು, ಈಗ 1,600 ದಾಟಿದೆ. ವೈದ್ಯಕೀಯ ಸೇವೆ ಸುಧಾರಣೆಯಾದ ಕಾರಣ ದಾವಣಗೆರೆ ಮತ್ತು ಹುಬ್ಬಳ್ಳಿಗೆ ಹೋಗುತ್ತಿದ್ದ ಜಿಲ್ಲೆಯ ಜನ ಈಗ ಜಿಲ್ಲಾ ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದಾರೆ. ಭವಿಷ್ಯದ ದಿನಗಳಲ್ಲಿ ಎಲ್ಲ ರೀತಿಯ ವೈದ್ಯಕೀಯ ಸೇವೆ ಜಿಲ್ಲೆಯಲ್ಲಿ ಲಭ್ಯವಾಗಬೇಕು ಎಂಬುದು ನನ್ನ ಗುರಿಯಾಗಿದೆ ಎಂದರು.



ಸಿಎಂ-ಡಿಸಿಎಂ ಮೆಚ್ಚುಗೆ

ಹಾವೇರಿಯಲ್ಲಿ ಆಯೋಜಿಸಿದ್ದ ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ ಅಚ್ಚುಕಟ್ಟು ಮತ್ತು ವ್ಯವಸ್ಥಿತವಾಗಿ ನಡೆಯಿತು ಎಂದು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ ಹಾಗೂ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು.

ಪ್ರಶಂಸನಾ ಪತ್ರ ವಿತರಣೆ

ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಜಿಲ್ಲಾಧಿಕಾರಿ, ಜಿಪಂ ಸಿಇಒ, ಎಸ್ಪಿ, ಉಪವಿಭಾಗಾಧಿಕಾರಿಗಳು, ಜಿಲ್ಲೆಯ ಎಲ್ಲ ತಹಶೀಲ್ದಾರ್‌ಗಳನ್ನು ಸಚಿವರು ಸನ್ಮಾನಿಸಿದರು. ಕಂದಾಯ ಇಲಾಖೆಯ ಎಲ್ಲ ಸಿಬ್ಬಂದಿಗೆ ಪ್ರಶಂಸನಾ ಪತ್ರ ವಿತರಣೆ ಮಾಡಲಾಯಿತು.

ಹಾವೇರಿ ಜಿಲ್ಲೆಯ ಜನ ಒಂದು ಚಿಕ್ಕ ಕೆಲಸ ಮಾಡಿದರೂ ಒಳ್ಳೆಯ ಮಾತುಗಳನ್ನಾಡುತ್ತಾರೆ. ಈ ಜಿಲ್ಲೆಯ ಉಸ್ತುವಾರಿ ಸಚಿವನಾಗಿ ಕೆಲಸ ಮಾಡಲು ನನಗೂ ಖುಷಿಯಾಗುತ್ತದೆ. ರೈತರ ಹಲವು ಸಮಸ್ಯೆಗಳಿವೆ. ಹಾವೇರಿಯನ್ನು ಮಾದರಿ ಜಿಲ್ಲೆಯನ್ನಾಗಿ ಅಭಿವೃದ್ಧಿಪಡಿಸುವ ಆಶಯ ನನ್ನದು. ಅಧಿಕಾರಿಗಳ ಸಹಕಾರ ಇದ್ದರೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಹೀಗಾಗಿ ನಿಮ್ಮ ಸಹಕಾರ ನಿರೀಕ್ಷೆ ಮಾಡುತ್ತೇನೆ ಎಂದರು.

ಕರ್ನಾಟಕ ಅರಣ್ಯ ನಿಗಮದ ಅಧ್ಯಕ್ಷರಾದ ಶಾಸಕ ಬಸವರಾಜ ಶಿವಣ್ಣನವರ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ್ ನೀರಲಗಿ, ವಿಧಾನಸಭೆ ಉಪಾಧ್ಯಕ್ಷ ರುದ್ರಪ್ಪ ಲಮಾಣಿ, ಶಾಸಕರಾದ ಶ್ರೀನಿವಾಸ ಮಾನೆ, ಪ್ರಕಾಶ ಕೋಳೀವಾಡ, ಶಾಸಕ ಯಾಸಿರ್‌ಖಾನ್ ಪಠಾಣ್ ಸೇರಿದಂತೆ ಹಲವರು ಮಾತನಾಡಿದರು.

ಹೆಸ್ಕಾಂ ಅಧ್ಯಕ್ಷ ಅಜೀಂಪೀರ್ ಖಾದ್ರಿ, ಜಿಪಂ ಮಾಜಿ ಅಧ್ಯಕ್ಷ ಕೊಟ್ರೇಶಪ್ಪ ಬಸೇಗಣ್ಣಿ, ಮೋಹನ್ ಲಿಂಬಿಕಾಯಿ, ಮಾಜಿ ಶಾಸಕ ಬನ್ನಿಕೋಡ, ಜಿಲ್ಲಾಧಿಕಾರಿ ಡಾ.ಮಹಾಂತೇಶ ದಾನಮ್ಮನವರ್, ಜಿಪಂ ಸಿಇಒ ರುಚಿ ಬಿಂದಲ್, ಎಸ್ಪಿ ಯಶೋದಾ ವಂಟಿಗೋಡಿ, ಎಡಿಸಿ ನಾಗರಾಜ್, ಹಿಮ್ಸ್ ಡೀನ್ ಡಾ.ಪ್ರದೀಪ್ ಕುಮಾರ್ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಎಸ್.ಬಿ.ಆರ್–ಸಿಇಟಿ 2026 ಸ್ಕಾಲರ್‌ಶಿಪ್ ಪರೀಕ್ಷೆ ಇಂದು

ರಾಜ್ಯದ 5 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳ ನಿರೀಕ್ಷೆ

ಕಲಬುರಗಿ: ಸುಮಾರು 5 ಕೋಟಿ ರೂ.ಮೌಲ್ಯದ ಸ್ಕಾಲರ್‌ಶಿಪ್ ಪಡೆಯಲು ಎಸ್.ಬಿ.ಆರ್ ಸಿಇಟಿ-2026 ಪ್ರವೇಶ ಪರೀಕ್ಷೆ ಇಂದು ಏ.12ರಂದು ಮಧ್ಯಾಹ್ನ 3ರಿಂದ 5ಗಂಟೆಯವರೆಗೆ ಆಯೋಜಿಸಲಾಗಿದೆ.

ಕರ್ನಾಟಕ ರಾಜ್ಯ ಪಠ್ಯಕ್ರಮದ ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮದ 10ನೇ ತರಗತಿ ವಿದ್ಯಾರ್ಥಿಗಳಿಗೆ ಈ ಪರೀಕ್ಷೆ ನಡೆಸಲಾಗುತ್ತಿದೆ. ವಿದ್ಯಾಭಂಡಾರಿ ಲಿಂಗೈಕ್ಯ ಡಾ.ಶರಣಬಸವಪ್ಪ ಅಪ್ಪಾಜಿ ಆಶಯದಂತೆ, ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವ ಉದ್ದೇಶದಿಂದ ಈ ಯೋಜನೆ ರೂಪಿಸಲಾಗಿದೆ. 9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪಾ ಹೆಸರಿನಲ್ಲಿ 5 ಕೋಟಿ ರೂ. ಮೌಲ್ಯದ ಸ್ಕಾಲರ್‌ಶಿಪ್ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ರೂಪದಲ್ಲಿ ನೀಡಲಾಗುತ್ತಿದ್ದು, ಈಗಾಗಲೇ ರಾಜ್ಯದ ವಿವಿಧ ಭಾಗಗಳಿಂದ ಸುಮಾರು 5000ಕ್ಕೂ ಅಧಿಕ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡಿದ್ದಾರೆ.

ಪರೀಕ್ಷೆ ಬರೆಯಲು 6 ಕೇಂದ್ರಗಳಲ್ಲಿ ವ್ಯವಸ್ಥೆ ಮಾಡಲಾಗಿದ್ದು, ವಿದ್ಯಾರ್ಥಿಗಳು ತಮ್ಮ ಪ್ರವೇಶ ಪತ್ರಗಳನ್ನು ಕಾಲೇಜಿನ ಟೆಲಿಗ್ರಾಂ ಗುಂಪಿನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರವೇಶ ಪತ್ರದಲ್ಲಿರುವ ಎಂಟ್ರನ್ಸ್ ಸಂಖ್ಯೆಗಳ ಆಧಾರದ ಮೇಲೆ ಪರೀಕ್ಷಾ ಕೇಂದ್ರಗಳನ್ನು ನಿಗದಿಪಡಿಸಲಾಗಿದೆ.

ಪರೀಕ್ಷಾ ಕೇಂದ್ರಗಳ ವಿವರ ಹೀಗಿದೆ: ಮುಕ್ತಾಂಬಿಕಾ ಪಿಯು ಕಾಲೇಜು (ಎಂಟ್ರನ್ಸ್ ಸಂಖ್ಯೆ: 2026310001 ರಿಂದ 2026310480) ದೊಡ್ಡಪ್ಪ ಅಪ್ಪಾ ಪಿಯು ಕಾಲೇಜು (2026310481 ರಿಂದ 2026310880) ಅಪ್ಪಾ ಪಬ್ಲಿಕ್ ಶಾಲೆ (2026310881 ರಿಂದ 2026311600) ಎಸ್.ಬಿ.ಆರ್ ಪಬ್ಲಿಕ್ ಶಾಲೆ (2026311601 ರಿಂದ 2026313139) ಎಸ್.ಬಿ.ಆರ್ ಪಿಯು ಕಾಲೇಜು ಮೇನ್ ಬಿಲ್ಡಿಂಗ್ (2026313140 ರಿಂದ 2026314387) ಎಸ್.ಬಿ.ಆರ್ ಪಿಯು ಕಾಲೇಜು ಹೊಸ ಬಿಲ್ಡಿಂಗ್ (2026314388 ರಿಂದ 2026314830) ಪರೀಕ್ಷೆ ಸುಸೂತ್ರವಾಗಿ ನಡೆಸಲು ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಎನ್.ಎಸ್.ದೇವರಕಲ್ ತಿಳಿಸಿದ್ದಾರೆ.

ಸಂಶೋಧನೆ ಕ್ಷೇತ್ರದಲ್ಲಿ ಭಾರತ ಮುಂಚೂಣಿ

- ಡಾ.ವಾಲೀಕಾರ ಅಭಿನಂದನಾ ಸಮಾರಂಭ
- ಸಚಿವ ಪ್ರಹ್ಲಾದ ಜೋಶಿ ಅಭಿಮತ

ಧಾರವಾಡ: ವಿದೇಶಿ ಆಕ್ರಮಣದಿಂದ ಭಾರತೀಯ ಸಂಶೋಧನೆ ಮರೆಮಾಚಿದೆ. ಆದರೆ, ಸಂಶೋಧನೆಯಲ್ಲಿ ಭಾರತ ಮುಂಚೂಣಿಯಲ್ಲಿದೆ. ಈ ಜಗತ್ತಿಗೆ ಸೊನ್ನೆ ನೀಡಿದ ಕೊಡುಗೆ ಭಾರತೀಯರಿಗೆ ಸಲ್ಲುತ್ತದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ನಗರದ ಕರ್ನಾಟಕ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿಶ್ರಾಂತ ಕುಲಪತಿ ಡಾ.ಎಚ್.ಬಿ.ವಾಲೀಕಾರ ಅವರ ಅಮೃತ ಮಹೋತ್ಸವ ಹಾಗೂ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಗಣಿತತಜ್ಞ ರಾಮಾನುಜನ್ ಅವರಿಂದ ಹಿಡಿದು, ಅಬ್ದುಲ್ ಕಲಾಂ ಅವರವರೆಗೂ ಸಂಶೋಧನೆ ಮೂಲಕ ದೇಶಕ್ಕೆ ತಮ್ಮದೇ ಕೊಡುಗೆ ನೀಡಿದ್ದಾರೆ. ಸಂಶೋಧನೆಗೆ ಗಣಿತಶಾಸ್ತ್ರವೇ ಮೂಲ. ಜ್ಞಾನಾಧಾರಿತ ಆರ್ಥಿಕತೆ ಹೆಚ್ಚು ಪ್ರಸ್ತುತತೆ ಪಡೆದಿದ್ದಾಗಿ ಹೇಳಿದರು.

ಮನುಷ್ಯ ಸದಾಕಾಲ ಅಧ್ಯಯನ ಶೀಲರಾದಾಗ ಮಾತ್ರವೇ ಜೀವನದುದ್ದಕ್ಕೂ ಸಹ ಕ್ರಿಯಾಶೀಲವಾಗಿರಲು ಸಾಧ್ಯ. 75 ವರ್ಷಗಳು ತುಂಬು ಜೀವನ ನಡೆಸುವ ಜತೆ ಗಣಿತಶಾಸ್ತ್ರ ಮತ್ತು ಸಮಾಜಕ್ಕೆ ಕೊಡುಗೆ ನೀಡಿದ ವಾಲೀಕರ ಅವರಿಗೆ ಅಭಿನಂದನೆ ಸಲ್ಲಿಸಿದರು.

ರಾಜ್ಯ ಕಾನೂನು ಸಚಿವ ಎಚ್.ಕೆ.ಪಾಟೀಲ ಮಾತನಾಡಿ, ಡಾ.ಎಚ್.ಬಿ.ವಾಲೀಕಾರ ಅವರು ಆಧ್ಯಾತ್ಮಿಕ ಜೀವನದ ಕುರಿತು ಕೃತಿ ಬರೆದಿದ್ದು, ಅವರ ವಿದ್ವತ್ತಿಗೆ ಸಾಕ್ಷಿ. ಇಳಿಯ ವಯಸ್ಸಿನಲ್ಲಿ ವಾಲೀಕಾರ, ಅಭ್ಯಾಸ ಅವರ ಶ್ರೇಷ್ಠತೆಗೆ ಹಿಡಿದ ಕೈಗನ್ನಡಿ ಎಂದರು.

ರಾಜ್ಯದ ವಿಶ್ವವಿದ್ಯಾಲಯಗಳ ಸ್ಥಿತಿಗತಿ ಹದಗೆಟ್ಟಿವೆ. 14 ಸಾವಿರ ಹುದ್ದೆ ಖಾಲಿ ಇವೆ. ಕುಲಪತಿಗಳು ಸಿಬ್ಬಂದಿ ಸಂಬಳಕ್ಕೆ ಪರದಾಡುತ್ತಿದ್ದು, ಆದರೆ, ಯಾವೊಬ್ಬ ಅಧ್ಯಾಪಕರು, ಕೌನ್ಸಿಲ್ ಹಾಗೂ ಸಿಂಡಿಕೇಟ್ ಸದಸ್ಯರು ಧ್ವನಿ ಎತ್ತುತ್ತಿಲ್ಲ ಎಂದು ಬೇಸರಿಸಿದರು.

ಸಂಸದ ಜಗದೀಶ ಶೆಟ್ಟರ, ಕವಿವಿಯಲ್ಲಿ ಶೈಕ್ಷಣಿಕ ವಾತಾವರಣ ನಿರ್ಮಿಸುವಲ್ಲಿ ಪ್ರೊ. ವಾಲೀಕಾರ ಕೊಡುಗೆ ಅಪಾರ. ಪ್ರತಿ ಜಿಲ್ಲೆಗೊಂದು ವಿವಿಯ ಕುರಿತು ಚರ್ಚೆ ಆಗಬೇಕಿದೆ. ಅಲ್ಲದೇ, ವಿಶ್ವದರ್ಜೆ ಮಟ್ಟದ ವಿಶ್ವವಿದ್ಯಾಲಯಗಳ ಬೇಕಿದೆ ಎಂದು ಹೇಳಿದರು.

ವಿಶ್ರಾಂತ ಕುಲಪತಿ ಡಾ.ಮಲ್ಲಿಕಾ ಘಂಟಿ ಮತ್ತು ಶಾಸಕರಾದ ಅರವಿಂದ ಬೆಲ್ಲದ, ಅಬ್ಬಯ್ಯ ಪ್ರಸಾದ, ಎನ್.ಎಚ್.ಕೋನರಡ್ಡಿ, ಉದ್ಯಮಿ ವಿಜಯ ಸಂಕೇಶ್ವರ ಮಾತನಾಡಿ, ಡಾ. ಎಚ್.ಬಿ.ವಾಲೀಕಾರ ಜಗತ್ತಿನ ಆರನೇ ಶ್ರೇಷ್ಠ ಗಣಿತ ತಜ್ಞರು ಎಂದರು.

ಅಭಿನಂದನೆ ಸನ್ಮಾನ ಸ್ವೀಕರಿಸಿದ ಡಾ.ಎಚ್.ಬಿ.ವಾಲೀಕಾರ, ಕೃಷಿ ಬಗ್ಗೆ ಹೆಚ್ಚಿನ ಒಲವು ಇದ್ದರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕನಾದೆ. ಸಂಶೋಧನೆ ಆಸಕ್ತಿಯ ಕ್ಷೇತ್ರ. ಅಭಿನಂದಿಸಿದ ಸರ್ವರಿಗೂ ಕೃತಜ್ಞತೆ ಸಲ್ಲಿಸಿದ ಅವರು ರೂ.3 ಲಕ್ಷ ದತ್ತಿನಿಧಿ ಘೋಷಿಸಿದರು.

ಕುಲಪತಿ ಡಾ.ಎ.ಎಂ.ಖಾನ್ ಅಧ್ಯಕ್ಷತೆ ವಹಿಸಿದ್ದರು. ವಿಪ ಸದಸ್ಯ ಎಫ್.ಎಚ್.ಜಕ್ಕಪ್ಪನವರ, ಪ್ರೊ.ಎಸ್.ವಿ.ಸಂಕನೂರ, ಪ್ರೊ.ಎ.ಬಿ.ವೇದಮೂರ್ತಿ, ಪ್ರೊ.ಸಿ.ಎಸ್.ಶಿರಾಳಶೆಟ್ಟಿ, ಡಾ.ಸುಭಾಷ ನಾಟೀಕಾರ, ಸರಜೂ ಕಾಟ್ಕರ ಸೇರಿದಂತೆ ಅನೇಕರು ಇದ್ದರು.



ಹ್ಯಾಕಥಾನ್ ಯಶಸ್ವಿ: 357 ವಿದ್ಯಾರ್ಥಿಗಳು ಭಾಗಿ

ಹಳಿಯಾಳ: ಕೆಎಲ್‌ಎಸ್ ವಿಡಿಐಟಿ ಹಳಿಯಾಳದಲ್ಲಿ 24ಗಂಟೆ ನಡೆದ ಹ್ಯಾಕಥಾನ್ ಸ್ಪರ್ಧೆ ಏಪ್ರಿಲ್ 11ರಂದು ಸಮಾರೋಪಗೊಂಡಿತು. ರಾಜ್ಯ ಹಾಗೂ ಹೊರ ರಾಜ್ಯದ ಒಟ್ಟೂ 357 ವಿದ್ಯಾರ್ಥಿಗಳು ಹ್ಯಾಕ್ ಫ್ಯೂಷನ್ -2026ರಲ್ಲಿ ಭಾಗವಹಿಸಿದ್ದರು.



3 ಥೀಮ್‌ಗಳಲ್ಲಿ ತಂತ್ರಜ್ಞರು ನೀಡಿದ ವಿಷಯದ ಮೇಲೆ ವಿದ್ಯಾರ್ಥಿಗಳು ಸಾಫ್ಟ್ ವೇರ್ ಅಭಿವೃದ್ಧಿ ಪಡಿಸುವ ಕಾರ್ಯ ನೀಡಲಾಗಿತ್ತು. ಸುಸ್ಥಿರ ಜೀವನ ವಿಷಯದ ಕುರಿತಾಗಿ ನೀಡಿದ ಸವಾಲಿಗೆ ಪರಿಹಾರ ಒದಗಿಸುವಲ್ಲಿ ಧಾರವಾಡದ ಎಸ್‌ಡಿಎಂ ತಾಂತ್ರಿಕ ಮಹಾವಿದ್ಯಾಲಯದ ಸುಪ್ರೀತ, ಸುಚೇಂದ್ರ, ಪ್ರಥಮ್, ಧ್ರುವ ಕುಮಾರ್, ಅಹಮದ್ ಪ್ರಥಮ: ವಿಡಿಐಟಿಯ ಮನೋಜ್, ಅಭಿಷೇಕ್, ಹೀನ, ನಿವೇದಿತಾ, ಹರ್ಷಿಣಿ ದ್ವಿತೀಯ: ಹೀನಾ ಅತ್ತಾರ್, ಸುರಭಿ, ರೀತು, ಸಂಗೀತಾ, ನವೀನ ಗೌಡ ತೃತೀಯ ಸ್ಥಾನ ಪಡೆದರು.

ಹ್ಯಾಟ್ ಸೆಕ್ಯೂರ್ ವಿಷಯದ ಕುರಿತಾಗಿ ನೀಡಿದ ಸವಾಲನ್ನು ಪರಿಹರಿಸಿದ ಎಸ್‌ಐಟಿ ಯಡ್ರಾವ್, ಇಚಲಕರಂಜಿಯ ರಿಷಿಕೇಶ್, ಓಂಕಾರ್, ಶಿವಂ, ಓಂಕಾರ್ ಕೆ ಪ್ರಥಮ: ವಿಡಿಐಟಿಯ ಭಕ್ತಿ, ಸೃಷ್ಟಿ, ಪೂಜಾ, ಸಾಕ್ಷಿ ದ್ವಿತೀಯ: ಅನನ್ಯ, ಸುಪ್ರೀತ್, ಆದಿತ್ಯ, ಪ್ರಥಮ್, ತೃತೀಯ ಸ್ಥಾನ ಪಡೆದರು. ಕೃತಕ ಬುದ್ಧಿಮತ್ತೆ ಆವಿಷ್ಕಾರ ಕುರಿತಾಗಿ ನೀಡಿದ ಸವಾಲನ್ನು ಪರಿಹರಿಸಿದ ಎಜಿಎಂಆರ್ ತಾಂತ್ರಿಕ ಮಹಾವಿದ್ಯಾಲಯ ವರೂರಿನ ಪ್ರದೀಪ್, ರುಮ್ಮನ್, ಪರಶುರಾಮ, ಸಾಕಿಬ್ ಪ್ರಥಮ: ದೀಪ ಎಸ್, ದೀಪ ಏನ್, ಅಂಜಲಿ, ಚೈತ್ರ ದ್ವಿತೀಯ: ವಿಡಿಐಟಿಯ ಅಭಯ್, ಆದಿತ್ಯ, ಅನಂತ, ಓಂಕಾರ್ ತೃತೀಯ ಸ್ಥಾನ ಪಡೆದರು.

ಈ ಹ್ಯಾಕ್‌ಥಾನ್ ಕಾರ್ಯಕ್ರಮಕ್ಕೆ ಥಿಟಾ ಡೈನಾಮಿಕ್ಸ್‌ನ ಗಜೇಂದ್ರ ದೇಶಪಾಂಡೆ, ಐಸ್ಟಾಫ್ ಎಲ್ ಎಲ್‌ಪಿಯ ಹನುಮಂತ ಕುಲಕರ್ಣಿ, ವಿಪ್ರೊದ ಅನಿಲ್ ಹರಿಹರ, ಇನ್ಫೋಸಿಸ್‌ನ ಸೌರಭ್ ಕುಲಕರ್ಣಿ, ಅರ್ಕಿಟ್ರನ್‌ನ ಭರತ್ ಐ ನಿರ್ಣಾಯಕರಾಗಿ ಆಗಮಿಸಿದ್ದರು. ಸ್ಪರ್ಧಾ ವಿಜೇತರಿಗೆ ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ನಗದು ಬಹುಮಾನ ವಿತರಿಸಿ ಪುರಸ್ಕರಿಸಿದರು. ಕಂಪ್ಯೂಟರ್ ಸೈನ್ಸ್ ಹಾಗೂ ಕಂಪ್ಯೂಟರ್ ಸೈನ್ಸ್ (ಎಐಎಂಎಲ್) ಜಂಟಿಸಹಯೋಗದಲ್ಲಿ ಆಯೋಜಿಸಿದ್ದ ಸ್ಪರ್ಧೆಯನ್ನು ಡಾ.ವೆಂಕಟೇಶ್ ಶಂಕರ್ ಹಾಗೂ ಡಾ.ಪೂರ್ಣಿಮಾ ರಾಯ್ಕರ್ ಸಂಯೋಜಿಸಿದ್ದರು.

ವಾರ್ಡನ್ ಕಿರುಕುಳಕ್ಕೆ ಬೇಸತ್ತು ಹೆಡ್ ಕುಕ್ ಆತ್ಮಹತ್ಯೆ

ಚಡಚಣ: ತಾಲೂಕಿನ ನಿವರಗಿ ಗ್ರಾಮದ ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದಲ್ಲಿ ಹೆಡ್ ಕುಕ್ ಆಗಿ ಕೆಲಸ ಮಾಡುತ್ತಿದ್ದ ವ್ಯಕ್ತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡ ಘಟನೆ ಬೆಳಕಿಗೆ ಬಂದಿದೆ. ಈ ಸಂಬಂಧ ಹಾಸ್ಟೇಲ್ ವಾರ್ಡನ್ ವಿರುದ್ಧ ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತರನ್ನು ಭಗವಾನಸಿಂಗ್ ಕಿಶನಸಿಂಗ್ ಪರದೇಶಿ (58) ಎಂದು ಗುರುತಿಸಲಾಗಿದೆ. ಇವರು ಸುಮಾರು 23 ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಹೆಡ್ ಕುಕ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಕುಟುಂಬದೊಂದಿಗೆ ನಿವರಗಿಯಲ್ಲಿ ವಾಸವಾಗಿದ್ದು, ಪತ್ನಿ ಅನಿತಾ ಹಾಗೂ ಮಗ ಕಿಶನಸಿಂಗ್ ಕೂಡ ಇದೇ ಹಾಸ್ಟೇಲ್‌ನಲ್ಲಿ ಗುತ್ತಿಗೆ ಆಧಾರದ ಮೇಲೆ ಅಡುಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು.

ಮೃತರ ಪತ್ನಿ ಅನಿತಾ ಪರದೇಶಿ ನೀಡಿದ ದೂರಿನ ಪ್ರಕಾರ, ಹಾಸ್ಟೇಲ್ ವಾರ್ಡನ್ ಮಲ್ಲಪ್ಪ ಎಸ್.ವಾಲೀಕಾರ ಕಳೆದ ಒಂದು ವರ್ಷದಿಂದ ವಿವಿಧ ಕಾರಣಗಳಿಗೆ ಕಿರುಕುಳ ನೀಡುತ್ತಿದ್ದರು ಎಂದು ಆರೋಪಿಸಲಾಗಿದೆ. ಆಹಾರ ಸಾಮಗ್ರಿ, ದಿನಸಿ ಖರೀದಿ, ವಿದ್ಯಾರ್ಥಿಗಳ ಕೂದಲು ಕಟಿಂಗ್ ವೆಚ್ಚ ಸೇರಿದಂತೆ ಹಲವು ವಿಷಯಗಳಲ್ಲಿ ಅನಗತ್ಯ ಒತ್ತಡ ಹಾಕುತ್ತಿದ್ದರು ಎಂದು ದೂರಿನಲ್ಲಿ ಹೇಳಲಾಗಿದೆ. ಮಾನಸಿಕವಾಗಿ ನೊಂದ ಭಗವಾನಸಿಂಗ್ ಅವರು ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪತ್ನಿ ದೂರಿನಲ್ಲಿ ತಿಳಿಸಿದ್ದಾರೆ.

ಏಪ್ರಿಲ್ 8ರಂದು ನಡೆದ ಘಟನೆಯಲ್ಲಿ ಕೂದಲು ಕತ್ತರಿಸುವ ವೆಚ್ಚದ ವಿಚಾರವಾಗಿ ವಾರ್ಡನ್ ಮತ್ತು ಮೃತರ ನಡುವೆ ವಾಗ್ವಾದ ನಡೆದಿದ್ದು, ಅದರಿಂದ ಮಾನಸಿಕವಾಗಿ ಬೇಸರಗೊಂಡಿದ್ದ ಭಗವಾನಸಿಂಗ್ ಅವರು ಮರುದಿನ ಏಪ್ರಿಲ್ 9ರಂದು ಬೆಳಿಗ್ಗೆ ಸುಮಾರು 10 ಗಂಟೆಗೆ ಸಂಭವಿಸಿದ್ದು, ಹಾಸ್ಟೇಲ್‌ನಲ್ಲಿಯೇ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಆತ್ಮಹತ್ಯೆಗೆ ಮುನ್ನ ಮೃತರು ತಮ್ಮ ಬಳಿ ಡೆತ್ ನೋಟ್ ಬರೆದಿಟ್ಟಿದ್ದು, ಈ ಸಂಬಂಧ ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಪ್ರಕರಣದ ತನಿಖೆಯನ್ನು ಪಿ.ಎಸ್.ಐ ಸೋಮೇಶ ಗೆಜ್ಜಿ ಕೈಗೊಂಡಿದ್ದಾರೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	2509	6136
ಕಡಲೆಬೇಳೆ	6700	6700
ಕಡಲೆಕಾಳು	2211	5675
ಉದ್ದಿನಕಾಳು	2866	7386
ತೆಂಗಿನಕಾಯಿ	31000	35000
ಧನಿಯಾ	10666	10666
ಹತ್ತಿ	7200	8225
ಒಣ ಮೆಣಸಿನಕಾಯಿ	2096	61299
ಬಟಾಣಿ	5450	5450
ಹೆಸರುಕಾಳು	999	7476
ನೆಲಗಡಲೆ (ಶೇಂಗಾ)	3412	6890
ಹುರುಳಿ ಕಾಳು	3416	3416
ಬೆಲ್ಲ	4160	4160
ಜೋಳ	1007	4249
ಅರಳೆ	10000	10000
ಮೆಕ್ಕೆಜೋಳ	1386	1921
ಮಡಿಕೆ (ಮಟಕಿ)	2236	13365
ಸಾಸುವೆ	4229	6450
ಈರುಳ್ಳಿ	500	2200
ಆಲೂಗಡ್ಡೆ	1200	1700
ಅಕ್ಕಿ	5323	5323
ಕುಸುಬೆ	5400	5602
ಸೋಯಾಬೀನ್	4010	5550
ಸೂರ್ಯ ಕಾಂತಿ	6111	6325
ತೊಗರಿ	2831	4216
ಗೋಧಿ	189	4095



ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಭಾನುವಾರ, 12 ಏಪ್ರಿಲ್ 2026
ಹುಬ್ಬಳ್ಳಿ

ಹೈದರಾಬಾದ್ ವಿರುದ್ಧ 6 ವಿಕೆಟ್‌ಗಳ ಜಯ | ಅಭಿಷೇಕ್ ಹೋರಾಟ ವ್ಯರ್ಥ

ಪಂಜಾಬ್‌ಗೆ ಗೆಲುವಿನ ಶ್ರೇಯಸ್ಸು

ಚಂಡೀಗಢ: ಗೆಲುವಿನ ಹಾದಿ ಹಿಡಿದಿರುವ ಪಂಜಾಬ್ ಕಿಂಗ್ಸ್ ತಂಡವು ಕಳೆದ ಬಾರಿಯಂತೆ ಈ ಬಾರಿಯೂ ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದು, ಹೈದರಾಬಾದ್ ತಂಡದ ವಿರುದ್ಧ ಜಯಭೇರಿ ಬಾರಿಸಿದೆ.

ಶ್ರೇಯಸ್ ಅಯ್ಯರ್ ಅವರ ನಾಯಕತ್ವ ಮತ್ತು ಬ್ಯಾಟಿಂಗ್ ಜೊತೆಗೆ ಪಂಜಾಬ್ ತಂಡದ ಆರಂಭಿಕರ ಆರ್ಭಟದ ಮುಂದೆ ಹೈದರಾಬಾದ್ ಆಟ ನಡೆಯಲೇ ಇಲ್ಲ. ಮೂರು ಪಂದ್ಯಗಳಲ್ಲಿ ಮೊದಲೇ ಎರಡು ಗೆಲುವು ಮತ್ತು ಒಂದು ರದ್ದಿನೊಂದಿಗೆ ಇಳಿದಿದ್ದ ಪಂಜಾಬ್ ಬೌಲಿಂಗ್ ಆಯ್ಕೆ ಮಾಡಿಕೊಂಡಿತ್ತು. ಹೈದರಾಬಾದ್ ಸ್ಫೋಟಕ ಆರಂಭ ಪಡೆದ ನಂತರ ಕುಸಿತ ಕಂಡು 20 ಓವರ್‌ಗಳಲ್ಲಿ 219 ರನ್ ಗಳಿಸಿತು. ಆರು ವಿಕೆಟ್ ಕಳೆದುಕೊಂಡಿತು. ಗುರಿ ಬೆನ್ನತ್ತಿದ ಪಂಜಾಬ್ ಲಯದಲ್ಲೇ ಸಾಗಿ 18.5 ಓವರ್‌ಗಳಲ್ಲಿ ಪಂದ್ಯ ಮುಗಿಸಿಕೊಂಡು ಬಂದಿತು. ಮೂರನೇ ಜಯ ಸಾಧಿಸಿ ಅಗ್ರಸ್ಥಾನದ ಪೈಪೋಟಿಗೆ ಅಣಿಯಾಯಿತು.

ಆರಂಭಿಕರು V/S ಆರಂಭಿಕರು ಪಂದ್ಯದಲ್ಲಿ ಬ್ಯಾಟಿಗರೇ ಪಾರುಪತ್ಯ ಸಾಧಿಸಿದರು. ಅಭಿಷೇಕ್ ಶರ್ಮ ತಮ್ಮ ಅಸಲು ಆಟದೊಂದಿಗೆ ಪಂದ್ಯದ ಉತ್ತಮ ಬ್ಯಾಟರ್ ಅನ್ನಿಸಿಕೊಂಡರು. ಶ್ರೇಯಸ್ ಅಯ್ಯರ್ ಅಜೇಯ 69 ರನ್ ಬಾರಿಸಿ ಪಂದ್ಯ ಗೆಲ್ಲಿಸಿದವರಾದರು. ಹೈದರಾಬಾದ್‌ನ ಟ್ರಾವಿಸ್ ಹೆಡ್, ಕ್ಲಾಸೆನ್ ಮತ್ತು ಪಂಜಾಬ್ ತಂಡದ ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್ ಕೂಡ ಅರ್ಧಶತಕ ಬಾರಿಸಿ ಗೆಲುವಿನ ರೂವಾರಿ ಎನಿಸಿಕೊಂಡರು. ಶಿವಾಂಗ್ ಕುಮಾರ್ 3 ವಿಕೆಟ್ ಪಡೆದು ಬೆಸ್ಟ್ ಬೌಲರ್ ಆನಿಸಿಕೊಂಡರು.

ಅಭಿಷೇಕ್ ಅಬ್ಬರ: ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್‌ಗೆ ಜೋಶ್. ಹೆಡ್ ಹಾಗೂ ಅಭಿಷೇಕ್ ಶರ್ಮ ತಮ್ಮ ಸ್ವಾಭಾವಿಕ ಲಯಕ್ಕೆ ಬಂದ ಖುಷಿ. ಶರ್ಮ ಸಿಕ್ಸರ್‌ಗಳ ಸುರಿಮಳೆಗೈದರು. ಹೆಡ್ ಬೌಂಡರಿಗಳ ಹೊಳೆ ಹರಿಸಿದರು. ಇದರೊಂದಿಗೆ ಪವರ್‌ಪ್ಲೇನಲ್ಲೇ ಪಂಜಾಬ್ 105 ರನ್ ಬಾರಿಸಿತು. ಅಭಿಷೇಕ್ ಅರ್ಧಶತಕ ಪೂರೈಸಿಕೊಂಡು ಅದೇ ಸ್ಫೋಟಕ ಬ್ಯಾಟಿಂಗ್ ಮುಂದುವರಿಸಿದರು. ಇತ್ತ ಹೆಡ್ ಕೂಡ ಬೌಂಡರಿಗಳೊಂದಿಗೆ ಮಿಂಚಿದರು. ಹೈದರಾಬಾದ್ ರನ್‌ರೇಟ್ 15ರ ಆಸುಪಾಸು. ನಿರೀಕ್ಷಿತ ಸ್ಕೋರ್ 300ಕ್ಕಿತ್ತು.



ಅಯ್ಯರ್ ಆರ್ಭಟ

ಪಂಜಾಬ್ ಪವರ್‌ಪ್ಲೇನಲ್ಲಿ 93 ರನ್ ಗಳಿಸಿತ್ತು. ವಿಕೆಟ್ ಕಳೆದುಕೊಂಡ ನಂತರ ಬಿರುಸಿನ ಬ್ಯಾಟಿಂಗ್ ಶುರು ಮಾಡಿದ ನಾಯಕ ಶ್ರೇಯಸ್ ಅಯ್ಯರ್ ಕ್ರಮೇಣವಾಗಿ ಹೈದರಾಬಾದ್ ಪಡೆಯಿಂದ ಗೆಲುವು ಕಸಿದರು. 5 ಬೌಂಡರಿ ಮತ್ತು 5 ಸಿಕ್ಸರ್‌ಗಳನ್ನು ಬಾರಿಸಿ ಅರ್ಧ ಶತಕ ಬಾರಿಸಿದರು. ಮಧ್ಯಮ ಓವರ್‌ಗಳಲ್ಲಿ ಪಂಜಾಬ್ 104 ರನ್ ಗಳಿಸಿತು. ಶ್ರೇಯಸ್ ಅಯ್ಯರ್ ಕೊನೆಯ ಬಾಲ್ ವರೆಗೂ ನಿಂತು ಪಂದ್ಯ ಗೆಲ್ಲಿಸಿದರು. ಒಟ್ಟು 69 ರನ್ ಬಾರಿಸಿದ ಅವರು ಗೆಲುವಿನ ರೂವಾರಿ ಅನ್ನಿಸಿಕೊಂಡರು.

ಪಂಜಾಬ್‌ಗೆ ಸರಳ ಕೆಲಸ

ದೊಡ್ಡ ಗುರಿ ಪಂಜಾಬ್‌ಗೆ ಕಾಟ ನೀಡಲೇ ಇಲ್ಲ. ಆರಂಭಿಕರಾದ ಪ್ರಭಸಿಮ್ರನ್ ಹಾಗೂ ಪ್ರಿಯಾಂಶ್ ಆರ್ಯ ಕೂಡ ಅಷ್ಟೇ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಮೊದಲಿನಿಂದಲೂ ತಂಡವನ್ನು ದಂಡಿಸಿದರು. ಸಿಕ್ಸರ್‌ಗಳ ಬೆಟ್ಟ ಕಟ್ಟಿದ ಪ್ರಿಯಾಂಶ್ ಆರ್ಯ 20 ಬಾಲ್ ಮಾತ್ರದಲ್ಲೇ 57 ರನ್ ಚಚ್ಚಿ ವಿಕೆಟ್ ಒಪ್ಪಿಸಿದರು. ಇತ್ತ ಪ್ರಭಸಿಮ್ರನ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿ 25 ಬಾಲ್‌ಗಳಲ್ಲಿ 51 ರನ್ ಗಳಿಸಿ ವಿಕೆಟ್ ಕೊಟ್ಟರು. ಕೂಪರ್ ಕೊನೊಲಿ 11 ರನ್‌ಗೆ ಔಟಾದಮೇಲೆ ತಂಡ ಸಂಕಷ್ಟ ಎದುರಿಸಿತ್ತು. ಅಲ್ಲಿ ಬಂದವರೆ ಶ್ರೇಯಸ್ ಅಯ್ಯರ್.

ಶ್ರೇಯಸ್ ಅಯ್ಯರ್ ಮಾಸ್ಟರ್ ಪ್ಲಾನ್

ನಾಗಾಲೋಟದಲ್ಲಿದ್ದ ಹೈದರಾಬಾದ್ ಕಡಿವಾಣಕ್ಕೆ ಶ್ರೇಯಸ್ ಅಯ್ಯರ್ ಭಾರೀ ಮಾಸ್ಟರ್ ಪ್ಲಾನ್ ಮಾಡಿ ಯಶಸ್ವಿಯಾದರು. ದಂಡಿಸಿಕೊಂಡಿದ್ದ ಪ್ರಮುಖ ಬೌಲರ್‌ಗಳ ಬದಲಾಗಿ ಪಾರ್ಟ್‌ಟೈಮ್ ಬಾಲರ್ ಶಶಾಂಕ್ ಸಿಂಗ್ ಅವರನ್ನು ಕಣಕ್ಕಿಳಿಸಿದರು. ಮೊದಲನೇ ಓವರ್‌ನಲ್ಲಿ ದಂಡಿಸಿಕೊಂಡರೂ ತಮ್ಮ ಎರಡನೇ ಓವರ್‌ನಲ್ಲಿ ಅವರು ಹೆಡ್ ವಿಕೆಟ್ ಪಡೆದರು. ಅಷ್ಟಕ್ಕೆ ನಿಲ್ಲದೆ 264 ಸ್ಟ್ರೈಕ್ ರೇಟ್‌ನಲ್ಲಿ ಬ್ಯಾಟಿಂಗ್ ಮಾಡುತ್ತಿದ್ದ ಅಭಿ ಅವರಿಗೂ ಖೆಡ್ಡಾ ತೋಡಿದರು. ಪಂದ್ಯದ ಗತಿಯೇ ಬದಲಾಯಿತು. ಆರಂಭಿಕ ಓವರ್‌ಗಳಲ್ಲಿ 105 ರನ್ ಬಾರಿಸಿದ್ದ ಹೈದರಾಬಾದ್ ಮಧ್ಯಮ ಓವರ್‌ಗಳಲ್ಲಿ 77 ರನ್ ಮಾತ್ರ ಗಳಿಸಿತು. ಅಂತಿಮ ಓವರ್‌ಗಳಲ್ಲಿ 26 ರನ್ ಮಾತ್ರ ಗಳಿಸಿತು.



ಸಂಕ್ಷಿಪ್ತ ಸ್ಕೋರ್

- **ಹೈದರಾಬಾದ್: 20 ಓವರ್‌ಗಳಲ್ಲಿ 219/6; ಅಭಿಷೇಕ್ 74, ಕ್ಲಾಸೆನ್ 39, ಶಶಾಂಕ್ 20/2**
- **ಪಂಜಾಬ್: 18.5 ಓವರ್‌ಗಳಲ್ಲಿ 223/4; ಶ್ರೇಯಸ್ 69★, ಪ್ರಿಯಾಂಶ್ 57, ಪ್ರಭಸಿಮ್ರನ್ 51; ಶಿವಾಂಗ್ 33/3**

ಮುಂಬೈ ವಿರುದ್ಧ ಪಾಟಿದಾರ ಬಣ ಪಂದ್ಯ

ಆರ್‌ಸಿಬಿಗೆ ಜಯದ ಹಂಬಲ



ಪಂದ್ಯಗಳ ವಿವರ

ಗುಜರಾತ್-ಲಖನೌ
ಯಾವಾಗ: ಭಾನುವಾರ
ಎಲ್ಲಿ: ಏಕಾನಾ ಕ್ರೀಡಾಂಗಣ, ಲಖನೌ
ಸಮಯ: ಮಧ್ಯಾಹ್ನ 3:30

ಆರ್‌ಸಿಬಿ-ಮುಂಬೈ
ಯಾವಾಗ: ಭಾನುವಾರ
ಎಲ್ಲಿ: ವಾಂಖೆಡೆ , ಮುಂಬೈ
ಸಮಯ: ಸಂಜೆ 7:30
(2 ಪಂದ್ಯಗಳ ಪ್ರಸಾರ; ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಮುಂಬೈ: ವಾರಾಂತ್ಯದ ಸೂಪರ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಮುಂಬೈ ಇಂಡಿಯನ್ಸ್ ನಡುವಿನ ಎಲ್-ಕ್ಲಾಸಿಕೋ ಪಂದ್ಯ ನಡೆಯಲಿದೆ. ಲಖನೌ ಸೂಪರ್ ಜೇಂಟ್ಸ್ ಹಾಗೂ ಗುಜರಾತ್ ಟೈಟಾನ್ಸ್ ನಡುವಿನ ಮೊದಲ ಪಂದ್ಯದ ನಂತರ ಎರಡನೇ ಪಂದ್ಯ ನಡೆಯಲಿದೆ.

ರಾಜಸ್ಥಾನ ವಿರುದ್ಧ ಶುಕ್ರವಾರದಂದು ನಡೆದಿರುವ ಪಂದ್ಯದಲ್ಲಿ ಸೋಲನುಭವಿಸಿದ್ದ ಬೆಂಗಳೂರು ಕೂಟದಲ್ಲಿ ಮೊದಲ ಬಾರಿಗೆ ಪರಾಭವ ಕಂಡಿದೆ. ಇತ್ತ ಮುಂಬೈ ಇಂಡಿಯನ್ಸ್ ತಂಡವು ಗೆಲುವಿಗಾಗಿ ಪರದಾಟ ನಡೆಸುತ್ತಿದ್ದು ಪಂದ್ಯ ರೋಮಾಂಚನಕಾರಿಯಾಗಲಿದೆ.


ಇತ್ತ ಹಿಂದಿನ ಪಂದ್ಯದಲ್ಲಿ ಗೆಲುವು ಸಾಧಿಸಿರುವ ಗುಜರಾತ್ ಟೈಟಾನ್ಸ್ ಮತ್ತು ಲಖನೌ ಸೂಪರ್ ಜೇಂಟ್ಸ್ ತಂಡಗಳು ಮುಖಾಮುಖಿಯಾಗಲಿವೆ. ಸೋಲಿನಿಂದ ಹೊರಬಂದಿರುವ ಲಖನೌ ಮುಕುಲ್ ಚೌದರಿ ಅವರ ಬ್ಯಾಟಿಂಗ್‌ನಿಂದಾಗಿ ಕೆಕೆಆರ್ ತಂಡವನ್ನು ಸೋಲಿಸಿತ್ತು. ಹೀಗಿರುವಾಗ ಗುಜರಾತ್ ತಂಡವನ್ನು ಎದುರಿಸಲಿದೆ.

ಗೆಲುವಿನ ಹಳಿಗೆ ಮರಳಿತೇ ಆರ್‌ಸಿಬಿ: ಹೈದರಾಬಾದ್ ಹಾಗೂ ಚೆನ್ನೈ ತಂಡವನ್ನು ತವರಿನಲ್ಲಿ ಸೋಲಿಸಿರುವ ಬೆಂಗಳೂರು ತವರಲ್ಲದ ಮೊದಲ ಪಂದ್ಯದಲ್ಲೇ ಸೋತಿದೆ. ಬಲಿಷ್ಠ ಬ್ಯಾಟಿಂಗ್ ಮತ್ತು ಸಮತೋಲಿತ ಬೌಲಿಂಗ್ ದಾಳಿಯೊಂದಿಗೆ ತಂಡ ಮಿಂಚುತ್ತಿದೆ. ಆದರೆ ಸಾಲ್ಟ್ ಅವರ ಲಯದ ಕೊರತೆ ತಂಡಕ್ಕೆ ಕಾಡುತ್ತಿದೆ. ಕೊಹ್ಲಿ, ಪಾಟಿದಾರ್ ಭರ್ಜರಿ ಲಯದಲ್ಲಿದ್ದಾರೆ. ಫಿನಿಶಿಂಗ್ ವಿಭಾಗದಲ್ಲಿ ಸ್ಫೋಟಕ ಬ್ಯಾಟರ್‌ಗಳಾದ ಟೀಮ್ ಡೇವಿಡ್, ಶೇಫರ್ಡ್ ಸಿದ್ಧವಾಗಿದ್ದಾರೆ. ಬೌಲಿಂಗ್‌ನಲ್ಲಿ ತಂಡಕ್ಕೆ ಜೋಶ್ ಹ್ಯಾಜೆಲ್ವುಡ್ ಬಲ ಸಿಕ್ಕಿದೆ. ಆದಾಗ್ಯೂ ಕಳೆದ ಪಂದ್ಯದಲ್ಲಿ ಎಲ್ಲಾ ಬೌಲರ್‌ಗಳು ದಂಡಿಸಿಕೊಂಡಿದ್ದಾರೆ. ಆದಾಗ್ಯೂ, ಬೆಂಗಳೂರು ಲಯಕ್ಕೆ ಮರಳುವ ವಿಶ್ವಾಸದಲ್ಲಿದೆ. ಇತ್ತ ಮುಂಬೈ ಇಂಡಿಯನ್ಸ್ ಗೆಲುವಿನ ಹುಡುಕಾಟದಲ್ಲಿದೆ. ಮೊದಲನೇ ಪಂದ್ಯದಲ್ಲಿ ಗೆದ್ದ ನಂತರ ಮುಂದಿನ ಎಲ್ಲಾ ಪಂದ್ಯಗಳಲ್ಲಿ ಸೋಲನುಭವಿಸಿದೆ. ಅನುಭವಿ ಬ್ಯಾಟರ್‌ಗಳನ್ನು ಹೊಂದಿದ್ದರೂ ಲಯದ ಹಿನ್ನಡೆ ತಂಡ ಅನುಭವಿಸುತ್ತಿದೆ. ಬೌಲಿಂಗ್‌ನಲ್ಲೂ ಅದೇ ಕತೆ. ಬೂಮ್ರಾ, ಬೋಲ್ಟ್, ದೀಪಕ್ ವಿಕೆಟ್ ಹುಡುಕಾಟದಲ್ಲಿದ್ದಾರೆ.

ಪಿಚ್ ರಿಪೋರ್ಟ್: ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಗರು ವಿಶ್ವಾಸದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಫ್ಲಾಟ್ ಪಿಚ್ ಇರುವುದು ಸ್ಫೋಟಕ ಬ್ಯಾಟರ್‌ಗಳಿಗೆ ಭರವಸೆ ತಂದಿದೆ. ಸ್ಪಿನ್, ಸ್ವಿಂಗ್ ಕೂಡ ಇರಲಿದೆ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟ ಇದ್ದು, ಟಾಸ್ ಗೆದ್ದವರು ಬೌಲಿಂಗ್ ತೆಗೆದುಕೊಳ್ಳುವ ಸಾಧ್ಯತೆ ಇದೆ. ಮಳೆ ಸಾಧ್ಯತೆ ಕಮ್ಮಿಯಿದೆ.

ಗುಜರಾತ್‌ಗೆ ಗೆಲುವಿನ ವಿಶ್ವಾಸ

ಮೊದಲ ಪಂದ್ಯದಲ್ಲಿ ಗುಜರಾತ್ ಮತ್ತು ಲಖನೌ ಮುಖಾಮುಖಿಯಾಗಲಿವೆ. ಹಿಂದಿನ ಪಂದ್ಯದಲ್ಲಿ ಮುಕುಲ್ ಅವರ ಆಟದೊಂದಿಗೆ ಮಿಂಚಿರುವ ಲಖನೌ ಎರಡು ಗೆಲುವು ಮತ್ತು ಒಂದು ಸೋಲಿನೊಂದಿಗೆ ಪೈಪೋಟಿ ನಡೆಸುತ್ತಿದೆ. ಗುಜರಾತ್ ಕೂಡ ಕಳೆದ ಪಂದ್ಯದಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದೆ. ಅಲ್ಲದೆ ಕೊನೆಯ ಓವರ್‌ನ ಥ್ರಿಲ್ಲರ್ ಪಂದ್ಯದಲ್ಲಿ ಗೆಲುವು ಸಾಧಿಸಿದೆ. ಬ್ಯಾಟಿಂಗ್ ಬಲ ಹೊತ್ತಿರುವ ಗುಜರಾತ್‌ಗೆ ಅನುಭವಿ ಬೌಲರ್‌ಗಳ ಕೊರತೆಯಿದೆ ಎಂದರೆ ತಪ್ಪಿಲ್ಲ. ಇತ್ತ ಲಖನೌ ಕೂಡ ಸ್ಫೋಟಕ ಬ್ಯಾಟರ್‌ಗಳನ್ನು ಹೊಂದಿದ್ದರೂ ಶಮಿ, ರಾಥಿ ಹೊರತು ಪಡಿಸಿ ಇನ್ನಿಷ್ಟು ಬೌಲರ್‌ಗಳು ದುಬಾರಿಯಾಗಿದ್ದಾರೆ.



ಕಿರುಸುದ್ದಿ

ಆರ್ಚರಿ: ಸಿಂಗಲ್ಸ್‌ನಲ್ಲಿ ನಿರಾಸೆ

ಹೊಸದಿಲ್ಲಿ: ಮೆಕ್ಸಿಕೋದ ಪ್ಯೂಬ್ಲಾದಲ್ಲಿ ನಡೆದ ಆರ್ಚರಿ ವಿಶ್ವಕಪ್ ಹಂತ-1 ರಲ್ಲಿ ಭಾರತೀಯ ಬಿಲ್ಲುಗಾರರು ವೈಯಕ್ತಿಕ ಸ್ಪರ್ಧೆಗಳಲ್ಲಿ ನೀರಸ ಪ್ರದರ್ಶನ ನೀಡಿದರು. ವಿ. ಜ್ಯೋತಿ ಸುರೇಖಾ ವಿಶ್ವ ಚಾಂಪಿಯನ್ ಮತ್ತು ವಿಶ್ವದ ನಂ. 1 ಸ್ಥಾನದಲ್ಲಿರುವ ಮೆಕ್ಸಿಕೋದ ಆಂಡ್ರಿಯಾ ಬೆಸೆರಾ (146-146, 10★-10,) ಮತ್ತು ಗ್ರೇಟ್ ಬ್ರಿಟನ್‌ನ ವಿಶ್ವದ ನಂ. 2 ಸ್ಥಾನದಲ್ಲಿರುವ ಎಲ್ಲಾ ಗಿಬ್ಸನ್ ಅವರನ್ನು ಸತತ ಸುತ್ತುಗಳಲ್ಲಿ ಹಿಂದಿಕ್ಕಿ - ಕ್ವಾರ್ಟರ್ ಫೈನಲ್‌ಗೆ ತಲುಪುವ ಮೂಲಕ ಭಾರತೀಯರಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರು, ನಂತರ ಕಾಂಪೌಂಡ್‌ನಲ್ಲಿ ಮೆಕ್ಸಿಕನ್ ದಪ್ನೆ ವಿರುದ್ಧ 143-149 ಸೋತರು.

ಫುಟ್‌ಬಾಲ್: ಭಾರತಕ್ಕೆ ಸೋಲು


ಹೊಸದಿಲ್ಲಿ: ಶನಿವಾರ ರಷ್ಯಾದ ಸೋಚಿಯಲ್ಲಿರುವ ಮ್ಯಾಟೆಸ್ಸಾ ಫುಟ್‌ಬಾಲ್ ಸೆಂಟರ್‌ನಲ್ಲಿ ನಡೆದ ಮೂರು ಸ್ನೇಹಪರ ಪಂದ್ಯಗಳ ಪೈಕಿ ಭಾರತದ ಅಂಡರ್-17 ಮಹಿಳಾ ತಂಡವು ರಷ್ಯಾ ವಿರುದ್ಧ 0-4 ಅಂತರದಲ್ಲಿ ಸೋತಿತು. ವಲೇರಿಯಾ ಮೆನ್ಯೈಲೋವಾ 44ನೇ ನಿಮಿಷದಲ್ಲಿ ಆತಿಥೇಯ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಡಾನಾ ಡೊಬ್ರೊವಿಟ್ಸ್ಕಯಾ ಮತ್ತು ಅಲಿಸಾ ಕ್ಲಿಮೋವಾ ಕ್ರಮವಾಗಿ 57ನೇ ಮತ್ತು 72ನೇ ನಿಮಿಷಗಳಲ್ಲಿ ಪೆನಾಲ್ಟಿಗಳನ್ನು ಗೋಲು ಗಳಿಸಿದರು, ನಂತರ ಏಂಜಲೀನಾ ಗುಲ್ಯಾಯೇವಾ 88ನೇ ನಿಮಿಷದಲ್ಲಿ ಗೋಲು ಗಳಿಸಿದರು. ಇಟಾಲಿಯನ್ ಪಮೇಲಾ ಕಾಂಟಿ ತರಬೇತುದಾರರಾಗಿರುವ ಯಂಗ್ ಟೈಗ್ರೆಸ್ಸ್ ತಂಡವು ಮುಂದಿನ ತಿಂಗಳು ನಡೆಯಲಿರುವ ಅತ್ಯಂತ ಪ್ರಮುಖವಾದ ಅ-17 ಮಹಿಳಾ ಏಷ್ಯನ್ ಕಪ್ ತಯಾರಿ ನಡೆಸಲು ಈ ಪಂದ್ಯಗಳನ್ನು ಆಡಲಿದೆ.

ರಾಜಸ್ಥಾನಕ್ಕೆ 4ನೇ ಗೆಲುವು

ಗುವಾಹಟಿ: ಬ್ಯಾಟಿನ ಮೂಲಕ ಕ್ರಿಕೆಟ್ ಕ್ಷೇತ್ರದಲ್ಲಿ ಪಂದ್ಯಕ್ಕೊಂದರಂತೆ ದಾಖಲೆ ಮಾಡಿರುವ ವೈಭವ್ ಸೂರ್ಯವಂಶಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ತಮ್ಮದೆ ಸ್ಟೈಲ್‌ನಲ್ಲಿ ದಂಡಿಸಿ ತಮ್ಮದೇ ದಾಖಲೆ ಮುರಿದರು, ಗಟ್ಟಿ ಅಡಿಪಾಯದ ನಂತರ ತಕ್ಕ ಆಟದೊಂದಿಗೆ ಇನ್ನಿಂಗ್ಸ್ ಕಟ್ಟಿದ ಧ್ರುವ್ ಜುರೇಲ್ ರಾಜಸ್ಥಾನಕ್ಕೆ ಸತತ ನಾಲ್ಕನೇ ಗೆಲುವು ತಂದುಕೊಟ್ಟರು. ಆರ್‌ಸಿಬಿ ಪಂದ್ಯಾವಳಿಯಲ್ಲಿ ಮೊದಲನೇ ಸೋಲನುಭವಿಸಿತು.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಮೂಲಕ ವಿಶ್ವ ಕ್ರಿಕೆಟ್ ಪ್ರಿಯರ ಮನೆಮಾತಾಗಿರುವ ವೈಭವ್, ಶುಕ್ರವಾರದ ಪಂದ್ಯದಲ್ಲಿ ಅವರು ಅನುಭವಿ ಬೌಲರ್‌ಗಳ ಬೆವರಿಳಿಸಿಬಿಟ್ಟರು. ಬೂಮ್ರಾ ಬಾರಿ ಮುಗಿದ ನಂತರ ಇದು ಭುವನೇಶ್ವರ್ ಕುಮಾರ್, ಹ್ಯಾಜೆಲ್ವುಡ್ ಸರದಿಯಾಗಿತ್ತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್‌ಗಿಳಿದಿದ್ದ ಆರ್‌ಸಿಬಿ ಪಾಟಿದಾರ್ ಅವರ ಆಟದೊಂದಿಗೆ ಉತ್ತಮ ಸ್ಕೋರ್ ನಿರ್ಮಿಸಿ ಗೆಲುವಿನ ಯೋಜನೆಯಲ್ಲಿತ್ತು. ಆದರೆ ರಾಜಸ್ಥಾನ ಬ್ಯಾಟಿಂಗ್ ಮಾಡುವಾಗ ಯಾವುದೇ ಅವಕಾಶ ಸಿಗಲಿಲ್ಲ. ಜುರೇಲ್, ಜೈಸ್ವಾಲ್ ಮತ್ತು ವೈಭವ್ ಬಂದ ಬಾಲ್‌ಗಳನ್ನೆಲ್ಲಾ ಬೌಂಡರಿ, ಸಿಕ್ಸರ್‌ಗಟ್ಟಿದ ನಂತರ ಪಂದ್ಯ 18 ಓವರ್‌ಗಳಲ್ಲಿ ಮುಕ್ತಾಯಗೊಂಡಿತು.

ಸೂರ್ಯವಂಶಿ ಸ್ಟ್ರೈಕ್‌ರೇಟ್ ಬರೋಬ್ಬರಿ 300! ಇಡೀ ಪಂದ್ಯದಲ್ಲಿ ಆರ್‌ಸಿಬಿ 7 ಸಿಕ್ಸರ್‌ಗಳನ್ನು ಬಾರಿಸಿದ್ದರೆ, ವೈಭವ್ ಒಬ್ಬರೇ 7 ಸಿಕ್ಸರ್ ಬಾರಿಸಿದರು. ಇತ್ತ ಜುರೇಲ್ ಆಟಕ್ಕೂ ಮಿತಿ ಇರಲಿಲ್ಲ, ವೈಭವ್ ಔಟಾದ ನಂತರ ದಡ ಸೇರಿಸುವ ಜವಾಬ್ದಾರಿ ಎತ್ತಿಕೊಂಡ ಅವರು, ಅಜೇಯ 81 ರನ್ ಬಾರಿಸಿ ಪಂದ್ಯ ಗೆಲ್ಲಿಸಿದರು.



ವೈಭವ್‌ಗೆ ಕೊಹ್ಲಿಯಿಂದ ಉಡುಗೊರೆ

ಸ್ಫೋಟಕ ಬ್ಯಾಟಿಂಗ್ ಮಾಡಿದ ವೈಭವ್ ಸೂರ್ಯವಂಶಿಗೆ ವಿರಾಟ್ ಕೊಹ್ಲಿಯಿಂದ ಉಡುಗೊರೆ ಸಿಕ್ಕಿದೆ. ಪಂದ್ಯದ ನಂತರ ಸೋತ ಆರ್‌ಸಿಬಿ ತಂಡದ ಎಲ್ಲಾ ಆಟಗಾರರೂ ವೈಭವ್ ಸೂರ್ಯವಂಶಿ ಅವರನ್ನು ಕೊಂಡಾಡಲು ಸೇರಿದರು. ಪಾಟಿದಾರ್, ಭುವನೇಶ್ವರ್ ಸೇರಿದಂತೆ ಎಲ್ಲರೂ ವೈಭವ್‌ಗೆ ಅಭಿನಂದನೆ ಸಲ್ಲಿಸಿದರು. ಅತ್ತ ವಿರಾಟ್ ಕೊಹ್ಲಿ ತಮ್ಮ ಕ್ಯಾಪ್ ಮೇಲೆ, ವೈಭವ್ ಉತ್ತಮವಾಗಿ ಆಡುತ್ತಿದ್ದೀಯ ಎಂದು ಬರೆದು ಕೊಟ್ಟಿದ್ದಾರೆ.

ಸಂಕ್ಷಿಪ್ತ ಸ್ಕೋರ್

- **ಬೆಂಗಳೂರು: 20 ಓವರ್‌ಗಳಲ್ಲಿ 201/8; ಪಾಟಿದಾರ್ 63, ಕೊಹ್ಲಿ 32; ಬಿಷ್ಣೋಯ್ 32/2**
- **ರಾಜಸ್ಥಾನ: 18 ಓವರ್‌ಗಳಲ್ಲಿ 202/4; ಜುರೇಲ್★, ವೈಭವ್ 78; ಕೃನಾಲ್ 30/2**

ಸಂಜು ಶತಕ, ದಿಲ್ಲಿಗೆ ದೊಡ್ಡ ಗುರಿ

ಚೆನ್ನೈ: ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಚೆನ್ನೈ ಪರ ಮೊದಲ ಶತಕ ಬಾರಿಸಿರುವ ಸಂಜು ಸ್ಯಾಮ್ಸನ್ ಕೊನೆಗೂ ಲಯಕ್ಕೆ ಮರಳಿದ್ದು, ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಚೆನ್ನೈ ಮೊದಲ ಬಾರಿಗೆ ಸ್ಥಿರ ಪ್ರದರ್ಶನ ನೀಡಿದೆ.

ದಿಲ್ಲಿ ವಿರುದ್ಧದ ಪಂದ್ಯದಲ್ಲಿ ಸ್ಯಾಮ್ಸನ್ ಶತಕ ಮತ್ತು ಆಯುಷ್ ಮಾತ್ರೆ ಅವರ ಸ್ಫೋಟಕ ಅರ್ಧಶತಕದೊಂದಿಗೆ ಚೆನ್ನೈ ಸೂಪರ್ ಕಿಂಗ್ಸ್ ತಂಡ ದಿಲ್ಲಿ ಕ್ಯಾಪಿಟಲ್ಸ್‌ಗೆ ಕಠಿಣ ಗುರಿ ನೀಡಿತು. ಸ್ಯಾಮ್ಸನ್ ಅವರ 115★ ರನ್ ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 212 ರನ್ ಗಳಿಸಿತು.

ಕೊನೆಗೂ ಮಿಂಚಿದ ಸಂಜು: ಮೊದಲು ಬ್ಯಾಟಿಂಗ್‌ಗಿಳಿದ ಚೆನ್ನೈ ಸ್ಫೋಟಕ ಆರಂಭ ಪಡೆಯಲಿಲ್ಲ. ವಿಕೆಟ್ ಬೀಳದಿದ್ದರೂ ದಿಲ್ಲಿ ಬೌಲರ್‌ಗಳು ರುತುರಾಜ್ ಗಾಯಕ್ವಾಡ್ ಅವರನ್ನು ಕಟ್ಟಿ ಹಾಕಿದರು. ಅತ್ತ ಸಂಜು ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. 18 ಬಾಲ್ ಎದುರಿಸಿದ ಗಾಯಕ್ವಾಡ್ ರನ್‌ಗಾಗಿ ಪರದಾಟ ನಡೆಸಿದರು. ಚೆನ್ನೈಗೆ ಹಿನ್ನಡೆಯಾಯಿತು. ಆದರೆ ಅಷ್ಟೊತ್ತಿಗಾಗಲೇ ಹೊಂದಿಕೊಂಡ ಸಂಜು ತಮ್ಮ ಅಸಲಿ ಲಯಕ್ಕೆ ಬಂದರು. ಸಂಜು ಸ್ಯಾಮ್ಸನ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ತಂಡವು ಪವರ್‌ಪ್ಲೇನಲ್ಲಿ 61 ರನ್ ಗಳಿಸಿತು. ಏಳನೇ ಓವರ್‌ನಲ್ಲಿ ಗಾಯಕ್ವಾಡ್ ವಿಕೆಟ್ ಒಪ್ಪಿಸಿದರು. ನಂತರ ಮೂರನೇ ಕ್ರಮಾಂಕದಲ್ಲಿ ಬಂದ ಆಯುಷ್ ಮಾತ್ರೆ, ಸಂಜು ಸ್ಯಾಮ್ಸನ್‌ಗೆ ಸಾಥ್ ನೀಡಿದರು. ಸ್ಯಾಮ್ಸನ್ 26 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿ ತಮ್ಮ ಅಬ್ಬರ ಮುಂದುವರಿಸಿದರು. ಆಯುಷ್ ಕೂಡ ಸಿಕ್ಸರ್‌ಗಳೊಂದಿಗೆ ಮಿಂಚತೊಡಗಿದರು. ಚೆನ್ನೈ ವಿಕೆಟ್ ಕಳೆದುಕೊಳ್ಳಲಿಲ್ಲ, ಮಧ್ಯಮ ಓವರ್‌ಗಳಲ್ಲಿ ಬರೋಬ್ಬರಿ 107 ರನ್ ಗಳಿಸಿತು. ಆಯುಷ್ ಅರ್ಧ ಶತಕ ಬಾರಿಸಿದರು. 39 ಬಾಲ್‌ಗಳಲ್ಲಿ ಅವರು 59 ರನ್ ಗಳಿಸಿದರು. ಸ್ಲಾಗ್ ಓವರ್‌ಗಳಲ್ಲಿ ಅವರು ನಿವೃತ್ತರಾದರು. ದುಬೆ 20 ರನ್ ಗಳಿಸಿದರು.



ಚೆನ್ನೈ ಪರ ಮೊದಲ ಶತಕ

ಸಂಜು ಸ್ಯಾಮ್ಸನ್ ಚೆನ್ನೈ ತಂಡದ ಪರ ಮೊದಲ ಶತಕ ಬಾರಿಸಿದರು. ಮೂರು ಪಂದ್ಯಗಳಲ್ಲಿ ಸತತ ಹಿನ್ನಡೆ ಅನುಭವಿಸಿದ್ದ ಅವರು ನಾಲ್ಕನೇ ಪಂದ್ಯದಲ್ಲಿ ಲಯಕ್ಕೆ ಮರಳಿದರು. ಬರೋಬ್ಬರಿ 15 ಸ್ಫೋಟಕ ಬೌಂಡರಿ, 4 ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸಿದರು. 56 ಎಸೆತ ಎದುರಿಸಿ 115 ರನ್ ಗಳಿಸಿದರು.

ಫೈನಲ್‌ಗೆ ಆಯುಷ್ ಶೆಟ್ಟಿ!

ನಿಂಗ್ಬೋ (ಚೀನಾ): ಪ್ರತಿ ಪಂದ್ಯದಲ್ಲೂ ಕರಾರುವಾಕ್ ಪ್ರದರ್ಶನದೊಂದಿಗೆ ವಿಶ್ವ ಬ್ಯಾಡ್ಮಿಂಟನ್ ಕ್ಷೇತ್ರದಲ್ಲಿ ಸರದಾರನಾಗುತ್ತಿರುವ ಕನ್ನಡಿಗ ಆಯುಷ್ ಶೆಟ್ಟಿ ಬ್ಯಾಡ್ಮಿಂಟನ್ ಪ್ರಿಯರು ನಿಬ್ಬೆರಗಾಗುವಂತೆ ವಿಶ್ವದ ನಂಬರ್ 1 ಆಟಗಾರ ಕೆ. ವಿಟಿಡ್ಸರ್ನ್ ಅವರನ್ನು ಸೋಲಿಸಿದರು. ಪ್ರತಿಷ್ಠಿತ ಬ್ಯಾಡ್ಮಿಂಟನ್ ಏಷ್ಯನ್ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಮಿಂಚಿನಾಟ ಪ್ರದರ್ಶನ ನೀಡುತ್ತಿರುವ ಆಯುಷ್ ಪದಕ ಖಚಿತಪಡಿಸಿಕೊಂಡಿದ್ದಲ್ಲದೆ, ತಮ್ಮ ವೃತ್ತಿಜೀವನದ ಅತಿ ದೊಡ್ಡ ಸಾಧನೆ ಮಾಡಿದ್ದಾರೆ. ವಿಶ್ವದ ಅಗ್ರ ಶ್ರೇಯಾಂಕಿತ ಆಟಗಾರರನ್ನು ಸೋಲಿಸುತ್ತಾ ಸೆಮಿಫೈನಲ್‌ಗೇರಿದ್ದ ಅವರು, ಕೆ. ವಿಟಿಡ್ಸರ್ನ್ ಅವರನ್ನು ಎದುರಿಸಿ ಚಾಂಪಿಯನ್ ಪ್ರದರ್ಶನ ನೀಡಿದ್ದಾರೆ. ಇದರೊಂದಿಗೆ ಚಿನ್ನದ ನಿರೀಕ್ಷೆ ದ್ವಿಗುಣಗೊಳಿಸಿದ್ದಾರೆ. ಶನಿವಾರದಂದು ನಡೆದ ಪಂದ್ಯದಲ್ಲಿ ಅವರು ಕಠಿಣ ಪೈಪೋಟಿಯಲ್ಲಿ 3-1ರಿಂದ ಗೆದ್ದರು. ಮೊದಲಿನ ಸುತ್ತಲ್ಲಿ ಸೋತರೂ ಉಳಿದೆರಡೂ ಸುತ್ತಿನಲ್ಲಿ ಮಿಂಚಿದರು.



ಕಂಬ್ಯಾಕ್ ಕಿಂಗ್ ಆಯುಷ್

ಪಂದ್ಯದ ಆರಂಭಿಕ ಸೆಟ್‌ನಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ನ ಬೆಳ್ಳಿ ವಿಜೇತ ಕೆ. ವಿಟಿಡ್ಸರ್ನ್ ಮುನ್ನಡೆ ಸಾಧಿಸಿದರು. ಆಯುಷ್ ಅವರನ್ನು ಸರ್ವ್ ಅಂಕಗಳಲ್ಲಿ ಕಟ್ಟಿದ ಅವರು, 5 ಅಂಕಗಳ ಮುನ್ನಡೆ ಹಿಗ್ಗಿಸುತ್ತಾ 21 ಅಂಕದ ಗಳಿಸಿದರು. ಇತ್ತ ಭಾರತೀಯ 10 ಮಾತ್ರ ಅಂಕಗಳಿಸಿದ್ದರು. ಮೊದಲ ಸೆಟ್‌ನಲ್ಲಿ ಹಿನ್ನಡೆಯ ಬಿಸಿ. ಎದುರಿಗೆ ನಂಬರ್ 1 ಆಟಗಾರ... ಹೀಗೆ ಸವಾಲುಗಳನ್ನು ಎದುರಿಸಿದ ಆಯುಷ್ ಯಾವುದೇ ಸಮಯದಲ್ಲಿ ಒತ್ತಡಕ್ಕೊಳಗಾಗದೆ ಸ್ಥೈರ್ಯ ತೋರಿಸಿದರು. ಎರಡನೇ ಸೆಟ್‌ನ ಆರಂಭದಲ್ಲೇ ಆಕ್ರಮಣಕಾರಿ ಮನಸ್ಥಿತಿಯೊಂದಿಗೆ ಆಟವಾಡಿದ ಅವರು, ಮುನ್ನಡೆ ಸಾಧಿಸಿದರು. ಇತ್ತ ಎದುರಾಳಿ ಕೂಡ ಅದೇ ಪ್ರದರ್ಶನ ನೀಡಿದ ನಿಟ್ಟಿನಲ್ಲಿ ಸಮಬಲವಾಯಿತು. ಆದರೆ ಮುನ್ನಡೆ ಹಿಗ್ಗಿಸುತ್ತಾ ಬಂದ ಆಯುಷ್ ಸೆಟ್ ಅನ್ನು 21-19ರಿಂದ ಗೆದ್ದುಕೊಂಡರು. ನಿರ್ಣಾಯಕ ಹಂತಕ್ಕೆ ಕೊಂಡೊಯ್ದರು. ಅಲ್ಲಿ ಮೊದಲಿನಿಂದಲೂ ನಿಖರ ಪ್ರದರ್ಶನ ನೀಡುತ್ತಾ, ಮುನ್ನಡೆ ಕಾಯ್ದುಕೊಂಡರು. ಮಧ್ಯಮ ಆಟದಲ್ಲಿ ಎದುರಾಳಿ ಕಂಬ್ಯಾಕ್ ಮಾಡಿದರೂ ಗೆಲುವಿಗೆ ಅಡಚಣೆಯಾಗಲಿಲ್ಲ. ಪಂದ್ಯವನ್ನು 21-17ರಿಂದ ಗೆದ್ದ ಆಯುಷ್ ಫೈನಲ್‌ಗೇರಿದ್ದಾರೆ.

ಏಷ್ಯನ್ ಕುಸ್ತಿ: ಭಾರತ ಉತ್ತಮ ಪ್ರದರ್ಶನ

ಹೊಸದಿಲ್ಲಿ: ಕಿರ್ಗಿಸ್ತಾನದ ಬಿಶ್ಕೆಕ್ನಲ್ಲಿ ನಡೆದ ಏಷ್ಯನ್ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯ ಕುಸ್ತಿಪಟುಗಳು ಉತ್ತಮ ಪ್ರದರ್ಶನ ನೀಡಿ ಗಮನಸೆಳೆದಿದ್ದಾರೆ.

ಪುರುಷರ ಫ್ರೀಸ್ಟೈಲ್ ವಿಭಾಗದಲ್ಲಿ ಸುಜೀತ್ ಕಲ್ಕಲ್ (65 ಕೆಜಿ), ಅಭಿಮನ್ಯು (70 ಕೆಜಿ) ಮತ್ತು ಸಂದೀಪ್ ಸಿಂಗ್ ಮಾನ್ (79 ಕೆಜಿ) ಫೈನಲ್‌ಗೆ ಪ್ರವೇಶಿಸಿ ಪದಕ ಖಚಿತಪಡಿಸಿಕೊಂಡಿದ್ದಾರೆ. ಸುಜೀತ್ ಕಲ್ಕಲ್ ಅವರು ಕಿರ್ಗಿಸ್ತಾನದ ರುಸ್ತಂರ್ಝಾನ್ ಕಾಖರೊವ್ ಅವರನ್ನು 10-0 ಅಂತರದಲ್ಲಿ ಹಾಗೂ ತಜಿಕಿಸ್ತಾನದ ವಿಶ್ವ ಕಂಚಿನ ಪದಕ ವಿಜೇತ ಅಬ್ದುಲ್ಮರಿಖದ್ ಕುಡಿಯೆವ್ ಅವರನ್ನು 7-2 ಅಂತರದಲ್ಲಿ ಸೋಲಿಸಿದರು. ಚಿನ್ನದ ಪದಕಕ್ಕಾಗಿ ಅವರು ಉಜ್ಬೇಕಿಸ್ತಾನದ ಅಲಿಬೆಗ್ ಅಲಿಬೆಗೋವ್ ವಿರುದ್ಧ ಸೆಣಸಲಿದ್ದಾರೆ.

ಅಭಿಮನ್ಯು ಅವರು ಚೀನಾದ ಸಿಮಿಂಗ್ ವಾಂಗ್ ಅವರನ್ನು 11-1 ಅಂತರದಲ್ಲಿ ಸೋಲಿಸಿ, ಬಳಿಕ ಕಿರ್ಗಿಸ್ತಾನದ ವಿಶ್ವ ಕಂಚಿನ ಪದಕ ವಿಜೇತ ಹಾಗೂ ಏಷ್ಯನ್ ಚಾಂಪಿಯನ್ ಎರ್ನಜಾರ್




ಅಕ್ಮತಾಲಿಯೇವ್ ವಿರುದ್ಧ 6-3 ಅಂತರದಲ್ಲಿ ಜಯ ಸಾಧಿಸಿದರು. ಫೈನಲ್‌ನಲ್ಲಿ ಅವರು ಮಂಗೋಲಿಯಾದ ತುಲ್ಗಾ ತುಮೂರ್ ಒಚಿರ್ ವಿರುದ್ಧ ಮುಖಾಮುಖಿಯಾಗಲಿದ್ದಾರೆ. ಸಂದೀಪ್ ಸಿಂಗ್ ಮಾನ್ ಅವರು ಜೋರ್ಡಾನ್‌ನ ಎರ್ಝೂರ್ ಶಮಿಲ್ ಇಸಾಕೋವ್ ಅವರನ್ನು 6-5 ಅಂತರದಲ್ಲಿ ಮತ್ತು ತಜಿಕಿಸ್ತಾನದ ಸೋಮೋಂಚೋನ್ ಇಕ್ರಮೋವ್ ಅವರನ್ನು 10-0 ಅಂತರದಲ್ಲಿ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದ್ದಾರೆ. ಅವರು ಚಿನ್ನದ ಹೋರಾಟದಲ್ಲಿ ಜಪಾನ್‌ನ ಕೇವನ್ ಫುರೆಹಾಷಿ ಅವರನ್ನು ಎದುರಿಸಲಿದ್ದಾರೆ. ಇನ್ನೂ ಅಂಕುಶ್ (57 ಕೆಜಿ) ಮತ್ತು ವಿಕ್ಕಿ (97 ಕೆಜಿ) ಕಂಚಿನ ಪದಕದ ಹೋರಾಟದಲ್ಲಿ ಉಳಿದಿದ್ದಾರೆ.

ಮಹಿಳೆಯರ ವಿಭಾಗದಲ್ಲಿ: ಮಹಿಳಾ ವಿಭಾಗದಲ್ಲಿ ಮೀನಾಕ್ಷಿ ಅವರು ಚೀನಾದ ಜಿನ್ ಝೂಂಗ್ ವಿರುದ್ಧ 10-0 ಅಂತರದಲ್ಲಿ ಸೋತು ಬೆಳ್ಳಿ ಪದಕ ಪಡೆದರು. ಇನ್ನೂ ಮೋನಿಕಾ (65 ಕೆಜಿ) ದಕ್ಷಿಣ ಕೊರಿಯಾದ ಹ್ಯಾನ್ ಬಿಟ್ ಲೀ ಅವರನ್ನು 9-0 ಅಂತರದಲ್ಲಿ ಸೋಲಿಸಿ ಕಂಚು ಗೆದ್ದರು. ಹರ್ಷಿತಾ (72 ಕೆಜಿ) ಉಜ್ಬೇಕಿಸ್ತಾನದ ಸೆವಿಂಚೋಯ್ ಪೊಲ್ವೊನೋವಾ ಅವರನ್ನು 5-0 ಅಂತರದಲ್ಲಿ ಸೋಲಿಸಿ ಕಂಚಿನ ಪದಕ ಪಡೆದುಕೊಂಡರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5951

ಎಡದಿಂದ ಬಲಕ್ಕೆ
2. ಈತ ಪಾದಸೇವಕ-ಆಳು (5)
4. ಪತ್ರಿಕೆಗಳಿಗೆ ಸುದ್ದಿ ಕೊಡುವವನು (5)
7. ಸಮತಟ್ಟಾದ ನೆಲ-ಪ್ರದೇಶ (2)
9. ಪಟ್ಟಣವಾಸಿಗಳಲ್ಲಿರುವ ಸಭ್ಯತೆ (5)
11. ಕಡ್ಡಿಪೆಟ್ಟಿಗೆಯ ಇನ್ನೊಂದು ಹೆಸರು (5)
14. ಮಟ್ಟಕಂದ ಇಲ್ಲಿ ಉಲ್ಟಾ ಕಾಣುತ್ತಿದೆ (2)
17. ಬರಗಾಲದಲ್ಲುಂಟಾಗುವ ಭೀಕರ ಸ್ಥಿತಿ (5)
18. ಪಾತ್ರೆಗಳಿಗೆ ತವರಿನ ಲೇಪನಕ್ಕಾಗಿ ಬಳಸುವ ವಸ್ತು (5)

ಮೇಲಿನಿಂದ ಕೆಳಕ್ಕೆ
1. ವನಿತೆ ನನಗೆ ಕೊಟ್ಟ ಬೆಣ್ಣೆ (3)
2. ಯಾವಾಗಲೂ ಚಲಿಸುತ್ತಿರುವಂಥಾದ್ದು (2)
3. ಪಾರ್ವತಿಯ ಪತಿಯಾಗಿ ಶಿವ (3)
5. ಹಾಡುಗಾರಿಕೆಯು ಕಡೆಯಲ್ಲಿ ದೀರ್ಘವಾಗಿದೆ (3)
6. ಸಂಕಟದಿಂದ ದಾಟಿದ ಸೇತುವೆ (2)
8. ಸಹಾಯ-ಆಸರೆಯಿಲ್ಲಿ ತಲೆಕೆಳಗಾಗಿದೆ (3)
10. ಆಂಧ್ರಪ್ರದೇಶದ ಜನರ ಭಾಷೆಯಿದು (3)
12. ತೀವ್ರವಾದ ಬೆಂಕಿ-ಉರಿಯಿದು (2)
13. ಸಾವು ಇಲ್ಲಿ ಉಲ್ಟಾ ಬಂದಿದೆ (3)
15. ಇದು ಮನದ ಆಸೆ-ಕಾಮನೆ (4)
16. ವಾಯುಮಾರ್ಗದ ವಾಹನವಿದು (3)
17. ಇದು ಉಪ್ಪಿನ ರುಚಿಯುಳ್ಳದ್ದು (2)

5950 ಉತ್ತರ

ಎಡದಿಂದ ಬಲಕ್ಕೆ:
3. ಪರಮಗತಿ
5. ಶೀತಕಯಂತ್ರ
6. ಚಕ್ರವಾಕ 7. ಜೀವ
8. ಜಡತನ 10. ನನಸಾಗು
12. ರತ್ನ 13. ನಾರುಮಡಿ
15. ಭಗವದ್ಗೀತೆ
16. ಗರಲಗ್ರೀವ

ಮೇಲಿನಿಂದ ಕೆಳಕ್ಕೆ :
1. ವಶೀಲಿ 2. ಶಂಕರಗಂಡ
3. ಪತ್ರ 4. ತಿರುಕ 6. ಚವನ
9. ಜರಡಿ 11. ಕವಲುಮನ
13. ನಾಕಿಗ 14. ಕಂತೆಗ
15. ಭವ

ಕಿರುಸುದ್ದಿ

ಶೇ.97ರಷ್ಟು ಫಲಿತಾಂಶ





ಲಕ್ಷ್ಮೇಶ್ವರ: ಪಟ್ಟಣದ ಟಿ.ಬಿ ಮಾನ್ವಿ ಸರ್ಕಾರಿ ಪಿಯು ಕಾಲೇಜಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಒಟ್ಟು ಫಲಿತಾಂಶ ಶೇ.97 ರಷ್ಟಾಗಿದೆ. ಕಲಾ, ವಾಣಿಜ್ಯ, ವಿಜ್ಞಾನ ವಿಭಾಗದಲ್ಲಿ ಒಟ್ಟು 156 ವಿಧ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಇದರಲ್ಲಿ 32 ಡಿಸ್ಟಿಂಕ್ಷನ್, 97 ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಶೇ.100, ಕಲಾ ಮತ್ತು ವಿಜ್ಞಾನ ವಿಭಾಗದಲ್ಲಿ ಶೇ.96 ರಷ್ಟು ಫಲಿತಾಂಶದೊಂದಿಗೆ ಜಿಲ್ಲೆಯಲ್ಲೇ ಉತ್ತಮ ಸಾಧನೆ ಮಾಡಿದೆ. ಕಲಾ ವಿಭಾಗದಲ್ಲಿ ನಂದಿತಾ ವಾಲ್ಮೀಕಿ ಶೇ.95.50, ಸಹನಾಬೇಗಂ ಸುಂಕದ ಶೇ.95, ಭಾವನಾ ಮೆಣಸಿನಕಾಯಿ ಶೇ.94 ವಾಣಿಜ್ಯ ವಿಭಾಗದಲ್ಲಿ ಪ್ರೀತಮ್ ನಾಯ್ಕ ಶೇ 92.50, ಪವಿತ್ರಾ ಕಮ್ಮಾರ ಶೇ.92, ಪೂರ್ಣಿಮಾ ಕೋಣಿ ಶೇ.92, ಶಿರಿನಾ ನದಾಫ ಶೇ.92, ವಿಜ್ಞಾನ ವಿಭಾಗದಲ್ಲಿ ರೇಷ್ಮಾ ಬಾಕಳೆ ಶೇ.92, ಶಿವಯೋಗಿ ಹಡಪದ ಶೇ.92, ರವಿ ತಳವಾರ ಶೇ.91ರಷ್ಟು ಫಲಿತಾಂಶ ಸಾಧನೆ ಮಾಡಿದ್ದಾರೆ ಎಂದು ಪ್ರಾಚಾರ್ಯ ಮಂಜುನಾಥ ಕೊಕ್ಕರಗೊಂದಿ ತಿಳಿಸಿದ್ದಾರೆ. ವಿಧ್ಯಾರ್ಥಿಗಳ ಸಾಧನೆಗೆ ಕಾಲೇಜು ಅಭಿವೃದ್ಧಿ ಸಮಿತಿ, ಪ್ರಾಚಾರ್ಯರು, ಉಪನ್ಯಾಸಕ ವರ್ಗ ಹರ್ಷ ವ್ಯಕ್ತಪಡಿಸಿದೆ.

ಒಕ್ಕೂಟದ ಸಭೆ ನಾಳೆ

ಗದಗ: ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದಲ್ಲಿ ಬರುವ ದೇವಾಂಗ, ಕುರುಹಿನಶೆಟ್ಟಿ, ತೊಗಟವೀರ, ಸ್ವಕುಳಸಾಳಿ, ಪದ್ಮಶಾಲಿ, ಪಟ್ಟಸಾಲಿ ಸಮಾಜದವರ ಸಭೆ ಏ.13ರಂದು ಸಂಜೆ 5.30ಕ್ಕೆ ನಗರದ ಹೊಸ ಬನಶಂಕರಿ ದೇವಸ್ಥಾನದ ಸಮುದಾಯ ಭವನದಲ್ಲಿ ನಡೆಯಲಿದೆ. ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ರಮೇಶ ಗಡ್ಡಿ ಅಧ್ಯಕ್ಷತೆ ವಹಿಸುವರು. ನೇಕಾರ ಸಮುದಾಯಗಳ ಎಲ್ಲ ಸಮಾಜದವರು ಸಭೆಯಲ್ಲಿ ಭಾಗವಹಿಸಿ ದೇವರ ದಾಸಿಮಯ್ಯನವರ ಜಯಂತಿಯ ಲೆಕ್ಕಪರಿಶೀಲನೆ ಮತ್ತು ದೇವರದಾಸಿಮಯ್ಯನವರ ಪುತ್ಥಳಿ ನಿರ್ಮಾಣ ಕುರಿತಾದ ಚರ್ಚೆಯಲ್ಲಿ ಭಾಗವಹಿಸಬೇಕು ಎಂದು ಸಂಘದ ಜಿಲ್ಲಾ ಕಾರ್ಯದರ್ಶಿ ದಶರಥರಾಜ ಕೊಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೂರ್ವಸಿದ್ಧತಾ ಸಭೆ

ಗದಗ: ಭಗೀರಥ ಜಯಂತಿ ಕುರಿತು ಪೂರ್ವಸಿದ್ಧತಾ ಸಭೆಯು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಅಧ್ಯಕ್ಷತೆಯಲ್ಲಿ ಜರುಗಿತು. ನಗರದ ಜಿಲ್ಲಾಡಳಿತದಿಂದ ಏ.23 ರಂದು ಭಗೀರಥ ಜಯಂತಿಯನ್ನು ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಸಾಂಕೇತಿಕವಾಗಿ ಆಚರಿಸಲಾಗುವುದು. ಸಮಾಜದವರು ಜಯಂತಿ ಕಾರ್ಯಕ್ರಮದ ದಿನಾಂಕವನ್ನು ನಿಗದಿಪಡಿಸಿದ ನಂತರ ಸಮಾಜದ ವತಿಯಿಂದ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಗುವುದು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಜಿಪಂ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಎಂ.ಎಂ.ತುಂಬರಮಟ್ಟಿ, ಅನಿಲ ಗರಗ, ಭೀಮನಗೌಡ ಪಾಟೀಲ, ರಾಜಶೇಖರ, ಶಿವಮುತ್ರಪ್ಪ ಕುಂದ್ರಳ್ಳಿ, ರಾಮಣ್ಣ ಉಪ್ಪಾರ, ಭೀಮಪ್ಪ ಉಪ್ಪಾರ, ದೇವಪ್ಪ ಉಪ್ಪಾರ, ಚನ್ನಪ್ಪ ಹಸರಂಬಿ,ರಾಜು ಗಡ್ಡಿ ಸೇರಿದಂತೆ ಸಮಾಜದ ಮುಖಂಡರು, ಗಣ್ಯರು, ಹಿರಿಯರು ಹಾಜರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಸವರಾಜ ಬಳ್ಳಾರಿ ವಂದಿಸಿದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	4309- 6909
ಅಜವಾನ	7869- 9350
ಅಲಸಂದಿ	1009-9169
ಕಡಲೆ	1009-5409
ಉದ್ದು	5712-5712
ಒಣಮೆಣಶಿನಕಾಯಿ	1599-55786
ಹವೀಜ	7506-8599
ಹೆಸರು	814-6939
ಜೋಳ	1209-4733
ಗೋವಿನಜೋಳ	1200-1805
ಹುರಳಿ	2644-4329
ಸಾಸವಿ	4100-4319
ಕುಸಬಿ	4829-5772
ಅವರೆ	3099-3099
ಮಡಕಿ	8214-10411
ಸೂರ್ಯಕಾಂತಿ	4652-6322
ತೊಗರಿ	1565-5447
ಸಬ್ಬಸಗಿ	4300-4300
ಜಿರಗಿ	8569-8569
ಗೋಧಿ	717-5555
ಬೆಲ್ಲ	3809-4050



ಗದಗ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕರ ಸ್ಥಾನಕ್ಕೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮರ್ತಗೇರಿಯ ಶಿಕ್ಷಕ ಆರ್.ಕೆ. ಹುನಗುಂದ ಚುನಾವಣಾ ಅಧಿಕಾರಿಗಳಾದ ಕೆ.ಬಿ.ಬಾಗರಿ, ಸುಧಾಕರ ಕುಲಕರ್ಣಿ ಅವರಿಗೆ ನಾಮಪತ್ರ ಸಲ್ಲಿಸಲಾಯಿತು. ವೈ. ಎಚ್.ಪೂಜಾರ, ಎಸ್.ಕೆ.ಸರಗಣಾಚಾರಿ, ಅಂಬುಬಾಯಿ ಗಜಾಕೋಶ, ಎ.ಎಚ್.ನರಗುಂದ, ಐ.ಪಿ.ಹರಿಜನ ಎಸ್.ಬಿ.ನಾಯಕ, ಅರವಿಂದ ಕವಡಿಮಟ್ಟಿ, ಡಿ.ಎಸ್.ಹುಂಡೇಕರ, ಸಿದ್ರಾಮಣ್ಣ ವಡ್ಡರ, ಕೆ.ವಿ.ಯರಗೇರಿ, ಬಿ.ಸಿ.ಅಂಗಡಿ, ಸುಜಾತ ದಿವಾಣದ, ಎಸ್.ಎಸ್. ಪಸಾರದ, ಪ್ರಕಾಶ ಗಂಜಿಗೌಡ, ಟಿ.ಸಿ.ಜೋಗರೆಡ್ಡಿ ಸೇರಿದಂತೆ ಅನೇಕರಿದ್ದರು.

ರಾಷ್ಟ್ರೀಯ ಸಮ್ಮೇಳನ: ಸಂಶೋಧನಾ ಲೇಖನ ಮಂಡನೆ

ನರಗುಂದ: ವಿಕಸಿತ ಭಾರತಕ್ಕೆ ಭಾರತದ ಪುರಾತನ ಜ್ಞಾನದ ಅಗತ್ಯತೆ ಮತ್ತು ವಿಶ್ವಕ್ಕೆ ಭಾರತೀಯರ ಕೊಡುಗೆಗಳ ಪ್ರಾಮುಖ್ಯತೆಯನ್ನು ಮೈಸೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ.ಉಮಾ ಎಚ್. ಆರ್ ವಿವರಿಸಿದರು.

ಪಟ್ಟಣದ ಶ್ರೀ ಸಿದ್ದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಆನ್ ಲೈನ್ ಮೂಲಕ ಆಯೋಜಿಸಲಾಗಿದ್ದ ಸಂಶೋಧನೆ ಮತ್ತು ಅಭಿವೃದ್ಧಿ ಕೋಶದ ವತಿಯಿಂದ ಐ.ಕ್ಯೂ.ಎ.ಸಿ. ಪ್ರಾಯೋಜಿತ ಪ್ರಗತಿ ಮತ್ತು ಪರಂಪರೆ: ವಿಕಸಿತ ಭಾರತ 2047ಗಾಗಿ ನಾವಿನ್ಯತೆ ಮತ್ತು ಪರಂಪರೆಯ ಸಮ್ಮಿಲನ ವಿಷಯದ ಕುರಿತು ಬಹುಶಾಸ್ತ್ರೀಯ ಒಂದು ದಿನದ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದರು. ವಿವಿಧ ರಾಜ್ಯಗಳಿಂದ ಆಗಮಿಸಿದ 64 ಸಂಶೋಧನಾರ್ಥಿಗಳು ಮತ್ತು ಪ್ರಾಧ್ಯಾಪಕರು ವಿಜ್ಞಾನ ಮತ್ತು ತಂತ್ರಜ್ಞಾನ, ವಾಣಿಜ್ಯ ಮತ್ತು ಅರ್ಥಶಾಸ್ತ್ರ ಕಲೆ ಮತ್ತು ಮಾನವಿಕ ಶಾಸ್ತ್ರಗಳು ಹಾಗೂ ಸಾಹಿತ್ಯ ಉಪವಿಷಯಗಳಡಿ ತಮ್ಮ ಸಂಶೋಧನಾ ಲೇಖನಗಳನ್ನು ಮಂಡಿಸಿದರು. ತಾಂತ್ರಿಕ ಅಧಿವೇಶನಗಳ ಮುಖ್ಯಸ್ಥ ಡಾ. ಕೃಷ್ಣ ಚವರೆಡ್ಡಿ, ಡಾ.ಎಸ್ .ಜಿ.ವಿಭೂತಿ ಮತ್ತು ಡಾ.ರಂಗನಾಥ ಕಂಟನಕುಂಟೆ ಮಾತನಾಡಿರು. ಸಮ್ಮೇಳನದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ.ಆನಂದಕುಮಾರ ಲಾಲಸಂಗಿ ವಹಿಸಿದ್ದರು. ಡಾ.ರಾಮು ಎಂ.ಎಸ್. ಸ್ವಾಗತಿಸಿದರು. ಐಕ್ಯೂಎಸಿ ಸಂಚಾಲಕ ಪ್ರೊ. ಯಶೋದಾ ಅಂಗಡಿ ಅವರು ಕಾಲೇಜಿನ ಸಾಧನೆಗಳನ್ನು ಮತ್ತು ಡಾ.ಗುರುಪಾದಪ್ಪ ಸಿದ್ದಾಪುರ ಅವರು ಸಮ್ಮೇಳನ ವರದಿ ಮಂಡಿಸಿದರು. ಡಾ.ಮಧು ಜಿ.ಆರ್., ಪ್ರೊ.ಸಾಗರ್ ಬಂಬೋಲಿ ಮತ್ತು ಪ್ರೊ. ಮಾಲತೇಶ್ ಆರಳಿಕಟ್ಟಿ ನಿರೂಪಿಸಿದರು. ಜೂಮ್ ಆನ್‌ಲೈನ್ ವೇದಿಕೆಯ ಸಮ್ಮೇಳನದಲ್ಲಿ 300ಕ್ಕೂ ಅಧಿಕ ಜನರಿದ್ದರು.



ನರಗುಂದ: ಪಟ್ಟಣದ ಶ್ರೀ ಸಿದ್ದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಆನ್ ಲೈನ್ ಮೂಲಕ ಆಯೋಜಿಸಲಾಗಿದ್ದ ಸಂಶೋಧನೆ ಮತ್ತು ಅಭಿವೃದ್ಧಿ ಕೋಶದ ವತಿಯಿಂದ ಐ.ಕ್ಯೂ.ಎ.ಸಿ. ಪ್ರಾಯೋಜಿತ ಪ್ರಗತಿ ಮತ್ತು ಪರಂಪರೆ: ವಿಕಸಿತ ಭಾರತ 2047ಗಾಗಿ ನಾವಿನ್ಯತೆ ಮತ್ತು ಪರಂಪರೆಯ ಸಮ್ಮಿಲನ ವಿಷಯದ ಕುರಿತು ಬಹುಶಾಸ್ತ್ರೀಯ ಒಂದು ದಿನದ ರಾಷ್ಟ್ರೀಯ ಸಮ್ಮೇಳನ.

ಸರ್ಕಾರಿ ಕೆಲಸದಲ್ಲಿ ಅಕ್ರಮ ಹಣದ ಬೇಡಿಕೆಗೆ ದೂರು ನೀಡಿ: ಬಿರಾದಾರ

ಶಿರಹಟ್ಟಿ: ಅಧಿಕಾರಿಗಳು ಸಾರ್ವಜನಿಕರ ಕೆಲಸವನ್ನು ಮಾಡದೇ ಅಕ್ರಮ ಹಣದ ಬೇಡಿಕೆ ಇಟ್ಟರೆ, ಬೆದರಿಕೆ ಹಾಕಿದರೆ, ಹಣಕ್ಕೆ ಒತ್ತಾಯಿಸಿ ಕೆಲಸ ವಿಳಂಬ ಮಾಡಿದರೆ, ಜನರು ಮುಲಾಜಿಲ್ಲದೇ ಲೋಕಾಯುಕ್ತದಲ್ಲಿ ದೂರ ಸಲ್ಲಿಸಬಹುದು ಎಂದು ಲೋಕಾಯುಕ್ತ ಡಿಎಸ್‌ಪಿ ವಿಜಯಕುಮಾರ ಬಿರಾದಾರ ಹೇಳಿದರು.

ಸ್ಥಳೀಯ ತಹಶೀಲ್ದಾರ್ ಕಾರ್ಯಾಲಯದ ಸಭಾಭವನದಲ್ಲಿ ಕರ್ನಾಟಕ ಲೋಕಾಯುಕ್ತ ಗದಗ ಜಿಲ್ಲೆಯಿಂದ ಏರ್ಪಡಿಸಿದ್ದ ಶಿರಹಟ್ಟಿ ತಾಲೂಕು ಸಾರ್ವಜನಿಕರಿಂದ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಾರ್ವಜನಿಕರ ಸಮಸ್ಯೆ ಆಲಿಸಿ ಮಾತನಾಡಿ, ಇವತ್ತಿನ ವರೆಗೂ ಯಾರೊಬ್ಬ ಅಧಿಕಾರಿಗಲೂ ನಮ್ಮ ಬಳಿ ಬಂದು ದೂರ ನೀಡಿಲ್ಲ, ಇದು ನಿಮ್ಮ ರಕ್ಷಣೆಗಾಗಿ ಹೇಳುತ್ತಿದ್ದು, ನಿಮಗೆ ಯಾರಿಂದಲಾದರೂ ಹಣ ನೀಡುವಂತೆ ಸತಾಯಿಸದರೆ ತಕ್ಷಣ ದೂರ ನೀಡಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಶಿರಹಟ್ಟಿ ಪಟ್ಟಣದ ನಿವಾಸಿ ಐ.ಡಿ. ಲಕ್ಕುಂಡಿಮಠ ಅವರು ಪಟ್ಟಣದ ಏಳುಕೋಟಿ ನಗರದಲ್ಲಿ ನಿರ್ಮಾಣವಾದ ಹೊಸ ಬಡಾವಣೆಗಳಲ್ಲಿ ಯಾವುದೇ ಮೂಲಭೂತ ಸೌಲಭ್ಯ ಕಲ್ಪಿಸದೇ ಇದ್ದರೂ ಅಧಿಕಾರಿಗಳು ಉತಾರ ನೀಡಿದ್ದಾರೆ. ಬಡಾವಣೆ ನಿರ್ಮಾಣ ಕೈಗೆತ್ತಿಕೊಂಡ ಮಾಲೀಕರಿಗೆ ನೋಟೀಸ್ ಕೊಡಿಸಿ ಸರ್ಕಾರದ ನಿಯಮಾನುಸಾರ ಸೌಲಭ್ಯ ಕಲ್ಪಿಸಿ ಕೊಡುವಂತೆ ಅರ್ಜಿ ಸಲ್ಲಿಸಿ ಒತ್ತಾಯಿಸಿದರು. ಇದೇ ಬಡಾವಣೆಯಲ್ಲಿ ಅಗ್ನಿ ಶಾಮಕ ಇಲಾಖೆಯ ನೂತನ ಕಟ್ಟಡ ನಿರ್ಮಾಣವಾಗುತ್ತಿದ್ದು, ಈ ಇಲಾಖೆಗೆ ತೆರಳಲು ಸೂಕ್ತ ರಸ್ತೆ ನಿರ್ಮಾಣ ಕೂಡ ಮಾಡಿಲ್ಲ, ಕಟ್ಟಡದ ಕಾಮಗಾರಿಯು ಕಳಪೆಯಾಗಿದೆ ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ. ಸಭೆಯಲ್ಲಿ ಹಾಜರಿದ್ದ ಪಟ್ಟಣ ಪಂಚಾಯತ ಇಲಾಖೆ ಸಿಬಂದಿ ನಮ್ಮ ವ್ಯಾಪ್ತಿಗೆ ಬರುತ್ತಿದ್ದು, ರಸ್ತೆ ನಿರ್ಮಾಣಕ್ಕೆ ಅಧಿಕಾರಿಗಳ ಗಮನಕ್ಕೆ ತರುವುದಾಗಿ ತಿಳಿಸಿದರು.

ತಹಶೀಲ್ದಾರ್ ಕೆ. ರಾಘವೇಂದ್ರ ರಾವ್, ತಾಪಂ ಇಒ ರಾಮಪ್ಪ ದೊಡ್ಡಮನಿ, ಪಿಎಸ್ಐ ಈರಪ್ಪ ರಿತ್ತಿ, ಅರಣ್ಯ ಇಲಾಖೆಯ ರಾಮಪ್ಪ ಪೂಜಾರ, ರಂಗಪ್ಪ ಕಾಂಬ್ಳೆ, ಮೃತ್ಯುಂಜಯ ಗುಡ್ಡದಾನವೇರಿ, ಸುಭಾಸ ದೈಗೊಂಡ, ಕೃಷಿ ಇಲಾಖೆ ಅಧಿಕಾರಿ ಶಿವಕುಮಾರ ಕಾಶಪ್ಪನವರ, ವಿ.ಎ. ಮುಳಗುಂದಮಠ, ಗೋಪಾಲ ಲಮಾಣಿ, ಮಲ್ಲಿಕಾರ್ಜುನ ಪಾಟೀಲ ಸೇರಿ ಅನೇಕರು ಇದ್ದರು.



- ರೇಣವ್ವ ತಳವಾರ ಎಂಬ ವೃದ್ಧೆ ಪಡಿತರ ಚೀಟಿಗಾಗಿ ಅಧಿಕಾರಿಗಳಿಗೆ ಅರ್ಜಿ ಸಲ್ಲಿದರು
- ತಾಲೂಕಿನ ಮಜ್ಜೂರ ಗ್ರಾಮದ ವಿಜಯಕುಮಾರ ಮರಿತಮ್ಮಪ್ಪ ಎಂಬುವವರು ತಮ್ಮ ತಾಯಿ ಹೆಸರಿನಲ್ಲಿದ್ದ ಜಮೀನನ್ನು ಮೋಸದಿಂದ ಬೇರೊಬ್ಬರ ಹೆಸರಿನಲ್ಲಿ ನೋಂದಣಿಯಾಗಿರುವ ಬಗ್ಗೆ ಅರ್ಜಿ ಸಲ್ಲಿಸಿದರು
- ಶಂಕ್ರಪ್ಪ ಫಕೀರಪ್ಪ ಕಲ್ಲಣ್ಣವರ ಪಟ್ಟಾ ಪ್ರಕಾರ ಆಸ್ತಿ ನೋಂದಣಿ ಮಾಡಿಸಿಕೊಡುವಂತೆ ಅರ್ಜಿ ಸಲ್ಲಿಸಿದರು
- ತಾಲೂಕು ಪಂಚಾಯತ್ ಶಿರಹಟ್ಟಿ ಮತ್ತು ಲಕ್ಷ್ಮೇಶ್ವರಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾಮಗಾರಿಗಳು ಮತ್ತು ಪಂಚಾಯತ್ ರಾಜ್ಯ ಎಂಜನಿಯರಿಂಗ್ ಉಪ ವಿಭಾಗ ಶಿರಹಟ್ಟಿಯ ಕಚೇರಿಯಲ್ಲಿ ಭ್ರಷ್ಟಾಚಾರಗಳು ನಡೆದಿದ್ದು, ಈ ಕುರಿತು ತನಿಖೆ ಮಾಡುವಂತೆ ತಾಪಂ ಕೆಡಿಪಿ ಸದಸ್ಯ ಫಕ್ಕೀರೇಶ ನಡುವನಕೇರಿ ಅರ್ಜಿ ಸಲ್ಲಿಸಿದರು

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಾಧನೆ

ಶಿವಲಿಂಗಯ್ಯ ಹೊತಗಿಮಠ

ಲಕ್ಷ್ಮೇಶ್ವರ: ಸರಿಯಾದ ಮಾರ್ಗದರ್ಶನ, ಸತತ ಪರಿಶ್ರಮ ಇದ್ದರೆ ಬಡತನ ಮುಂದೆ ಸಾಧನೆ ಅಸಾಧ್ಯವೇನೂ ಅಲ್ಲ ಎಂಬ ಮಾತಿನಂತೆ ಇಲ್ಲೊಬ್ಬ ಕಲ್ಲಂಗಡಿ ಹಣ್ಣು ಮಾರಿ ಜೀವನದ ಬಂಡಿ ಸಾಗಿಸುವ ತಂದೆ ಹಾಗೂ ಜಮೀನನಲ್ಲಿ ಕೂಲಿ ಕೆಲಸ ಮಾಡುವ ತಾಯಿ ಅವರ ಪುತ್ರ ಅನೀಲ ಲಮಾಣಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಹೆಚ್ಚಿನ ಅಂಕಗಳಿಸುವ ಮೂಲಕ ತಾಲೂಕಿನ ದೊಡ್ಡೂರ ತಾಂಡಾ ವಿದ್ಯಾರ್ಥಿ ಗಮನ ಸೆಳೆದಿದ್ದಾನೆ.

ಜಿಲ್ಲೆಯ ಮುಳಗುಂದದ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಪಿಯುಸಿಯಲ್ಲಿ ವಿಜ್ಞಾನ ವಿಭಾಗದಲ್ಲಿ ಕನ್ನಡ 90, ಇಂಗ್ಲಿಷ್ 70, ಭೌತಶಾಸ್ತ್ರ 86, ರಸಾಯನಶಾಸ್ತ್ರ 88, ಗಣಿತ 97, ಜೀವಶಾಸ್ತ್ರ 74 ಒಟ್ಟು 505 ಅಂಕಗಳನ್ನು ಗಳಿಸುವ ಮೂಲಕ ಸರ್ಕಾರಿ ಶಾಲೆಯಲ್ಲಿ ಕಲಿತು ಸಾಧನೆ ಮಾಡಿದ್ದಾನೆ. ಅನೀಲನ ಸಹೋದರ 10ನೇ ತರಗತಿಯಲ್ಲಿ ಓದುತ್ತಿದ್ದು ತಂಗಿ ವಿಶಿಷ್ಟಚೇತನೆ. ಮನೆಯ ಕಷ್ಟದ ಜವಾಬ್ದಾರಿ ಕಾಲೇಜಿನ ರಜೆ ಸಮಯದಲ್ಲಿ ತಂದೆ ತಾಯಿಗೆ ಸಹಾಯ ಮಾಡುತ್ತಾ ದಿನನಿತ್ಯ 4 ರಿಂದ 5ತಾಸು ಓದಿನ ಕಡೆ ಗಮನ ಕೊಟ್ಟು ಹೆಚ್ಚಿನ ಅಂಕಗಳಿಸಲು ಸಾಧ್ಯವಾಗಿದೆ.

> ಬಡತನದಿಂದ ಮಗನನ್ನು ಓದಿಸಿದ್ದೇನೆ. ಅವನು ಮುಂದೆ ಏನು ಕಲಿಯುತ್ತಾನೆ ಅದನ್ನು ಕೂಲಿ ಮಾಡಿ ಕಲಿಸಲು ಸಿದ್ಧರಿದ್ದೇವೆ.
> ■ ಮಲ್ಲೇಶ ಲಮಾಣಿ , ತಂದೆ

> ಸದ್ಯ ಸಿಇಟಿ ನೀಟ ಪರೀಕ್ಷೆ ಬರಿಯಲು ಸಜ್ಜಾಗುತ್ತಿದ್ದೇನೆ. ತಂದೆಗೆ ಸಹಾಯ ಮಾಡಲು ಕಲ್ಲಂಗಡಿ ಹಣ್ಣು ಮಾರುತ್ತಿದ್ದು ನೀಟ್‌ನಲ್ಲಿ ಉತ್ತಮ ರ್‍ಯಾಂಕ್ ಬಂದರೆ ಮೆಡಿಕಲ್ ಹೋಗಲು ಬಯಸುತ್ತೇನೆ. ಇಲ್ಲವಾದರೆ ಪೊಲೀಸ್ ಇಲಾಖೆಗೆ ಸೇರಬೇಕು ಎನ್ನುವ ಆಸೆಯಿದೆ.
> ■ ಅನೀಲ ಲಮಾಣಿ, ವಿದ್ಯಾರ್ಥಿ



ಕೃತಕ ಬುದ್ಧಿಮತ್ತೆಯಿಂದ ನಿರುದ್ಯೋಗ ಭೀತಿ: ಶ್ರೀ


ಮುಂಡರಗಿ: ಕೃತಕ ಬುದ್ಧಿಮತ್ತೆಗೆ ಹೃದಯ ಮತ್ತು ಭಾವನೆ ಇಲ್ಲದೆ ಇರುವುದರಿಂದ ಅದು ಎಲ್ಲರ ಮನಸ್ಸನ್ನು ಗೆಲ್ಲಲು ಸಾಧ್ಯವಿಲ್ಲ, ಇದರಿಂದ ಅನೇಕರು ಉದ್ಯೋಗವನ್ನು ಕಳೆದುಕೊಳ್ಳುವರು ಎಂಬ ಭೀತಿಯಿದೆ. ಅದಕ್ಕೆ ಕಿವಿಕೊಡದೆ ಎಲ್ಲ ಪ್ರಶಿಕ್ಷಣಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೆಚ್ಚು ಗಮನಕೊಟ್ಟು ತಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ಹೇಳಿದರು.

ಅವರುಶ್ರೀಜ.ಅ.ವಿ.ಸಮಿತಿಯಶ್ರೀಜಗದ್ಗುರು ಅನ್ನದಾನೀಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಪ್ರಸ್ತುತ ಸಾಲಿನ ವಿದ್ಯಾರ್ಥಿ ಸಂಘದ ಉದ್ಘಾಟನೆ ಮತ್ತು ಬಿ.ಇಡಿ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳ ಸ್ವಾಗತ ಸಮಾರಂಭದ ಸಾನಿಧ್ಯವನ್ನು ವಹಿಸಿ ಆಶೀರ್ವಚನ ನೀಡಿದರು. ಶಿಕ್ಷಣದಿಂದ ಕರ ತುಂಬಬೇಕು, ಹೃದಯ ತುಂಬಬೇಕು, ಶಿರ ತುಂಬಬೇಕು. ಅಂದಾಗ ಮಾತ್ರ ನಮ್ಮ ಶಿಕ್ಷಣ ಸಮ್ಮಿಲನಗೊಳ್ಳಲು ಸಾಧ್ಯವಾಗುತ್ತದೆ. ಕೃತಕ ಬುದ್ಧಿಮತ್ತೆಯಿಂದ ಇದೆಲ್ಲ ಸಾಧ್ಯವಾಗದು ಎಂದರು.

ಶ್ರೀ ಜ.ಅ.ವಿ.ಸಮಿತಿಯ ಆಡಳಿತಾಧಿಕಾರಿ ಡಾ.ಬಿ.ಜಿ.ಜವಳಿ ಉದ್ಘಾಟಿಸಿ ಮಾತನಾಡಿ, ಆರ್ಟಿಫಿಶಿಯಲ್ ಇಂಟಲಿಜೆನ್ಸಿಯಿಂದ ಮುಂದಿನ ದಿನಮಾನಗಳಲ್ಲಿ ಉದ್ಯೋಗವನ್ನು ಕಳೆದುಕೊಳ್ಳುವ ಆತಂಕವಿದೆ. ಆದರೆ ಶಿಕ್ಷಕ ವೃತ್ತಿಗೆ ಆದ್ದರಿಂದ ಯಾವ ಪ್ರಯೋಜನವೂ ಇಲ್ಲ, ಅದು ವಿಷಯಗಳನ್ನು ಪ್ರತಿಪಾದಿಸಬಹುದು. ಆದರೆ ಭಾವನೆ ಇಲ್ಲದ ಪ್ರತಿಪಾದನೆ ಯಾರ ಹೃದಯವನ್ನೂ ತಟ್ಟದು. ಆದ್ದರಿಂದ ಪ್ರಶಿಕ್ಷಣಾರ್ಥಿಗಳು ಮುಂದೆ ಶಿಕ್ಷಕ ವೃತ್ತಿಯನ್ನು ಆಯ್ಕೆಮಾಡಿಕೊಂಡರೆ ನಿಮಗೆ ಲಾಭವಾಗುತ್ತದೆ ಎಂದರು.

ಉಪನ್ಯಾಸಕರಾಗಿ ಆಗಮಿಸಿದ್ದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪ್ರೊ. ಎಂ.ಜಿ.ಗಚ್ಚಣ್ಣವರ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಪ್ರಶಿಕ್ಷಣಾರ್ಥಿಗಳು ಬಹಳ ಬುದ್ಧಿವಂತರಾಗಿರಬೇಕು. ಕಂಪ್ಯೂಟರ್ ಜ್ಞಾನದ ಜೊತೆಗೆ ಪ್ರಸ್ತುತ ವಿದ್ಯಮಾನಗಳನ್ನು ಗಮನಿಸಿ ಜ್ಞಾನ ಪಡೆದುಕೊಂಡು ಅಪ್ಡೇಟ್ ಆಗಿದ್ದರೆ ಇಂದಿನ ಜಗತ್ತಿನಲ್ಲಿ ಬೆಲೆಯಿದೆ ಎಂದರು.

ಅಧ್ಯಕ್ಷತೆಯನ್ನು ಕಾಲೇಜು ಮೇಲ್ವಿಚಾರಣಾ ಕಮಿಟಿಯ ಕಾರ್ಯಾಧ್ಯಕ್ಷ ಸಿ.ಎಸ್.ಅರಸನಾಳ ವಹಿಸಿದ್ದರು. ವಿದ್ಯಾರ್ಥಿ ಸಂಘದ ಕಾರ್ಯಾಧ್ಯಕ್ಷೆ ಶಶಿಕಲಾ ಹಂಚಿನಾಳ ಪ್ರತಿನಿಧಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ವಿಶೇಷ ಸಾಧನೆ ಮಾಡಿದ ಉಜ್ಜನಿ ರವಿಚಂದ್ರ, ಪುಟ್ಟರಾಜ ಚಿಂಚಲಿ ಅವರನ್ನು ಪೂಜ್ಯರು ಸನ್ಮಾನಿಸಿದರು. ಮಹಿಳಾ ಪ್ರತಿನಿಧಿ ಶೋಭಾ ಹೊನ್ನೂರ ಇದ್ದರು. ಪ್ರಾಚಾರ್ಯ ಡಾ.ಎಂ.ವಿ.ಕುಲಕರ್ಣಿ ಸ್ವಾಗತಿಸಿದರು. ಪ್ರಶಿಕ್ಷಣಾರ್ಥಿ ಕುಮಾರ ನೀಲಪ್ಪ ನಿರೂಪಿಸಿದರು. ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಮಂಜುನಾಥ ಕಲ್ಮನಿ ವಂದಿಸಿದರು.



ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಕ್ರಮ ಕೈಗೊಳ್ಳಲು ಪಿಡನಾಯ್ಕರ ಆಗ್ರಹ

ನರಗುಂದ: ಅಸ್ಸಾಂ ಚುನಾವಣಾ ಪ್ರಚಾರದಲ್ಲಿ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಸರ್ಕಾರ ಕ್ರಮಕೈಗೊಳ್ಳಬೇಕೆಂದು ಬಿಜೆಪಿ ನರಗುಂದ ಮಂಡಲ ಅಧ್ಯಕ್ಷ ಶರಣಬಸಪ್ಪ ಪಿಡನಾಯ್ಕರ ಆಗ್ರಹಿಸಿದ್ದಾರೆ.

ಶುಕ್ರವಾರ ಬಿಜೆಪಿ ಯುವ ಮೋರ್ಚಾ ವತಿಯಿಂದ ಪೊಲೀಸ್ ಠಾಣೆಯ ಸಿಪಿಐ ಮಂಜುನಾಥ ನಡುವಿನಮನಿ ಅವರಿಗೆ ಮನವಿ ಅರ್ಪಿಸಿ ಮಾತನಾಡಿ, ಅಲ್ಪಸಂಖ್ಯಾತರನ್ನು ಓಲೈಸುವ ಸಲುವಾಗಿ ಮಲ್ಲಿಕಾರ್ಜುನ ಖರ್ಗೆ ಅವರು ಆರ್‌ಎಸ್‌ಎಸ್ ಹಾಗೂ ಬಿಜೆಪಿ ಇವೆರಡೂ ವಿಷಸರ್ಪಗಳಿದ್ದಂತೆ. ಅವುಗಳನ್ನು ಕೊಲ್ಲದಿದ್ದರೆ ನೀವು ಬದುಕುವುದಿಲ್ಲ, ನಮಾಜ್ ಮಾಡುವ ಸಂದರ್ಭದಲ್ಲಿ ವಿಷಸರ್ಪಗಳು ಬಂದರೆ ಅವುಗಳನ್ನು ಕೊಲ್ಲಬೇಕೆಂದು ಕುರಾನ್ ನಲ್ಲಿ ಹೇಳಿದೆ. ಹೀಗಾಗಿ ಮುಸಲ್ಮಾನರು ವಿಷ ಸರ್ಪದಂತಿರುವ ಆರ್.ಎಸ್ ಎಸ್, ಬಿಜೆಪಿ ಸದಸ್ಯರನ್ನು ಕೊಲ್ಲಬೇಕೆಂದಿರುವುದು ಸಮುದಾಯದ ಮೂಲಭೂತವಾದಿಗಳಿಗೆ ಹತ್ಯೆ ಮಾಡಲು ಉತ್ತೇಜನ ನೀಡಿದಂತಾಗಿದೆ ಎಂದು ಆರೋಪಿಸಿದರು.

ಪ್ರಧಾನ ಕಾರ್ಯದರ್ಶಿ ಮಂಜುನಾಥ ಇಂದಲಕರ ಮಾತನಾಡಿ, ಮಲ್ಲಿಕಾರ್ಜುನ ಖರ್ಗೆಯವರ ಪ್ರಚೋದನೆಯ ಪರಿಣಾಮ ಉಂಟಾಗಿರುವ ಸೂಕ್ಷ್ಮ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಸಂಘಪರಿವಾರದ ಕಾರ್ಯಕರ್ತರನ್ನು ರಕ್ಷಿಸಲು ಭದ್ರತಾ ವ್ಯವಸ್ಥೆಮಾಡಬೇಕು. ಲಕ್ಷಾಂತರ ಕಾರ್ಯಕರ್ತರನ್ನು ಹತ್ಯೆ ಮಾಡಲು ಪ್ರಚೋದಿಸಿರುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೂಡಲೇ ಬಂಧಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇವೆ ಎಂದರು.

ಬಿಜೆಪಿ ನರಗುಂದ ಮಂಡಲದ ಪ್ರಧಾನ ಕಾರ್ಯದರ್ಶಿ ಬಸನಗೌಡ ಗಡಿಯಪ್ಪಗೌಡ್ರ, ವಿಠ್ಠಲ ಹವಾಲ್ದಾರ, ಶಿವು ಅಂಗಡಿ, ಪುನೀತ ಜೋಗಣ್ಣವರ, ರಾಮು ಕಾಳೆ ಇತರರಿದ್ದರು.



ಮಲ್ಲಿಕಾರ್ಜುನ ಖರ್ಗೆ ವಿರುದ್ಧ ದೂರು ದಾಖಲಿಸಿದ ಬಿಜೆಪಿ ಕಾರ್ಯಕರ್ತರು

ಲಕ್ಷ್ಮೇಶ್ವರ: ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಅಸ್ಸಾಂ ಚುನಾವಣಾ ಪ್ರಚಾರದಲ್ಲಿ ಭಾಷಣ ವೇಳೆ ಕುರಾನ್‌ನಲ್ಲಿ ಬರೆದಿದೆ, ನಮಾಜ್ ಮಾಡುವ ಸಂದರ್ಭದಲ್ಲಿ ವಿಷ ಸರ್ಪ ಕಂಡರೆ ಅದನ್ನು ಕೊಲ್ಲಬೇಕು. ಆರ್‌ಎಸ್‌ಎಸ್ ಹಾಗೂ ಬಿಜೆಪಿ ಅದೇ ರೀತಿಯ ವಿಷಸರ್ಪವು ಎಂಬ ಹೇಳಿಕೆ ಖಂಡಿಸಿ ಬಿಜೆಪಿ ಶಿರಹಟ್ಟಿ ಮಂಡಳ ಯುವ ಮೋರ್ಚಾದಿಂದ ಪೊಲೀಸ್ ಠಾಣೆಯ ಸಿಪಿಐ ಬಿ.ವ್ಹಿ. ನ್ಯಾಮಗೌಡ ಹಾಗೂ ಪಿಎಸ್ಐ ನಾಗರಾಜ ಗಡದ ಅವರಿಗೆ ಮನವಿ ಸಲ್ಲಿಸಿದರು.

ಜವಾಬ್ದಾರಿಯುತ ಸ್ಥಾನದಲ್ಲಿ ಇರುವ ಅವರು ಅಲ್ಪಸಂಖ್ಯಾತರ ಓಲೈಕೆಯನ್ನು ಸದಾ ಮಾಡುತ್ತಿದ್ದು, ಇವರ ಹೇಳಿಕೆಯಿಂದ ದೇಶದಲ್ಲಿರುವ ಲಕ್ಷಾಂತರ ಬಿಜೆಪಿ ಮತ್ತು ಆರೆಸ್ಸೆಸ್ ಸದಸ್ಯರ ಜೀವಕ್ಕೆ ಅಪಾಯವೊಡ್ಡಿದೆ. ಅವರು ಅಸ್ಸಾಂನಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ್ದು, ದೇಶಾದ್ಯಂತ ಇರುವ ಸಂಘ ಪರಿವಾರದ ಮೇಲೆ ಮಾಡಿರುವ ದಾಳಿಯಾಗಿದೆ. ಲಕ್ಷಾಂತರ ಕಾರ್ಯಕರ್ತರನ್ನು ಕೊಲ್ಲಲು ಹೇಳಿರುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು.



ಬಿಜೆಪಿ ಶಿರಹಟ್ಟಿ ಮಂಡಳ ಯುವ ಮೋರ್ಚಾ ಅಧ್ಯಕ್ಷ ಬಸವರಾಜ ಚಕ್ರಸಾಲಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಕ್ತಿ ಕತ್ತಿ , ಜಿಲ್ಲಾ ಯುವ ಮೋರ್ಚಾ ಉಪಾಧ್ಯಕ್ಷ ಭೀಮಣ್ಣ ಯಂಗಾಡಿ ನಗರ ಯುವ ಮೋರ್ಚಾ ಅಧ್ಯಕ್ಷ ಈರಣ್ಣ ಪೂಜಾರ, ಥಾವರಪ್ಪ ಲಮಾಣಿ, ಚಂದ್ರು ಲಮಾಣಿ, ಆಕಾಶ್ ಸೌದತ್ತಿ, ನವೀನ ಕುಂಬಾರ, ಹನುಮಂತ ಜಾಲಿಮರದ, ಲಕ್ಷಣ ಹಳ್ಳಿಕೇರಿ ಸೇರಿದಂತೆ ಅನೇಕ ಕಾರ್ಯಕರ್ತರು ಇದ್ದರು.

ಇಂದಿನಿಂದ ಕೆ.ಎಚ್. ಪಾಟೀಲ್ ಕ್ರಿಕೆಟ್ ಲೀಗ್ ಸೀಸನ್-2

ಗದಗ: ನಗರದ ವಿದ್ಯಾದಾನ ಸಮಿತಿ ಮೈದಾನದಲ್ಲಿ ಏ.12ರಂದು ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಲಾಗುವುದು ಎಂದು ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ಕೃಷ್ಣಗೌಡ ಪಾಟೀಲ ತಿಳಿಸಿದರು.

ಶನಿವಾರ ನಗರದ ಕಾಟನ್ ಸೇಲ್ ಸೊಸೈಟಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಘಾಟನೆ ಕಾರ್ಯಕ್ರಮಕ್ಕೆ ಕಾನೂನು ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ, ರೋಣ ಶಾಸಕ ಜಿ.ಎಸ್. ಪಾಟೀಲ, ಡಿ.ಆರ್ . ಪಾಟೀಲ ಸಹಿತ ಅನೇಕ ಮುಖಂಡರು ಆಗಮಿಸಲಿದ್ದಾರೆ. ವಿಶೇಷವಾಗಿ ಅಂತಾರಾಷ್ಟ್ರೀಯ ಮಾಜಿ ಕ್ರಿಕೆಟಿಗ ಸುನಿಲ್ ಜೋಶಿ, ಸುಜಿತ್ ಸೋಮಸುಂದರ್, ಈರಣ್ಣ ಸವಡಿ ಆಗಮಿಸಲಿದ್ದಾರೆ ಎಂದರು.

ಸೀಸನ್ -1ರಲ್ಲಿ ಒಟ್ಟು 14 ತಂಡಗಳು ಭಾಗವಹಿಸಿದ್ದವು. ಈ ಬಾರಿ ಗದಗ ನಗರದ 220 ಆಟಗಾರರ ಜೊತೆಗೆ 100 ಜನ ಗ್ರಾಮೀಣ ಕ್ರೀಡಾಪಟುಗಳಿಗೆ ಅವಕಾಶ ನೀಡಲಾಗಿದೆ. ಪ್ರತಿ ತಂಡದಲ್ಲಿರುವ 16 ಆಟಗಾರರಿದ್ದು, ಕನಿಷ್ಠ 5 ಜನ ಕಡ್ಡಾಯವಾಗಿ ಗ್ರಾಮೀಣ ಭಾಗದವರೇ ಇರಬೇಕು ಎನ್ನುವ ನಿಯಮ ರೂಪಿಸುವ ಮೂಲಕ ಗ್ರಾಮೀಣ ಭಾಗದ ಪ್ರತಿಭೆಗಳಿಗೆ ಮನ್ನಣೆ ನೀಡಲಾಗಿದೆ. ಪ್ರಥಮ ಬಹುಮಾನ 2 ಲಕ್ಷ ರೂ., ದ್ವಿತೀಯ 1.5 ಲಕ್ಷ ರೂ. ಬಹುಮಾನ. ಅಲ್ಲದೇ ಟೂರ್ನಿಯ ಶ್ರೇಷ್ಠ ಆಟಗಾರನಿಗೆ 25 ಸಾವಿರ ರೂ., ಅತ್ಯುತ್ತಮ ಬ್ಯಾಟ್ಸಮನ್ ಮತ್ತು ಬಾಲರ್ ಗೆ ತಲಾ 10 ಸಾವಿರ ರೂ. ಸಹಿತ ಇನ್ನಿತರ ವೈಯಕ್ತಿಕ ಬಹುಮಾನ ನೀಡಲು ನಿರ್ಧರಿಸಲಾಗಿದೆ ಎಂದರು. ಸೀಸನ್ 2ರಲ್ಲಿ ಒಟ್ಟು 18 ದಿನಗಳು ಹೊನಲು ಬೆಳಕಿನ ಪಂದ್ಯಾವಳಿ ನಡೆಯಲಿದೆ. ಅತ್ಯುತ್ತಮ ಬೆಳಕಿನ ವ್ಯವಸ್ಥೆ, ಸಾಮಾಜಿಕ ಜಾಲತಾಣಗಳಲ್ಲಿ ನೇರ ಪ್ರಸಾರ, ಥರ್ಡ್ ಅಂಪೈರ್ ವ್ಯವಸ್ಥೆಯೂ ಒಳಗೊಂಡಿದೆ ಎಂದರು.

ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಮಟ್ಟದ ಸಲಹಾ ಸಮಿತಿ ಸದಸ್ಯ ಸಿದ್ಧಲಿಂಗೇಶ್ವರ ಪಾಟೀಲ, ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ, ಉಮರಫಾರೂಕ್ ಹುಬ್ಬಳ್ಳಿ, ಸರ್ಫರಾಜ್ ಶೇಕ್, ಅಹ್ಮದ ಖಾಜಿ ಇತರರು ಉಪಸ್ಥಿತರಿದ್ದರು.



ಪ್ರತಿಭೆ, ಕೌಶಲ್ಯವಿದ್ದವರಿಗೆ ಅವಕಾಶ

ಗದಗ: ಪ್ರತಿಭೆ ಮತ್ತು ಕೌಶಲ್ಯವಿದ್ದರೆ ಉದ್ಯೋಗ ಅವಕಾಶಗಳು ಒಲಿದು ಬರಲು ಸಾಧ್ಯ. ಜೀವನದಲ್ಲಿ ಯಶಸ್ಸು ಪಡೆಯಲು ಉದ್ಯೋಗ ಅವಶ್ಯ. ಇಂತಹ ಉದ್ಯೋಗವಿರುವ ವ್ಯಕ್ತಿಗಳಿಗೆ ವಿಜಯಲಕ್ಷ್ಮೀ ಒಲಿಯಬಲ್ಲಳು ಎಂದು ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ ಹೇಳಿದರು.

ನಗರದ ಬಸವೇಶ್ವರ ಮಹಾವಿದ್ಯಾಲಯದ ಆವರಣದಲ್ಲಿ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ, ಧಾರವಾಡದ ಕನೆಕ್ಟ್ ಸಂಸ್ಥೆ ಹಾಗೂ ಬಸವೇಶ್ವರ ಮಹಾವಿದ್ಯಾಲಯದ ಆಶ್ರಯದಲ್ಲಿ ಶನಿವಾರ ಏರ್ಪಡಿಸಿದ್ದ ಬೃಹತ್ ಉದ್ಯೋಗ ಮೇಳದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಶಾಸಕ ಸಿ.ಸಿ. ಪಾಟೀಲ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಕಲಿಕೆಯ ಆಸಕ್ತಿ ಹೆಚ್ಚುತ್ತಿರುವುದು ಶೈಕ್ಷಣಿಕ ಕ್ಷೇತ್ರದಲ್ಲಿ ಸುಧಾರಣೆಗೆ ಕಾರಣವಾಗಿದೆ ಎಂದರು. ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್. ಪಾಟೀಲ ಹಾಗೂ ವಿಧಾನ ಪರಿಷತ್ತಿನ ಮಾಜಿ ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ ಮಾತನಾಡಿದರು. ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ಅಧ್ಯಕ್ಷತೆ ವಹಿಸಿದ್ದರು. ಚಂದ್ರು ಬಾಳಿಹಳ್ಳಿಮಠ ನಿರೂಪಿಸಿದರು. ಜಯದೇವ ಮೆಣಸಗಿ ವಂದಿಸಿದರು. ಉದ್ಯೋಗ ಮೇಳದಲ್ಲಿ 1,143 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡು ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದರು. ಆ ಪೈಕಿ 163 ಅಭ್ಯರ್ಥಿಗಳು ಆಯ್ಕೆಯಾಗಿ ಉದ್ಯೋಗದ ನೇಮಕಾತಿ ಆದೇಶ ಪಡೆದರು. 443 ಅಭ್ಯರ್ಥಿಗಳು ತಾತ್ಕಾಲಿಕವಾಗಿ ಆಯ್ಕೆಯಾದರು.



ಬಂಜಾರ ಸಮುದಾಯದ 260 ಕುಟುಂಬಗಳಿಗೆ ಹಕ್ಕುಪತ್ರ

ಗಜೇಂದ್ರಗಡ: ಶ್ರೀ ಸದ್ಗುರು ಸೇವಾಲಾಲ ಸೇವಾ ಸಮಿತಿ ವತಿಯಿಂದ ನಗರ ಸಮೀಪದ ರಾಜೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಸುಮಾರು 6 ಎಕರೆ 8 ಗುಂಟೆ ಪ್ರದೇಶದಲ್ಲಿ 260 ಪ್ಲಾಟ್‌ಗಳ ನಿರ್ಮಾಣ ಮಾಡಿ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣಾ ಕಾರ್ಯಕ್ರಮ ಶನಿವಾರ ನಡೆಯಿತು.

ಕಾರ್ಯಕ್ರಮವನ್ನು ರೋಣ ಶಾಸಕ ಜಿ.ಎಸ್. ಪಾಟೀಲ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬಂಜಾರ ಸಮಾಜದ ಯುವ ಮಿತ್ರರು ಸುಸಜ್ಜಿತವಾದ ಯಾವುದೇ ತೊಂದರೆ ಇಲ್ಲದೆ 260 ಸೈಟ್‌ಗಳಿಗೆ ನೀಲ ನಕ್ಷೆಯನ್ನು ರಚನೆ ಮಾಡಿದ್ದಾರೆ. ಈ ನಗರಕ್ಕೆ ತುಳಜಾಭವಾನಿ ನಗರ ಎಂದು ನಾಮಕರಣ ಮಾಡಿದ್ದು ಹೆಮ್ಮೆ. ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಪ್ರಜಾಸೌಧ ಕಟ್ಟಡ, ಕೋರ್ಟ್ ಕಟ್ಟಡ ಸೇರಿ ಹಲವಾರು ಸರ್ಕಾರಿ ಕಚೇರಿಗಳು ಸನಿಹದಲ್ಲಿದ್ದು ಉತ್ತಮ ವಾತಾವರಣದಲ್ಲಿ ಮನೆ ನಿರ್ಮಾಣ ಮಾಡಬಹುದಾದ ಸೈಟುಗಳನ್ನು ನೀಡಿದ್ದಾರೆ ಎಂದರು.

ಪ್ರಾಸ್ತಾವಿಕವಾಗಿ ಪ್ರಶಾಂತ್ ರಾಠೋಡ ಮಾತನಾಡಿ, ಕಳೆದ ಚುನಾವಣೆಯಲ್ಲಿ ಜಿ.ಎಸ್.ಪಾಟೀಲರು ಬಂಜಾರ ಸಮುದಾಯಕ್ಕೆ ಮನೆ ನಿರ್ಮಾಣ ಮಾಡಿಕೊಡುವುದಾಗಿ ಭರವಸೆ ನೀಡಿದ್ದರು. ಅದರಂತೆ ಹಕ್ಕು ಪತ್ರಗಳನ್ನ ವಿತರಣೆ ಮಾಡುತ್ತಿದ್ದಾರೆ. ಹಿಂದುಳಿದ ವರ್ಗ ಪೈಕಿ ನಮ್ಮ ಬಂಜಾರ ಸಮುದಾಯವೂ ಒಂದಾಗಿದೆ. ನಮ್ಮ ಜನ ಯಾರು ಏನೇ ಹೇಳಿದರೂ ಅದನ್ನು ನಂಬುತ್ತಾರೆ. ಈ ಹಕ್ಕುಪತ್ರ ವಿತರಣೆ ಕಾರ್ಯಕ್ರಮಕ್ಕೆ ನಾನಾ ಅಡೆತಡೆಗಳನ್ನು ಇಲ್ಲಸಲ್ಲದ ವಿಚಾರವನ್ನು ಸಮಾಜದ ಜನರಿಗೆ ದಿಕ್ಕು ತಪ್ಪಿಸುವ ಕಾರ್ಯ ಅನೇಕರು ಮಾಡಿದ್ದಾರೆ. ಆದರೂ ಬಗ್ಗದೆ ಶಾಸಕರ ಭರವಸೆ ಹಾಗೂ ನಂಬಿಕೆಯ ಮೇಲೆ 1ಲಕ್ಷ 10 ಸಾವಿರ ರೂಪಾಯಿಗಳಲ್ಲಿ 260 ಫಲಾನುಭವಿಗಳಿಗೆ ಪ್ಲಾಟ್ ನೀಡಲಾಗಿದೆ ಎಂದರು. ಗಜೇಂದ್ರಗಡ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜ ಘೋರ್ಪಡೆ, ರೋಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೀರಣ್ಣ ಶೆಟ್ಟರ, ಐ.ಎಸ್. ಪಾಟೀಲ, ಎಚ್. ಎಸ್. ಸೋಂಪುರ, ಲಾಲಪ್ಪ ರಾಠೋಡ ಮಾತನಾಡಿದರು. ಅಶೋಕ ಭಾಗಮಾರ, ಶಶಿಧರ ಹೂಗಾರ, ಅರ್ಜುನ ರಾಠೋಡ, ಈಶಪ್ಪ ರಾಠೋಡ, ಮಂಜುಳಾ ರೇವಡಿ ಇತರರಿದ್ದರು.



ಕರ್ನಾಟಕ ಕಾ.ನಿ.ಪ ಸಂಘದ 40ನೇ ರಾಜ್ಯ ಸಮ್ಮೇಳನ ಉದ್ಘಾಟಿಸಿದ ಸಿಎಂ ಸಿದ್ದರಾಮಯ್ಯ

ಸಮ ಸಮಾಜ ನಿರ್ಮಿಸಲು ಕೈಜೋಡಿಸಿ

ಬೀದರ: ಪತ್ರಕರ್ತರು ಸದಾಕಾಲ ಜನಪರವಾಗಿ, ಸಮಾಜದ ಪರವಾಗಿರಬೇಕು. ಅಶಕ್ತರಿಗೆ ಶಕ್ತಿ ತುಂಬುವ ಕಾರ್ಯ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅವರುಶನಿವಾರಕರ್ನಾಟಕಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಬೀದರ ಜಿಲ್ಲಾ ಘಟಕದ ವತಿಯಿಂದ ಏರ್ಪಡಿಸಲಾಗಿರುವ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ನಮ್ಮ ಸಮಾಜದಲ್ಲಿ ಅನೇಕ ಜಾತಿಗಳು, ಧರ್ಮಗಳು, ಭಾಷೆಗಳಿವೆ. ಹಲವು ಸಂಸ್ಕೃತಿ ಇದೆ. ಇಂತಹ ಸಮಾಜದಲ್ಲಿ ನಾವು ಬದುಕಿದ್ದೇವೆ ಎಂಬುದನ್ನು ಅರಿತು ಎಲ್ಲರೂ ಒಪ್ಪುವ ಸಂವಿಧಾನವನ್ನು ಡಾ.ಬಿ.ಆರ್. ಅಂಬೇಡ್ಕರ್ ಅವರು ಬರೆದರು ನಮ್ಮ ಸಂವಿಧಾನದ ಆಶಯಗಳು ಸಮಾಜದಲ್ಲಿ ಜಾರಿಯಾಗುತ್ತಿದೆಯೇ ಎಂದು ಪತ್ರಕರ್ತರು ಗಮನಿಸಬೇಕು. ನಮ್ಮ ಸಮಾಜದಲ್ಲಿ ಅನೇಕ ನ್ಯೂನ್ಯತೆಗಳಿದ್ದು, ಅವುಗಳನ್ನು ಹೋಗಲಾಡಿಸಿ ಸಮಸಮಾಜ ಕಟ್ಟುವ ಕಾರ್ಯ ಮಾಡಬೇಕಿದೆ ಎಂದು ಸಲಹೆ ಮಾಡಿದರು.

ಒಂದು ಸಿರಿವಂತರ ಪರ, ಮತ್ತೊಂದು ಬಡವರ ಪರ ಎನ್ನುವಂತಹ ಎರಡು ರೀತಿಯ ಆರ್ಥಿಕ ನೀತಿಗಳು ಜಾರಿಯಲ್ಲಿರಬೇಕು ಎಂದು ಪಟ್ಟಭದ್ರರು ಬಯಸುತ್ತಾರೆ. ಬಡವರಿಗೂ ಸಹ ಕೊಂಡುಕೊಳ್ಳುವ ಆರ್ಥಿಕ ಶಕ್ತಿ ಬರಬೇಕು ಎಂದು ಪತ್ರಕರ್ತರು ಯೋಚಿಸುವಂತಾಗಬೇಕು. ಸಮಾಜದಲ್ಲಿ ಆರ್ಥಿಕ ಸಮಾನತೆ ತರುವ ಪ್ರಯತ್ನವನ್ನು ಪತ್ರಕರ್ತರು ಮಾಡಬೇಕು ಎಂದರು.

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ.ಖಂಡ್ರೆ, ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್ ಮಾತನಾಡಿದರು.

ರಾಜ್ಯ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರ್ ಅವರು ಮಾತನಾಡಿ, ಕಳೆದ ಎರಡು ದಶಕಗಳ ನಂತರ ಬೀದರಿನಲ್ಲಿ ಇದೇ ಮೊದಲ ಬಾರಿಗೆ ರಾಜ್ಯ ಮಟ್ಟದ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಪತ್ರಕರ್ತರು ತಮ್ಮ ಬರಹಗಳ ಮೂಲಕ ಗುರುತಿಸಿಕೊಳ್ಳಬೇಕು. ಶಿಸ್ತು, ಪ್ರಾಮಾಣಿಕತೆ ಮೈಗೂಡಿಸಿಕೊಳ್ಳಬೇಕು. ಕೆಲವು ಬ್ಲಾಕ್ಮೇಲ್ ಹಾಗೂ ಕ್ರಿಮಿನಲ್ ಮನಸ್ಥಿತಿ ಪತ್ರಕರ್ತರಿಂದ ನೈಜ ಪತ್ರಕರ್ತರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವ ವ್ಯವಸ್ಥೆ ನಮ್ಮಿಂದಲೇ ಆಗಬೇಕು. ಕಾ.ನಿ.ಪ. ಸಂಘದ ಮೊದಲ ಅಧ್ಯಕ್ಷರಾಗಿದ್ದ ಡಿ.ವಿ.ಗುಂಡಪ್ಪ ಜಯಂತಿ ಆಚರಣೆಯನ್ನು ಮುಖ್ಯಮಂತ್ರಿಗಳು ಘೋಷಿಸಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ದ-ನ್ಯೂ ಇಂಡಿಯನ್ ಎಕ್ಸಪ್ರೆಸ್ ಸ್ಥಾನಿಕ ಸಂಪಾದಕ ರಾಮು ಪಾಟೀಲ ಅವರಿಗೆ ಲೋಕನಾಯಕ ದಿವಂಗತ ಭೀಮಣ್ಣ ಖಂಡ್ರೆ ಅವರ ದತ್ತಿ ನಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಜಿಲ್ಲೆಯ ಹಿರಿಯ ಪತ್ರಕರ್ತರು ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಬೀದರ ಜಿಲ್ಲಾ ಘಟಕದಿಂದ 40ನೇ ರಾಜ್ಯ ಮಟ್ಟದ ಪತ್ರಕರ್ತರ ಸಮ್ಮೇಳನಕ್ಕೆ ಸಹಕರಿಸಿದ ಮಹನೀಯರನ್ನು ಮುಖ್ಯಮಂತ್ರಿಗಳು ಸನ್ಮಾನಿಸಿದರು. ಮುಖ್ಯಮಂತ್ರಿಗಳು ಛಾಯಾಚಿತ್ರ ಹಾಗೂ ವ್ಯಂಗ ಚಿತ್ರ ಪ್ರದರ್ಶನ ಸೇರಿದಂತೆ ಇತರೆ ಮಳಿಗೆಗಳ ಉದ್ಘಾಟನೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಹಾರಕೂಡ ಶ್ರೀಚನ್ನವೀರ ಶಿವಾಚಾರ್ಯ ಸ್ವಾಮೀಜಿ, ಭಾಲ್ಕಿಯ ಬಸವಲಿಂಗ ಪಟ್ಟದ್ದೇವರು, ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ, ಬೀದರ ಲೋಕಸಭಾ ಸಂಸದರಾದ ಸಾಗರ ಈಶ್ವರ ಖಂಡ್ರೆ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ. ಪ್ರಭಾಕರ, ಶಾಸಕರಾದ ಶರಣು ಸಲಗರ, ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಪಾಟೀಲ, ಭೀಮರಾವ್ ಪಾಟೀಲ, ಶಿವಕುಮಾರ, ಮಾಜಿ ಸಚಿವರಾದ ರಾಜಶೇಖರ ಬಿ. ಪಾಟೀಲ, ರಾಜ್ಯ ಕಾರ್ಯದರ್ಶಿ ಜಿ.ಸಿ.ಲೋಕೇಶ್, ಮುಖಂಡರಾದ ಸೋಮಣ್ಣ ಬೇವಿನಮರದ, ಪತ್ರಕರ್ತ ಸಂಘದ ಜಿಲ್ಲಾಧ್ಯಕ್ಷ ಆನಂದ ದೇವಪ್ಪ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ, ಮಹಾನಗರ ಪಾಲಿಕೆಯ ಆಯುಕ್ತ ಮುಕುಲ್ ಜೈನ್, ಮತ್ತಿತರರು ಉಪಸ್ಥಿತರಿದ್ದರು.



ನೆನಪಿನ ಕೈಪಿಡಿ ಬಿಡುಗಡೆ

ಸಮ್ಮೇಳನದ ನಿಮಿತ್ತ ಪ್ರಕಟಿಸಿದ ಸ್ಮರಣ ಸಂಚಿಕೆಯನ್ನು ಮುಖ್ಯಮಂತ್ರಿಗಳು ಬಿಡುಗಡೆ ಮಾಡಿದರು. ಪತ್ರಕರ್ತರಾದ ಶಶಿಕಾಂತ ಶೆಂಬೆಳ್ಳಿ ಹಾಗೂ ಶ್ರೀಕಾಂತ ಬಿರಾದಾರ ಸಂಪಾದಿಸಿದ 'ಶರಣ ಸೂಫಿ ಸಿರಿ' ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ವಿಧಿವಿಜ್ಞಾನ ವಿವಿಯಲ್ಲಿ ಓಪನ್ ಡೇ | ಸಚಿವ ಜೋಶಿ ಅಭಿಪ್ರಾಯ

ತನಿಖೆಯಲ್ಲಿ ವಿಧಿವಿಜ್ಞಾನದ ಪಾತ್ರ ಪ್ರಮುಖ

ಧಾರವಾಡ: ಭವಿಷ್ಯದ ತನಿಖಾ ವ್ಯವಸ್ಥೆಯಲ್ಲಿ ವಿಧಿವಿಜ್ಞಾನದ ನಿರ್ಣಾಯಕ ಪಾತ್ರ ವಹಿಸಲಿದೆ. ಅಪರಾಧಿಗಳಿಗೆ ಶಿಕ್ಷೆ ಕೊಡಿಸುವಲ್ಲಿ ಇದು ಪ್ರಮುಖ ಅಸ್ತ್ರವಾಗಿದ್ದು,

ಅಪರಾಧ ಮುಕ್ತ ಸಮಾಜ ನಿರ್ಮಾಣಕ್ಕೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಸಲಹೆ ನೀಡಿದರು.

ನಗರದ ಹೊರವಲಯದ ಜಲ-ನೆಲ ಸಂಸ್ಥೆಯ (ವಾಲ್ಮಿ) ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಷ್ಟ್ರೀಯ ವಿಧಿ ವಿಜ್ಞಾನ ವಿಶ್ವವಿದ್ಯಾಲಯದ ಆವರಣದಲ್ಲಿ

ಶನಿವಾರ ಓಪನ್ ಡೇ ವಾರ್ಷಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನ್ಯಾಯದಾನದಲ್ಲಿ ವೇಗ: ಈ ಹಿಂದೆ ಸಾಕ್ಷ್ಯಾಧಾರಗಳ ಕೊರತೆಯಿಂದ ಪ್ರಕರಣಗಳು ದಶಕಗಳ ಕಾಲ ಬಾಕಿ ಉಳಿಯುತ್ತಿದ್ದವು. ಆದರೆ, ಈಗ ವಿಧಿವಿಜ್ಞಾನದ ತಂತ್ರಜ್ಞಾನದಿಂದಾಗಿ ನಿಖರವಾದ ಪುರಾವೆಗಳನ್ನು ಒದಗಿಸಿ, ಶೀಘ್ರವಾಗಿ ನ್ಯಾಯದಾನ ಮಾಡಲು ಸಾಧ್ಯವಾಗುತ್ತಿದೆ ಎಂದರು.

ಧಾರವಾಡದ ಹೆಮ್ಮೆ: ಧಾರವಾಡ ಕೇವಲ ವಿದ್ಯಾಕಾಶಿ ಮಾತ್ರವಲ್ಲ, ಈಗ ದೇಶದ ಪ್ರಮುಖ ವಿಧಿ ವಿಜ್ಞಾನದ ಕೇಂದ್ರವಾಗಿಯೂ ಬೆಳೆಯುತ್ತಿದೆ. ಈ ಭಾಗದ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದ ತರಬೇತಿ ಇಲ್ಲಿ ದೊರೆಯುತ್ತಿರುವುದು ಸಂತಸದ ವಿಷಯ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ತಂತ್ರಜ್ಞಾನದ ಬಳಕೆ: ಸೈಬರ್ ಅಪರಾಧಗಳು ಹೆಚ್ಚುತ್ತಿರುವ ಈ ಕಾಲದಲ್ಲಿ, ಡಿಜಿಟಲ್ ಪುರಾವೆಗಳನ್ನು ಸಂಗ್ರಹಿಸುವಲ್ಲಿ ಭಾರತವು ಸ್ವಾವಲಂಬಿಯಾಗುತ್ತಿದೆ. ನಮ್ಮ ದೇಶದ ಯುವ ವಿಜ್ಞಾನಿಗಳು ಜಗತ್ತಿಗೆ ಹೊಸ ಹಾದಿ ತೋರಿಸಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾನೂನು ತಿದ್ದುಪಡಿ: ಭಾರತ ಸರ್ಕಾರವು ತಂದಿರುವ ಹೊಸ ಕಾನೂನುಗಳಲ್ಲಿ ಏಳು ವರ್ಷಕ್ಕಿಂತ ಹೆಚ್ಚು ಶಿಕ್ಷೆ ಇರುವ ಅಪರಾಧಗಳ ಸ್ಥಳಕ್ಕೆ ವಿಧಿವಿಜ್ಞಾನ ತಜ್ಞರು ಸಹ ಭೇಟಿ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ. ಇದು ಈ ಕ್ಷೇತ್ರದ ಪ್ರಾಮುಖ್ಯತೆಯೂ ಹೆಚ್ಚಿಸಿದೆ ಎಂದು ಹೇಳಿದರು.

ಸಚಿವರ ಸಂವಾದ: ಭಾಷಣದ ನಂತರ ಸಚಿವರು ವಿವಿಧ ಮಳಿಗೆಗಳಿಗೆ ಭೇಟಿ ನೀಡಿ, ವಿದ್ಯಾರ್ಥಿಗಳು ಸಿದ್ಧಪಡಿಸಿದ್ದ ವಿಧಿವಿಜ್ಞಾನದ ಮಾದರಿ ವೀಕ್ಷಿಸಿದರು. ವಿದ್ಯಾರ್ಥಿಗಳ ಕುತೂಹಲದ ಪ್ರಶ್ನೆಗಳಿಗೆ ಉತ್ತರಿಸುತ್ತಾ, ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಉತ್ತೇಜನ ನೀಡಿದರು.

ಕಾರ್ಯಕ್ರಮದಲ್ಲಿ ಹು-ಧಾ ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ, ಮಾಜಿ ಮೇಯರ್ ಈರೇಶ ಅಂಚಟಗೇರಿ, ವಿಧಿ-ವಿಜ್ಞಾನ ವಿಶ್ವವಿದ್ಯಾಲಯದ ನಿರ್ದೇಶಕ ಡಾ.ಮಂಜುನಾಥ ಘಾಟೆ ಸೇರಿ ಅನೇಕ ಪ್ರಾಧ್ಯಾಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



> **ನಮ್ಮ ದೇಶವನ್ನು ಅಪರಾಧ ಮುಕ್ತವನ್ನಾಗಿ ಮಾಡಲು ವಿಜ್ಞಾನ ಮತ್ತು ಕಾನೂನು ಕೈಜೋಡಿಸಬೇಕು. ಆ ನಿಟ್ಟಿನಲ್ಲಿ ಧಾರವಾಡದ ಈ ಸಂಸ್ಥೆ ದೇಶಕ್ಕೆ ಮಾದರಿಯೂ ಆಗಬೇಕಿದೆ.**
>
> ■ ಪ್ರಹ್ಲಾದ ಜೋಶಿ, ಕೇಂದ್ರ ಸಚಿವ



ಹುಬ್ಬಳ್ಳಿ: ನಗರದ ಚೌಗಲಾ ಶಿಕ್ಷಣ ಸಂಸ್ಥೆಯ ವಿದ್ಯಾನಿಕೇತನ ಪಿಯು ವಿಜ್ಞಾನ ಕಾಲೇಜ್ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಾಲೇಜ್‌ಗೆ ಪ್ರಥಮ ಸ್ಥಾನ ಗಳಿಸಿ ಸ್ಥವನ್ ಇನಾಮದಾರ(595) ಹಾಗೂ ದ್ವಿತೀಯ ಸ್ಥಾನ ಪಡೆದ ಅಭಿಷೇಕ ಚೆನ್ನಗೊಂಡ (592) ಅವರಿಗೆ ಸಂಸ್ಥೆ ಕಾರ್ಯದರ್ಶಿ ಅನಿಲಕುಮಾರ ಚೌಗಲೆ ಸಿಹಿ ತಿಸಿನಿ ಸತ್ಕರಿಸಿದರು. ಕಾರ್ಯಧ್ಯಕ್ಷರಾದ ಶ್ರೀದೇವಿ ಚೌಗಲೆ, ನಿರ್ದೇಶಕ ಡಾ.ರಮೇಶ ಬಂಡಿವಾಡ, ಪ್ರಾಚಾರ್ಯ ಆನಂದ ಮುಳಗುಂಡ ಹಾಗೂ ಅನೇಕರಿದ್ದರು.

ಕೊಪ್ಪಳದಲ್ಲಿ ಲವ್ ಜಿಹಾದ್ ಪ್ರಕರಣ ಬೆಳಕಿಗೆ

ಕೊಪ್ಪಳ: ಜಿಲ್ಲೆಯಲ್ಲಿ ಲವ್ ಜಿಹಾದ್ ಪ್ರಕರಣವೊಂದು ಬೆಳಕಿಗೆ ಬಂದಿದ್ದು, ಮುಸ್ಲಿಂ ಯುವಕನ ವಿರುದ್ಧ ಹಿಂದು ಯುವತಿಯನ್ನು ಪುಸಲಾಯಿಸಿದ ಆರೋಪ ಕೇಳಿಬಂದಿದೆ.

ಇನ್ನು ಯುವಕನ ಮೊಬೈಲ್ ಪರಿಶೀಲಿಸಿದಾಗ ಹಲವು ಯುವತಿಯರ ಅಶ್ಲೀಲ ವಿಡಿಯೋ ಮತ್ತು ಫೋಟೋಗಳು ಪತ್ತೆಯಾಗಿವೆ. ಸದ್ಯ ಹಿಂದು ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದ್ದು, ಪೊಲೀಸರಿಗೆ ದೂರು ನೀಡಿ ಕ್ರಮಕ್ಕೆ ಆಗ್ರಹಿಸಿವೆ.

ಕುಷ್ಟಗಿ ತಾಲೂಕಿನ ಗ್ರಾಮವೊಂದರ ಹಿಂದು ವಿದ್ಯಾರ್ಥಿನಿ ಕೊಪ್ಪಳದಲ್ಲಿ ನರ್ಸಿಂಗ್ ವ್ಯಾಸಂಗ ಮಾಡುತ್ತಿದ್ದಳು. ಈ ವೇಳೆ ಆಕೆಯನ್ನು ಪುಸಲಾಯಿಸಿದ ಹಿನ್ನೆಲೆ ಕೊಪ್ಪಳ ತಾಲೂಕಿನ ಕಂಪ್ಲಿ ಗ್ರಾಮದ ಯುವಕ ಮುಸ್ತಫಾ ವಿರುದ್ಧ ಇದೀಗ ಲವ್ ಜಿಹಾದ್ ಆರೋಪ ಕೇಳಿಬಂದಿದೆ.

ಗ್ರಾಮವೊಂದರಲ್ಲಿ ವಿದ್ಯಾರ್ಥಿನಿ ಜೊತೆಗೆ ಇದ್ದ ವೇಳೆ ಹಿಂದು ಯುವಕರ ಕೈಗೆ ಮುಸ್ತಫಾ ಸಿಕ್ಕಿ ಬಿದ್ದಿದ್ದಾನೆ. ಈ ವೇಳೆ ಮುಸ್ತಫಾ ಮೊಬೈಲ್ ಪರಿಶೀಲನೆ ಮಾಡಿದಾಗ ಹಲವು ಹಿಂದು ಯವತಿಯರ ಜೊತೆಗಿರುವ ಫೋಟೋಗಳು ಸೇರಿದಂತೆ 10ಕ್ಕೂ ಹೆಚ್ಚು ಯುವತಿಯರ ಅಶ್ಲೀಲ ವಿಡಿಯೋಗಳು ಪತ್ತೆ ಆಗಿವೆ.

ಅಷ್ಟೇ ಅಲ್ಲದೆ ಯುವತಿಯರಿಗೆ ಬಿಯರ್ ಕುಡಿಸಿದ್ದಾನೆ. ಮಟ್ಕಾ ಬರೆಯುತ್ತಿರುವುದೂ ಪತ್ತೆ ಆಗಿದೆ. ಈ ವೇಳೆ ಕೂಡಲೇ ಮೊಬೈಲ್ ಕಸಿದುಕೊಂಡ ಮುಸ್ತಫಾ ರೀಸೆಟ್ ಮಾಡಿದ್ದಾನೆ.

ಇನ್ನು ನಾನು ಹಿಂದು ಯುವತಿಯನ್ನು ಮದುವೆ ಆಗಿರುವುದಾಗಿ ಮುಸ್ತಫಾ ಹೇಳುತ್ತಿದ್ದಾನೆ. ಆದರೆ, ಇತ್ತ ಮುಸ್ತಫಾ ವಿರುದ್ಧ ಕ್ರಮಕೈಗೊಳ್ಳುವಂತೆ ಹಿಂದು ಯುವಕರು ಆಗ್ರಹಿಸಿದ್ದಾರೆ.

ವಿಶ್ವ ಹಿಂದೂ ಪರಿಷತ್‌ನ ಜಿಲ್ಲಾಧ್ಯಕ್ಷ ಡಾ.ಸಂಗಮೇಶ್ ಹಿರೇಮಠ ಸೇರಿದಂತೆ ಹಿಂದು ಕಾರ್ಯಕರ್ತರಿಂದ ಮುಸ್ತಫಾ ವಿರುದ್ಧ ಎಸ್‌ಪಿಗೆ ದೂರು ನೀಡಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಶೇ. 96.24ರಷ್ಟು ಫಲಿತಾಂಶ ದಾಖಲು

ಬನವಾಸಿ: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಇಲ್ಲಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಕಲಾ ವಾಣಿಜ್ಯ, ವಿಜ್ಞಾನ ಮೂರೂ ವಿಭಾಗದಲ್ಲೂ ಒಟ್ಟು 96.24% ರಷ್ಟು ಫಲಿತಾಂಶ ದಾಖಲಿಸಿದೆ. ಪ್ರಸ್ತುತ ವರ್ಷ ಕಲಾ ವಿಭಾಗದಲ್ಲಿ 73 ವಿದ್ಯಾರ್ಥಿಗಳು, ವಾಣಿಜ್ಯ ವಿಭಾಗದಲ್ಲಿ 78 ವಿದ್ಯಾರ್ಥಿಗಳು ಹಾಗೂ ವಿಜ್ಞಾನ ವಿಭಾಗದಲ್ಲಿ 35 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಕಲಾವಿಭಾಗದಲ್ಲಿ ನಾಗೇಂದ್ರ ರಮೇಶ್ ಮಡಿವಾಳ 540, ಸ್ನೇಹ ಕುರುಬರ 537, ಗೌರಿ ಚನ್ನಯ್ಯ 534 ಅಂಕಗಳೊಂದಿಗೆ ಕಾಲೇಜಿಗೆ ಮೊದಲ ಮೂರು ಸ್ಥಾನಗಳಿಸಿಕೊಂಡಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಸುಶಾಂತ ರಾಯ್ಕರ್ 579, ಪ್ರಣತಿ ಬಡಿಗೇರ 575, ಲಕ್ಷ್ಮೀ ಮಡಿವಾಳ 568, ಕವನ ಮಡಿವಾಳ 568 ಹಾಗೂ ವಿಜ್ಞಾನ ವಿಭಾಗದಲ್ಲಿ ಶ್ರೇಯಾ ರಾವ್ 590, ನಿಶಾ ನಾಯ್ಕ 559, ಹಾಗೂ ಪರಶುರಾಮ ಎಸ್. 550 ಅಂಕಗಳನ್ನು ಗಳಿಸಿ ವಿಭಾಗವಾರು ಕ್ರಮವಾಗಿ ಮೊದಲ ಮೂರು ಸ್ಥಾನಗಳನ್ನು ಗಳಿಸಿಕೊಂಡಿದ್ದಾರೆ.ಗ್ರಾಮೀಣ ಪ್ರದೇಶದ ಕಾಲೇಜಿನಲ್ಲಿ 96.24% ರಷ್ಟು ಫಲಿತಾಂಶದ ಸಾಧನೆ ಮಾಡಿದ್ದಕ್ಕಾಗಿ ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಸಿದ್ದಲಿಂಗಪ್ಪ ಉಗ್ರಾಣದ, ಸದಸ್ಯ ಪ್ರಕಾಶ ಬಂಗಲೆ ವಿದ್ಯಾರ್ಥಿಗಳು, ಪ್ರಾಚಾರ್ಯರು ಮತ್ತು ಉಪನ್ಯಾಸಕರನ್ನು ಅಭಿನಂದಿಸಿದ್ದಾರೆ.

ಮಾಲೀಕರಿಗೆ ಸ್ವತ್ತು ಹಸ್ತಾಂತರ



ಶಿರಸಿ: ಶಿರಸಿ ಉಪವಿಭಾಗದ ಪೊಲೀಸ್ ಠಾಣೆಗಳಲ್ಲಿ ಹಲವಾರು ಪ್ರಕರಣಗಳಲ್ಲಿ ಕಳ್ಳತನವಾದ ಸ್ವತ್ತುಗಳನ್ನು ಮಾಲೀಕರಿಗೆ ಹಸ್ತಾಂತರ ಮಾಡಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎನ್. ನೇತೃತ್ವದಲ್ಲಿ ಬರೋಬ್ಬರಿ 17 ಪ್ರಕರಣಗಳಲ್ಲಿನ ದುಡ್ಡು, ಬಂಗಾರ, ಬೆಳ್ಳಿ ಕಳ್ಳತನ ಪ್ರಕರಣ ಬೇಧಿಸಿ ಮಾಲೀಕರಿಗೆ ಒಪ್ಪಿಸಲಾಗಿದೆ. ನಗರದ ಗುರುಸಿದ್ದೇಶ್ವರ ಸಾಂಸ್ಕೃತಿಕ ಭವನ ಬಣ್ಣದ ಮಠದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಉಪವಿಭಾಗದ ಶಿರಸಿ ನಗರ ಠಾಣೆ, ಮಾರುಕಟ್ಟೆ ಠಾಣೆ, ಬನವಾಸಿ ಠಾಣೆ, ಗ್ರಾಮೀಣ ಠಾಣೆ, ಮುಂಡಗೋಡ ಹಾಗೂ ಯಲ್ಲಾಪುರ ಮತ್ತು ಸಿದ್ದಾಪುರ ಠಾಣೆಗಳಲ್ಲಿ ಕಳುವಾದ ಸ್ವತ್ತುಗಳನ್ನು ಪತ್ತೆ ಹಚ್ಚಿ ಮಾಲೀಕರಿಗೆ ನೀಡಲಾಯಿತು. ಎಸ್ಪಿ ದೀಪನ್, ಡಿಎಸ್ಪಿ ಗೀತಾ ಪಾಟೀಲ್ , ಶಿರಸಿ ವೃತ್ತದ ಸಿಪಿಐ ಶಶಿಕಾಂತ ವರ್ಮಾ, ಗ್ರಾಮೀಣ ಠಾಣೆ ಪಿಐ ರಮೇಶ ಹೂಗಾರ, ಯಲ್ಲಾಪುರದ ರಮೇಶ ಹಾನಾಪುರ, ಮುಂಡಗೋಡಿನ ರಂಗನಾಥ ನೀಲಮ್ಮನರ್, ಸಿದ್ದಾಪುರ ಠಾಣೆ ಜೆ.ಬಿ.ಸೀತಾರಾಮ ಸೇರಿದಂತೆ ಉಪವಿಭಾಗದ ಎಲ್ಲಾ ಠಾಣೆಯ ಪಿಎಸ್‌ಐಗಳು ಸಿಬ್ಬಂದಿ ಇದ್ದರು.

ಇಂದು ಗದಾಯುದ್ಧ ಯಕ್ಷಗಾನ ಪ್ರದರ್ಶನ

ಕುಮಟಾ: ಯಕ್ಷಗಾನದ ಅಪ್ರತಿಮ ನಟರಾಗಿದ್ದ ಮೂರೂರಿನ ದಿ. ದೇವರು ಹೆಗಡೆ ಅವರ ಜನ್ಮಶತಮಾನೋತ್ಸವ ಪ್ರಯುಕ್ತ ಏಪ್ರಿಲ್. 11 ರಿಂದ 13 ರವರೆಗೆ ಮೂರು ದಿನಗಳ ಕಾಲ ಕೋಣಾರೆಯ ವಿಷ್ಣುಮೂರ್ತಿ ದೇವಾಲಯದಲ್ಲಿ ವಿಶೇಷ ಕಾರ್ಯಕ್ರಮ ನಡೆಯಲಿವೆ. ಏ.12 ರಂದು ದಿ.ಕೃಷ್ಣ ಭಾಗವತ ಕಡತೋಕಾ ಹಾಗೂ ದಿ.ವಿಷ್ಣು ಹೆಗಡೆ ಯಡಕೇರಿ ಅವರ ಸಂಸ್ಮರಣೆ ಬಳಿಕ 'ಗದಾಯುದ್ಧ' ಯಕ್ಷಗಾನ ಪ್ರದರ್ಶನಗೊಳ್ಳಲಿದೆ. ಏ.13ರಂದು ದಿ.ಪಿ.ವಿ.ಹಾಸ್ಯಗಾರ ಕರ್ಕಿ ಹಾಗೂ ದಿ.ಈಶ್ವರ ಹೆಗಡೆ ಮೂರೂರು ಅವರನ್ನು ಸಂಸ್ಮರಿಸಲಾಗುವುದು. ಬಳಿಕ ಭಕ್ತಪ್ರಹ್ಲಾದ ಎಂಬ ಯಕ್ಷಗಾನ ಆಖ್ಯಾನ ಪ್ರದರ್ಶಿಸಲಾಗುವುದು. ಪ್ರತಿನಿತ್ಯದ ಸಂಸ್ಮರಣೆ ಕಾರ್ಯಕ್ರಮ ಹಾಗೂ ಯಕ್ಷಗಾನ ಪ್ರದರ್ಶನದಲ್ಲಿ ದಕ್ಷಿಣೋತ್ತರ ಕನ್ನಡ ಜಿಲ್ಲೆಯ ಪ್ರಸಿದ್ಧ ಹಿಮ್ಮೇಳ ಹಾಗೂ ಮುಮ್ಮೇಳದ ಕಲಾವಿದರು, ಅರ್ಥಧಾರಿಗಳು, ಯಕ್ಷಗಾನದ ವಿದ್ವಾಂಸರು ಪಾಲ್ಗೊಳ್ಳಲಿದ್ದಾರೆ. ದಿ.ದೇವರು ಹೆಗಡೆ ಅಭಿಮಾನಿಗಳು, ಯಕ್ಷಕಲಾ ರಸಿಕರು ಪ್ರೋತ್ಸಾಹಿಸಬೇಕು ಎಂದು ದೇವರು ಹೆಗಡೆ ಯಕ್ಷವೇದಿಕೆ ಪ್ರಕಟಣೆಯಲ್ಲಿ ವಿನಂತಿಸಿದೆ.

ವ್ಯಕ್ತಿ ಆತ್ಮಹತ್ಯೆ

ಗೋಕರ್ಣ: ವ್ಯಕ್ತಿಯೊರ್ವ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಇಲ್ಲಿನ ಬೇಲೆಖಾನಲ್ಲಿ ನಡೆದಿದೆ. ಮಹಾದೇವ ರಾಮು ನಾಯ್ಕ(75) ಆತ್ಮಹತ್ಯೆ ಮಾಡಿಕೊಂಡವರಾಗಿದ್ದು, ಜೀವನದಲ್ಲಿ ಜಿಗುಪ್ಸೆಗೊಂಡು ಈ ಕೃತ್ಯ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.ಮೃತದೇಹವನ್ನ ಇಲ್ಲಿನ ಪ್ರಾಥಮಿಕ ಆರೋಗ್ಯಕ್ಕೆ ತಂದು ಮರಣೋತ್ತರ ಪರೀಕ್ಷೆ ನಡೆಸಲಾಗಿದ್ದು, ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.



ಸಿದ್ದಾಪುರ: ಇಲ್ಲಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಜಾನಪದ ವೈಭವ ಕಾರ್ಯಕ್ರಮಕ್ಕೆ ಶಿರಸಿ-ಸಿದ್ದಾಪುರ ಕ್ಷೇತ್ರದ ಶಾಸಕ ಭೀಮಣ್ಣ ನಾಯ್ಕ ಚಾಲನೆ ನೀಡಿದರು. ತಾಲೂಕಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಜಿ.ನಾಗರಾಜ, ಕಾಲೇಜು ಅಭಿವೃದ್ಧ ಸಮಿತಿ ಉಪಾಧ್ಯಕ್ಷ ವಿ.ಎನ್.ನಾಯ್ಕ, ಸದಸ್ಯರಾದ ಎಸ್.ಕೆ.ನಾಯ್ಕ, ಎಂ.ಟಿ.ಗೌಡ, ವೀಣಾ ಮಂಜುನಾಥ ನಾಯ್ಕ, ಪದ್ಮಾವತಿ ಗೌಡ, ಶಾರದಾ ಹೆಗಡೆ, ಗಂಗಾಧರ ಮಡಿವಾಳ, ಎಂ.ಎಚ್.ನಾಯ್ಕ ಹಾಗೂ ಸಾಹಿತಿ ಜಿ.ಜಿ.ಹೆಗಡೆ ಬಾಳಗೋಡ ಉಪಸ್ಥಿತರಿದ್ದರು.

ಜಾನಪದ ಕಲೆ ಪರಿಚಯಿಸುವ ಕಾರ್ಯವಾಗಲಿ

ಸಿದ್ದಾಪುರ: ಇಲ್ಲಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಜಾನಪದ ವೈಭವ ಕಾರ್ಯಕ್ರಮಕ್ಕೆ ಶಿರಸಿ-ಸಿದ್ದಾಪುರ ಕ್ಷೇತ್ರದ ಶಾಸಕ ಭೀಮಣ್ಣ ನಾಯ್ಕ ಚಾಲನೆ ನೀಡಿದರು.ಬೇಡ್ಕಣೆಯ ಕೋಟೆ ಆಂಜನೇಯ ದೇವಾಲಯದಲ್ಲಿ ವಿವಿಧ ಸ್ತಬ್ಧಚಿತ್ರಗಳನ್ನು ಒಳಗೊಂಡ ಜಾನಪದ ವೈಭವದ ಮೆರವಣಿಗೆಗೆ ಟ್ರ್ಯಾಕ್ಟರ್ ಓಡಿಸುವ ಮೂಲಕ ಚಾಲನೆ ನೀಡಿದರು. ಈ ವೈಭವದಲ್ಲಿ ಮಲೆನಾಡಿನ ಕರೆಭೇಟೆ, ಡೊಳ್ಳು ಕುಣಿತ, ವೀರಗಾಸೆ, ಯಕ್ಷಗಾನ, ರೈತನ ಸಂಗಾತಿಗಳಾದ ಎತ್ತು, ಗೋವಿನ ಪೂಜೆ ಸೇರಿದಂತೆ ವಿವಿಧ ಜಾನಪದ ಕಲಾಪ್ರಕಾರಗಳು ಮೇಳೈಸಿದವು. ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಭೀಮಣ್ಣ ನಾಯ್ಕ ಮಾತನಾಡಿ, ಜಾನಪದ ಕಲೆ ಹಾಗೂ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸ ನಮ್ಮಿಂದಾಗಬೇಕು. ಶಿಕ್ಷಕರು ಹಾಗೂ ಪಾಲಕರು ಮಕ್ಕಳಿಗೆ ಶಿಕ್ಷಣದ ಜತೆಗೆ ಸಂಸ್ಕಾರ ಕಲಿಸಬೇಕು ಎಂದರು. ಕಾಲೇಜಿನ ಪ್ರಾ.ಡಾ.ಸತೀಶ ನಾಯ್ಕ ಮಾತನಾಡಿದರು. ಅನವಟ್ಟಿ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಚಾರ್ಯ ಭೀಮಪ್ಪ ಆರ್.ಸಿ ಉಪನ್ಯಾಸ ನೀಡಿದರು. ರಾಷ್ಟ್ರಪ್ರಶಸ್ತಿ ವಿಜೇತಹಸೆ ಚಿತ್ತಾರ ಕಲಾವಿದ ಈಶ್ವರ ನಾಯ್ಕ ಹಸವಂತೆ ಇವರನ್ನು ಸನ್ಮಾನಿಸಲಾಯಿತು.ತಾಲೂಕಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಜಿ.ನಾಗರಾಜ, ಕಾಲೇಜು ಅಭಿವೃದ್ಧ ಸಮಿತಿ ಉಪಾಧ್ಯಕ್ಷ ವಿ.ಎನ್.ನಾಯ್ಕ, ಸದಸ್ಯರಾದ ಎಸ್.ಕೆ.ನಾಯ್ಕ, ಎಂ.ಟಿ.ಗೌಡ, ವೀಣಾ ಮಂಜುನಾಥ ನಾಯ್ಕ, ಪದ್ಮಾವತಿ ಗೌಡ, ಶಾರದಾ ಹೆಗಡೆ, ಗಂಗಾಧರ ಮಡಿವಾಳ, ಎಂ.ಎಚ್.ನಾಯ್ಕ ಹಾಗೂ ಸಾಹಿತಿ ಜಿ.ಜಿ.ಹೆಗಡೆ ಬಾಳಗೋಡ ಉಪಸ್ಥಿತರಿದ್ದರು. ಹರ್ಷಿತಾ ಸಂಗಡಿಗರು ಪ್ರಾರ್ಥಿಸಿದರು. ಉಪನ್ಯಾಸಕ ನಾರಾಯಣ ಗೌಡ ಸ್ವಾಗತಿಸಿದರು. ವಿದ್ಯಾರ್ಥಿನೀಯರಾದ ರೇಖಾ ಮತ್ತು ಮಹಾಲಕ್ಷ್ಮೀ ನಿರೂಪಿಸಿದರು. ಸಾಂಸ್ಕೃತಿಕ ವೇದಿಕೆ ಸಂಚಾಲಕ ಗಣಪತಿ ಎಂ.ಬಿ ಪ್ರಾಸ್ತಾವಿಕ ಮಾತನಾಡಿದರು. ಉಪನ್ಯಾಸಕ ಈಶ್ವರ ನಾಯ್ಕ ವಂದಿಸಿದರು.



ಕುಮಟಾ: ತಾಲೂಕಿನ ಸಂತೆಗುಳಿ ಪಂಚಾಯತ್ ವ್ಯಾಪ್ತಿಯ ಕಲವೆ ಸೇತುವೆ ಹೊಂದಿಕೊಂಡು ಬ್ರಿಡ್ಜ್ ಕಮ್ ಬ್ಯಾರೇಜ್ ನಿರ್ಮಾಣ ಮಾಡುವ ಕುರಿತು ಶಾಸಕ ದಿನಕರ ಶೆಟ್ಟಿ ಅವರು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಚರ್ಚೆ ನಡೆಸಿದರು.

ಅಷ್ಟಬಂಧ ಮಹೋತ್ಸವ | ಸಂಸದ ವಿಶ್ವೇಶ್ವರ ಹೆಗಡೆ ಹೇಳಿಕೆ

ಧಾರ್ಮಿಕ ಭಾವನೆ ಬಲಪಡಿಸುವ ಕಾರ್ಯವಾಗಲಿ

ಯಲ್ಲಾಪುರ: ಇಂದಿನ ಯುವ ಸಮುದಾಯದಲ್ಲಿ ಧಾರ್ಮಿಕ ನಂಬಿಕೆ ಮತ್ತು ಭಾವನೆಗಳನ್ನು ಭದ್ರಪಡಿಸುವ ಕೆಲಸವಾಗಬೇಕಿದೆ. ಇದು ಕೇವಲ ನಂಬಿಕೆಯಲ್ಲ, ನಮ್ಮ ಬದುಕಿನ ಶಕ್ತಿ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ತಾಲೂಕಿನ ಆನಗೋಡಿನ ಗೋಪಾಲಕೃಷ್ಣ ದೇವಸ್ಥಾನದ ಅಷ್ಟಬಂಧ ಮಹೋತ್ಸವದಲ್ಲಿ ನವೀಕರಣಗೊಂಡ ದೇವಾಲಯ, ನೂತನ ಕಟ್ಟಡಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿ, ಬದುಕಿನಲ್ಲಿ ಎಷ್ಟೇ ಸಮಸ್ಯೆಗಳು ಎದುರಾದರೂ, ಉತ್ತಮ ಚಿಂತನೆಗಳನ್ನು ಮಾಡುವುದನ್ನು ಬಿಡಬಾರದು. ಎಂತಹ ಸಂಕಷ್ಟದ ಪರಿಸ್ಥಿತಿಯಲ್ಲೂ ಸ್ಥಿತಪ್ರಜ್ಞರಾಗಿ ಮುನ್ನುಗ್ಗಲು ದೇವರ ಮೇಲಿನ ಭಕ್ತಿ ನಮಗೆ ಆನೆಬಲ ನೀಡುತ್ತದೆ ಎಂದರು.

ಈ ಭಾಗದ ರಸ್ತೆಯ ದುಸ್ಥಿತಿಯ ಬಗ್ಗೆ ನನಗೂ ಮತ್ತು ಶಾಸಕ ಶಿವರಾಮ ಹೆಬ್ಬಾರ್ ಅವರಿಗೂ ಸಂಪೂರ್ಣ ಅರಿವಿದೆ. ರಸ್ತೆ ನಿರ್ಮಾಣದ ಕಾರ್ಯಕ್ಕೆ ಬೇಕಾದ ಪ್ರಾಮಾಣಿಕ ಪ್ರಯತ್ನವನ್ನು ನಾವಿಬ್ಬರೂ ಜಂಟಿಯಾಗಿ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಶಾಸಕ ಶಿವರಾಮ ಹೆಬ್ಬಾರ್ ಮಾತನಾಡಿ, ಮನುಷ್ಯನಿಗೆ ಧರ್ಮಶ್ರದ್ಧೆ ಎನ್ನುವುದು ಅತ್ಯಂತ ಮುಖ್ಯ. ನಾನು ವೈಯಕ್ತಿಕವಾಗಿ ಧಾರ್ಮಿಕ ಶ್ರದ್ಧೆಯುಳ್ಳವನಾಗಿದ್ದು, ಸಮಾಜದ ಇಂತಹ ದೈವಿಕ ಕಾರ್ಯಗಳಲ್ಲಿ ನನ್ನನ್ನು ನಾನು ತೊಡಗಿಸಿಕೊಳ್ಳುವುದರಲ್ಲಿ ಧನ್ಯತೆ ಅನುಭವಿಸುತ್ತೇನೆ ಎಂದರು.ಅಧ್ಯಕ್ಷತೆವಹಿಸಿ ದೇವಸ್ಥಾನದ ಮೊಕ್ತೇಸರರಾದ ಗಣಪತಿ ಮಾನಿಗದ್ದೆ ಮಾತನಾಡಿ, ದೇವಸ್ಥಾನದ ಪುನರುತ್ಥಾನದ ಹಿನ್ನಲೆಯನ್ನು ತಿಳಿಸಿದರು .ಸಂಕಲ್ಪ ಸಂಸ್ಥೆ ಸಂಚಾಲಕ ಪ್ರಸಾದ್ ಹೆಗಡೆ ಇದ್ದರು. ಸತೀಶ ಯಲ್ಲಾಪುರ ನಿರ್ವಹಿಸಿ, ವಂದಿಸಿದರು.



ಧರ್ಮ ಮಾರ್ಗ ಅನುಸರಿಸಿ : ಶ್ರೀಗಳು

ಯಲ್ಲಾಪುರ: ದೇವಾಲಯಗಳು ಶಿಥಿಲವಾಗಬಾರದು. ಶಿಥಿಲಗೊಂಡಾಗ ಅಷ್ಟಬಂಧಗಳ ಮೂಲಕ



ಗಟ್ಟಿಗೊಳಿಸುತ್ತೇವೆ ಹಾಗೆಯೇ ಭಕ್ತರ ನಡುವಿನ ಬಾಂಧವ್ಯ ಸಂಬಂಧವನ್ನು ಗಟ್ಟಿಗೊಳಿಸಲು ಇಂತಹ ಧಾರ್ಮಿಕ ಕಾರ್ಯಕ್ರಮಅಗತ್ಯ ಎಂದು ಸ್ವರ್ಣವಲ್ಲೀ ಮಠಾಧೀಶ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಶ್ರೀಗಳು ನುಡಿದರು.ಅವರು ಶನಿವಾರ ಆನಗೋಡಿನ ಗೋಪಾಲಕೃಷ್ಣ ದೇವಸ್ಥಾನದ ಅಷ್ಟಬಂಧ ಮಹೋತ್ಸವ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಆಶೀರ್ವಚನ ನೀಡಿ ಧರ್ಮ ಕೆಡಲು ಶುರುವಾದರೆ ಭಗವಂತ ಎದ್ದು ಬರಬೇಕಾಗುತ್ತದೆ.ಹಾಗಾಗಿ ಧರ್ಮವನ್ನು ಕಾಪಾಡುವ ಕಾರ್ಯ ನಮ್ಮಿಂದಾಗಬೇಕು. ಧರ್ಮ ಮಾರ್ಗವನ್ನು ಅನುಸರಿಸಲು ಕರ್ಮನಿಷ್ಠೆ ಮತ್ತು ಜ್ಞಾನನಿಷ್ಠೆ ಮುಖ್ಯ ಜ್ಞಾನನಿಷ್ಠೆ ಮತ್ತು ಕರ್ಮನಿಷ್ಠೆಯನ್ನು ಮುನ್ನೆಡಸಿಕೊಂಡು ಹೋಗಬೇಕಿದೆ.ಅಷ್ಟಬಂಧದ ಮೂಲಕ ಎಲ್ಲರಿಗೂ ದೇವರ ಸಾನ್ನಿಧ್ಯ ಸೇರಲು ಸಾಧ್ಯವಾಗಿದೆ. ಇಂದು ಮನೆ ಮನೆಗಳಲ್ಲಿ ಅಧರ್ಮ ಪ್ರವೇಶ ಆಗುತ್ತಿದೆ.ಅದನ್ನು ತಡೆಯಬೇಕು. ಪರಿಪೂರ್ಣ ಬದುಕನ್ನು ರೂಪಿಸಿಕೊಳ್ಳಲು ಪ್ರೇರೇಪಿಸಬೇಕು ಎಂದು ನುಡಿದರು.ದೇವಸ್ಥಾನ ಮೊಕ್ತೆಸರ ಗಣಪತಿ ಮಾನಿಗದ್ದೆ ದಂಪತಿಗಳು ಶ್ರೀಗಳಿಗೆ ಫಲತಾಂಬೂಲ ಸಮರ್ಪಿಸಿದರು. ಗೋಕರ್ಣದ ತಾಂತ್ರಿಕರಾದ ವೇ.ಗಣಪತಿ ಹಿರೇ ಉಪಸ್ಥಿತರಿದ್ದರು.

ಬನವಾಸಿ ಕದಂಬೋತ್ಸವ ನಡೆಸಲು ಆಗ್ರಹ

ಬನವಾಸಿ: ರಾಜ್ಯದ ಪ್ರಥಮ ರಾಜಧಾನಿ ಬನವಾಸಿಯಲ್ಲಿ ನಡೆಸುವ ಕದಂಬೋತ್ಸವ ನಡೆಸಲು ಸರ್ಕಾರ ಮರೆತಂತಿದ್ದು, ಈ ಕೂಡಲೇ ಸಭೆ ಕರೆದು ಬನವಾಸಿ ಕದಂಬೋತ್ಸವ ನಡೆಸಬೇಕು ಎಂದು ಬನವಾಸಿ ನೂತನ ತಾಲೂಕು ರಚನೆ ಹೋರಾಟ ಸಮಿತಿ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ. ಹೋರಾಟ ಸಮಿತಿ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ, ಗೌರವಾಧ್ಯಕ್ಷ ಸಿ ಎಫ್ ನಾಯಕ ಮಾಳಂಜಿ ,ಕಾರ್ಯದರ್ಶಿ ವಿಶ್ವನಾಥ್ ವಡೆಯರ್ ಅವರು ಜಂಟಿಯಾಗಿ ಹೇಳಿಕೆ ನೀಡಿ ಆಗ್ರಹಿಸಿದ್ದಾರೆ. ವರ್ಷ ವರ್ಷಕ್ಕೂ ಉತ್ಸವ ಕಡೆಗಣನೆ ಆಗುತ್ತಿದೆ ಎಂದು ಆಕ್ರೋಶ ಹೊರ ಹಾಕಿದ ಸಮಿತಿ ಈ ವರ್ಷ ಕೂಡಲೇ ಉತ್ಸವ ನಡೆಸಲು ಸನ್ನದ್ಧರಾಗಬೇಕು ಎಂದು ಆಗ್ರಹಿಸಿದ್ದಾರೆ. ನಾಡಿನ ಹೆಮ್ಮೆಯ ಸ್ಥಳ ಈ ಬನವಾಸಿ ಹಲವಾರು ಪ್ರಥಮಗಳನ್ನ ಹೊಂದಿದೆ. ಹೆಮ್ಮೆಯ ಭಾಷೆ ಕನ್ನಡದ ಉಗಮ ಸ್ಥಾನ ಪಡೆದಿದೆ. ಐತಿಹಾಸಿಕ, ಸಾಮಾಜಿಕ, ಧಾರ್ಮಿಕ ಪುರಾಣ ಪ್ರಸಿದ್ಧ ಕ್ಷೇತ್ರ ಬನವಾಸಿ. ಇದರ ಅಭಿವೃದ್ಧಿಯ ಇಚ್ಚೆ ಹೊಂದಿದ ಸ್ಥಳೀಯ ಶಾಸಕರು ಶಿವರಾಮ ಹೆಬ್ಬಾರ ಅವರ ಪ್ರಯತ್ನಕ್ಕೆ ಮೇಲ್ ಮಟ್ಟದಲ್ಲಿ ಸರ್ಕಾರದ ಆಶೀರ್ವಾದ ಬೇಕಾಗಿದೆ. ಅಭಿವೃದ್ಧಿಗೆ ಮೂಲ ಬೇರು ಆದಂತಹ ಕದಂಬೋತ್ಸವದ ನೆನಪಿಗಾಗಿ ಪ್ರತಿ ವರ್ಷ ಒಂದೊಂದು ಶಾಶ್ವತ ಕೆಲಸ ಮಾಡಬೇಕು ಎಂದು ಹೋರಾಟ ಸಮಿತಿ ಆಗ್ರಹಿಸಿದೆ. ಈ ಕುರಿತು ಘನ ಸರ್ಕಾರ, ಉಸ್ತುವಾರಿ ಮಂತ್ರಿಗಳು, ಕನ್ನಡ ಸಂಸ್ಕೃತಿ ಮಂತ್ರಿಗಳು ಸಂಭಂದಪಟ್ಟ ಇಲಾಖೆ ಅಧಿಕಾರಿಗಳು ಕೂಡ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ.

ಸ್ವಚ್ಚತೆಗೆ ಸೂಕ್ತ ಕ್ರಮಕೈಗೊಳ್ಳಲು ಸ್ಥಳೀಯರಿಂದ ಆಗ್ರಹ

ದಾಂಡೇಲಿ: ದಾಂಡೇಲಿ ನಗರದಾದ್ಯಂತ ಸ್ವಚ್ಛತಾ ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದರೂ ನಗರದ ಹಳೆ ದಾಂಡೇಲಿಯಲ್ಲಂತೂ ಅಸ್ವಚ್ಛತಾ ಅಭಿಯಾನದ ಗತವೈಭವ ಮತ್ತೆ ಮುಂದುವರಿದಂತೆ ಕಂಡುಬಂದಿದೆ.

ಅಂದ ಹಾಗೆ ಹಳೆ ದಾಂಡೇಲಿಯ ಸಾರ್ವಜನಿಕ ಶೌಚಾಲಯದ ಹತ್ತಿರವಿರುವ ಖಾಲಿ ಜಾಗ ಇದೀಗ ಕಸ ಹಾಗೂ ಇನ್ನಿತರ ತ್ಯಾಜ್ಯಗಳನ್ನು ರಾಶಿ ಹಾಕುವ ತಾಣವಾಗಿ ಮಾರ್ಪಟ್ಟಿದೆ.ಜನವಸತಿ ಪ್ರದೇಶದ ಮಧ್ಯದಲ್ಲಿರುವ ಈ ಖಾಲಿ ಜಾಗದ ಎಲ್ಲೊಂದರಲ್ಲಿ ತ್ಯಾಜ್ಯ ಹರಡಿಕೊಂಡು, ಸ್ಥಳೀಯವಾಗಿ ಗಬ್ಬು ನಾರುವಂತಾಗಿದೆ. ಇದರ ಪಕ್ಕದಲ್ಲಿ ಇರುವ ಗಟಾರವಂತು ತ್ಯಾಜ್ಯದಿಂದ ತುಂಬಿ ತುಳುಕುವಂತಿದೆ. ಸ್ಥಳೀಯರಾದ ಸದ್ದಾಂ, ಪರ್ವಿನ ಮತ್ತು ಪಪ್ಪು ಅವರು ಈ ಬಗ್ಗೆ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿ, ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಕ್ಕೆ ಈ ಖಾಲಿ ಜಾಗದಲ್ಲಿ ಅಂಗನವಾಡಿ ಕಟ್ಟಡವನ್ನು ನಿರ್ಮಿಸಿಕೊಟ್ಟಲ್ಲಿ ಕೊನೆ ಪಕ್ಷ ಸ್ವಚ್ಚತೆಯ ಜೊತೆಗೆ ಸ್ಥಳೀಯ ಜನತೆಗೆ ಆರೋಗ್ಯ ನೆಮ್ಮದಿ ದೊರೆಯಲು ಸಾಧ್ಯ. ಈ ಬಗ್ಗೆ ಅಗತ್ಯ ಕ್ರಮವನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಹ್ಯಾಕಥಾನ್ ಸ್ಪರ್ಧೆ ಹ್ಯಾಕ ಫ್ಯೂಷನ್-2026ಗೆ ಚಾಲನೆ

ಹಳಿಯಾಳ: ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವನೂತನ ಆವಿಷ್ಕಾರಗಳನ್ನು ಮಾಡುವಂತೆ ಗಜೇಂದ್ರ ದೇಶಪಾಂಡೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ರಾಷ್ಟ್ರಮಟ್ಟದ ಹ್ಯಾಕಥಾನ್ ಸ್ಪರ್ಧೆ 'ಹ್ಯಾಕ ಫ್ಯೂಷನ್-2026' ಉದ್ಘಾಟಿಸಲಾಯಿತು. ಮುಖ್ಯ ಅತಿಥಿಗಳಾಗಿ ಥಿಟಾ ಡೈನಾಮಿಕ್‌ನ ಸಂಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಜೇಂದ್ರ ದೇಶಪಾಂಡೆ ನೂತನ ತಂತ್ರಜ್ಞಾನದ ಮುಖಾಂತರ ಭಾರತವನ್ನು ಸ್ವಾವಲಂಬಿ ದೇಶವನ್ನಾಗಿಸೋಣ ಎಂದರು.

ಗೌರವ ಅತಿಥಿಯಾದ ಐ ಸ್ಟಾಫ್ ವಿಷನ್ ಎಲ್.ಎಲ್.ಪಿ ಸ್ಥಾಪಕ ಹಾಗೂ ನಿರ್ದೇಶಕ ಹನುಮಂತ ಕುಲಕರ್ಣಿ ಪ್ರಸ್ತುತವಾಗಿ ಜಾಗತಿಕ ಮಾರುಕಟ್ಟೆ ಎದುರಿಸುತ್ತಿರುವ ಸವಾಲುಗಳ ಕುರಿತಾಗಿ ನೋಟ ಬೀರುತ್ತ, ಯುವ ಅಭಿಯಂತರರಿಗೆ ಇರುವ ಅವಕಾಶಗಳ ಕುರಿತಾಗಿ ತಿಳಿಸಿದರು.

ಅತಿಥಿಗಳಾಗಿ ಆಗಮಿಸಿದ್ದ ಸಾಫ್ಟ್ ವೇರ್ ತಜ್ಞ, ಅನಿಲ್ ಹರಿಹರ ತಾಂತ್ರಿಕತೆಯ ಜೊತೆಗೆ ಸಾರ್ವಜನಿಕ ಕ್ಷೇತ್ರದಲ್ಲಿ ನೈತಿಕತೆ ಅತಿಮುಖ್ಯ ಎಂದರು. ಆರ್ಕಿಟ್ರನ್ ಸೊಲ್ಯೂಷನ್ ಪ್ರೈ. ಲಿ ಬೆಂಗಳೂರಿನ ಎಂಜಿನಿಯರ್ ಭರತ್ ಐ ಕಠಿಣ ಸಮಸ್ಯೆಗಳಿಗೆ ಸುಲಭ ಪರಿಹಾರ ಒದಗಿಸಲು ವಿದ್ಯಾರ್ಥಿಗಳು ನೂತನ ತಂತ್ರಜ್ಞಾನ ಕೃತಕ ಬುದ್ಧಿಮತ್ತೆ ಹಾಗೂ ಯಂತ್ರ ಕಲಿಕೆ ಕುರಿತಾಗಿ ಜ್ಞಾನ ಹೊಂದುವಂತೆ ಸಲಹೆ ನೀಡಿದರು. ಇನ್ಫೋಸಿಸ್‌ನ ಅಭಿಯಂತರ ಸೌರಭ ಪಾಟೀಲ್ ಹ್ಯಾಕಥಾನ ನಂತಹ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದರಿಂದ ಯೋಚನಾ ಸಾಮರ್ಥ್ಯ ಅಧಿಕವಾಗುವುದು ಎಂದರು.

ಅಧ್ಯಕ್ಷತೆವಹಿಸಿಮಾತನಾಡಿದಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ವಿದ್ಯಾರ್ಥಿಗಳಲ್ಲಿನ ಸೃಜನಶೀಲತೆಯನ್ನು ಹೊರತರುವ ನಿಟ್ಟಿನಲ್ಲಿ ಈ ಸ್ಪರ್ಧೆಯನ್ನು ಆಯೋಜಿಸಲಾಸಗಿದ್ದು, ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಕಂಪ್ಯೂಟರ್ ಸೈನ್ಸ್ ಮುಖ್ಯಸ್ಥ ಡಾ.ವೆಂಕಟೇಶ್ ಶಂಕರ್ ಸಭಿಕರನ್ನು ಸ್ವಾಗತಿಸಿದರು. ಕಂಪ್ಯೂಟರ್ ಸೈನ್ಸ್ (ಎಐ ಆ್ಯಂಡ್ ಎಂಎಲ್) ಮುಖ್ಯಸ್ಥೆ ಡಾ. ಪೂರ್ಣಿಮಾ ರಾಯ್ಕರ್ ವಂದಿಸಿದರು. ಸಂಜನಾ ಡಿ ನಿರೂಪಿಸಿದರು. ಈಸಂದರ್ಭದಲ್ಲಿ ಎಲ್ಲಾ ವಿಭಾಗದ ಡೀನ್ ಗಳು ಹಾಗೂ ವಿಭಾಗ ಮುಖ್ಯಸ್ಥರುಗಳು ಉಪಸ್ಥಿತರಿದ್ದರು. 24ಗಂಟೆಗಳ ಕಾಲ ನಡೆಯಲಿರುವ ಈ ಸ್ಪರ್ಧೆಯಲ್ಲಿ ರಾಜ್ಯ ಹಾಗೂ ಹೊರ ರಾಜ್ಯದ ವಿವಿಧ ಇಂಜಿನಿಯರಿಂಗ್ ಕಾಲೇಜಿನ 300ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.



ಕೆಡಿಪಿ ಸಭೆ: ವಿವಿಧ ವಿಷಯಗಳ ಚರ್ಚೆ

ಮುಂಡಗೋಡ: ಗೊಬ್ಬರ ಬೇರೆ ಬೇರೆ ತಾಲೂಕಿಗೆ ಮಾರಾಟ ಮಾಡುತ್ತಿದ್ದಾರೆ ಎಂಬ ದೂರು ಇದೆ. ಇಲ್ಲಿನ ರೈತರಿಗೆ ಮೊದಲು ಗೊಬ್ಬರ ಸಿಗಬೇಕು. ಈ ಬಗ್ಗೆ ತಹಶೀಲ್ದಾರ ನೇತೃತ್ವದಲ್ಲಿ ಸಭೆ ನಡೆಸಿ ಗೊಬ್ಬರ ಅಂಗಡಿಕಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡುವಂತೆ ಶಾಸಕ ಶಿವರಾಮ ಹೆಬ್ಬಾರರು ಸೂಚಿಸಿದರು.

ಅವರು ತಾಲೂಕು ಪಂಚಾಯಿತಿ ಸಭಾಭವನದಲ್ಲಿ ಶಾಸಕ ಶಿವರಾಮ ಹೆಬ್ಬಾರ ಅವರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ತಹಶೀಲ್ದಾರರಿಗೆ ನಿರ್ದೇಶಿಸಿದರು, ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮದಿಂದಾಗಿ ಈ ಬಾರಿ ಯೂರಿಯಾ ಗೊಬ್ಬರ ಕೊರತೆ ಉಂಟಾಗಲಿದೆ ರೈತರು ಸಹ ಮಿತಿಯಾಗಿ ಬಳಸುವಂತೆ ತಿಳಿಸದರಲ್ಲದೆ ಗೊಬ್ಬರ ಕೊರತೆಯ ಸಾಧ್ಯತೆ ಇರುವುದರಿಂದ ಖಾಸಗಿ ಡೀಲರ್‌ಗಳ ಮೇಲೆ ನಿಗಾ ವಹಿಸಬೇಕು ಎಂದರು.

ಕೃಷಿ ಇಲಾಖೆಯ ಎಡಿ ಮಾಹಾರೆಡ್ಡಿ ಮಾತನಾಡಿ, ಈ ಬಾರಿ ವಾಡಿಕೆಕ್ಕಿಂತ ಹೆಚ್ಚು ಮಳೆಯಾಗಿದೆ.15ಸಾವಿರ ಟನ್ ಗೊಬ್ಬರದ ಬೇಡಿಕೆ ಇದೆ. 3770 ಗೊಬ್ಬರ ದಾಸ್ತುನು ಇದೆ. ಬೀಜ ಮತ್ತು ಗೊಬ್ಬರಕ್ಕೆ ಬೇಡಿಕೆ ಸಲ್ಲಿಸಲಾಗಿದೆ ಎಂದರು. ತಾಲೂಕಾ ಆರೋಗ್ಯಾಧಿಕಾರಿ ನರೇಂದ್ರ ಪವಾರ ಮಾತನಾಡಿ, ವೈದ್ಯರ ಕೊರತೆ ಬಗ್ಗೆ ವಿವರಿಸಿದರು. ಸಾಮಾನ್ಯ ಹೆರಿಗೆಗೆಹೆಚ್ಚು ಒತ್ತು ನೀಡುವಂತೆ ಶಾಸಕರು ಸೂಚಿಸಿದರು. ಪಾಳಾ ಪ್ರಾಥಮಿಕ ಕೇಂದ್ರ ವೈದ್ಯೆಯ ಕಾರ್ಯವೈಖರಿ ಬಗ್ಗೆ ಶಾಸಕರು ಮೆಚ್ಚುಗೆ ವ್ಯಕ್ತಪಡಿಸಿದರು. ಅವಶ್ಯ ಬಿದ್ದರೆ ಮಾತ್ರ ರೋಗಿಗಳನ್ನು ಹುಬ್ಬಳ್ಳಿಯ ಕಿಮ್ ಆಸ್ಪತ್ರೆಗೆ ದಾಖಲಿಸಬೇಕು ಎಂದಾಗ. ಅನಸ್ತೇಶಿಯಾ ವೈದ್ಯರ ಕೊರತೆಯಿಂದ ಈ ಸಮಸ್ಯೆಯಾಗಿದೆ. ಮಳೆಮಾಪನ ಕೇಂದ್ರಗಳ ಸ್ಥಿತಿಗತಿ ಬಗ್ಗೆ 15 ದಿನಗಳಲ್ಲಿ ವರದಿ ನೀಡಲು ಶಾಸಕರು ಸೂಚಿಸಿದರು.ಜೆಜೆಎಂ ಕಾಮಗಾರಿ ಮುಗಿಯದಿದ್ದರೂ ಪಿಡಿಒಗಳು ಹಸ್ತಾಂತರ ಮಾಡಿಕೊಂಡರೆ ಆಯಾ ಗ್ರಾಪಂ ಪಿಡಿಒಗಳೇ ಹೊಣೆ ಎಂದು ಎಚ್ಚರಿಸಿದರು. ತಮ್ಮ ವ್ಯಾಪ್ತಿಯಲ್ಲಿ ಜನರಿಗೆ ಕುಡಿಯುವ ನೀರಿನ ಸಮಸ್ಯೆಯಾಗಂತೆ ನೋಡಿಕೊಳ್ಳಬೇಕು. ಈ ಒಂದು ತಿಂಗಳು ಕೇಂದ್ರ ಸ್ಥಾನದಲ್ಲಿದ್ದು ಕೆಲಸ ಮಾಡುವಂತೆ ಸೂಚಿಸಿದರು. ವಿವಿಧ ಇಲಾಖೆಯ ಪ್ರಗತಿ ಬಗ್ಗೆ ಮಾಹಿತಿ ಪಡೆದರು.ತಾಪಂ ಇಒ ಟಿವೈ ದಾಸನಕೊಪ್ಪ, ತಹಶೀಲ್ದಾರ್ ಶಂಕರ ಗೌಡಿ, ಮುಖಂಡ ಎಚ್.ಎಂ. ನಾಯ್ಕ, ಕೃಷ್ಣ ಹಿರೇಹಳ್ಳಿ, ತಾಲೂಕಾ ಮಟ್ಟದ ಅಧಿಕಾರಿಗಳು ಇದ್ದರು.ಇದಕ್ಕೂ ಮುನ್ನ ವಿವಿಧ ಇಲಾಖೆಗಳ ವಿವಿಧ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಪರಿಕರ ಸಲಕರಣೆ ಶಾಸಕರು ವಿತರಿಸಿದರು.



ಮಕ್ಕಳಲ್ಲಿ ವೇದ ಶಿಕ್ಷಣದ ಆಸಕ್ತಿ ಹೆಚ್ಚಿಸಿ

ಯಲ್ಲಾಪುರ: ನಮ್ಮ ಜೀವನದಲ್ಲಿ ಬೀಳುವುದಕ್ಕೆ ಹೆಚ್ಚು ಸಮಯ ಬೇಕಿಲ್ಲ, ಆದರೆ ಏಳುವುದಕ್ಕೆ ಬಹುಕಾಲ ಬೇಕು. ಆತುರತೆ ಮತ್ತು ಆಸೆಯೇ ಬೀಳುವುದಕ್ಕೆ ಕಾರಣ. ಅಧರ್ಮಯುಕ್ತ ವಿವಾಹಗಳು, ಮಿತಸಂತಾನ ಇವುಗಳಿಂದಾಗಿ ಧಾರ್ಮಿಕ ಪತನವನ್ನೂ ಕಾಣುತ್ತಿದ್ದೇವೆ. ಇವನ್ನು ಸರಿಪಡಿಸಲು ಯೋಜನಾಬದ್ಧವಾದ ಅನೇಕ ಕಾಲ ಶ್ರಮಪಡಬೇಕಾಗುತ್ತದೆ ಎಂದು ಸೋಂದಾ ಸ್ವರ್ಣವಲ್ಲೀ ಸಂಸ್ಥಾನಾಧೀಶ ಶ್ರೀಮದ್ ಗಂಗಾಧರೇಂದ್ರ ಶ್ರೀಗಳು ಹೇಳಿದರು.

ಅವರು ಪಟ್ಟಣದ ನಾಯಕನಕೆರೆಯ ಶ್ರೀ ಶಾರದಾಂಬಾ ಮತ್ತು ಮಾರುತಿ ದೇವಸ್ಥಾನದ ವರ್ಧಂತಿ ಉತ್ಸವದ ಸಮಾರೋಪ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದರು.

ವಿಶ್ವದರ್ಶನ ಶಿಕ್ಷಣ ಸಮೂಹದ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ ಮಾತನಾಡಿ, ವೇದ ಶಿಕ್ಷಣದ ಕುರಿತು ಪಾಲಕರಿಗೆ ಶ್ರದ್ಧೆ ಕಡಿಮೆಯಾಗಿದೆ. ಆ ಬಗ್ಗೆ ಆಸಕ್ತಿ ಬೆಳೆಸಬೇಕು. ಹವ್ಯಕರ ಜನಸಂಖ್ಯೆ ಹೆಚ್ಚುವಂತೆ ಸಮಾಜ ಗಮನಹರಿಸಬೇಕು. ನಮ್ಮ ಮಕ್ಕಳಿಗೆ ಆಧುನಿಕ ಶಿಕ್ಷಣದ ಜೊತೆ ವೇದ ಶಿಕ್ಷಣವನ್ನೂ ನೀಡಬೇಕು ಎಂದರು.ನಿವೃತ್ತ ಕುಲಪತಿ ಡಾ.ಪರಮೇಶ್ವರ ಶಾಸ್ತ್ರಿ ತಮಗಿತ್ತ ಸನ್ಮಾನ ಸ್ವೀಕರಿಸಿ, ಗುರುಕುಲದ ಮಹತ್ವದ ಕುರಿತು ಸಂಸ್ಕೃತ ವೇದದ ಅಧ್ಯಯನದಿಂದಾಗುವ ಚಿಂತನೆಗಳನ್ನು ಮಂಡಿಸಿದರು. ಅಂತೆಯೇ ನಿವೃತ್ತ ಸಂಸ್ಕೃತ ಅಧ್ಯಾಪಕ ವಿ.ನಾರಾಯಣ ಭಟ್ಟ ಮೊಟ್ಟೆಪಾಲ ಸನ್ಮಾನ ಸ್ವೀಕರಿಸಿ ಸಾಂದರ್ಭಿಕವಾಗಿ ಮಾತನಾಡಿದರು. ಶಾರದಾಂಬಾ ಪಾಠಶಾಲೆಯ ಮಾಜಿ ವಿದ್ಯಾರ್ಥಿ, ಶ್ರೀ ಮಠದಲ್ಲಿ ಉನ್ನತ ವ್ಯಾಸಂಗ ಮಾಡುತ್ತಿರುವ, ರಾಜ್ಯಮಟ್ಟದಲ್ಲಿ ಅನೇಕ ಪ್ರಶಸ್ತಿ ಪಡೆದ ನಾಗರಾಜ ಭಟ್ಟ ಗಂಗೆಮನೆ ಇವರನ್ನೂ ಶ್ರೀಗಳು ಪುರಸ್ಕರಿಸಿದರು. ಶಾರದಾಂಬಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಉಮೇಶ ಭಾಗ್ವತ, ನಗರಸೀಮಾ ಪರಿಷತ್ ಅಧ್ಯಕ್ಷ ಸುಬ್ರಹ್ಮಣ್ಯ ಹೆಗಡೆ, ನಗರ ಮಾತೃಮಂಡಳಿ ಅಧ್ಯಕ್ಷೆ ಆಶಾ ಬಗನಗದ್ದೆ ಉಪಸ್ಥಿತರಿದ್ದರು.

ಪಾಠಶಾಲಾ ವಿದ್ಯಾರ್ಥಿಗಳಿಂದ ವೇದಘೋಷ, ಅಧ್ಯಾಪಕ ಡಾ.ನರಸಿಂಹ ಭಟ್ಟ ನಿರ್ವಹಿಸಿದರು. ಶಾರದಾಂಬಾ ದೇವಸ್ಥಾನದ ಅಧ್ಯಕ್ಷ ಎನ್.ಕೆ.ಭಟ್ಟ ಅಗ್ಗಾಶಿಕುಂಬ್ರಿ ಸ್ವಾಗತಿಸಿದರು. ಶ್ರೀಪಾದ ಭಟ್ಟ ಮತ್ತು ನರಸಿಂಹ ಭಟ್ಟ ಸನ್ಮಾನಪತ್ರ ವಾಚಿಸಿದರು.



ಇಂದು ಬಂಡಿಹಬ್ಬ ಕೃತಿ ಬಿಡುಗಡೆ

ಅಂಕೋಲಾ: ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಆಚರಿಸಲ್ಪಡುವ ಬಂಡಿಹಬ್ಬ ನಾಡಿನ ಜನಪ್ರಿಯ ಹಬ್ಬವಾಗಿದ್ದು ಪ್ರಾಚೀನ ಹಬ್ಬಗಳಲ್ಲಿ ಒಂದಾಗಿರುವ ಬಂಡಿಹಬ್ಬದ ಕುರಿತಂತೆ ದಾಖಲೆಗಳ ಜೊತೆಗೆ ವಿವರಗಳನ್ನು ಹೊಂದಿರುವ ಕೃತಿಕಾರ ವಿಘ್ನೇಶ್ವರ ಗುನಗಾ ಅವರ ಬಂಡಿಹಬ್ಬ ಪುಸ್ತಕ ಏ. 12ರಂದು ಸಂಜೆ 4 ಗಂಟೆಗೆ ಭೂಮ್ತಾಯಿ ದೇವಾಲಯದ ಆವರಣದಲ್ಲಿ ಲೋಕಾರ್ಪಣೆಗೊಳ್ಳಲಿದೆ ಎಂದು ರಾಜ್ಯ ಪ್ರಶಸ್ತಿ ಪುರಸ್ಕೃತ ನಾಟಿ ವೈದ್ಯ ಹನುಮಂತ ಗೌಡ ಹೇಳಿದರು.

ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸ ಮಾತನಾಡಿದ ಅವರು ಭಯ, ಭಕ್ತಿ, ರೋಮಾಂಚನಗಳ ಸಂಗಮ ಆಗಿರುವ ಬಂಡಿಹಬ್ಬದ ವಿಧಿ ವಿಧಾನಗಳನ್ನು ಅಧ್ಯಯನ ಮಾಡಿ ಪುಸ್ತಕ ರೂಪದಲ್ಲಿ ಹೊರತರುತ್ತಿರುವ ಕೃತಿಕಾರ ವಿಘ್ನೇಶ್ವರ ಗುನಗಾ ಅವರ ಕಾರ್ಯ ಶ್ಲಾಘನೀಯ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಾಘು ಕಾಕರಮಠ ಮಾತನಾಡಿ, ಅಧ್ಯಯನ ಮತ್ತು ದಾಖಲೆಗಳ ಸಂಯೋಜನೆಯಲ್ಲಿ ನಿರೂಪಿಸಲಾಗಿರುವ ವಿಘ್ನೇಶ್ವರ ಗುನಗಾ ಅವರ ಬಂಡಿಹಬ್ಬ ಕೃತಿ ನಾಡಿನ ಅತ್ಯುತ್ತಮ ಕೃತಿಗಳ ಸಾಲಿನಲ್ಲಿ ಸೇರ್ಪಡೆಯಾಗಲಿದೆ ಎಂದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಜಗದೀಶ ನಾಯಕ ಹೊಸ್ಕೇರಿ ಮಾತನಾಡಿ ವಿಘ್ನೇಶ್ವರ ಗುನಗಾ ಅವರ ಎರಡನೆಯ ಪುಸ್ತಕ ಬಂಡಿಹಬ್ಬ ಹೆಚ್ಚಿನ ಸಂಖ್ಯೆಯ ಓದುಗರನ್ನು ಸೆಳೆಯಲಿದೆ ಎಂದರು.



ಸಾಹಿತಿ ಮಹಾಂತೇಶ ರೇವಡಿ ಮಾತನಾಡಿ ಬಂಡಿಹಬ್ಬ ಕೃತಿಯನ್ನು ಕರಾವಳಿ ಮುಂಜಾವು ಸಂಪಾದಕ ಗಂಗಾಧರ ಹೀರೆಗುತ್ತಿ ಬಿಡುಗಡೆ ಮಾಡಲಿದ್ದು ಹಿರಿಯ ಸಾಹಿತಿ ಶಾಂತಾರಾಮ ನಾಯಕ ಹಿಚ್ಕಡ ಅಧ್ಯಕ್ಷತೆವಹಿಸಲಿದ್ದಾರೆ, ನಿವೃತ್ತ ಉಪನ್ಯಾಸಕ ಶ್ರೀಧರ ನಾಯಕ ಕೃತಿ ಪರಿಚಯ ಮಾಡಲಿದ್ದು, ಹಿರಿಯ ಕಥೆಗಾರ ರಾಮಕೃಷ್ಣ ಗುಂದಿ, ಪ್ರಾಚಾರ್ಯ ಎಸ್ .ವಿ.ವಸ್ತ್ರದ, ಶ್ರೀ ಶಾಂತಾದುರ್ಗಾದೇವಿ ದೇವಸ್ಥಾನ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಸುಭಾಷ ನಾರ್ವೇಕರ, ಪಹರೆ ವೇದಿಕೆ ಅಧ್ಯಕ್ಷ ನಾಗರಾಜ ನಾಯಕ, ಹೊಸದಿಗಂತ ದಿನಪತ್ರಿಕೆಯ ಹುಬ್ಬಳ್ಳಿ ಆವೃತ್ತಿಯ ಮುಖ್ಯಸ್ಥ ವಿಠ್ಠಲದಾಸ ಕಾಮತ ಅತಿಥಿಗಳಾಗಿ ಉಪಸ್ಥಿತರಿರಲಿದ್ದಾರೆ ಎಂದು ವಿವರಗಳನ್ನು ನೀಡಿದರು.ಕೃತಿಕಾರ ವಿಘ್ನೇಶ್ವರ ಗುನಗಾ, ಫಿಟ್ನೆಸ್ ಕ್ಲಬ್ ಸಂಚಾಲಕ ವಿಘ್ನೇಶ್ ನಾಯ್ಕ ಉಪಸ್ಥಿತರಿದ್ದರು.

ರೋಗ ಹರಡದಂತೆ ಮುನ್ನೆಚ್ಚರಿಕೆ ಕ್ರಮ ಅಗತ್ಯ

ಮುಂಡಗೋಡ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆಂತರಿಕ ಗುಣಮಟ್ಟ ಭರವಸೆ ಕೋಶ, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಆರೋಗ್ಯ ದಿನಾಚರಣೆಯ ಅಂಗವಾಗಿ ಒಂದು ದಿನದ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಶ್ರೀಶೈಲ ಪಟ್ಟಣಶೆಟ್ಟಿ ಅವರು ವಿದ್ಯಾರ್ಥಿಗಳಲ್ಲಿ ವೈಯಕ್ತಿಕ ಹಾಗೂ ಸಾಮಾಜಿಕ ಆರೋಗ್ಯದ ಜಾಗೃತಿ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿ ಕ್ಯಾನ್ಸರ್, ಕುಷ್ಠರೋಗ, ಅಸ್ತಮಾ, ಏಡ್ಸ್ ನಂತಹ ಕಾಯಿಲೆಗಳ ಬಗ್ಗೆ ಇರುವ ತಪ್ಪು ಕಲ್ಪನೆ, ಆರೋಗ್ಯ ಇಲಾಖೆಯಿಂದ ಇರುವ ಚಿಕಿತ್ಸೆಗಳ ಕುರಿತು ಹಾಗೂ ಸಾಂಕ್ರಾಮಿಕ ಕಾಯಿಲೆಗಳ ಬಗ್ಗೆ ವಹಿಸಬೇಕಾದ ಮುನ್ನೆಚ್ಚರಿಕೆಗಳು ಹಾಗೂ ಪ್ರಸಕ್ತ ದಿನಗಳಲ್ಲಿ ಮಹಿಳೆಯರು ವಹಿಸಬೇಕಾದ ಆರೋಗ್ಯಕರ ಮುನ್ನೆಚ್ಚರಿಕೆಗಳು ಜೊತೆಗೆ ತೆಗೆದುಕೊಳ್ಳಬೇಕಾದ ಲಸಿಕೆಗಳ ಕುರಿತು ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾ. ಪ್ರಸನ್ನಸಿಂಗ್ ಹಜೇರಿ ಮಾತನಾಡಿದರು. ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಚಾಲಕಿ ಜ್ಯೋತಿ ಹಿರೇಮಠ, ಸಾಂಸ್ಕೃತಿಕ ವಿಭಾಗದ ಸಂಚಾಲಕಿ ತಾರಾಮತಿ ನಾಕೋಡ, ರೋವರ್ಸ್‌ನ ನಾಯಕ ವಿನಾಯಕ ಮಿರಜಕರ, ರಾಷ್ಟ್ರೀಯ ಸೇವಾ ಯೋಜನೆಯ ಘಟಕ-1ರ ಅಧಿಕಾರಿ ರಮೇಶ ಬಿ.ಆರ್., ಘಟಕ-2ರ ಅಧಿಕಾರಿ ಮಲ್ಲಿಕಾರ್ಜುನ ಬಿ.ಕೆ. ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಮಲ್ಲಿಕಾರ್ಜುನ ಬಿ.ಕೆ.ಸ್ವಾಗತಿಸಿದರು. ತುಳಜಾ ನಾಯಕ ನಿರೂಪಿಸಿದರು. ವಿನಾಯಕ ಮಿರಜಕರ ವಂದಿಸಿದರು.



ಸರಸ್ವತಿ ಪಿಯು ಕಾಲೇಜು ವಿದ್ಯಾರ್ಥಿಗಳ ಸಾಧನೆ

ಕುಮಟಾ: ವಿಧಾತ್ರಿ ಅಕಾಡೆಮಿಯ ಸಹಯೋಗದ ಕೊಂಕಣ ಎಜುಕೇಶನ್ ಟ್ರಸ್ಟ್ ನ ಸರಸ್ವತಿ ಪಿಯು ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶದಲ್ಲಿ ಅತ್ಯಮೋಘ ಸಾಧನೆ ತೋರುವುದರ ಜೊತೆಗೆ, ಈ ಹಿಂದಿನಂತೆಯೇ ಈ ಬಾರಿಯೂ ರಾಜ್ಯಮಟ್ಟದ ಸ್ಥಾನ ಪಡೆದುಕೊಂಡಿದ್ದು ಒಟ್ಟೂ 151 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆಯುವ ಮೂಲಕ ಅಮೋಘ ಸಾಧನೆ ಮಾಡಿದ್ದಾರೆ.

ಶೇ. 98 ಕ್ಕಿಂತ ಹೆಚ್ಚಿಗೆ ಅಂಕ ಪಡೆದವರು ಒಟ್ಟೂ 5 ವಿದ್ಯಾರ್ಥಿಗಳು ಇದ್ದು, ಶೇ. 95 ಕ್ಕಿಂತ ಹೆಚ್ಚು 32 ವಿದ್ಯಾರ್ಥಿಗಳು, ಶೇ. 90 ಕ್ಕಿಂತ ಅಧಿಕ ಅಂಕ ಪಡೆದವರು 96 ವಿದ್ಯಾರ್ಥಿಗಳು ಹಾಗೂ 151 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆಯುವ ಮೂಲಕ ಸಾಧನೆ ಮಾಡಿದ್ದಾರೆ. ಇದರೊಂದಿಗೆ ಜಿಲ್ಲೆಯಲ್ಲಿ ಅತಿ ಹೆಚ್ಚು ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದ ಸಂಸ್ಥೆ ಎಂಬ ಹೆಗ್ಗಳಿಕೆಯನ್ನೂ ಸರಸ್ವತಿ ಪಿ.ಯು ಕಾಲೇಜು ಪಡೆದುಕೊಂಡಿದೆ.



ದಿಶಾ ಮಂಜುನಾಥ ಶೆಟ್ಟಿ ಒಟ್ಟೂ 600 ಅಂಕಗಳಿಗೆ 592 ಅಂಕ (98.66 ಶೇ.) ಪಡೆಯುವ ಮೂಲಕ ಕಾಲೇಜಿಗೆ ಮೊದಲ ಸ್ಥಾನ ಪಡೆದು ರಾಜ್ಯಮಟ್ಟದ 7 ನೇ ರ‍್ಯಾಂಕ್ ಪಡೆದುಕೊಂಡಿದ್ದಾಳೆ. ಕನ್ನಿಕಾ ಆರ್. ಭಟ್ಟ 600 ಕ್ಕೆ 591 ಅಂಕ (98.5 ಶೇ.) ಪಡೆದು ಕಾಲೇಜಿಗೆ ದ್ವಿತೀಯ ಸ್ಥಾನ ಪಡೆಯುವ ಮೂಲಕ ರಾಜ್ಯಮಟ್ಟದ 8 ನೇ ಸ್ಥಾನ, ವೈಷ್ಣವಿ ವಿಷ್ಣು ಹೆಗಡೆ 600 ಕ್ಕೆ 591 ಅಂಕ (98.5 ಶೇ.) ಪಡೆದು ಕಾಲೇಜಿಗೆ ದ್ವಿತೀಯ ಸ್ಥಾನ ಪಡೆಯುವ ಮೂಲಕ ರಾಜ್ಯಮಟ್ಟದಲ್ಲಿ 8 ನೇ ಸ್ಥಾನ ಪಡೆದಿದ್ದಾಳೆ. ದೀಪಿಕಾ ಭಟ್ಟ ಹಾಗೂ ತ್ರಿಷಾ ನಾಯ್ಕ 600 ಕ್ಕೆ 588 (98.0 ಶೇ.) ಅಂಕಗಳನ್ನು ಪಡೆದು ಕಾಲೇಜಿಗೆ ತೃತೀಯ ಸ್ಥಾನ ಪಡೆದಿರುತ್ತಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಕೊಂಕಣ ಎಜುಕೇಶನ್ ಟ್ರಸ್ಟ್ ಆಡಳಿತ ಮಂಡಳಿಯವರು, ವಿಧಾತ್ರಿ ಅಕಾಡೆಮಿಯ ಸಹಸಂಸ್ಥಾಪಕ ಗುರುರಾಜ ಶೆಟ್ಟಿ, ಪ್ರಾಚಾರ್ಯ ಜಿ.ಎಸ್. ಹೆಗಡೆ ಕಣ್ಣಿ ಹಾಗೂ ಉಪನ್ಯಾಸಕರು ಅಭಿನಂದಿಸಿದ್ದಾರೆ.

ಕಿರುಸುದ್ದಿ

ಬೇಸಿಗೆ ಕ್ರೀಡಾ ತರಬೇತಿ ನಾಳೆ

ಹಾವೇರಿ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಉಚಿತ ಬೇಸಿಗೆ ಕ್ರೀಡಾ ತರಬೇತಿ ಏ.13ರಿಂದ ಹಾವೇರಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ಏ.13ರಿಂದ ಮೇ 3ರವರೆಗೆ ಅಥ್ಲೆಟಿಕ್ ಹಾಗೂ ಹಾಕಿ ಕ್ರೀಡೆ ತರಬೇತಿ ನೀಡಲಾಗುವುದು. ಆಸಕ್ತ ಕ್ರೀಡಾಪಟುಗಳು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಚೇರಿಯಲ್ಲಿ ಏ.11ರಿಂದ ಏ.13ರವರೆಗೆ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಹಾವೇರಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅಥ್ಲೆಟಿಕ್ ತರಬೇತುದಾರ ಪ್ರದೀಪ ಎಂ.ಎನ್. ಅವರನ್ನು ಸಂಪರ್ಕಿಸಬಹುದೆಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ತಾಪಂ ಕೆಡಿಪಿ ಸಭೆ

ಹಾವೇರಿ: ತಾಲೂಕು ಪಂಚಾಯತ್ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ ಅವರ ಅಧ್ಯಕ್ಷತೆಯಲ್ಲಿ ಏ.13ರಂದು ಬೆಳಿಗ್ಗೆ 11 ಗಂಟೆಗೆ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಜರುಗಲಿದೆ ಎಂದು ಹಾವೇರಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

ಅಧ್ಯಕ್ಷರಾಗಿ ಪಾಟೀಲ ಆಯ್ಕೆ



ಹಾನಗಲ್ಲ: ತಾಲೂಕಿನ ಮಾಜಿ ಸೈನಿಕರ ಸಂಘದ ಅಧ್ಯಕ್ಷರಾಗಿ ಶಂಕರ ಗೌಡ ಪಾಟೀಲ್ ಅವರನ್ನು ಆಯ್ಕೆ ಮಾಡಲಾಯಿತು. ನಿಕಟಪೂರ್ವ ಅಧ್ಯಕರಾಗಿದ್ದ ರೇವಣಪ್ಪ ಕೊಪ್ಪದ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಇತ್ತೀಚೆಗೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶಂಕರಗೌಡ ಪಾಟೀಲ ಅವರನ್ನು ಮಾಜಿ ಸೈನಿಕರ ಸಂಘದ ಸದಸ್ಯರ ಸಭೆಯಲ್ಲಿ ಸರ್ವಾನುಮತದಿಂದ ನೇಮಕ ಮಾಡಿದರು. ನೂತನ ಅಧ್ಯಕ್ಷರಾಗಿ, ಶಂಕರಗೌಡ ಪಾಟೀಲ್, ಉಪಾಧ್ಯಕ್ಷ ರಾಗಿ ರಾಮನಗೌಡ ಪಾಟೀಲ ಹಾಗೂ ಚಂದ್ರಶೇಖರ ರಾಮಪೂರ, ಕಾರ್ಯದರ್ಶಿಯಾಗಿ ಕುಮಾರ ಯಲವಟ್ಟಿ, ಅರುಣ ಕುಮಾರ ಖಜಾಂಚಿ, ಪಕ್ಕೀರೇಶ ಅಂಬಿಗೇರ ಸಹಕಾರ್ಯದರ್ಶಿ, ಸದಸ್ಯರಾದ ನಿಂಗಪ್ಪ ಕನ್ನೇಶ್ವರ, ಜಗದೀಶ ಮಡಿವಾಳರ, ಬಾಹುಬಲಿ ಉಪಾಧ್ಯ, ಪ್ರಕಾಶ ಭಾಗಣ್ಣನವರ, ಸುರೇಶ ಸವಣೂರ ಸೇರಿದಂತೆ ಮಲ್ಲಿಕಾರ್ಜುನ ಸುಣಗಾರ ಇತರರು ಉಪಸ್ಥಿತರಿದ್ದರು.

ರಸ್ತೆ ತಗ್ಗು ಮುಚ್ಚಲು ಸೂಚನೆ

ಹಾವೇರಿ: ಹಾವೇರಿ–ಅಕ್ಕಿಆಲೂರವರೆಗೆ ರಸ್ತೆ ತಗ್ಗುಗಳನ್ನು ಮುಚ್ಚುವ ಕಾಮಗಾರಿ ಮೇ ಮಾಹೆಯೊಳಗೆ ಪೂರ್ಣಗೊಳ್ಳಬೇಕು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರನಿಗೆ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರು ಖಡಕ್ ಸೂಚನೆ ನೀಡಿದರು. ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶನಿವಾರ ಜಿಲ್ಲಾ ಯೋಜನಾ ಸಮಿತಿ ಮುಂದುವರೆದ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾಮಗಾರಿ ಬಹಳ ವಿಳಂಬವಾಗಿದ್ದು, ಯಾವುದೇ ಕಾರಣ ಹೇಳದೇ ಕೆಲಸ ಪೂರ್ಣಗೊಳಿಸಬೇಕು ಎಂದರು. ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ ಮಾತನಾಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ, ಜಿಪಂ ಉಪ ಕಾರ್ಯದರ್ಶಿ ಡಾ.ಪುನಿತ್ ಉಪಸ್ಥಿತರಿದ್ದರು.

ವ್ಯಕ್ತಿ ಆತ್ಮಹತ್ಯೆ

ಹಾವೇರಿ: ಜೀವನದಲ್ಲಿ ಜಿಗುಪ್ಸೆಗೊಂಡಿದ್ದ ವ್ಯಕ್ತಿಯೊಬ್ಬರು ನಗರದ ಖಾಸಗಿ ಲಾಡ್ಜ್‌ನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ನಗರದಲ್ಲಿ ನಡೆದಿದೆ. ಧಾರವಾಡ ಮೂಲದ ಮಂಜುನಾಥ ಮಲ್ಲಪ್ಪ ಕೊರಡೂರ (67) ಮೃತ ವ್ಯಕ್ತಿ ಎಂದು ಗುರುತಿಸಲಾಗಿದೆ. ಈತ ತನ್ನ ವೈಯಕ್ತಿಕ ಸಮಸ್ಯೆಯಿಂದ ಮಾನಸಿಕ ಮಾಡಿಕೊಂಡು ಜೀವನದಲ್ಲಿ ಜಿಗುಪ್ಸೆಗೊಂಡಿದ್ದಾಗಿ ದೂರಿನ ಮೂಲಕ ತಿಳಿದು ಬಂದಿದೆ. ನಗರದ ಬಸ್ ನಿಲ್ದಾಣ ಬಳಿಯ ಖಾಸಗಿ ಲಾಡ್ಜನಲ್ಲಿ ಪ್ಲಾಸ್ಟಿಕ್ ಹಗ್ಗದಿಂದ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಖಾಸಗಿ ಶಾಲೆಯೊಂದರ ಶಿಕ್ಷಕಿ ಮಧು ಬಡಿಗೇರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹಾವೇರಿ : ಜಿಲ್ಲೆಯ ರೈತರ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕ ಹಾವೇರಿ ವತಿಯಿಂದ ಸಚಿವ ಶಿವಾನಂದ ಪಾಟೀಲ ಅವರಿಗೆ ರೈತರು ಶನಿವಾರ ಮನವಿ ಸಲ್ಲಿಸಿದರು. ಜಿಲ್ಲಾಧ್ಯಕ್ಷ ರಾಮಣ್ಣ ಕೆಂಚಳ್ಳೇರ, ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಳ್ಳಾರಿ, ಮುಖಂಡರಾದ ಮಾಲತೇಶ ಪೂಜಾರ, ಎಚ್.ಎಚ್. ಮುಲ್ಲಾ, ಶಿವಬಸಪ್ಪ ಗೋವಿ, ಶಿವಯೋಗಿ ಹೊಸಗೌಡ್ರ, ಮರಿಗೌಡ ಪಾಟೀಲ, ರುದ್ರಗೌಡ ಕಾಡನಗೌಡ್ರ ಮತ್ತಿತರರಿದ್ದರು.

ಬಿಸಿಯೂಟ: ಸಮವಸ್ತ್ರ ಖರೀದಿ ತನಿಖೆಗೆ ಸೂಚನೆ

ಹಾವೇರಿ: ಸವಣೂರ ತಾಲೂಕಿನಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮದಡಿ ಬಿಸಿಯೂಟ ತಯಾರಕರಿಗೆ ಖರೀದಿಸಲಾದ ತಲೆಗವಸು, ಎಪ್ರಾನ್ ಹಾಗೂ ಸೀರೆ ಖರೀದಿಯಲ್ಲಿ ಅವ್ಯವಹಾರ ನಡೆದಿರುವ ಕುರಿತು ಪರಿಶೀಲಿಸುವಂತೆ ಜಿಪಂ ಅಧಿಕಾರಿಗಳಿಗೆ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಸೂಚನೆ ನೀಡಿದರು. ಜಿಪಂ ಸಭಾಂಗಣದಲ್ಲಿ ಶನಿವಾರ ಅಂಗನವಾಡಿ ಯೂನಿಯನ್ ಅಧ್ಯಕ್ಷರೊಂದಿಗೆ ಸಭೆ ನಡೆಸಿ, ಅಂಗನವಾಡಿ ಯೂನಿಯನ್ ಅಧ್ಯಕ್ಷರ ದೂರುಗಳನ್ನು ಆಲಿಸಿದ ಅವರು, ಮಾರ್ಗಸೂಚಿ ಅನುಸಾರ ತನಿಖೆ ನಡೆಸಲಾಗುವುದು ಹಾಗೂ ತಪ್ಪಿಸ್ಥರ ವಿರುದ್ಧ ಕ್ರಮಕೈಗೊಳ್ಳಲು ತಿಳಿಸಿದರು. ತಾಲೂಕಿನ 89 ಶಾಲೆಗಳ ಬಿಸಿಯೂಟ ತಯಾರಕರಿಗೆ ಎರಡು ಜೊತೆಗೆ ಸಮವಸ್ತ್ರ ಖರೀದಿಸಲಾಗಿದೆ. ಎಪ್ರಾನ್ ಹಾಗೂ ಸಾರಿ ಬಹಳ ಕಳಪೆ ಇದೆ ಎಂದು ಹೇಳಲಾಗುತ್ತಿದೆ. ತನಿಖೆ ನಡೆಸಿ ವರದಿ ನೀಡಲಾಗುವುದು ಎಂದರು. ಹಾನಗಲ್ಲ ತಾಲೂಕು ಇನಾಂಹೊಂಗಲ ಗ್ರಾಮದಲ್ಲಿ ಶಿಥಿಲಾವಸ್ಥೆಯಲ್ಲಿದೆ ಎಂದು ಹೇಳಲಾಗಿದೆ, ಕೂಡಲೇ ಬೇರೆ ಕಟ್ಟಡ ಬಾಡಿಗೆ ಪಡೆದು ಅಂಗನವಾಡಿ ಸ್ಥಳಾಂತರಿಸಲು ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದರು. ಶಾಸಕರು ಹಾಗೂ ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ ಮಾತನಾಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ, ಜಿಪಂ ಉಪ ಕಾರ್ಯದರ್ಶಿ ಡಾ.ಪುನಿತ್ ಉಪಸ್ಥಿತರಿದ್ದರು.



ಹೊನ್ನಾವರ: ಪಟ್ಟಣದ ಕೊಂಕಣ ಖಾರ್ವಿ ಸಮಾಜ ಅಭಿವೃದ್ಧಿ ಸಂಘ ಕೆಳಗಿನಪಾಳ್ಯ ವತಿಯಿಂದ ಸಾಮೂಹಿಕ ಸತ್ಯನಾರಾಯಣ ವ್ರತ ಪೂಜಾ ಕಾರ್ಯಕ್ರಮ ಪಟ್ಟಣದ ಕೆಳಗಿನಪಾಳ್ಯದ ಸಮಾಜ ಮಂದಿರದಲ್ಲಿ ಧಾರ್ಮಿಕ ವಿಧಿವಿಧಾನದಂತೆ ನಡೆಯಿತು. ಶಾಸಕ ದಿನಕರ ಶೆಟ್ಟಿ, ಶಿವಾನಂದ ಹೆಗಡೆ ಕಡತೋಕಾ, ಸೂರಜ್ ನಾಯ್ಕ ಸೋನಿ, ಮಂಜುನಾಥ ನಾಯ್ಕ,ನ್ಯಾಯವಾದಿ ವಿಕ್ರಂ ನಾಯ್ಕ, ಜಗದೀಪ್ ತೆಂಗೇರಿ, ಸಂದೇಶ ಶೆಟ್ಟಿ, ಡಾ. ಆಶಿಕ್ ಹೆಗಡೆ, ಕೊಂಕಣ ಖಾರ್ವಿ ಸಮಾಜ ಬಾಂಧವರು ಇದ್ದರು.

ರೈತರ ಸಭೆ | ಸಚಿವ ಶಿವಾನಂದ ಪಾಟೀಲ ಭರವಸೆ

ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ

ಹಾವೇರಿ: ಕೃಷಿ, ಕೈಗಾರಿಕೆ, ಕೈಮಗ್ಗ ಸೇರಿದಂತೆ ಎಲ್ಲರಿಗೂ ನೀರು ಬೇಕು, ರೈತರ ಪಂಪಸೆಟ್‌ಗಳಿಗೆ ವಿದ್ಯುತ್ ಸಂಪರ್ಕಕ್ಕೆ ಅಗತ್ಯ ಕ್ರಮವಹಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ರೈತರಿಗೆ ಭರವಸೆ ನೀಡಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶನಿವಾರ ರೈತರ ಸಭೆ ನಡೆಸಿದ ಅವರು, ನಮ್ಮ ಸರ್ಕಾರ ಸೇರಿ ಯಾವುದೇ ಸರ್ಕಾರ ಇರಲಿ ರೈತರ ಪರವಾಗಿ ಕೆಲಸ ಮಾಡುತ್ತವೆ. ರೈತರಿಗೆ ಏಳು ತಾಸು ವಿದ್ಯುತ್ ಪೂರೈಕೆ ಸಿಎಂ, ಡಿಸಿಎಂ ಹಾಗೂ ಇಂಧನ ಸಚಿವರ ಉದ್ದೇಶ. ಈಗಾಗಲೇ ಜಿಲ್ಲೆಯಲ್ಲಿ ಹಲವು ಸ್ಟೇಷನ್‌ಗಳನ್ನು ಅಪ್‌ಗ್ರೇಡ್ ಮಾಡಲಾಗಿದೆ, ಬರುವ ದಿನಗಳಲ್ಲಿ ಮತ್ತಷ್ಟು ಸ್ಟೇಷನ್‌ಗಳನ್ನು ಅಪ್‌ಗ್ರೇಡ್ ಮಾಡಿ ಟಿಸಿ ಬದಲಾವಣೆಗೆ ಕ್ರಮ ಕೈಗೊಳ್ಳಲಾಗಿದೆ. ಹೆಸ್ಕಾಂ ನಷ್ಟದಲ್ಲಿದ್ದು, ತಾವುಗಳು ಸಹಕಾರ ನೀಡಿ ಎಂದರು.

ಸೆಪ್ಟೆಂಬರ್ 2023ರಿಂದ ಬಂದ್ ಮಾಡಲಾದ ಅಕ್ರಮ-ಸಕ್ರಮ ಮರು ಜಾರಿ ಸೇರಿದಂತೆ ಹಲವು ವಿಷಯಗಳ ಬಗ್ಗೆ ಮನವಿ ಮಾಡಿದ್ದೀರಿ, ಈ ಕುರಿತು ಪರಿಶೀಲಿಸಲಾಗುವುದು. ಜಿಲ್ಲೆಯ ಎಲ್ಲ ನೀರಾವರಿ ಯೋಜನೆಗಳು ಆರಂಭಗೊಂಡರೆ ಕೆನಾಲ್ ಮೂಲಕ ನೀರು ಬಂದರೆ ವಿದ್ಯುತ್ ಸಂಪರ್ಕ ಸಮಸ್ಯೆ ಬಗೆಹರಿಯಲಿದೆ. ತಾವು ಎರಡ್ಮೂರು ಕಂಬ ಹಾಕಿದರೆ ಟಿ.ಸಿ. ಬರುತ್ತದೆ. ಹಾಗಾಗಿ ಹೆಸ್ಕಾಂನೊಂದಿಗೆ ಸಹಕರಿಸಬೇಕೆಂದುಮನವಿ ಮಾಡಿದಅವರು, ಕೆಡಿಪಿಸಭೆಯಲ್ಲಿ ರಸಗೊಬ್ಬರ ಹಾಗೂ ಬಿತ್ತನೆ ಬೀಜದ ದಾಸ್ತಾನು ಕುರಿತು ಮಾಹಿತಿ ಪಡೆಯಲಾಗಿದೆ, ಯಾವುದೇ ಸಮಸ್ಯೆ ಇಲ್ಲ ಈ ಭಾಗದವರೇ ಹೆಸ್ಕಾಂ ಅಧ್ಯಕ್ಷರಾಗಿದ್ದು, ಜಿಲ್ಲೆಯ ರೈತರ ವಿದ್ಯುತ್ ಸಮಸ್ಯೆಗಳನ್ನು ತಿಳಿದುಕೊಂಡು ಪರಿಹರಿಸುವ ಕೆಲಸ ಮಾಡಬೇಕು ಎಂದರು.

ಹೆಸ್ಕಾಂ ಅಧ್ಯಕ್ಷ ಅಜೀಮ್‌ಪೀರ್ ಖಾದ್ರಿ ಮಾತನಾಡಿ, ನಮ್ಮ ಕ್ಷೇತ್ರದಲ್ಲಿ 300ಜನ ರೈತರಿಗೆ ಶೀಘ್ರ ಸಂಪರ್ಕ ನೀಡಲಾಗಿದೆ. ಏಳು ತಾಸು ವಿದ್ಯುತ್ ನೀಡುವುದು ನಮ್ಮ ಉದ್ದೇಶವಾಗಿದ್ದು, ಆದರೆ ಕೆಲವು ರೈತರು ಮೂರು ಹಾಗೂ ನಾಲ್ಕು ತಾಸುಗಳಲ್ಲಿ ಹಂತ ಹಂತವಾಗಿ ವಿದ್ಯುತ್ ನೀಡಲು ಮನವಿ ಮಾಡಿಕೊಂಡಿದ್ದಾರೆ. ಹಗಲು ಹೊತ್ತಿನಲ್ಲಿ ವಿದ್ಯುತ್ ನೀಡಲಾಗುತ್ತಿದೆ. ನಿಮ್ಮ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಎಂದು ಹೇಳಿದರು.



ಸಮಸ್ಯೆಗಳ ಮಹಾಪೂರ

ಸೆಪ್ಟೆಂಬರ್ 2023ರಿಂದ ಬಂದ್ ಮಾಡಡಲಾದ ಅಕ್ರಮ-ಸಕ್ರಮ ಮರು ಜಾರಿ, ಏಳು ತಾಸು ನಿರಂತರ ವಿದ್ಯುತ್, ಟಿಸಿ ಬದಲಾವಣೆ ವಿಳಂಬ, ಟಿವಿಗಳ ಓರ್‌ಲೋಡ್ ಕಡಿಮೆ ಮಾಡುವುದು, ಹಳೆ ವಿದ್ಯುತ್ ತಂತಿಗಳ ಬದಲಾವಣೆ, ಗ್ರಾಮಗಳಿಗೆ ಲೈನ್‌ಮನ್‌ಗಳ ನೇಮಕ, ಸುಟ್ಟ ಟ್ರಾನ್ಸ್‌ಫಾರ್ಮಗಳ ಶೀಘ್ರ ಬದಲಾವಣೆ, ನಿಗದಿತ ಸಮಯದೊಳಗೆ ಬೆಳೆವಿಮೆ ಪರಿಹಾರ ಪಾವತಿ, ಕಳಪೆ ಬಿತ್ತನೆ ಬೀಜ ಮಾರಾಟ ತಡೆಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮಕೈಗೊಂಡು ರೈತರ ಸಮಸ್ಯೆ ಪರಿಹರಿಸಬೇಕು ಎಂದು ರೈತ ಸಂಘದ ಮುಖಂಡರು ಸಚಿವರಿಗೆ ಮನವಿ ಮಾಡಿಕೊಂಡರು.

> ಹೆಸ್ಕಾಂನಿಂದ ಹಾವೇರಿ ಜಿಲ್ಲೆಗೆ ಹೆಚ್ಚಿನ ಅನುದಾನ ನೀಡಲಾಗಿದೆ. ಜೊತೆಗೆ ಸ್ಟೇಷನ್‌ಗಳ ಅಪ್‌ಗ್ರೇಡ್‌ಗೆ ಹಾಗೂ 72 ಗಂಟೆಯೊಳಗಾಗಿ ಟ್ರಾನ್ಸ್‌ಫರ್ಮಗಳ ಬದಲಾವಣೆಗೆ ಕ್ರಮವಹಿಸಲಾಗಿದೆ. ಜಿಲ್ಲೆಯಲ್ಲಿ 263 ಟಿಸಿ ಬಫರ್ ದಾಸ್ತಾನಿದೆ. ಸಿನಿಯಾರಿಟಿ ಲಿಸ್ಟ್ ಅನುಸಾರ ವಿದ್ಯುತ್ ಸಂಪರ್ಕಕ್ಕೆ ಕ್ರಮವಹಿಸಲಾಗಿದೆ. 560 ಲೈನ್‌ಮನ್‌ಗಳ ಆಯ್ಕೆಯಾಗಿದ್ದು, ಮೇ ಅಂತ್ಯದೊಳಗೆ ಪ್ರಕಟಣೆ ಮಾಡಲಾಗುವುದು.
>
> ■ ಎಂ.ಎಲ್. ವೈಶಾಲಿ, ಎಂಡಿ, ಹೆಸ್ಕಾಂ, ಹುಬ್ಬಳ್ಳಿ

ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಮಾತನಾಡಿ, ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಸರ್ಕಾರದ ಮಾರ್ಗಸೂಚಿ ಅನ್ವಯ ಕೆಲಸ ಮಾಡಲಾಗುವುದು ಎಂದು ತಿಳಿಸಿದರು.

ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ ಮಾತನಾಡಿದರು. ಎಸ್ಪಿ ಯಶೋಧಾ ವಂಟಗೋಡಿ, ಹೆಸ್ಕಾಂ ತಾಂತ್ರಿಕ ನಿರ್ದೇಶಕ ಜಗದೀಶ ಉಪಸ್ಥಿತರಿದ್ದರು.

ವಸತಿ ಗೃಹ ನಿರ್ಮಾಣಕ್ಕೆ ಭೂಮಿಪೂಜೆ

ಹಾನಗಲ್ಲ: ತಾಲೂಕಿನ ಶಂಕರಿಕೊಪ್ಪ ಗ್ರಾಮದಲ್ಲಿ ಶನಿವಾರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 5 ಕೋಟಿ ರೂ. ವೆಚ್ಚದಲ್ಲಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ವಸತಿ ಪದವಿಪೂರ್ವ ಕಾಲೇಜಿನ ಸಿಬ್ಬಂದಿ ವಸತಿ ಗೃಹ ನಿರ್ಮಾಣಕ್ಕೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಚಿಕ್ಕಾಂಶಿ ಹೊಸೂರು ಗ್ರಾಮದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಸುಸಜ್ಜಿತ ಕಟ್ಟಡ ನಿರ್ಮಾಣಕ್ಕೆ 16 ಕೋಟಿ ರೂ. ಹಾಗೂ ಶಂಕರಿಕೊಪ್ಪ ಗ್ರಾಮದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡಕ್ಕೆ 16 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಶೀಘ್ರದಲ್ಲಿ ಕಾಮಗಾರಿ ಆರಂಭಿಸಲಾಗುವುದು.

ಬ್ಯಾತನಾಳ ಗ್ರಾಮದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಸಿಬ್ಬಂದಿ ವಸತಿ ಗೃಹ ನಿರ್ಮಾಣ ಕಾಮಗಾರಿ ಈಗಾಗಲೇ ಚಾಲನೆ ಪಡೆದಿದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ತಾಲೂಕಿನಲ್ಲಿ ನಡೆಸಲಾಗುತ್ತಿರುವ ಪದವಿ ಪೂರ್ವ ಕಾಲೇಜುಗಳು ಹಿಂದೆಂದಿಗಿಂತ ಈ ಬಾರಿ ಉತ್ತಮ ಫಲಿತಾಂಶ ದಾಖಲಿಸಿವೆ ಎಂದು ವಿವರಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ತಾಪಂ ಮಾಜಿ ಸದಸ್ಯರಾದ ಅನಿತಾ ಶಿವೂರ, ಶಕುಂತಲಾ ತಳವಾರ, ಮುಖಂಡರಾದ ಭರಮಣ್ಣ ಶಿವೂರ, ವಿರುಪಾಕ್ಷಪ್ಪ ತಳವಾರ, ಮಾರುತಿ ಇಂಗಳಗಿ, ಶಶಿಧರ ಭೈರಕ್ಕನವರ, ಅನಿತಾ ಶಿವೂರ, ದಾನಪ್ಪ ಬಿದರಿ, ಖಾದರಿ ಮೂಲಿಮನಿ, ರೇಖಾ ತಳವಾರ, ರೇಖಾ ನಿದರಗಡ್ಡಿ, ನಿಂಗಪ್ಪ ತಳವಾರ, ರಾಜೂ ಮಳೆಣ್ಣನವರ, ಪ್ರಕಾಶ ನಂದಿಹಳ್ಳಿ, ಲಲಿತಾ ಬಡಿಗೇರ, ಶಂಭು ಮಲಕಣ್ಣನವರ, ರವಿ ಚಾಲಗೇರಿ, ಎಂ.ಎ.ನೆಗಳೂರ, ಶಿವಬಸಪ್ಪ ಮಲಕಣ್ಣನವರ, ಗುಡ್ಡಪ್ಪ ಗಡಿಯಂಕನಹಳ್ಳಿ, ಬಾನಪ್ಪ ಬಿದರಿ, ಚನ್ನಬಸಪ್ಪ ಬೆನಕಣ್ಣನವರ, ಸಿದ್ದಪ್ಪ ಕಾಳಂಗಿ, ಮಲ್ಲಪ್ಪ ಕೋರಿ, ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾಧಿಕಾರಿ ಅಬ್ದುಲ್ ರಶೀದ್ ಮಿರ್ಜಾನವರ ಇದ್ದರು.



ಸಾಮಾಜಿಕ ವಲಯಗಳಿಗೆ ಹೆಚ್ಚಿನ ಗಮನ ಅಗತ್ಯ

ಹಾವೇರಿ: 2026–27ರ ಕೇಂದ್ರ ಬಜೆಟ್ ಆರ್ಥಿಕ ವೃದ್ಧಿ ಮತ್ತು ಕಲ್ಯಾಣದ ನಡುವೆ ಸಮತೋಲನ ಸಾಧಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದೆ ಎಂದು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಹಾಗೂ ಅಧ್ಯಕ್ಷರಾದ ಡಾ. ಬಿ.ಎಚ್. ನಾಗೂರ ಅಭಿಪ್ರಾಯಪಟ್ಟರು.

ಇಲ್ಲಿನ ಗುದ್ಲೆಪ್ಪ ಹಳ್ಳಿಕೇರಿ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಲಾದ 'ವೃದ್ಧಿ ವಿರುದ್ಧ ಕಲ್ಯಾಣ: 2026–27ರ ಕೇಂದ್ರ ಬಜೆಟ್‌ನಲ್ಲಿ ಆದ್ಯತೆಗಳ ಸಮತೋಲನ' ವಿಷಯದ ಕಾರ್ಯಾಗಾರದಲ್ಲಿ ಮುಖ್ಯ ಭಾಷಣ ಮಾಡಿದ ಅವರು, ಈ ಕಾರ್ಯಾಗಾರವು ಕೇಂದ್ರ ಬಜೆಟ್‌ನಲ್ಲಿರುವ ಆದ್ಯತೆಗಳು ಮತ್ತು ನೀತಿದಿಕ್ಕನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವ ಉದ್ದೇಶ ಹೊಂದಿತ್ತು ಎಂದರು.

ಡಾ.ನಾಗೂರ ಅವರು ಸಾರಿಗೆ, ಲಾಜಿಸ್ಟಿಕ್ಸ್ ಮತ್ತು ಡಿಜಿಟಲ್ ಮೂಲಸೌಕರ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ನೀಡಿರುವ ಹೆಚ್ಚಿನ ಒತ್ತು ದೀರ್ಘಕಾಲೀನ ಆರ್ಥಿಕ ವೃದ್ಧಿಗೆ ಸಹಕಾರಿ ಆಗುವುದಲ್ಲದೇ ಉತ್ಪಾದಕತೆಯನ್ನು ಹೆಚ್ಚಿಸಲು ಸಹಾಯಕವಾಗುತ್ತದೆ. ಇಂಥಹ ಹೂಡಿಕೆಗಳು ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದಕ್ಕೂ ಹಾಗೂ ಶಾಶ್ವತ ಅಭಿವೃದ್ಧಿಗೆ ಬಲವಾದ ನೆಲೆಯನ್ನು ನಿರ್ಮಿಸುವುದಕ್ಕೂ ಅಗತ್ಯವಿದೆ ಎಂದು ಹೇಳಿದರು.

ಸಮಗ್ರ ವೃದ್ಧಿಗಾಗಿ ಸಾಮಾಜಿಕ ವಲಯಗಳಲ್ಲಿ ನಿರಂತರ ಮತ್ತು ಹೆಚ್ಚುವರಿ ಹೂಡಿಕೆ ಅಗತ್ಯವಿದೆ ಎಂದು ಡಾ.ನಾಗೂರ ಅವರು ಒತ್ತಿ ಹೇಳಿದರು.

ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದರು. ಕಾರ್ಯಾಗಾರವು ಸಂವಾದಾತ್ಮಕ ಚರ್ಚೆಯೊಂದಿಗೆ ಮುಕ್ತಾಯಗೊಂಡಿತು. ಅಲ್ಲಿ ಭಾಗವಹಿಸಿದವರು ಕೇಂದ್ರ ಬಜೆಟ್‌ನ ವಿವಿಧ ಆಯಾಮಗಳು ಮತ್ತು ಅದರ ಆರ್ಥಿಕ ಪರಿಣಾಮಗಳ ಕುರಿತು ಚರ್ಚಿಸಿದರು.



ನ್ಯಾನೋ ವಿಜ್ಞಾನದ ಸಂಶೋಧನೆ ಮಹತ್ವದ್ದು

ಹಾವೇರಿ: ನ್ಯಾನೋ ವಿಜ್ಞಾನವು ಆಧುನಿಕವಿಜ್ಞಾನಮತ್ತುತಂತ್ರಜ್ಞಾನದ ಅತ್ಯಂತ ಪರಿವರ್ತನಾ ಕ್ಷೇತ್ರದಲ್ಲಿ ಒಂದಾಗಿದೆ. ಜೊತೆಗೆ ವಿಜ್ಞಾನದ ಬಹುಶಾಖೀಯ ಸವಾಲುಗಳಿಗೆ ಪರಿಹಾರವನ್ನು ನೀಡುತ್ತಾ ಬಂದಿದೆ. ಆದ್ದರಿಂದ ವಿಜ್ಞಾನದ ಯುಗದಲ್ಲಿ ನ್ಯಾನೋ ವಿಜ್ಞಾನದ ಸಂಶೋಧನೆ ಬಹುಮಹತ್ವವಾದದು ಎಂದು ಬೆಂಗಳೂರಿನ ಸೆಂಟರ್ ಫಾರ್ ನ್ಯಾನೋ ಅಂಡ್ ಸಾಫ್ಟ್ ಮ್ಯಾಟರ್ ಸೈನ್ಸ್‌ನ ವಿಜ್ಞಾನಿ ಡಾ.ಅಶುತೋಷ ಕುಮಾರ್ ಸಿಂಗ್ ಅವರು ಹೇಳಿದರು.

ನಗರದ ಜಿ.ಎಚ್ ಕಾಲೇಜಿನ ಭೌತಶಾಸ್ತ್ರ ವಿಭಾಗ ಆಯೋಜಿಸಿದ್ದ ನ್ಯಾನೋ ವಿಜ್ಞಾನದ ಸಂಶೋಧನೆ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ದೇಶಿಸಿ ಅವರು ಮಾತನಾಡಿದರು.



ನ್ಯಾನೋ ಕಣಗಳ ಮೂಲಭೂತ ಅಂಶಗಳು, ಅವುಗಳ ನಿರ್ಮಾಣ ವಿಧಾನಗಳು ಮತ್ತು ದಿನನಿತ್ಯದ ಜೀವನದಲ್ಲಿ ಅವುಗಳ ಉಪಯೋಗಗಳ ಕುರಿತು ವಿವರಿಸಿ, ನೀರಿನ ಶುದ್ಧೀಕರಣ ಮತ್ತು ಮಾಲಿನ್ಯ ನಿಯಂತ್ರಣ ಕ್ಷೇತ್ರದಲ್ಲಿ ನ್ಯಾನೋ ವಸ್ತುಗಳ ಬಳಕೆ ಅತ್ಯಂತ ಪರಿಣಾಮಕಾರಿ ಎಂದು ತಿಳಿಸಿದರು.

ಅಧ್ಯಕ್ಷತೆಯನ್ನು ಕೆಎಲ್‌ಇ ಸಂಸ್ಥೆಯ ಸಂಸ್ಥೆಯ ನಿರ್ದೇಶಕರಾದ ಎಂ.ಸಿ. ಕೊಳ್ಳಿ ಅವರು ವಹಿಸಿದ್ದರು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಡಾ.ಕೊಟ್ರೇಶ್ ಎಂ.ಜಿ ಮತ್ತು ಡಾ.ಹನುಮಂತಗೌಡ ಬಿ. ಆಗಮಿಸಿದ್ದರು. ಕಾಲೇಜಿನ ಐಕ್ಯುಎಸಿ ಸಂಯೋಜಕರಾದ ರೂಪ ಕೋರೆ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಚಾರ್ಯರಾದ ಪ್ರೊ.ಎಂ.ಎಂ. ಹೊಳ್ಳಿಯವರ ಸ್ವಾಗತಿಸಿದರು. ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಉಮಾದೇವಿ ನೇರ್ಲೆ ಪ್ರಾಸ್ತಾವಿಕನುಡಿಗಳನ್ನಾಡಿ, ಅತಿಥಿಗಳನ್ನು ಪರಿಚಯಿಸಿದರು. ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ.ರಾಜೇಶ್ವರಿ ಟಿ. ವಂದಿಸಿದರು.

ಈ ವಿಚಾರ ಸಂಕಿರಣದಲ್ಲಿ ನ್ಯಾನೋ ವಿಜ್ಞಾನಕ್ಕೆ ಸಂಬಂಧಿಸಿದ 53 ಮೌಖಿಕ ಪ್ರಸ್ತುತಿ ಮತ್ತು 45 ಪೋಸ್ಟರ್ ಪ್ರಸ್ತುತಿ ಸ್ಪರ್ಧೆಗಳು ನಡೆದವು.

ಭಗತ್‌ಸಿಂಗ್ ಕಾಲೇಜು ತಾಲೂಕಿಗೆ ಪ್ರಥಮ

ಹಾವೇರಿ: ನಗರದ ಹಾನಗಲ್ ರಸ್ತೆಯಲ್ಲಿರುವ ಭಗತ್‌ಸಿಂಗ್ ಕಾಲೇಜಿನ ಪಿಯುಸಿ ವಿದ್ಯಾರ್ಥಿಗಳು ತಾಲೂಕಿಗೆ ಮೊದಲಿಗರಾಗಿ ಹೊರಹೊಮ್ಮಿದ್ದಾರೆ. ಕಲಾ ವಿಭಾಗದಲ್ಲಿ ಲಕ್ಷ್ಮೀ ಇಪ್ಪಿಕೊಪ್ಪ ಶೇ.96ರಷ್ಟು ಫಲಿತಾಂಶ ಪಡೆದು ಹಾವೇರಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಭಗತ್ ಕಾಲೇಜು ಅಕ್ಕಿಆಲೂರಿನ ವಿದ್ಯಾರ್ಥಿನಿ ಸುಧಾ ತೆಗ್ಗಿಹಳ್ಳಿ ಶೇ.95ರಷ್ಟು ಫಲಿತಾಂಶದ ಮೂಲಕ ವಿಜ್ಞಾನ ವಿಭಾಗದಲ್ಲಿ ಹಾನಗಲ್ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಕಲಾ ವಿಭಾಗದಲ್ಲಿ ಅಂಬಿಕಾ ವಟವಟಿ (541) ದ್ವಿತಿಯ, ವೀಣಾ ಇಪ್ಪಿಕೊಪ್ಪ (539) ತೃತೀಯ ಸ್ಥಾನ, ವಾಣಿಜ್ಯ ವಿಭಾಗದಲ್ಲಿ ಲತಾ ನಾಗನೂರು (551) ಪ್ರಥಮ, ವಿನಾಯಕ ಕರಿಗಾರ (545) ದ್ವಿತೀಯ, ಬಿಬಿ ಅಸ್ಪೀಯಾಬಾನು ನದಾಫ್ (540) ತೃತೀಯ ಸ್ಥಾನ ಮತ್ತು ವಿಜ್ಞಾನ ವಿಭಾಗದಲ್ಲಿ ಜ್ಯೋತಿ ಪುರ್ಲಿ (527) ಪ್ರಥಮ, ಶ್ರೀಕಾಂತ ಪಾಟೀಲ (507) ತೃತೀಯಸ್ಥಾನ ಪಡೆದು ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ. ಉಳಿದಂತೆ ಅತೀ ಹೆಚ್ಚು ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಕಾಲೇಜು ಆಡಳಿತ ಮಂಡಳಿ, ಪ್ರಾಚಾರ್ಯರು ಮತ್ತು ಉಪನ್ಯಾಸಕರು ಸಂತಸ ವ್ಯಕ್ತಪಡಿಸಿದ್ದಾರೆ.



ಕಸಾಪ, ಸಾಹಿತಿ ಕಲಾವಿದರ ಬಳಗದಿಂದ ಸದಾಶಿವ ಶ್ರೀ, ಸಾಹಿತಿ ಸತೀಶ ಕುಲಕರ್ಣಿಗೆ ಅಭಿನಂದನೆ

ಆಧ್ಯಾತ್ಮಿಕ, ಸಾಮಾಜಿಕ ಪರಿವರ್ತನೆಗೆ ಮಹಾತ್ಮರ ಕೊಡುಗೆ ಅನನ್ಯ

ಹಾವೇರಿ: ಕನ್ನಡ ನಾಡಿನಲ್ಲಿ ಮಠಮಾನ್ಯಗಳು ಅನ್ನ, ಅರಿವು, ಆಶ್ರಯ ನೀಡಿ ಸಮಾಜೋಧಾರ್ಮಿಕ ಕಾರ್ಯದ ಮೂಲಕ ಸಾಮಾಜಿಕ ಅರಿವು ಮೂಡಿಸಿದರೆ, ಅದರ ನೇತೃತ್ವ ವಹಿಸಿದ್ದ ಸಂತ, ಮಹಾತ್ಮರು ಭಕ್ತಿ, ಜ್ಞಾನ, ವೈರಾಗ್ಯದಮೂಲಕ ಆಧ್ಯಾತ್ಮಿಕಮತ್ತುಸಾಮಾಜಿಕ ಪರಿವರ್ತನೆಗೆ ಕಾರಣೀಕರ್ತರಾಗಿದ್ದಾರೆ. ಅಂಥಹವರನ್ನು ಗುರುತಿಸಿ ಗೌರವಿಸುವದು ಸಮುದಾಯದ ಬಹುಮುಖ್ಯ ಕರ್ತವ್ಯವಾಗಿದೆ. ಅಂಥಹ ಕಾರ್ಯವನ್ನು ಹಾವೇರಿ ವಿವಿ ಮಾಡಿದೆ ಎಂದು ಜಾನಪದ ವಿದ್ವಾಂಸ ಡಾ.ಶಂಭು ಬಳಿಗಾರ ಹೇಳಿದರು.

ನಗರದ ದಿ.ಗಂಗಾಧರ ನಂದಿ ಸಾಹಿತ್ಯ ಭವನದಲ್ಲಿ ಜಿಲ್ಲಾ ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಸಾಹಿತಿ ಕಲಾವಿದರ ಬಳಗ ವತಿಯಿಂದ ಹಮ್ಮಿಕೊಂಡಿದ್ದ ಹುಕ್ಕೇರಿಮಠದ ಸದಾಶಿವ ಶ್ರೀಗಳ ಮತ್ತು ಸಾಹಿತಿ ಸತೀಶ ಕುಲಕರ್ಣಿ ಅವರ ಅಭಿನಂದನಾ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.



ಹಾವೇರಿಯ ಹುಕ್ಕೇರಿಮಠವು ಸರ್ವಜನಾಂಗದ ಶಾಂತಿಯ ತೋಟವಾಗಿದ್ದು, ಬಸವಾದಿ ಶಿವಶರಣರ ಕಾಯಕ, ದಾಸೋಹ ಪರಂಪರೆಯು ಈ ಮಠದಲ್ಲಿ ನಡೆಯುತ್ತಿದ್ದು, ಇದರ ನೇತೃತ್ವ ವಹಿಸಿದ ಸದಾಶಿವ ಸ್ವಾಮೀಜಿಗೆ ಹಾವೇರಿ ವಿವಿಯು ಗೌರವ ಡಾಕ್ಟರೇಟ್ ನೀಡಿದ್ದು ಅಭಿನಂದನೀಯ ಎಂದರು.

ಹಾವೇರಿ ನೆಲದ ಸಾಹಿತ್ಯದ ಅಸ್ಮಿತೆಯಾಗಿರುವ ಸತೀಶ ಕುಲಕರ್ಣಿ ಬಂಡಾಯದ ಪ್ರತಿಭೆಯಾಗಿದ್ದು, ತಾನು ಬೆಳೆಯುವುದರ ಜೊತೆಗೆ ತನ್ನೊಂದಿಗೆ ಹಲವಾರು ಸಾಹಿತಿ ಕಲಾವಿದರನ್ನು ಬೆಳೆಸಿದ್ದು ಅವರ ಹೆಗ್ಗಳಿಕೆಯಾಗಿದೆ. ಅವರನ್ನು ವಿವಿ ಗೌರವಿಸಿದ್ದು, ಸಂತಸದ ಸಂಗತಿ, ಅವರು ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಲಿ ಎಂದು ಹಾರೈಸಿದರು.

ಹಾವೇರಿ ವಿವಿ ಕುಲಪತಿ ಡಾ. ಸುರೇಶ ಜಂಗಮಶೆಟ್ಟಿ ಮಾತನಾಡಿದರು.

ಗೌರವ ಸನ್ಮಾನ ಪಡೆದ ಸದಾಶಿವ ಶ್ರೀಗಳು ಮತ್ತು ಸತೀಶ ಕುಲಕರ್ಣಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಕಸಾಪ ಅಧ್ಯಕ್ಷ ಎಚ್.ಬಿ. ಲಿಂಗಯ್ಯ ವಹಿಸಿದ್ದರು.

ಸಮಾರಂಭದಲ್ಲಿ ಹಿರಿಯ ಸಾಹಿತಿ ಪ್ರೊ. ವಿರುಪಾಕ್ಷಪ್ಪ ಕೋರಗಲ್ಲ, ಅಮೃತಮ್ಮ ಶೀಲವಂತರ, ಧಾರವಾಡ ಜಿಲ್ಲಾ ಕಸಾಪ ಅಧ್ಯಕ್ಷ ಲಿಂಗರಾಜ ಅಂಗಡಿ, ಕೆ.ಎಚ್. ಮುಕ್ಕಣ್ಣನವರ, ಶಂಕರ ಸುತಾರ, ಎಸ್.ಎನ್. ದೊಡ್ಡಗೌಡರ, ಮುರಿಗೆಪ್ಪ ಶೆಟ್ಟರ, ನಾಗರಾಜ ವಿಬೂತಿ, ಸಿ.ಎಸ್. ಮರಳಿಹಳ್ಳಿ, ದೀಪಾ ಗೋನಾಳ, ಭಾರತಿ ಯಾವಗಲ್ಲ, ಪರಶುರಾಮ ಕರ್ಜಗಿ, ಮತ್ತಿತರರು ಉಪಸ್ಥಿತರಿದ್ದರು.

ಎಸ್.ಆರ್. ಹಿರೇಮಠ ಸ್ವಾಗತಿಸಿದರು. ತಾಲೂಕ ಕಸಾಪ ಅಧ್ಯಕ್ಷ ವೈ.ಬಿ. ಆಲದಕಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪೃಥ್ವಿರಾಜ ಬೆಟಗೇರಿ ನಿರೂಪಿಸಿದರು. ಬಿ.ಎಂ. ಜಗಾಪುರ ವಂದಿಸಿದರು.

ತಪ್ಪಿತಸ್ಥರ ವಿರುದ್ಧ ಶೀಘ್ರ ಕ್ರಮ: ಸಚಿವ ಪಾಟೀಲ

ಹಾವೇರಿ: ಜಲ್ ಜೀವನ್ ಮಿಶನ್ ಯೋಜನೆಯಡಿ ಬೋಗಸ್ ಬಿಲ್ ತೆಗೆದು ಹಣ ದುರುಪಯೋಗ ಮಾಡಿಕೊಂಡಿದ್ದರ ಬಗ್ಗೆ ಕಡ್ಡಾಯವಾಗಿ ತನಿಖೆ ಮಾಡಿಸುತ್ತೇವೆ. ತಪ್ಪಿತಸ್ಥರು ಯಾರೇ ಇರಲಿ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು.



ಜಿಲ್ಲೆಯ ಹಿರೇಕೆರೂರು ತಾಲೂಕು ಹುಲ್ಲತ್ತಿ, ಅರಳಿಕಟ್ಟೆ, ಚಿನ್ನಮುಳಗುಂದ ಹಾಗೂ ರಾಣೇಬೆನ್ನೂರು ತಾಲೂಕು ಅಸುಂಡಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಜಲಜೀವನ್ ಮಿಶನ್ ಯೋಜನೆಯಡಿ ಮನೆ ಮನೆಗೆ ನಳ ಸಂಪರ್ಕ ಕನೆಕ್ಷನ್ ಹಾಕಿದ್ದಾರೆ. ಆದರೆ ಪ್ರಾಯೋಗಿಕವಾಗಿ ಒಮ್ಮೆ ನೀರು ಬಿಟ್ಟು, ಕೋಟ್ಯಂತರ ರೂ.ಬಿಲ್ ತೆಗೆದುಕೊಂಡಿದ್ದಾರೆ. ಬಳಿಕ ನೀರೆ ಬಿಟ್ಟಿಲ್ಲ. ಈ ವಿಷಯದಲ್ಲಿ ಕೋಟ್ಯಂತರ ರೂ.ಅವ್ಯವಹಾರ ಆಗಿದೆ ಎಂಬ ವಿಷಯಕ್ಕೆ ಅವರು ನಗರದಲ್ಲಿ ಶುಕ್ರವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಜಲಜೀವನ್ ಮಿಶನ್ ಯೋಜನೆಯು ಕೇಂದ್ರ ಹಾಗೂ ರಾಜ್ಯ ಸರಕಾರದ ಸಹಭಾಗಿತ್ವದಲ್ಲಿ ನಡೆಯುವಂತಹದ್ದು, ಯೋಜನೆ ಬಗ್ಗೆ ಗೊಂದಲವೂ ಇದೆ. ಈ ಬಗ್ಗೆ ಈಗಾಗಲೇ ಪ್ರಗತಿ ಪರಿಶೀಲನೆ ಸಭೆ ನಡೆಸಿದ್ದೇನೆ. ಕೇಂದ್ರದಿಂದ ರಾಜ್ಯಕ್ಕೆ 15 ಸಾವಿರ ಕೋಟಿ ಬಾಕಿ ಬರಬೇಕಿದೆ. ಪ್ರಮುಖವಾಗಿ ಗ್ರಾಪಂನವರಿಗೆ ಎನ್‌ಓಸಿ ಕೊಡುವ ಅಧಿಕಾರವಿದೆ. ಅವರು ಎನ್‌ಓಸಿ ಕೊಟ್ಟರೆ ನಮಗೇನು ಮಾಡಲಿಕ್ಕೆ ಬರೋದಿಲ್ಲ. ಹಣ ದುರುಪಯೋಗ ಆಗಿದ್ದರ ಬಗ್ಗೆ ತನಿಖೆ ಮಾಡಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದರು.

ಮಾನವ ಮತ್ತು ಪ್ರಾಣಿಗಳ ಸಂಘರ್ಷ ತಡೆಗಟ್ಟುವ ನಿಟ್ಟಿನಲ್ಲಿ ಕಾಡು ಪ್ರಾಣಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಕುರಿತ ಸರಕಾರದ ಪ್ರಸ್ತಾವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಹುಲಿಗಳು ಹೆಚ್ಚಾಗಿವೆ, ಆನೆಗಳು ಹೆಚ್ಚಾಗಿವೆ. ಎಷ್ಟು ಪ್ರಾಣಿಸಂಖ್ಯೆಗೆ ಅನುಗುಣವಾಗಿ ಕಾಡು ಇರಬೇಕಿತ್ತೋ, ಅಷ್ಟು ಪ್ರದೇಶ ಈಗ ಕಾಡು ಇಲ್ಲ, ಹಾಗಾಗಿ ಅಂತಹ ಕಾಡು ಪ್ರಾಣಿಗಳಿಂದ ಜನರ ರಕ್ಷಣೆ ಹಾಗೂ ಪ್ರಾಣಿಗಳ ಸಂಘರ್ಷಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಈ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ ಬಡವರು ಮನೆ ಕಟ್ಟಿಕೊಳ್ಳಲು ಸಮರ್ಪಕವಾಗಿ ಮರಳು ಸಿಗುತ್ತಿಲ್ಲ ಎಂಬುದರ ಬಗ್ಗೆ ಪ್ರತಿಕ್ರಿಯಿಸಿದ ಅವರು, ಭಾಗದಲ್ಲೂ ಹೇರಳವಾಗಿ ಮರಳು ಇದೆ. ಮ್ಯಾನ್ಯುವಲ್ ಆಗಿ ಹಾರ್ವೆಸ್ಟಿಂಗ್ ಮಾಡುವುದಕ್ಕೆ ಬರುವುದಿಲ್ಲ, ಹಾಗಾಗಿಯೇ ಮಾಜಿ ಶಾಸಕರೊಬ್ಬರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ನಾವೂ ಕೂಡ ವೈಜ್ಞಾನಿಕವಾಗಿ ಯಾವ ರೀತಿಯಲ್ಲಿ ಮರಳನ್ನು ಪಡೆಯಬೇಕು ಎಂಬುದರ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದು ತಿಳಿಸಿದರು.

ಕಿರುಸುದ್ದಿ

ಹರಿಪ್ರಿಯಾಗೆ ಶೇ.96.33 ಅಂಕ

◆**ಬೆಳಗಾವಿ:** ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ನಗರದ ಪ್ರತಿಷ್ಠಿತ ಕೆಎಲ್‌ಇ ಸಂಸ್ಥೆಯ ಲಿಂಗರಾಜ ಪಿಯುಸಿ ಕಾಲೇಜಿನ ಕಲಾ ವಿಭಾಗದ ಪ್ರತಿಭಾನ್ವಿತ ವಿದ್ಯಾರ್ಥಿನಿ ಹರಿಪ್ರಿಯಾ ಪ್ರಭಾತ ಶೆಣ್ಯೆ ಅವರು 578 (96.33)ಅಂಕ ಪಡೆದು ಸಾಧನೆ ಮಾಡಿದ್ದಾರೆ.



ಹರಿಪ್ರಿಯಾ ತಂದೆ ಪತ್ರಕರ್ತರಾಗಿದ್ದರೆ, ತಾಯಿ ಗೃಹಿಣಿ. ಈ ದಂಪತಿ ಮಗಳಿಗೆ ಉತ್ತಮ ಶಿಕ್ಷಣ ಕೊಡಿಸುತ್ತಿದ್ದಾರೆ. ಮಗಳು ದೊಡ್ಡ ಅಧಿಕಾರಿ ಆಗುವ ಕನಸು ಕಂಡಿದ್ದಾರೆ. ಆ ನಿಟ್ಟಿನಲ್ಲಿ ಪಿಯುಸಿಯಲ್ಲಿ ಅತ್ಯುತ್ತಮ ಅಂಕ ಪಡೆದಿರುವ ಹರಿಪ್ರಿಯಾ ಪಾಲಕರ ಕನಸು ನನಸು ಮಾಡುವತ್ತ ದಿಟ್ಟ ಹೆಜ್ಜೆ ಇಟ್ಟಿದ್ದಾಳೆ. ಮಗಳ ಈ ಸಾಧನೆಗೆ ಕುಟುಂಬಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ. ಮನೆಯಲ್ಲಿ ಹಬ್ಬದ ವಾತಾವರಣ ನಿರ್ಮಾಣ ಆಗಿದ್ದು, ಎಲ್ಲರೂ ಹರಿಪ್ರಿಯಾ ಸಿಹಿ ತಿನ್ನಿಸಿ ಸಂಭ್ರಮಿಸಿದರು.

ಬೆಳೆ ವಿಮೆ ಆಕ್ಷೇಪಣೆ ಸಲ್ಲಿಸಲು ಸೂಚನೆ

◆**ಮೂಡಲಗಿ:** 2024–25ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಫಸಲ ಭೀಮಾ ಯೋಜನೆಯಡಿ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ರೈತರು ತಾವು ಬೆಳೆದ ಬೆಳೆಗಳಿಗೆ ವಿಮೆಮಾಡಿಸಿದ್ದು, ವಿಮಾ ಮಾಡಿಸಿದ ಬೆಳೆಯು ಬೆಳೆ ಸಮೀಕ್ಷೆಯಲ್ಲಿ ನೊಂದಣಿಯಾದ ಬೆಳೆಯೊಂದಿಗೆ ಹೊಂದಾಣಿಕೆಯಾಗದೇ



ವಿಮಾ ಸಂಸ್ಥೆಯವರಿಂದ ಗೋಕಾಕ ತಾಲೂಕಿನಲ್ಲಿ ಮುಂಗಾರು ಹಂಗಾಮಿನಲ್ಲಿ 146, ಹಿಂಗಾರು ಹಂಗಾಮಿನಲ್ಲಿ 4 ಒಟ್ಟು 150 ಪ್ರಸ್ತಾವನೆಗಳು ಹಾಗೂ ಮೂಡಲಗಿ ತಾಲೂಕಿನಲ್ಲಿ ಮುಂಗಾರು ಹಂಗಾಮಿನಲ್ಲಿ 488, ಹಿಂಗಾರು ಹಂಗಾಮಿನಲ್ಲಿ 34 ಒಟ್ಟು 522 ಪ್ರಸ್ತಾವನೆಗಳು ತಿರಸ್ಕೃತಗೊಂಡಿರುತ್ತವೆ. ತಿರಸ್ಕೃತಗೊಂಡ ಅರ್ಜಿಗಳ ಕುರಿತು ರೈತ ಸಂಪರ್ಕ ಕೇಂದ್ರ, ಗೋಕಾಕ, ಅರಬಾವಿ ಮತ್ತು ಕೌಜಲಗಿಗಳಲ್ಲಿ ರೈತರ ಪಟ್ಟಿಯನ್ನು ಲಗತ್ತಿಸಿದ್ದು, ರೈತರು ಏ.16ರ ಒಳಗಾಗಿ ಸೂಕ್ತ ದಾಖಲೆಗಳೊಂದಿಗೆ ರೈತ ಸಂಪರ್ಕ ಕೇಂದ್ರ, ಗೋಕಾಕ/ಅರಬಾವಿ /ಕೌಜಲಗಿ/ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಗೋಕಾಕ/ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಗಳಲ್ಲಿ ಆಕ್ಷೇಪಣೆ ಸಲ್ಲಿಸಬಹುದು ಸಹಾಯಕ ಕೃಷಿ ನಿರ್ದೇಶಕ ಎಂ. ಎಂ. ನದಾಫ್ ತಿಳಿಸಿದ್ದಾರೆ.

ಕಾನೂನು ಕ್ರಮಕ್ಕೆ ಆಗ್ರಹಿಸಿ ಮನವಿ



◆**ಸವದತ್ತಿ:** ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಭಾರತೀಯ ಜನತಾ ಪಕ್ಷದ ಕಾರ್ಯಕರ್ತರನ್ನು ನಡು ರಸ್ತೆಯಲ್ಲಿ ಕೊಲ್ಲಲು ಕರೆನೀಡಿದ್ದನ್ನು ಖಂಡಿಸಿ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ವೃತ್ತ ನಿರೀಕ್ಷರಿಗೆ ಭಾರತೀಯ ಜನತಾ ಪಾರ್ಟಿ ಯುವ ಮೋರ್ಚಾ ಸವದತ್ತಿ ಮಂಡಲ ವತಿಯಿಂದ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಯುವ ಮೋರ್ಚಾ ಮಂಡಲ ಅಧ್ಯಕ್ಷ ಕೃಷ್ಣಮೂರ್ತಿ ತೋರಗಲ್, ಮುಖಂಡರು ಶ್ರೇಯಸ್ ಮಾಮನಿ, ಪುಂಡಲೀಕ ಮಾದರ, ಬಸವರಾಜ ಸಾಲಿಮಠ, ಈರಣ್ಣ ಬೆಣ್ಣಿ, ಗೋವಿಂದ ಅಮತೆ, ರವಿ ರಾಠೋಡ, ಹಣಮಂತ ಪಾಟೀಲ, ಜಿಲ್ಲಾ ಉಪಾಧ್ಯಕ್ಷರಾದ ಆನಂದ ಬಾಗೋಡಿ, ಪ್ರಧಾನ ಕಾರ್ಯದರ್ಶಿ ವಿನೋದ ಪಡಶಾವಗಿ, ಚಿದಂಬರ ಪಾಟೀಲ, ಮಾರುತಿ ಮದುಕರ, ಸದಾನಂದ ದೊಡವಾಡ, ಶಿವು ಶಿಂತ್ರಿ, ಸಂಜಯ ಉಡಕೇರಿ, ಉಮೇಶ್ ಶಿಂಧೋಗಿ, ಅರುಣ ಹಿರೇಮಠ, ನಾಗರಾಜ ಗಡಾದಗೌಡ್ರ ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.



ಕೊಕಟನೂರ: ಗ್ರಾಮದಲ್ಲಿ ಶ್ರೀ ಜ್ಯೋತಿಬಾ ಫುಲೆ ಅವರ ಜನ್ಮದಿನವನ್ನು ಶನಿವಾರ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಮಾಜದ ಅಧ್ಯಕ್ಷ ರಾಜು ತೋಟಗಿ, ಉಪಾಧ್ಯಕ್ಷ ವಿಠ್ಠಲ್ ಕುಮಟಗಿ, ಸದಾಶಿವ ರಬಕವಿ, ಹಣಮಂತ ಬಡಿಗೇರ, ಬಸಪ್ಪ ಆಡಹಳ್ಳಿ, ಲಕ್ಷ್ಮಣ್ ಪಡಸಲಗಿ, ಸುರೇಶ್ ಕುಮಟಗಿ, ಗಂಗಪ್ಪ ರಡಹಟ್ಟಿ, ಅಣ್ಣಪ್ಪ ಪಡಸಲಗಿ, ಅಮಿತ್ ಪಡಸಲಗಿ, ಭೀಮಪ್ಪ ಮಾಳಿ ಸೇರಿದಂತೆ ಹಲವರು ಇದ್ದರು.

ಬೆಳೆ ವಿಮೆ ಆಕ್ಷೇಪಣೆ ಸಲ್ಲಿಸಲು ಅವಕಾಶ

◆**ಯರಗಟ್ಟಿ:** 2024–25 ಸಾಲಿನ ಮುಂಗಾರು ಹಾಗೂ ಹಿಂಗಾರು ಹಂಗಾಮಿನ ಕರ್ನಾಟಕ ರೈತಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ಸಲ್ಲಿಕೆಯಾದ ಅರ್ಜಿಗಳಲ್ಲಿ ಸವದತ್ತಿ ತಾಲೂಕಿನಲ್ಲಿ ಮುಂಗಾರು ಹಂಗಾಮಿನಲ್ಲಿ 949 ಹಾಗೂ ಹಿಂಗಾರು ಹಂಗಾಮಿನಲ್ಲಿ 180 ಅರ್ಜಿಗಳು ಮತ್ತು ಯರಗಟ್ಟಿ ತಾಲೂಕಿನಲ್ಲಿ ಮುಂಗಾರು ಹಂಗಾಮಿನಲ್ಲಿ 163 ಹಾಗೂ ಹಿಂಗಾರು ಹಂಗಾಮಿನಲ್ಲಿ 48 ಹೀಗೆ ಸವದತ್ತಿ ತಾಲೂಕಿನಲ್ಲಿ ಒಟ್ಟು 1129 ಹಾಗೂ ಯರಗಟ್ಟಿ ತಾಲೂಕಿನಲ್ಲಿ ಒಟ್ಟು 211 ಅರ್ಜಿಗಳು ತಿರಸ್ಕೃತ ಗೊಂಡಿರುವುದಾಗಿ ಸಹಾಯಕ ಕೃಷಿ ನಿರ್ದೇಶಕರು, ಸವದತ್ತಿ–ಯರಗಟ್ಟಿ ಶಿವಪ್ರಕಾಶ ಪಾಟೀಲ ತಿಳಿಸಿದ್ದಾರೆ. ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು ತಿರಸ್ಕೃತಗೊಂಡ ಅರ್ಜಿಗಳ ಪಟ್ಟಿಯನ್ನು ಈಗಾಗಲೇ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಸವದತ್ತಿ ಹಾಗೂ ರೈತ ಸಂಪರ್ಕ ಕೇಂದ್ರಗಳಾದ ಸವದತ್ತಿ, ಮುನವಳ್ಳಿ, ಮುರಗೋಡ ಹಾಗೂ ಯರಗಟ್ಟಿ ಕಛೇರಿಗಳಲ್ಲಿ ಪ್ರದರ್ಶಿಸಿದ್ದು ಸದರಿ ಪಟ್ಟಿಯಲ್ಲಿನ ರೈತರಿಗೆ ಯಾವುದೇ ಆಕ್ಷೇಪಣೆಗಳಿದ್ದರೆ ರೈತರು ವಿಮೆ ಮಾಡಿಸಿದ ಬೆಳೆಯನ್ನು ಬೆಳೆದಿರುವ ಕುರಿತು ಸೂಕ್ತ ದಾಖಲೆಗಳಾದ 2024–25 ನೇ ಸಾಲಿನ ಪಹಣಿಯಲ್ಲಿ (ಉತಾರ) ವಿಮೆಗೆ ನೊಂದಾಯಿಸಿದ ಬೆಳೆಯಿದ್ದಲ್ಲಿ ನೀಡುವುದು, ವಿಮೆಗೆ ನೊಂದಾಯಿತ ಬೆಳೆಯ ಉತ್ಪನ್ನವನ್ನು ಎಪಿಎಂಸಿಯಲ್ಲಿ ಮಾರಾಟ ಮಾಡಿದ ರಶೀದಿ, ಕನಿಷ್ಠ ಬೆಂಬಲ ಬೆಲೆ ಯೋಜನೆ ಪಡೆದಿದ್ದಲ್ಲಿ ರಶೀದಿಯೊಂದಿಗೆ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಸವದತ್ತಿ ಅಥವಾ ಸಂಬಂದಿಸಿದ ರೈತ ಸಂಪರ್ಕ ಕೇಂದ್ರಗಳಿಗೆ ಏ.24 ರೊಳಗಾಗಿ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.



ಚಿಕ್ಕೋಡಿ: ತಾಲೂಕಿನ ಬೆಳಕೂಡ ಗ್ರಾಮದ ಲಕ್ಷ್ಮೀದೇವಿ ಜಾತ್ರಾ ಮಹೋತ್ಸವ ನಿಮಿತ್ಯವಾಗಿ ಹಮ್ಮಿಕೊಂಡ ಜಾನುವಾರುಗಳ ಪ್ರದರ್ಶನಕ್ಕೆ ಚಿಕ್ಕೋಡಿ ಪಿಎಸ್‌ಐ ಬಸಗೌಡ ನೇರ್ಲಿ ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಪಿಕೆಪಿಎಸ್ ಅಧ್ಯಕ್ಷ ನಟರಾಜ ಹಿರೇಮಠ, ಚಂದ್ರಶೇಖರ ಅರಬಾಂವಿ, ಬಸವರಾಜ ಪಾಶ್ಚಾಪೂರೆ ಇತರರು ಇದ್ದರು.

ಪ್ರಮಾಣ ವಚನ ಸ್ವೀಕಾರ ಸಮಾರಂಭ | ಸಚಿವೆ ಹೆಬ್ಬಾಳ್ಕರ್ ಹೇಳಿಕೆ

ನರ್ಸಿಂಗ್ ಉದ್ಯೋಗವಲ್ಲ ಸೇವಾ ಧರ್ಮ

◆**ಬೆಳಗಾವಿ :** ನರ್ಸಿಂಗ್ ಎಂದರೆ ಕೇವಲ ಒಂದು ಉದ್ಯೋಗವಲ್ಲ, ಅದು ಒಂದು ಸೇವಾ ಧರ್ಮ. ನರ್ಸ್‌ಗಳು ಹೃದಯ ಶ್ರೀಮಂತರು. ಅವರ ಒಂದು ನಗು, ಒಂದು ಧೈರ್ಯದ ಮಾತು, ಒಂದು ಮಮತೆಯ ಸ್ಪರ್ಶ ರೋಗಿಗೆ ಅರ್ಧ ಔಷಧಿಯಂತೆ ಕೆಲಸ ಮಾಡುತ್ತದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಶನಿವಾರ ಬೆಳಗಾವಿಯ ಬಿಮ್ಸ್ ಕಟ್ಟಡದ ಹೊಸ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸರ್ಕಾರಿ ನರ್ಸಿಂಗ್ ಶಾಲೆಯ 109ನೇ ಬ್ಯಾಚ್ ವಿದ್ಯಾರ್ಥಿಗಳ ಪ್ರೇರಣಾ ಜ್ಯೋತಿ ದೀಪ ಬೆಳಗುವ ಮತ್ತು ಪ್ರಮಾಣ ವಚನ ಸ್ವೀಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿ, ಒಳ್ಳೆಯ ವೃತ್ತಿಯನ್ನು ಆಯ್ದುಕೊಂಡಿದ್ದೀರಿ. ಉತ್ತಮ ರೀತಿಯಲ್ಲಿ ಕಲಿತು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿ, ಒಬ್ಬ ಸಹೋದರಿಯಾಗಿ, ಒಬ್ಬ ತಾಯಿಯಾಗಿ, ಒಬ್ಬ ಮಗಳಾಗಿ ಜೀವನ ಪೂರ್ತಿ ಸೇವೆ ಮಾಡಿ. ನರ್ಸ್‌ಗಳು ನೀಡುವ ಸೇವೆ ಕೇವಲ ಒಬ್ಬ ವ್ಯಕ್ತಿಗೆ ಅಲ್ಲ, ಒಂದು ಕುಟುಂಬಕ್ಕೆ, ಒಂದು ಸಮಾಜಕ್ಕೆ. ಒಬ್ಬ ವೈದ್ಯರು ರೋಗಿಗೆ ಚಿಕಿತ್ಸೆ ಕೊಡಬಹುದು. ಆದರೆ ಒಬ್ಬ ನರ್ಸ್ ರೋಗಿಯ ಮನಸ್ಸನ್ನು ಗುಣಪಡಿಸುತ್ತಾಳೆ. ವೈದ್ಯ ಕೆಲವೇ ನಿಮಿಷ ಬಂದು ಚಿಕಿತ್ಸೆ ನೀಡಿ ಹೋಗಬಹುದು. ಆದರೆ ನರ್ಸ್ ರೋಗಿಯ ಜೊತೆಗೇ ಇದ್ದು ಧೈರ್ಯ ತುಂಬುತ್ತಾಳೆ. ಇಡೀ ಕುಟುಂಬಕ್ಕೆ ಸಾಂತ್ವನದ ಮಾತುಗಳನ್ನಾಡುತ್ತಾಳೆ. ಅವಳ ಮಾತೇ ರೋಗಿಯನ್ನು ಅರ್ಧ ಗುಣಪಡಿಸುತ್ತದೆ. ಅವರ ನಿಸ್ವಾರ್ಥ ಸೇವೆಗೆ ಬೆಲೆ ಕಟ್ಟಲಾಗದು ಎಂದು ಹೇಳಿದರು.



▸ ಸರ್ಕಾರಿ ನರ್ಸಿಂಗ್ ಶಾಲೆಯ 109ನೇ ಬ್ಯಾಚ್ ವಿದ್ಯಾರ್ಥಿಗಳ ಪ್ರಮಾಣ ವಚನ ಸ್ವೀಕಾರ ಸಮಾರಂಭ

ಇಂದು ನೀವು ತೆಗೆದುಕೊಳ್ಳುತ್ತಿರುವ ಪ್ರಮಾಣ ವಚನ ಕೇವಲ ಪದಗಳಲ್ಲ, ನಿಮ್ಮ ಜೀವನದ ಮೌಲ್ಯಗಳಾಗಬೇಕು. ನಿಮ್ಮ ಕೈಗಳಲ್ಲಿ ಜೀವಗಳಿವೆ, ನಿಮ್ಮ ಹೃದಯದಲ್ಲಿ ಕರುಣೆ ಇರಬೇಕು, ನಿಮ್ಮ ಮನಸ್ಸಿನಲ್ಲಿ ಶಿಸ್ತು ಇರಬೇಕು. ಈ ಮೂರು ಇದ್ದರೆ ನೀವು ಯಾವತ್ತೂ ಸೋಲುವುದಿಲ್ಲ, ನಿಮ್ಮ ಸೇವೆ ದೇವರ ಸೇವೆಗಿಂತ ಕಡಿಮೆಯಲ್ಲ, ನಿಮ್ಮ ಕೈಗಳು ಒಬ್ಬ ತಾಯಿಯ ಮಮತೆಯನ್ನು ಹೊಂದಿರಬೇಕು ಎಂದರು.

ಬೆಳಗಾವಿಯ ಈ ಮಹಾನ್ ಸಂಸ್ಥೆ ನೂರು ವರ್ಷಗಳಿಗಿಂತ ಹೆಚ್ಚು ಇತಿಹಾಸ ಹೊಂದಿದೆ. ರಾಜ್ಯದಲ್ಲೇ ಎರಡನೇ ಸ್ಥಾನದಲ್ಲಿದೆ. ಮುಂದಿನ ವರ್ಷ ಮೊದಲ ಸ್ಥಾನಕ್ಕೇರಲಿ. ದೇಶದಲ್ಲಿ 38ನೇ ಸ್ಥಾನದಲ್ಲಿದೆ, ಮುಂದಿನ ವರ್ಷ 10ರೊಳಗಿನ ಸ್ಥಾನಕ್ಕೆ ಬರಲಿ. ನಿಮ್ಮನ್ನೆಲ್ಲ ನೋಡಿದಾಗ ಖಂಡಿತ ಸಾಧ್ಯ ಎನಿಸುತ್ತಿದೆ. ಕಾಲೇಜಿಗೆ ಅಗತ್ಯ ಕಟ್ಟಡ ಹಾಗೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ವೈದ್ಯಕೀಯ ಶಿಕ್ಷಣ ಇಲಾಖೆಯ ವೈದ್ಯಕೀಯ ನಿರ್ದೇಶಕಿ ಡಾ. ಬಿ.ಎಲ್ ಸುಜಾತಾ ರಾಥೋಡ್, ಬಿಮ್ಸ್ ಡೀನ್ ಮತ್ತು ನಿರ್ದೇಶಕ ಡಾ. ಅಶೋಕಕುಮಾರ್ ಶೆಟ್ಟಿ, ಮಡಿವಾಳಪ್ಪ ಎನ್., ಡಾ. ಸಂಜಯ ಪಿರಾಪೂರ್, ಶಿಲ್ಪಾ ವಾಲಿ, ಡಾ. ಉಮೇಶ್ ಕುಲಕರ್ಣಿ, ಡಾ. ಈರಣ್ಣ ಪಲ್ಲೇದ್, ಡಾ. ಜಗದೀಶ್ ಗಾಣಿಗಿ, ಉಷಾ ಭಂಡಾರಿ, ಡಾ.ಪ್ರಕಾಶ್ ಕೊಡ್ಲಿ ಸೇರಿದಂತೆ ಬಿಮ್ಸ್ ಸಿಬ್ಬಂದಿ ಉಪಸ್ಥಿತರಿದ್ದರು.

ಪ್ರತಿಯೊಬ್ಬ ಭಾರತೀಯನ ಆಶಾಕಿರಣ ಅಂಬೇಡ್ಕರ್: ಹೆಬ್ಬಾಳ್ಕರ್

◆**ಬೆಳಗಾವಿ:** ಮಹಿಳೆಯರ ಸಬಲೀಕರಣ, ಮಕ್ಕಳ ಶಿಕ್ಷಣ, ಎಲ್ಲರಿಗೂ ಗುಣಮಟ್ಟದ ಬದುಕು ಇವು ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರ ಉದ್ದೇಶವಾಗಿತ್ತು. ಅವರು ಕೇವಲ ಒಬ್ಬ ನಾಯಕ ಅಲ್ಲ, ಅವರು ಒಂದು ಶಕ್ತಿ, ಅವರು ಒಂದು ಚಳವಳಿ. ಪ್ರತಿಯೊಬ್ಬ ಭಾರತೀಯನ ಆಶಾಕಿರಣ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.

ಶನಿವಾರ, ಬೆಳವಟ್ಟಿ ಗ್ರಾಮದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರ ನೂತನ ಮೂರ್ತಿ ಅನಾವರಣಗೊಳಿಸಿ ಮಾತನಾಡಿ, ಉದ್ಘಾಟಿಸಿದ್ದು ಕೇವಲ ಡಾ.ಬಾಬಾಸಾಹೇಬ ಅಂಬೇಡ್ಕರ್ ಮೂರ್ತಿಯಲ್ಲ, ಅದೊಂದು ಶಕ್ತಿ, ಸರ್ವ ಭಾಷೆ, ಸರ್ವ ಜಾತಿ ಎಲ್ಲರಿಗೂ ಸಮಾನ ಅವಕಾಶ, ಸಮಾನ ಹಕ್ಕು ನೀಡಿದ, ವಿಶ್ವದಲ್ಲೇ ಶ್ರೇಷ್ಠ ಸಂವಿಧಾನ ನೀಡಿದ್ದು ವಿಶ್ವ ರತ್ನ ಅಂಬೇಡ್ಕರ್ ಅವರು. ಮಹಿಳೆಯರಿಗೆ ಅಧಿಕಾರದ ಅವಕಾಶ ನೀಡಿದ್ದು ಅವರು ನೀಡಿದ ಸಂವಿಧಾನ. ನಾವೆಲ್ಲ ಅವರ ಜೀವನ ಆದರ್ಶಗಳನ್ನು ಪಾಲಿಸಬೇಕು ಎಂದು ಹೇಳಿದರು.

ಈ ಮತ್ತಳಿ ಪ್ರತಿದಿನ ನಮಗೆ ನಾವು ಸಮಾನತೆಯ ಸಮಾಜ ನಿರ್ಮಿಸಬೇಕೆಂದು, ನಾವು ಅಂಬೇಡ್ಕರ್ ಅವರ ಕನಸುಗಳನ್ನು ಸಾಕಾರಗೊಳಿಸಬೇಕೆಂದು ನೆನಪಿಸಬೇಕು. ನನ್ನ ಬೆಳಗಾವಿ ಗ್ರಾಮೀಣ ಕ್ಷೇತ್ರದಲ್ಲಿ ಪ್ರತಿ ಗ್ರಾಮದಲ್ಲೂ ಅಭಿವೃದ್ಧಿ ಜೊತೆಗೆ ಸಾಮಾಜಿಕ ನ್ಯಾಯ ಮತ್ತು ಸಮಾನತೆ ತರಬೇಕೆಂಬುದು ನನ್ನ ಬದ್ಧತೆ. ಜಾತಿ, ಧರ್ಮ, ಭೇದಭಾವಗಳನ್ನು ಮೀರಿ ಒಗ್ಗಟ್ಟಿನ ಸಮಾಜ ನಿರ್ಮಿಸೋಣ, ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡೋಣ, ನಮ್ಮ ಯುವಕರಿಗೆ ಉತ್ತಮ ಭವಿಷ್ಯ ನಿರ್ಮಿಸೋಣ, ಅದೇ ಅಂಬೇಡ್ಕರ್ ಅವರಿಗೆ ನಿಜವಾದ ಗೌರವ ಎಂದರು.

ಈ ವೇಳೆ ಯುವರಾಜ ಕದಂ, ಬಾಳು ದೇಸೂರಕರ, ಮಲ್ಲೇಶ ಚೌಗಲೆ, ಮನೋಹರ ಬೆಳಗಾಂವ್ಕರ್, ಮಹೇಶ ಕೊಲಕಾರ, ವಾಯ್.ಪಿ.ನಾಯಿಕ್, ಡಿ.ಎನ್.ದೇಸಾಯಿ, ನಾರಾಯಣ ನಲವಡೆ, ಮಧು ನಲವಡೆ, ಸಂತೋಷ ಕಾಂಬಳೆ, ದಸ್ತಗೀರ್ ಮಲಿಕಾರ, ಸುಧಾಕರ ಭೌದ್, ಜಯವಂತ ಬಾಳೆಕುಂದ್ರಿ, ಮಧುಕರ ಜಾಧವ್, ಬಿ.ಬಿ. ದೇಸಾಯಿ, ಭುಜಂಗ ಗಾಡೇಕರರೇಖಾ ನಾಯಿಕ, ಗೌತಮ ಪಾಟೀಲ, ಸಾತೇರಿ ಚೌಗುಲೆ ಇದ್ದರು.



ಅಸಮಾನತೆಯ ಕತ್ತಲೆಗೆ ಜ್ಞಾನದ ಬೆಳಕಾದ ಜ್ಯೋತಿಬಾ

◆**ತೆಲಸಂಗ:** 19ನೇ ಶತಮಾನದಲ್ಲಿ ಸಮಾಜವು ಅನಿಷ್ಟ ಪದ್ಧತಿಗಳು, ಅಸ್ಪೃಶ್ಯತೆ ಮತ್ತು ಅಜ್ಞಾನದ ಕತ್ತಲಲ್ಲಿ ಮುಳುಗಿದ್ದಾಗ ಜ್ಯೋತಿಬಾ ಫುಲೆಯವರು ಜ್ಞಾನದ ದೀಪವನ್ನು ಹಚ್ಚಿದರು ಎಂದು ಯುವ ಮುಖಂಡ ಧರೆಪ್ಪಾ ಮಾಳಿ ಹೇಳಿದರು.

ಗ್ರಾಮದ ಜೋತಿಬಾ ಫುಲೆ ವೃತ್ತದಲ್ಲಿ ಮಹಾತ್ಮ ಜ್ಯೋತಿಬಾ ಫುಲೆ ಅವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಜ್ಯೋತಿಬಾ ಫುಲೆ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ವಿದ್ಯೆ ಇಲ್ಲದೆ ಮತಿ ಹೋಯಿತು, ಮತಿ ಇಲ್ಲದೆ ನೀತಿ ಹೋಯಿತು, ನೀತಿ ಇಲ್ಲದೆ ಗತಿ ಹೋಯಿತು ಎಂಬ ಅವರ ಮಾತುಗಳು ಇಂದಿಗೂ ಸಾರ್ವಕಾಲಿಕ ಸತ್ಯ ಎಂದರು.

ಫುಲೆಯವರು ಕಂಡ ದೊಡ್ಡ ಕನಸೆಂದರೆ ಮಹಿಳೆಯರ ಏಳಿಗೆ. ಅಂದು ಹೆಣ್ಣು ಮಕ್ಕಳಿಗೆ ಶಿಕ್ಷಣ ನಿಷೇಧವಾಗಿದ್ದ ಕಾಲದಲ್ಲಿ ಮೊಟ್ಟಮೊದಲ ಬಾರಿಗೆ ತಮ್ಮ ಪತ್ನಿ ಸಾವಿತ್ರಿಬಾಯಿ ಫುಲೆ ಅವರಿಗೆ ಅಕ್ಷರ ಕಲಿಸಿ, ಸಮಾಜದ ವಿರೋಧದ ನಡುವೆಯೂ ಹೆಣ್ಣು ಮಕ್ಕಳಿಗಾಗಿ ಶಾಲೆ ತೆರೆದರು. ಅದು ಕೇವಲ ಶಾಲೆಯಾಗಿರಲಿಲ್ಲ, ಬದಲಿಗೆ ಸಮಾನತೆಯ ದೇಗುಲವಾಗಿತ್ತು. ಜಾತಿ ಪದ್ಧತಿಯ ಸಂಕೋಲೆಗಳನ್ನು ಮುರಿಯಲು ಅವರು ಸತ್ಯಶೋಧಕ ಸಮಾಜವನ್ನು ಸ್ಥಾಪಿಸಿದರು. ಪ್ರತಿಯೊಬ್ಬ ಮನುಷ್ಯನೂ ಸಮಾನ, ಪ್ರತಿಯೊಬ್ಬರಿಗೂ ಗೌರವದಿಂದ ಬದುಕುವ ಹಕ್ಕಿದೆ ಎಂದು ಸಾರಿದವರು ಎಂದರು.

ಬಾಯಾರಿದ ದಲಿತರಿಗೆ ತಮ್ಮ ಮನೆಯ ನೀರಿನ ಟ್ಯಾಂಕನ್ನು ತೆರೆದುಕೊಡುವ ಮೂಲಕ ಅವರು ಮಾನವೀಯತೆಯ ದೊಡ್ಡ ಸಂದೇಶ ಸಾರಿದರು. ಇಂದು ನಾವು ಫುಲೆಯವರ ಜಯಂತಿಯನ್ನು ಕೇವಲ ಆಚರಣೆಗೆ ಸೀಮಿತಗೊಳಿಸಬಾರದು. ಅವರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು: ಶಿಕ್ಷಣ ಜ್ಞಾನವೊಂದೇ ನಮ್ಮನ್ನು ಎಲ್ಲಾ ಗುಲಾಮಗಿರಿಯಿಂದ ಮುಕ್ತಗೊಳಿಸುತ್ತದೆ. ಹೀಗಾಗಿ ಅವರ ತತ್ವಗಳನ್ನು ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಆನಂದ ಥೈಕಾರ, ಶೇಖರ ಕನ್ನೂರ, ಸುಭಾಷ್ ಖೊಬ್ರಿ, ಸುರೇಶ ಖೋಳಂಬಿ, ಸಿದ್ದಪ್ಪ ನಿಡೋಣಿ, ಸಿದ್ದರಾಯ ಕಳಸಿಕೊಂಡ, ಬಾಲಕೃಷ್ಣ ಬಡಿಗೇರ, ಬಾಳಪ್ಪ ಸಿಂಧೆ ಸೇರಿದಂತೆ ಗ್ರಾಮದ ಹಿರಿಯರು ಹಾಗೂ ಅನೇಕ ಯುವಕರು ಪಾಲ್ಗೊಂಡಿದ್ದರು.



ಪ್ರತಿಭೆ ಸೂಕ್ತ ಸಮಯಕ್ಕೆ ಬಳಕೆಯಾಗಲಿ

◆**ರಾಯಬಾಗ:** ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿ ಅಡುಗಿರುವ ಕೌಶಲ್ಯ, ಕಲೆಯನ್ನು ಸೂಕ್ತ ಸಮಯಕ್ಕೆ ಬಳಕೆಯಾದಾಗ ಮಾತ್ರ ಜೀವನದಲ್ಲಿ ಬದಲಾವಣೆಯ ಹಂತವನ್ನು ಕಾಣುತ್ತೇವೆ ಎಂದು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ರಸಾಯನ ಶಾಸ್ತ್ರದ ಮುಖ್ಯಸ್ಥ ಅನಂತ ಅಥಣಿ ಹೇಳಿದರು.

ಶುಕ್ರವಾರ ರಾಯಬಾಗ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬಿಳ್ಕೊಡುವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು,ಗ್ರಾಮೀಣ ಭಾಗದಲ್ಲಿರುವ ಈ ತಾಂತ್ರಿಕ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಒಳ್ಳೆಯ ಶಿಕ್ಷಣ ಪಡೆದುಕೊಂಡು ಉನ್ನತ ಸಾಧನೆ ಮಾಡಬೇಕೆಂದರು.

ಕಾಲೇಜ್ ಆಡಳಿತಮಂಡಳಿ ನಿರ್ದೇಶಿಕ ಎಸ್.ಆರ್.ನೇರ್ಲಿಕರ ಮಾತನಾಡಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣ ದೊರಕಬೇಕೆಂಬ ಉದ್ದೇಶದಿಂದ 1984ರಲ್ಲಿ ಶಿಕ್ಷಣ ಪ್ರೇಮಿ ವಸಂತರಾವ ಪಾಟೀಲರವರು ಈ ಕಾಲೇಜ ಪ್ರಾರಂಭಿಸಿ ಲಕ್ಷಾಂತರ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದ್ದಾರೆ. ಪ್ರತಿಯೊಬ್ಬ ವಿದ್ಯಾರ್ಥಿ ಜೀವನದಲ್ಲಿ ಜ್ಞಾನದ ಬೆಳಕನ್ನು ಪಡೆದುಕೊಂಡು ತಮ್ಮ ವೃತ್ತಿ ಜೀವನವನ್ನು ಸುಧಾರಿಸಿಕೊಳ್ಳಬೇಕೆಂದರು.



ರೇಣುಕಾ ಶುಗರ್ಸ ಜನರಲ್ ಮ್ಯಾನೇಜರ್ ಸಂಗಮನಾಥ ಜಮಾದಾರ, ಎ.ಜಿ.ಎಮ್.ಎಚ್.ಆರ್. ಸಂಜಯ ಕಿಲ್ಲೇದಾರ, ಕೇನ್ ಮ್ಯಾನೇಜರ್ ವಿರೂಪಾಕ್ಷ ಕರಲಿಂಗನ್ನವರ, ಪ್ರಾಚಾರ್ಯ ಬಿ.ಎಸ್.ದಡ್ಡಿ, ಸಾಂಸ್ಕೃತಿಕ ಅಧ್ಯಕ್ಷ ಮಲ್ಲಿಕಾರ್ಜುನ ಚೇಡರ ಹಾಗೂ ಕಾಲೇಜ್ ಉಪನ್ಯಾಸಕರು ಮತ್ತು ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು. ಉಪನ್ಯಾಸಕ ರಾಜನ ಅನ್ವೇಕರ ಸ್ವಾಗತಿಸಿದರು, ಉಪನ್ಯಾಸಕ ಚಂದ್ರಕಾಂತ ಒಡೆಯರ ನಿರೂಪಿಸಿದರು.

ಗ್ಯಾರಂಟಿಗಳಿಂದ ಯಾವುದೇ ಅಭಿವೃದ್ಧಿ ಕಾರ್ಯ ನಿಂತಿಲ್ಲ: ಸತೀಶ ಜಾರಕಿಹೊಳಿ

◆**ಸಂಕೇಶ್ವರ :** ಶಾಸಕ ನಿಖಿಲ್ ಕತ್ತಿ ಅವರಿಗೆ ಹುಕ್ಕೇರಿ ಕ್ಷೇತ್ರದ ರಸ್ತೆ ಸೇರಿದಂತೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಬಹುದು ಆದರೆ ಅವರಿಗೆ ಇಚ್ಛಾಶಕ್ತಿ ಇಲ್ಲ ಎಂದು ಸಚಿವ ಸತೀಶ ಜಾರಕಿಹೋಳಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಪತ್ರಿಕಾಗೋಷ್ಠಿಯಲ್ಲಿ ಸಂಕೇಶ್ವರದಲ್ಲಿನ ಹದಗೆಟ್ಟ ರಸ್ತೆಗಳ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಬಿಜೆಪಿ ಸರ್ಕಾರ ಇದ್ದಾಗ ನಾವು ಯಮಕನಮರಡಿ ಕ್ಷೇತ್ರದಲ್ಲಿನ ರಸ್ತೆಗಳನ್ನು ಅಭಿವೃದ್ಧಿ ಮಾಡಿದ್ದೇವೆ ಎಂದರು. ಗ್ಯಾರಂಟಿ ಯೋಜನೆಗಳಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ನಿಂತಿಲ್ಲ, ಸರಕಾರ ಯಾವುದೇ ಇರಲಿ, ಕ್ಷೇತ್ರ ಅಭಿವೃದ್ಧಿ ಪಡಿಸುವ ಇಚ್ಛಾಶಕ್ತಿ ಮುಖ್ಯವಾದದ್ದು,

ಸಂಕೇಶ್ವರದಲ್ಲಿ ಕುಳಿತು ಬೆಂಗಳೂರಿನ ಕಡೆ ಬೊಟ್ಟು ಮಾಡಿದರೆ ಸರಿಯಲ್ಲ, ಕ್ಷೇತ್ರದ ಅಭಿವೃದ್ಧಿಗಾಗಿ ಪರಿಶ್ರಮ ಮತ್ತು ಇಚ್ಛಾ ಶಕ್ತಿ ಮುಖ್ಯವಾದದ್ದು, ಸರಕಾರದ ಮೇಲೆ ಆರೋಪ ಮಾಡುವುದು ಸರಿಯಲ್ಲ ಎಂದರು.



ಈ ಸಂಧರ್ಭದಲ್ಲಿ ಹಿರಿಯರಾದ ಅಪ್ಪಾಸಾಹೇಬ್ ಶಿರಕೋಳಿ, ಸಂಕೇಶ್ವರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಂತೋಷ ಮುಡಶಿ, ಮುಖಂಡರಾದ ಶ್ರೀಕಾಂತ ಹತನೂರೆ, ಬಸನಗೌಡ ಪಾಟೀಲ, ದಿಲೀಪ್ ಹೊಸಮನಿ, ಡಾ! ಜಯಪ್ರಕಾಶ ಕರಜಗಿ, ವಿಕ್ರಮ ಕರನಿಂಗ, ಶಂಕರರಾವ ಹೆಗಡೆ, ಅವಿನಾಶ ನಲವಡೆ, ಬಸವರಾಜ ಕೋಳಿ, ಮಹೇಶ ಹಟ್ಟಿವಳಿ ಸೇರಿದಂತೆ ಅನೇಕರು ಹಾಜರಿದ್ದರು.

ಅಪ್ರಾಪ್ತ ಬಾಲಕಿಗೆ ಕಿರುಕುಳ ಆರೋಪಿಗೆ 3 ವರ್ಷ ಜೈಲು ಶಿಕ್ಷೆ

◆**ಬೈಲಹೊಂಗಲ:** ಅಪ್ರಾಪ್ತ ವಯಸ್ಸಿನ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಿಗೆ ಬೆಳಗಾವಿಯ ಜಿಲ್ಲಾ ಪೋಕ್ಸೋ ನ್ಯಾಯಾಲಯವು 3 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿದೆ.

ಬೈಲಹೊಂಗಲ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ಪ್ರಕಾರ, ಆರೋಪಿಯಾದ ಪ್ರದೀಪ ನಂದೇಶ ಅಲಿಯಾಸ್ ನಂದು ಬಂಡಿವಡ್ಡರ (23), ನಂದೇಮ್ಮಾ ನಗರ, ಬೈಲಹೊಂಗಲ ನಿವಾಸಿ, 2024ರ ಡಿಸೆಂಬರ್ 30ರಂದು ಶಾಲೆಗೆ ತೆರಳುತ್ತಿದ್ದ ಬಾಲಕಿಯನ್ನು ಹಿಂಬಾಲಿಸಿ ಕಿರುಕುಳ ನೀಡಿದ್ದನು. ಜೊತೆಗೆ ಅವಳೊಂದಿಗೆ ಅಸಭ್ಯವಾಗಿ ವರ್ತಿಸಿ ಬೆದರಿಕೆ ಹಾಕಿದ ಆರೋಪವೂ ಇದ್ದು, ಪ್ರಕರಣ ದಾಖಲಾಗಿತ್ತು. ತನಿಖೆಯನ್ನು ಎಫ್‌ಎಸ್‌ಐ ಎಫ್. ವೈ. ಮಲ್ಲೂರು ಹಾಗೂ ಪಿಎಸ್‌ಐ ಗುರುರಾಜ ಕಲಬುರಗಿ ಅವರು ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಸಿ.ಎಂ.ಪುಷ್ಪಲತಾ ಅವರು 10 ಸಾಕ್ಷಿಗಳು ಹಾಗೂ 13 ದಾಖಲೆಗಳ ಆಧಾರದ ಮೇಲೆ ಆರೋಪ ಸಾಬೀತಾಗಿದೆ ಎಂದು ತೀರ್ಪು ನೀಡಿದರು. ಅದರಂತೆ ಆರೋಪಿಗೆ 3 ವರ್ಷಗಳ ಜೈಲು ಶಿಕ್ಷೆ ಮತ್ತು ರೂ.10,000 ದಂಡ ವಿಧಿಸಲಾಯಿತು. ಇದೇ ವೇಳೆ, ನೊಂದ ಬಾಲಕಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ರೂ.1 ಲಕ್ಷ ಪರಿಹಾರ ನೀಡುವಂತೆ ನ್ಯಾಯಾಲಯ ಆದೇಶಿಸಿದೆ. ಈ ಪರಿಹಾರ ಮೊತ್ತವನ್ನು 5 ವರ್ಷ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಠೇವಣಿಯಾಗಿ ಇಡಲು ಸೂಚಿಸಲಾಗಿದೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ ಎಲ್.ವಿ.ಪಾಟೀಲ ಅವರು ವಾದ ಮಂಡಿಸಿದರು.

ಕ್ರೀಡೆಗಳಲ್ಲಿ ಪಾಲ್ಗೊಳ್ಳಿ : ಮಹಾಂತೇಶ



◆**ನೇಸರಗಿ:** ಮೊದಲು ಗ್ರಾಮೀಣ ಮಟ್ಟದಲ್ಲಿ, ರಾಜ್ಯ, ದೇಶಿಯ ಮಟ್ಟದ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಯುವಕ, ಯುವತಿಯರು ಅನೇಕ ಕ್ರೀಡೆಗಳಲ್ಲಿ ಪಾಲ್ಗೊಂಡು ಉಜ್ವಲ ಭವಿಷ್ಯ ರೂಪಿಸಿಕೊಳ್ಳಿ ಎಂದು ಮಾಜಿ ಶಾಸಕ ಹಾಗೂ ಬಿಡಿಸಿಸಿ ಬ್ಯಾಂಕ ನಿರ್ದೇಶಕ ಮಹಾಂತೇಶ ದೊಡ್ಡಗೌಡರ ಹೇಳಿದರು.

ಅವರ ಇಲ್ಲಿಗೆ ಸಮೀಪದ ಮದನಬಾವಿಯ ಶ್ರೀ ಗ್ರಾಮದೇವತೆ ಜಾತ್ರಾ ಮಹೋತ್ಸವದ ಅಂಗವಾಗಿ ಗ್ರಾಮದ ಮಹಾಂತೇಶ ದೊಡ್ಡಗೌಡರ ಅಭಿಮಾನಿಗಳು ಆಯೋಜನೆ ಮಾಡಿದ್ದ ಗ್ರಾಮೀಣ ಮಟ್ಟದ ಹೊನಲು ಬೆಳಕಿನ ವ್ಹಾಲಿಬಾಲ್ ಪಂದ್ಯಾವಳಿ ಉದ್ಘಾಟನೆ ನೆರವೇರಿಸಿ ಮಾತನಾಡಿ, ಜಾತ್ರಾ ಸಮಯದಲ್ಲಿ ಇಂತಹ ಪಂದ್ಯಾವಳಿಗಳನ್ನು ಮದನಬಾವಿ ಗ್ರಾಮದ ಯುವಕರು ಆಯೋಜನೆ ಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಶಿವಪ್ಪ ಗುಜನಾಳ, ಯಲ್ಲನಗೌಡ ದೊಡ್ಡಗೌಡರ, ಅಜ್ಜಪ್ಪ ಹುಮ್ಮಿಸಿ, ಈರನಗೌಡ ದೊಡ್ಡಗೌಡರ, ಚನಗೌಡ ಹಾದಿಮನಿ, ಬಸವರಾಜ ಬಂದ್ರಿ, ಸೋಮಪ್ಪ ಕೊಳದೂರ, ಅಣ್ಣಯ್ಯ ನಂಜರಗಿ ಸೇರಿದಂತೆ ಗ್ರಾಮದ ಹಿರಿಯರು, ಗ್ರಾಮಸ್ಥರು, ಶ್ರೀ ಮಹಾಂತೇಶ ದೊಡ್ಡಗೌಡರ ಅಭಿಮಾನಿ ಬಳಗದ ಸದಸ್ಯರು, ವ್ಹಾಲಿಬಾಲ್ ಆಟಗಾರರು ಭಾಗವಹಿಸಿದ್ದರು.

ರಸಗೊಬ್ಬರ ಕೊರತೆಯಾಗದಂತೆ ಕ್ರಮ ವಹಿಸಿ

◆**ಗೋಕಾಕ:** ಕೃಷಿ ಇಲಾಖೆಯವರು ಶುಕ್ರವಾರ ನಗರದ ತಾಲೂಕ ಪಂಚಾಯತ ಸಭಾ ಭವನದಲ್ಲಿ ಆಯೋಜಿಸಿದ್ದ ಗೋಕಾಕ ಹಾಗೂ ಮೂಡಲಗಿ ತಾಲೂಕುಗಳ ಕೃಷಿ ಪರಿಕರಗಳ ಮಾರಾಟಗಾರರ ಸಭೆಯನ್ನು ಡಿಸಿಸಿ ಬ್ಯಾಂಕ್ ನಿರ್ದೇಶಕ ಅಮರನಾಥ ಜಾರಕಿಹೊಳಿ ಉದ್ಘಾಟಿಸಿ ರೈತರಿಗೆ ರಸಗೊಬ್ಬರ ಕೊರತೆಯಾಗದಂತೆ ವ್ಯಾಪಾರಸ್ಥರು ಪೂರೈಕೆ ಮಾಡುವಂತೆ ಹೇಳಿದರು. ಬೆಳಗಾವಿ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕ ಎಚ್.ಡಿ. ಕೋಳೇಕರ ಮಾತನಾಡಿ, ಜಿಲ್ಲೆಯಲ್ಲಿ ರಸಗೊಬ್ಬರವನ್ನು ಮಾರಾಟಗಾರರು ಅಕ್ರಮವಾಗಿ ಮಾರಿದರೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲಾಗುವದೆಂದರು. ಚಿಕ್ಕೋಡಿ ಉಪ ವಿಭಾಗದ ಉಪಕೃಷಿ ನಿರ್ದೇಶಕ ಸಹದೇವ ಯರಗೊಪ್ಪನವರ ಮಾತನಾಡಿ, ಹೆಚ್ಚಿನ ಯೂರಿಯಾ ಬಳಕೆಯಿಂದ ಭೂಮಿಯ ಆರೋಗ್ಯ ಕ್ಷೀಣಿಸಿ ಇಳುವರಿಯಲ್ಲಿ ಗಣನೀಯವಾಗಿ ಕಡಿಮೆಯಾಗುತ್ತದೆ. ಮನುಷ್ಯರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ. ರೈತರಿಗೆ ಯೂರಿಯಾ ಕಡಿಮೆ ಉಪಯೋಗ ಮಾಡುವಂತೆ ಮಾರಾಟಗಾರರು ಸಲಹೆ ನೀಡಲು ತಿಳಿಸಿದರು. ಈ ಸಂದರ್ಭದಲ್ಲಿ ಸಹಾಯಕ ಕೃಷಿ ನಿರ್ದೇಶಕ ಎಂ.ಎಂ. ನದಾಫ, ಸಿ.ಐ. ಹೂಗಾರ, ಟಿ.ಆರ್. ಕಾಗಲ, ತೋಟಗಾರಿಕೆ ಸಹಾಯಕ ನಿರ್ದೇಶಕ ಎಂ.ಎಲ್. ಜನ್ಮಟ್ಟಿ, ಜುವಾರಿ ಕಂಪನಿ ಪ್ರತಿನಿಧಿ ಕೃಷ್ಣಾ ಕುಲಕರ್ಣಿ, ಇಫ್ಕೋ ಸಂಸ್ಥೆಯ ನಿಖಿಲ ಗೌಡ ಇದ್ದರು.



ಚನ್ನಗೌಡರ ಅಂತಿಮ ದರ್ಶನ ಪಡೆದ ಸಚಿವ ಸತೀಶ ಜಾರಕಿಹೊಳಿ

◆**ಬೆಳಗಾವಿ :** ಜಿಲ್ಲೆಯ ಹುಕ್ಕೇರಿ ತಾಲೂಕಿನ ಸಹಕಾರಿ ರಂಗದ ಹಿರಿಯ ಧುರೀಣ ಹಾಗೂ ಮುಖಂಡರಾಗಿದ್ದ ಬಸ್ತವಾಡ ಗ್ರಾಮದ ಚನ್ನಗೌಡ ಬಸನಗೌಡಾ ಪಾಟೀಲ ಅವರ ಮೃತ ದೇಹಕ್ಕೆ ಸಚಿವ ಸತೀಶ ಜಾರಕಿಹೊಳಿ ಅವರು ಮಾಲಾರ್ಪಣೆ ಮಾಡಿ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು, ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.



ಬಳಿತ ಮಾತನಾಡಿದ ಸಚಿವರು, ಹುಕ್ಕೇರಿ ತಾಲೂಕಿನ ಸಹಕಾರಿ ರಂಗದ ಅಪ್ರತಿಮ ನಾಯಕ, ಬಸ್ತವಾಡ ಗ್ರಾಮದ ಹಿರಿಯ ಮುತ್ಸದ್ದಿ ಚನ್ನಗೌಡ ಬಸನಗೌಡಾ ಪಾಟೀಲ ಅವರ ಅಗಲಿಕೆ ನಿಜಕ್ಕೂ ತುಂಬಲಾರದ ನಷ್ಟವಾಗಿದೆ. ಅಲ್ಲದೇ ಸಹಕಾರಿ ಕ್ಷೇತ್ರದಲ್ಲಿ ಚನ್ನಗೌಡರು ಸಲ್ಲಿಸಿದ ಸೇವೆ ಮತ್ತು ಅವರ ಸರಳ ವ್ಯಕ್ತಿತ್ವವನ್ನು ಈ ಸಂದರ್ಭದಲ್ಲಿ ಸ್ಮರಿಸಿದರು. ಚನ್ನಗೌಡರ ಅವರ ಅಗಲಿಕೆಯಿಂದ ಹುಕ್ಕೇರಿ ತಾಲೂಕು ಮತ್ತು ಸಹಕಾರಿ ಕ್ಷೇತ್ರ ಒಬ್ಬ ದಕ್ಷ ಮಾರ್ಗದರ್ಶಕನನ್ನು ಕಳೆದುಕೊಂಡಂತಾಗಿದೆ. ಪಾಟೀಲ ಕುಟುಂಬಸ್ಥರಿಗೆ ಮತ್ತು ಅವರ ಅಭಿಮಾನಿಗಳಿಗೆ ಈ ನೋವನ್ನು ಭರಿಸುವ ಶಕ್ತಿ ಆ ಭಗವಂತ ನೀಡಲಿ ಎಂದು ಹೇಳಿದರು. ಈ ಸಂದರ್ಭದಲ್ಲಿ ಹುಕ್ಕೇರಿ ಕ್ಷೇತ್ರದ ಗಣ್ಯರು ಸೇರಿದಂತೆ ಸಹಕಾರಿ ರಂಗದ ಹಿರಿಯರು ಸೇರಿದಂತೆ ಹಲವರು ಅಂತಿಮ ದರ್ಶನ ಪಡೆಯುವಲ್ಲಿ ಪಾಲ್ಗೊಂಡಿದ್ದರು.

ಕಿರುಸುದ್ದಿ

ಕಂಬಿ ಮಲ್ಲಯ್ಯನ ದೇವರಿಗೆ ಬೆಲ್ಲದ ಹರಕೆ ಸಮರ್ಪಣೆ



ತೆಲಸಂಗ: ಐತಿಹಾಸಿಕ ಪ್ರಸಿದ್ಧ ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಇಂದು ಕಂಬಿ ಮಲ್ಲಯ್ಯ ದೇವರ ಐದೇಶಿ ಕಾರ್ಯಕ್ರಮವು ಅತ್ಯಂತ ಸಡಗರ-ಸಂಭ್ರಮದಿಂದ ಜರುಗಿತು. ಬೆಳಿಗ್ಗೆಯಿಂದಲೇ ಸಾವಿರಾರು ಭಕ್ತರು ಮಲ್ಲಯ್ಯನ ದರ್ಶನಕ್ಕಾಗಿ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಆಗಮಿಸಿದ್ದರಿಂದ ಇಡೀ ಗ್ರಾಮವು ಭಕ್ತಿ ಸಾಗರದಲ್ಲಿ ಮುಳುಗಿತ್ತು.

ಬೆಲ್ಲ ಹಚ್ಚುವ ವಿಶಿಷ್ಟ ಹರಕೆ: ಭಾಗದ ಜನಜನಿತ ಮಾತಾದ ಸಿಕ್ಕ ಸಿಕ್ಕಂಗೆ ಕೊಡ್ತಾಕ್ ಇದೇನ್ ಮಲ್ಲಯ್ಯನ ಬೆಲ್ಲ ಮಾಡಿದಿ ಏನ ಎನ್ನುವ ಗಾದೆ ಮಾತಿನಂತೆ, ಇಂದು ಭಕ್ತರು ಸಾಲುಗಟ್ಟಿ ನಿಂತು ಮಲ್ಲಯ್ಯ ದೇವರ ಹೆಸರಲ್ಲಿ ಸಿಕ್ಕಸಿಕ್ಕಂತೆ ಬಂದ ಭಕ್ತರಿಗೆ ಬೆಲ್ಲದ ಹರಕೆ ಸಲ್ಲಿಸಿದ್ದು ವಿಶೇಷವಾಗಿತ್ತು. ತಮ್ಮ ಸಂಕಲ್ಪಗಳು ಈಡೇರಿದ ಹಿನ್ನೆಲೆಯಲ್ಲಿ ಭಕ್ತರು ಭಕ್ತಿಯಿಂದ ಬೆಲ್ಲವನ್ನು ದಾನ ಮಾಡಿ, ಮಲ್ಲಯ್ಯನ ಕೃಪೆಗೆ ಪಾತ್ರರಾದರು. ಮಲ್ಲಿಕಾರ್ಜುನ ದೇವಸ್ಥಾನದ ಆವರಣವು ಭಕ್ತರ ಮಲ್ಲಯ್ಯನ ಜೈಕಾರ ಹಾಗೂ ಭಕ್ತಿಗೀತೆಗಳಿಂದ ಗಮನಸೆಳೆಯಿತು.

ಓಂಕಾರ ಮಂತ್ರದ ಸ್ಥಾಪನಾ ದಿನಾಚರಣೆ



ಯಮಕನಮರಡಿ: ಸ್ಥಳೀಯ 1008 ಪಾರ್ಶ್ವನಾಥ ದಿಗಂಬರ ಜೈನ ಮಂದಿರದಲ್ಲಿ ಮಹಾಮಸ್ತಕಾಭಿಷೇಕ ಆಯೋಜಿಸಲಾಗಿದ್ದು ಜೈನಧರ್ಮದಲ್ಲಿ ಪ್ರಮುಖವಾದ ದಿನವಾಗಿದೆ. ನಮೋ ಕಾರ ಮಂತ್ರವು ಜೈನ ಧರ್ಮದ ಮೂಲಭೂತ ತತ್ವಗಳನ್ನು ಒಳಗೊಂಡದ್ದು ಇರುತ್ತದೆ. ಮತ್ತು ಇದನ್ನು ಜೈನ ಕುಲಬಾಂದವರು ದೈನಂದಿನ ಜೀವನದಲ್ಲಿ ಕಲಿಸುತ್ತಿರುವುದು ರೂಢಿಯಲ್ಲಿದ್ದು, ನಮೋಕಾರ ಮಂತ್ರದ ಪ್ರಾಮುಖ್ಯತೆ ಇದು ಜೈನಧರ್ಮದ ಮೂಲಭೂತ ತತ್ವಗಳನ್ನು ಒಳಗೊಂಡಿದೆ ಇದು ಪ್ರತಿಯೊಬ್ಬರಿಗೂ ಆಧ್ಯಾತ್ಮಿಕ ಶಕ್ತಿ ಮತ್ತು ಶಾಂತಿಯನ್ನು ನಿಡುತ್ತದೆ. ಇದನ್ನು ಜೈನರು ದೈನಂದಿನ ಜೀವನದಲ್ಲಿ ಪಠಿಸುತ್ತಾರೆ. ಅದರಂತೆ ಇನ್ನೂಳಿದ ಸನಾತನ ಧರ್ಮದ ಎಲ್ಲ ಕುಲಬಾಂದವರು ಪಠಿಸುತ್ತಿರುವುದು ಓಂ ಕಾರ ಮಂತ್ರವನ್ನು ಪಠೀಸುತ್ತಾರೆ ಇದರಿಂದ ದರ್ಮದಲ್ಲಿ ಆತ್ಮದಲ್ಲಿ ಶಾಂತಿಯನ್ನು ನೆಲೆಸುತ್ತದೆ. ಬ್ರಹ್ಮ ವಿಷ್ಣುಮಹೇಶ್ವರ ಮುಂತಾದ ದೇವ ದೇವತೆಗಳು ಈ ಮಂತ್ರಕ್ಕೆ ಮಹತ್ವ ನಿಡಿದ್ದು ಇರುತ್ತದೆ. ಪ್ರತಿಯೊಬ್ಬರು ಓಂ ಎನ್ನುವ ಶಬ್ದವನ್ನು ಅಳವಡಿಸಿಕೊಂಡು ಓಂಕಾರ ನಮೋಕಾರ ಆಯಾ ಧರ್ಮಗಳಿಗೆ ಅನುಗುಣವಾಗಿ ಪಠಿಸ ಬಹುದಾಗಿದೆ.

ಚುನಾವಣೆಯಲ್ಲಿ ಅಕ್ರಮ: ದೂರು ದಾಖಲು

ಬೆಳಗಾವಿ : ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಶಿಕ್ಷಕರ ಮತದಾರರ ಪಟ್ಟಿ ಮತ್ತು ಚುನಾವಣಾ ಅಧಿಕಾರಿ ಲಭ್ಯವಿಲ್ಲದ ಕಾರಣ ಚುನಾವಣೆಗೆ ತಡೆ ನೀಡಬೇಕು ಎಂದು ಆಗ್ರಹಿಸಿ ಶಿಕ್ಷಕರು ಶನಿವಾರ ಮಾರ್ಕೆಟ್ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದಾರೆ.
ಅವಧಿ ಮತದಾರರ ಯಾದಿಯನ್ನು ಸಾಮಾನ್ಯ ಶಿಕ್ಷಕರಾದ ನಮಗೆ ಏ.14ರವರೆಗೂ ಒದಗಿಸಿರುವುದಿಲ್ಲ ಹಾಗೂ ಚುನಾವಣಾ ದಿನಾಂಕ ಪ್ರಕಟವಾದರೂ ಕೂಡ ಸಾಮಾನ್ಯ ಶಿಕ್ಷಕರಿಗೆ ತಿಳಿಸದೆಯೇ ಚುನಾವಣೆಯ ದಿನಾಂಕ 19 ರಂದು ನಡೆಸುವುದಾಗಿ ಪ್ರಕಟಿಸಿ ಗೊಂದಲ ಸೃಷ್ಟಿ ಮಾಡಿದ್ದಾರೆ ಎಂದು ದೂರಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಜಿಲಗಲಾ ಘಟಕದ ಕಚೇರಿಗೆ ಭೇಟಿ ನೀಡಿದಾಗ ಕಚೇರಿಗೆ ಬೀಗ ಹಾಕಲಾಗಿತ್ತು. ಈ ರೀತಿ ಅಧಿಕಾರದ ಲಾಲಸೆಯಿಂದ ಆಡಳಿತವನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ಜಿಲ್ಲಾಧ್ಯಕ್ಷ ಜಯಕುಮಾರ ಹೆಬಳಿ, ತಾಲೂಕಾಧ್ಯಕ್ಷ ಚಂದ್ರಶೇಖರ ಕೋಲ್ಕಾರ್ ಶಿಕ್ಷಕರಿಗೆ ತೊಂದರೆ ಕೊಟ್ಟಿದ್ದಾರೆ ಎಂದು ದೂರಿದರು. ಈ ವೇಳೆ ಎಸ್.ಜಿ.ಕಂಬಳ್ಳರ್, ಅನ್ವರ್ ಲಂಗೋಟಿ, ಆನಂದಗೌಡ ಕಾದ್ರೊಳ್ಳಿ, ಈರಪ್ಪ ಗೂಳನ್ನವರ, ಆಸೀಫ್ ಅತ್ತಾರ, ಎ.ಕೆ.ತಹಶಿಲ್ದಾರ ಸೇರಿದಂತೆ ಹಲವರು ಇದ್ದರು.



ಗೋಕಾಕ: ಇಲ್ಲಿಯ ಲಯನ್ಸ್ ಕ್ಲಬ್ ಹಾಗೂ ಲಯನ್ಸ್ ಮಹಿಳಾ ಕ್ಲಬ್ ಸಹಯೋಗದಲ್ಲಿ ಗುರುವಾರ ನಗರದ ಸಮುದಾಯ ಭವನದಲ್ಲಿ ಹಮ್ಮಿಕೊಂಡ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಪರಿಸರ ಜಾಗೃತಿ ಕಾರ್ಯಕ್ರಮ ನಡೆಯಿತು. ಲಯನ್ಸ್ ಸಂಸ್ಥೆಯ ಭಾರತಿ ವಡವಿ, ಗಿರಿಜಾ ದೊಡಮನಿ, ಎಸ್.ಎಂ. ಹಂಜಿ, ಅಶೋಕ ದೇಯನ್ನವರ, ಅಶೋಕ ಲಗಮಪ್ಪಗೋಳ, ಡಾ.ಜ್ಯೋತಿ ಶಿಂಧೋಳಿಮಠ, ಸೌಭಾಗ್ಯ ಕೊಪ್ಪ, ಡಾ.ಮಹಾನಂದಾ ಪಾಟೀಲ ಇದ್ದರು.

ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿ ಪರಿಶೀಲನೆ

ಬೆಳಗಾವಿ : ಲೋಕೋಪಯೋಗಿ ಸಚಿವರಾದ ಮೇಲೆ ರಾಜ್ಯಾದ್ಯಂತ ರಸ್ತೆ ಮತ್ತು ಸೇತುವೆಗಳ ಆಧುನೀಕರಣಕ್ಕೆ ಹೆಚ್ಚಿನ ವೇಗ ನೀಡುತ್ತಿರುವ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರು ಸಂಕೇಶ್ವರ-ಗೋಕಾಕ-ಯರಗಟ್ಟಿ ರಾಜ್ಯ ಹೆದ್ದಾರಿಯ ಅಭಿವೃದ್ಧಿ ದೃಷ್ಟಿಯಿಂದ ಅತ್ಯಂತ ಪ್ರಮುಖವಾಗಿರುವ ಘಟಪ್ರಭಾ ಸೇತುವೆ ಕಾಮಗಾರಿಯನ್ನು ಪರಿಶೀಲನೆ ನಡೆಸಿದರು.

ಘಟಪ್ರಭಾ ಪಟ್ಟಣದ ಬಳಿ ಕಾಲುವೆಗೆ ಅಡ್ಡಲಾಗಿ ನಿರ್ಮಾಣವಾಗುತ್ತಿರುವ ಬೃಹತ್ ಸೇತುವೆಯ ಗುಣಮಟ್ಟ ಮತ್ತು ಪ್ರಗತಿಯನ್ನು ಸಚಿವರು ವೀಕ್ಷಿಸಿದರು. ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಕಾಮಗಾರಿಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಇದೇ ವೇಳೆ ಸೂಚನೆ ನೀಡಿದರು.

ರಾಜ್ಯ ಹೆದ್ದಾರಿಯ ಭಾಗವಾಗಿರುವುದರಿಂದ ಸೇತುವೆಯು ದೀರ್ಘಕಾಲ ಬಾಳಿಕೆ ಬರುವಂತೆ ನಿರ್ಮಾಣ ಮಾಡಲು ಕಟ್ಟುನಿಟ್ಟಿನ ನಿರ್ದೇಶನ ನೀಡಿದ ಅವರು, ಚತುಷ್ಪಥ ರಸ್ತೆಯ ಭಾಗವಾಗಿ ಈ ಸೇತುವೆ ನಿರ್ಮಾಣವಾಗುತ್ತಿರುವುದರಿಂದ ವಾಹನ ಸವಾರರಿಗೆ ಸಂಚಾರ ದಟ್ಟಣೆಯಿಂದ ಮುಕ್ತಿ ಸಿಗಲಿದೆ. ಗೋಕಾಕ ಮತ್ತು ಸಂಕೇಶ್ವರ ನಡುವಿನ ಸಂಪರ್ಕವು ಈ ಸೇತುವೆಯಿಂದ ಮತ್ತಷ್ಟು ಬಲಗೊಳ್ಳಲಿದೆ. ಉತ್ತಮ ರಸ್ತೆ ಸಂಪರ್ಕವು ಈ ಭಾಗದ ವ್ಯಾಪಾರ ಮತ್ತು ಕೃಷಿ ಉತ್ಪನ್ನಗಳ ಸಾಗಾಣಿಕೆಗೆ ಸಹಕಾರಿಯಾಗಲಿದೆ ಎಂದು ಸಚಿವರು ತಿಳಿಸಿದರು.



ಬೆಳಗಾವಿ : ಲೋಕೋಪಯೋಗಿ ಸಚಿವರಾದ ಮೇಲೆ ರಾಜ್ಯಾದ್ಯಂತ ರಸ್ತೆ ಮತ್ತು ಸೇತುವೆಗಳ ಆಧುನೀಕರಣಕ್ಕೆ ಹೆಚ್ಚಿನ ವೇಗ ನೀಡುತ್ತಿರುವ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರು ಸಂಕೇಶ್ವರ-ಗೋಕಾಕ-ಯರಗಟ್ಟಿ ರಾಜ್ಯ ಹೆದ್ದಾರಿಯ ಅಭಿವೃದ್ಧಿ ದೃಷ್ಟಿಯಿಂದ ಅತ್ಯಂತ ಪ್ರಮುಖವಾಗಿರುವ ಘಟಪ್ರಭಾ ಸೇತುವೆ ಕಾಮಗಾರಿಯನ್ನು ಪರಿಶೀಲನೆ ನಡೆಸಿದರು.

ಮೂಡಲಗಿ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ ಹಿರೇಮಠ ಅಭಿಮತ

ಜ್ಯೋತಿಬಾ ಫುಲೆ ಕೊಡುಗೆ ಅಪಾರ

ಹಳ್ಳೂರ: ಶೋಷಿತರ ಹಕ್ಕಿಗಾಗಿ ಹೋರಾಡಿ ಶಿಕ್ಷಣವೇ ಸಮಾಜರ ಶಕ್ತಿ ಎಂದು ಜಗತ್ತಿಗೆ ಸಾರಿದ ಸಮಾಜ ಸುಧಾರಕ ಸಮಾನತೆಯ ಹರಿಕಾರ ಭಾರತ ಶ್ರೇಷ್ಠ ಸಮಾಜ ಸುಧಾರಕರಲ್ಲಿ ಒಬ್ಬರಾಗಿರುವ ಮಹಾತ್ಮ ಜ್ಯೋತಿಬಾ ಫುಲೆ ಕೊಡುಗೆ ಅಪಾರವಾದದ್ದು ಎಂದು ಮೂಡಲಗಿ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ ಹಿರೇಮಠ ಹೇಳಿದರು.



» ಮಹಾತ್ಮ ಜ್ಯೋತಿಬಾ ಫುಲೆ ಜಯಂತ್ಯುತ್ಸವ

ಸ್ಥಳೀಯ ತೋಟಗೇರ ದೈವದ ಮನೆ ಹತ್ತಿರ ಹಮ್ಮಿಕೊಂಡ ಮಹಾತ್ಮ ಜ್ಯೋತಿಬಾ ಫುಲೆ ಅವರ ಜಯಂತ್ಯುತ್ಸವ ಆಚರಣೆಯ ಸಮಾರಂಭದಲ್ಲಿ ಮಾತನಾಡಿ, ಮಹಾತ್ಮ ಫುಲೆ ಅವರು ಒಬ್ಬ ಮಹಾನ ಸುಧಾರಕರಷ್ಟೇ ಅಲ್ಲ ಅವರ ಜೀವನವು ನೈತಿಕ ಧೈರ್ಯ ನಿರಂತರ ಅನ್ವೇಷಣೆ ಮತ್ತು ಸಾಮಾಜಿಕ ಒಳತಿಗಾಗಿ ಅಚಲವಾದ ಬದ್ಧತೆಯಿಂದ ಕೂಡಿತ್ತು ಮಹಾರಾಷ್ಟ್ರದ ಪುಣೆಯಲ್ಲಿ ಬಡ ಕುಟುಂಬದಲ್ಲಿ ಜನಿಸಿ ಸಮಾಜಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟಿದ್ದಾರೆಂದು ಹೇಳಿದರು.

ಚಿಕ್ಕೋಡಿ ಜಿಲ್ಲಾ ಉಪ ಯೋಜನಾ ಸಮನ್ವಯಾಧಿಕಾರಿ ರೇವತಿ ಮಠದ ಮಾತನಾಡಿ, ನಮ್ಮ ಪುಣ್ಯ ಭೂಮಿಯಲ್ಲಿ ಕಾಲ ಕಾಲಕ್ಕೆ ಮಹಾನ್ ಪುರುಷರು ಆಶೀರ್ವಾದಕ್ಕೆ ಕಾರಣವಾಗುತ್ತದೆ. ಇವರು ಸಮಾಜ ಬದಲಾವಣೆಗಾಗಿ ಯಾರೋ ಬರುತ್ತಾರೆಂದು ಕಾಯಲಿಲ್ಲ ಬದಲಾಗಿ ತಾವೆ ಬದಲಾವಣೆಯ ಮೂಲ ಶಕ್ತಿಯಾದರು. ಅವರ ಮಾತುಗಳು ಕೆಲಸಗಳು ಇಂದಿಗೂ ಭರವಸೆಯನ್ನು ನೀಡುತ್ತವೆ. ಕೇವಲ ಭೂತಕಾಲದ ವ್ಯಕ್ತಿಯಲ್ಲ ಭಾರತದ ಭವಿಷ್ಯಕ್ಕೆ ದಾರಿ ದೀಪವಾಗಿದ್ದಾರೆ. ಇಂತಹ ಮಹಾನ್ ವ್ಯಕ್ತಿಗಳ ತತ್ವ ಆದರ್ಶಗಳನ್ನು ಯುವ ಪೀಳಿಗೆಗಳ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳಿದರು.

ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಸಮಾಜ ಸೇವಕ ಮುರಿಗೆಪ್ಪ ಮಾಲಗಾರ ಮಾತನಾಡಿ, ಮಹಾನ ಪುರುಷರ ಜಯಂತಿ ಆಚರಣೆ ಮಾಡುವುದರೊಂದಿಗೆ ಅವರ ತತ್ವ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಸದಸ್ಯ ಭೀಮಶಿ ಮಗದುಮ, ಗ್ರಾಪಂ ಮಾಜಿ ಅಧ್ಯಕ್ಷರಾದ ಲಕ್ಷ್ಮಣ ಕತ್ತಿ, ಬಸಪ್ಪಾ ಹಡಪದ, ಮುಖಂಡರಾದ ಹಣಮಂತ ತೇರದಾಳ, ಸಿದ್ದಪ್ಪ ಕೂಲಿಗೋಡ, ಯಮುನಪ್ಪ ನಿಡೋಣಿ, ರಾಮಣ್ಣ ಸುಣಧೋಳಿ, ಮಹಾದೇವ ಹೊಸಟ್ಟಿ, ಬಿ.ಜಿ.ಸಂತಿ, ಹಣಮಂತ ಸಪ್ತಸಾಗರ, ಭೀಮಪ್ಪ ಹೊಸಟ್ಟಿ, ಶಂಕರ ಕುಲಗೋಡ, ಪ್ರವೀಣ ಮಾವರಕರ, ಅಪ್ಪು ಸಿದ್ದಾಪುರ, ವಿಠ್ಠಲ್ ತೋಟಗಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಜ್ಯೋತಿಬಾ ಫುಲೆ ಜಯಂತ್ಯುತ್ಸವ

ಬೆಳಗಾವಿ : ನಗರದ ಡಾ. ಬಾಬಾಸಾಹೇಬ ಅಂಬೇಡ್ಕರ್ ಉದ್ಯಾನದಲ್ಲಿ ಶನಿವಾರ ಮಹಾತ್ಮ ಜ್ಯೋತಿಬಾ ಫುಲೆ ಅವರ 200ನೇ ಜಯಂತಿಯ ನಿಮಿತ್ತ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು. ಸಾಮಾಜಿಕ ಪರಿವರ್ತನೆಯ ಚಿಂತನೆಗಳನ್ನು ಮುಂದುವರಿಸುವ ಸಂದೇಶದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ವೇಳೆ ಮಹಾನಗರ ಪಾಲಿಕೆಯ ಉಪ ಆಯುಕ್ತ ಉದಯಕುಮಾರ್ ತಳವಾರ ಮಹಾತ್ಮ ಫುಲೆ ಅವರ ಭಾವಚಿತ್ರಕ್ಕೆ ಪುಷ್ಪಹಾರ ಅರ್ಪಿಸಿ ಗೌರವ ಸಲ್ಲಿಸಿ ಮಾತನಾಡಿ, ಮಹಿಳೆಯರ ಶಿಕ್ಷಣಕ್ಕಾಗಿ ಆರಂಭವಾದ ಚಳವಳಿಗಳ ಪರಿಣಾಮವಾಗಿ ಇಂದಿನ ಸಮಾಜದಲ್ಲಿ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಮುಂದುವರಿಯುತ್ತಿದ್ದಾರೆ. ಅವರ ಪ್ರಗತಿಯ ಹಿಂದೆ ಸಾವಿತ್ರಿಬಾಯಿ ಅವರ ದೂರದೃಷ್ಟಿ ಮತ್ತು ತ್ಯಾಗ ಪ್ರಮುಖ ಕಾರಣವಾಗಿದೆ ಎಂದು ಸಾವಿತ್ರಿಬಾಯಿ ಫುಲೆ ಅವರ ಕಾರ್ಯವನ್ನು ವಿಶೇಷವಾಗಿ ಸ್ಮರಿಸಿ, ಮಹಿಳಾ ಶಿಕ್ಷಣ ಕ್ಷೇತ್ರದಲ್ಲಿ ಅವರ ಮಹತ್ವದ ಕೊಡುಗೆಯನ್ನು ಉಲ್ಲೇಖಿಸಿದರು.

ಈ ವೇಳೆ ದಲಿತ ನಾಯಕ ಮಲ್ಲೇಶ್ ಚೌಗುಲೆ ಮಾತನಾಡಿ, ಮಹಾತ್ಮ ಫುಲೆ ಅವರು ಸತ್ಯಶೋಧಕ ಸಮಾಜದ ಮೂಲಕ ನಡೆಸಿದ ಸಾಮಾಜಿಕ ಸಮಾನತೆಯ ಚಳವಳಿಯನ್ನು ಬೆಳಕಿಗೆ ತಂದರು. ಅವರು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಬುನಾದಿ ಹಾಕಿ ಸಮಾಜದಲ್ಲಿದ್ದ ಅನೇಕ ಕಟ್ಟುಪಾಡುಗಳಿಗೆ ಸವಾಲು ಹಾಕಿದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯರು ಸಾವಿತ್ರಿಬಾಯಿ ಫುಲೆ ಅವರ ಹೋರಾಟಮಯ ಜೀವನವನ್ನು ಸ್ಮರಿಸಿ, ಬಾಲ್ಯವಿವಾಹ, ಸತಿ ಪದ್ಧತಿ ಹಾಗೂ ಇತರ ಸಾಮಾಜಿಕ ಅನ್ಯಾಯಗಳ ವಿರುದ್ಧ ಅವರ ಹೋರಾಟವನ್ನು ನೆನಪಿಸಿಕೊಂಡರು. ಜೊತೆಗೆ ಪ್ಲೇಗ್ ಪೀಡಿತರ ಸೇವೆಯಲ್ಲಿ ಅವರು ಸಲ್ಲಿಸಿದ ಬಲಿದಾನವನ್ನೂ ಸ್ಮರಿಸಲಾಯಿತು.

ಈ ಕಾರ್ಯಕ್ರಮಕ್ಕೆ ರಾಜು ಕಲ್ಲೇಕಣ್ಣಾವರ್, ಸಂತೋಷ ಕಾಂಬಳೆ, ಮನೋಜ್ ಹಿತಲ್ಮಣಿ, ಆನಂದ್ ಕೋಲ್ಕಾರ್, ಯಲ್ಲಪ್ಪ ಗಾಡೀನಾಯಕ, ದೀಪಕ್ ಮೈತ್ರಿ, ಸುಧೀರ್ ಚೌಗುಲೆ, ಜೀವನ ಕುರಣೆ, ಗಜಾನನ್ ಕಾಂಬಳೆ, ರಾಮು ಚವ್ಹಾಣ್, ಸುಬ್ರಹ್ಮಣ್ಯಂ ಕಾಂಬಳೆ, ಸಂದೀಪ್ ಕೊಳ್ಕರ್, ಅಮರೇಶ್ ಜಿ.ಸಿ.(ಅಂಬಿ), ಸಾಗರ್ ಚೌಗುಲೆ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.



ಎಸ್.ಸಿ, ಎಸ್.ಟಿ ರೈತರಿಗೆ ಸಹಾಯಧನಕ್ಕೆ ಅರ್ಜಿ ಆಹ್ವಾನ

ಯರಗಟ್ಟಿ: 2026-27 ನೇ ಸಾಲಿನಲ್ಲಿ ಕೃಷಿ ಭಾಗ್ಯ ಹಾಗೂ ಎಸ್. ಡಿ.ಎಂ.ಎಫ್ ಯೋಜನೆಗಳಡಿ ಸಾಮಾನ್ಯ ರೈತರಿಗೆ ಶೇ.80 ರಂತೆ ಹಾಗೂ ಪ.ಜಾ/ಪ.ಪಂ ವರ್ಗದ ರೈತರಿಗೆ ಶೇ.90 ರ ಸಹಾಯಧನದಡಿಯಲ್ಲಿ ಕೃಷಿ ಹೊಂಡ ಮತ್ತು ಬದು ನಿರ್ಮಾಣ, ತಾಡಪಾಲ, ತುಂತುರು ಘಟಕ ಹಾಗೂ ಡಿಸೈಲ್ ಪಂಪಸೆಟ್ ಘಟಕಗಳನ್ನು ನೀಡುತ್ತಿದ್ದು ಆಸಕ್ತ ರೈತರು ಕೂಡಲೇ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಸವದತ್ತಿ ವ್ಯಾಪ್ತಿಯ ರೈತ ಸಂಪರ್ಕ ಕೇಂದ್ರಗಳಾದ ಸವದತ್ತಿ, ಮುನವಳ್ಳಿ, ಮುರಗೋಡ ಹಾಗೂ ಯರಗಟ್ಟಿ ಕಚೇರಿಗಳಲ್ಲಿ ಮಾಹಿತಿ ಪಡೆದು ಅರ್ಜಿ ಸಲ್ಲಿಸಲು ಸಹಾಯಕ ಕೃಷಿ ನಿರ್ದೇಶಕರು, ಸವದತ್ತಿ ಶಿವಪ್ರಕಾಶ ಪಾಟೀಲ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಕ್ಷ ಸಂಘಟನೆಗೆ ನಾಯಕತ್ವ ಗುಣ ಬೆಳೆಸಿಕೊಳ್ಳಿ

ಗೋಕಾಕ: ಬೆಳಗಾವಿ ಜಿಲ್ಲೆಯಲ್ಲಿ ಬಿಜೆಪಿ ಪಕ್ಷವು ಸದೃಢವಾಗಿ ಬೆಳೆಯಲು ಶಾಸಕ ರಮೇಶ ಜಾರಕಿಹೊಳಿ ಅವರ ಪ್ರೇರಣೆ ಹಾಗೂ ಸಹಕಾರ ಮುಖ್ಯವಾಗಿದೆ ಎಂದು ಜಿಲ್ಲಾ ಪ್ರಶಿಕ್ಷಣ ಸಂಯೋಜಕರು ಮತ್ತು ಜಿಲ್ಲಾ ಪ್ರಕೋಷ್ಠಗಳ ಸಂಯೋಜಕ ಮಹೇಶ ಮೋಹಿತೆ ಹೇಳಿದರು.

ಶುಕ್ರವಾರ ತಾಲೂಕಿನ ಅಂಕಲಗಿ ಪಟ್ಟಣದಲ್ಲಿ ಜರುಗಿದ ಭಾರತೀಯ ಜನತಾ ಪಾರ್ಟಿ ಗೋಕಾಕ ನಗರ ಮತ್ತು ಗ್ರಾಮೀಣ ಮಂಡಲ ಮಟ್ಟದ ಪ್ರಶಿಕ್ಷಣ ಮಹಾಭಿಯಾನ- 2026ರ ಬೆಳಗಾವಿ ಗ್ರಾಮಾಂತರ ಜಿಲ್ಲೆ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಭಾರತೀಯ ಜನತಾ ಪಕ್ಷವು ನೀಡಿದ ಜವಾಬ್ದಾರಿಯನ್ನು ಪ್ರತಿಯೊಬ್ಬ ಕಾರ್ಯಕರ್ತರು ಮಾಡಬೇಕು. ಪಕ್ಷ ಸಂಘಟನೆಗೆ ಈ ಭಾಗದ ಶಾಸಕ ರಮೇಶ ಜಾರಕಿಹೊಳಿ ಪ್ರಯತ್ನ ಮಹತ್ತರವಾಗಿದೆ. ಗೋಕಾಕ ಮತಕ್ಷೇತ್ರದಲ್ಲಿ ಪ್ರಶಿಕ್ಷಣ ಮಹಾಭಿಯಾನವು ಯಶಸ್ವಿಗೆ ಕಾರಣಿಕರ್ತರಾಗಿ, ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಒತ್ತು ನೀಡಿದ್ದಾರೆ ಎಂದರು.

ಭಾಜಪ ಪಕ್ಷವು ನಡೆದು ಬಂದ ದಾರಿಯನ್ನು ಮತ್ತು ಪಕ್ಷ ಸಂಘಟನೆಗೆ ದುಡಿದ ಮಹಾನಾಯಕರ ನಾಯಕತ್ವ ಗುಣಗಳನ್ನು ಇಂದಿನ ಯುವ ಕಾರ್ಯಕರ್ತರು ಬೆಳೆಸಿಕೊಳ್ಳಬೇಕು ಎಂದರು.

ವೇದಿಕೆ ಮೇಲೆ ಕಾರ್ಮಿಕ ಮುಖಂಡ ಅಂಬಿರಾವ ಪಾಟೀಲ, ಯುವ ಮುಖಂಡರು ಹಾಗೂ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಅಮರನಾಥ ಜಾರಕಿಹೊಳಿ, ನಗರ ಮಂಡಲ ಅಧ್ಯಕ್ಷ ಭೀಮಶಿ ಭರಮಣ್ಣವರ, ಗ್ರಾಮೀಣ ಮಂಡಲ ಅಧ್ಯಕ್ಷ ರಾಜೇಂದ್ರ ಗೌಡಪ್ಪಗೋಳ, ಶಾಸಕರ ಆಪ್ತ ಸಹಾಯಕರಾದ ಭೀಮಗೌಡ ಪೋಲಿಸ್ ಗೌಡರ, ಸುರೇಶ ಸನದಿ, ರಾಷ್ಟ್ರೀಯ ಓಬಿಸಿ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಲಕ್ಷ್ಮಣ ತಪಸಿ, ಜಿಲ್ಲಾ ಓಬಿಸಿ ಪ್ರಧಾನ ಕಾರ್ಯದರ್ಶಿ ಸಂತೋಷ ಹಡಪದ, ರಾಜ್ಯ ಮಾಧ್ಯಮ ಸಮಿತಿ ಸದಸ್ಯ ನೀತಿನ ಚೌಗಲೆ, ಜಿಲ್ಲಾ ಮಾಧ್ಯಮ ಪ್ರಮುಖ ಸಚಿನ ಕಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆನಂದ ಅತ್ತುಗೋಳ, ಬಿಜೆಪಿ ಹಿರಿಯ ಮುಖಂಡ ಪ್ರಮೋದ್ ಜೋಶಿ, ಕಾರ್ಯದರ್ಶಿ ಶಿವಾನಂದ ಪಾಟೀಲ, ಜಿಲ್ಲಾ ಉಪಾಧ್ಯಕ್ಷ ಶಾಮಾನಂದ ಪೂಜೇರಿ ಇದ್ದರು. ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜೇಶ್ವರಿ ವಡೇಯರ ನಿರೂಪಿಸಿ, ವಂದಿಸಿದರು.



ಶಿಕ್ಷಣ ಕ್ರಾಂತಿ ಹರಿಕಾರ ಜ್ಯೋತಿಬಾ ಫುಲೆ ಜಯಂತ್ಯುತ್ಸವ

ಬೆಳಗಾವಿ: ಶಿಕ್ಷಣಕ್ರಾಂತಿಯ ಹರಿಕಾರ ಮಹಾತ್ಮ ಜ್ಯೋತಿಬಾ ಫುಲೆಯವರನ್ನು ಅವರ 199ನೇ ಜನ್ಮದಿನದಂದು ಸ್ಮರಿಸಿಕೊಂಡು, ಜನ್ಮ ದ್ವಿಶತಮಾನೋತ್ಸವಕ್ಕೆ ಶನಿವಾರ ಎಐಡಿಎಸ್ಓ ನೇತೃತ್ವದಲ್ಲಿ ಚಾಲನೆ ನೀಡಿದರು.

ಬೆಳಗಾವಿ ರೈಲ್ವೆ ನಿಲ್ದಾಣದ ಮುಂಭಾಗದಲ್ಲಿ ಜ್ಯೋತಿಬಾ ಫುಲೆ ಅವರ ಭಾವಚಿತ್ರಕ್ಕೆ ಗೌರವ ನಮನ ಸಲ್ಲಿಸಲಾಯಿತು.

ಇದೇ ವೇಳೆ ಎಐಡಿಎಸ್ಓ ಜಿಲ್ಲಾ ಸಂಚಾಲಕ ಮಹಾಂತೇಶ ಬಿಳೂರ್ ಮಾತನಾಡಿ, ಶಿಕ್ಷಣವನ್ನು ಸಮಾಜದ ಕೆಲವೇ ಕೆಲವು ಮೇಲ್ಜಾತಿಯ ಜನರಿಗೆ ಸೀಮಿತವಾಗಿರಿಸಿದ್ದ ಕ್ರೂರ ಜಾತಿ ವ್ಯವಸ್ಥೆಯ ವಿರುದ್ಧ ಜ್ಯೋತಿಬಾ ಸಮರ ಸಾರಿದರು. ಎಲ್ಲರಿಗೂ ಮುಕ್ತವಾಗಿ ಶಿಕ್ಷಣ ದೊರೆಯಬೇಕು ಮತ್ತು ಸಂಖ್ಯೆ ಎಷ್ಟೇ ಇದ್ದರೂ ಕೂಡ ಸರ್ಕಾರವು ಶಿಕ್ಷಣವನ್ನು ಎಲ್ಲರಿಗೂ ಖಾತ್ರಿ ಪಡಿಸಬೇಕೆಂದು ಜ್ಯೋತಿಬಾ ಪ್ರತಿಪಾದಿಸಿದರು. ಬ್ರಿಟಿಷ್ ಸರ್ಕಾರವು ಈ ದೇಶದ ದುಡಿಯ ವರ್ಗವಾದ ಬಡ ರೈತ-ಕಾರ್ಮಿಕರ ಮಕ್ಕಳಿಗೆ ಶಿಕ್ಷಣ ಒದಗಿಸುವಂತೆ ಒತ್ತಾಯಿಸಿದರು.

ಕಷ್ಟ-ಕಾರ್ಪಣ್ಯಗಳನ್ನು ಎದುರಿಸಿ ತಮ್ಮ ಇಡೀ ಜೀವನವನ್ನು ಸಾಮಾಜಿಕ ಪರಿವರ್ತನೆಗೆ ಮುಡಿಪಾಗಿಟ್ಟರು. ಸಮಾಜದಲ್ಲಿ ಶಿಕ್ಷಣವನ್ನು ಹರಡಿದರು, ಜಾತಿವ್ಯವಸ್ಥೆ ವಿರುದ್ಧ ಸಮರ ಸಾರಿ ಸಮಾಜದಲ್ಲಿ ಸಮಾನತೆಯ ಸ್ಥಾಪನೆಗೆ ಹಗಲಿರುಳು ಶ್ರಮಿಸಬೇಕೆಂದರು.



ದೇಶದಲ್ಲಿ ಬಡ ಜನರು ಮಹಿಳೆಯರು ಪರವಾಗಿ ಶ್ರಮಿಸಿದ ನವೋದಯದ ಮಹಾನ್ ಚೇತನ ಜ್ಯೋತಿಬಾಫುಲೆಯವರ ಜನ್ಮ ದ್ವಿಶತಮಾನೋತ್ಸವದ ಹಿನ್ನೆಲೆಯಲ್ಲಿ ಅವರ ಆಶಯಗಳನ್ನು ಸಾಕಾರಗೊಳಿಸುವಂತೆ ಶಿಕ್ಷಣಕ್ಕಾಗಿ ಚಳುವಳಿಯನ್ನು ಕಟ್ಟಿ ಬೆಳೆಸಲು ಅದರಲ್ಲೂ ಕರ್ನಾಟಕ ಸರ್ಕಾರದ ಕರಾಳ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯನ್ನು ಹಿಮ್ಮೆಟ್ಟಿಸಲು ಕರೆ ನೀಡಿದರು.

ಈ ವೇಳೆ ವಿವಿಧ ಗ್ರಾಮಗಳಿಂದ ಆಗಮಿಸಿ ಪಾಲಕರು ವಿದ್ಯಾರ್ಥಿಗಳು ಸೇರಿದಂತೆ ನೂರಾರು ಜನ ಇದ್ದರು.

ಶಾಲಾ ಸುಧಾರಣಾ ಸಮಿತಿಗೆ ನಾಮ ನಿರ್ದೇಶಿತ ಸದಸ್ಯರ ಆಯ್ಕೆ

ಬೈಲಹೊಂಗಲ: ತಾಲೂಕಿನ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಮತ್ತೊಂದು ಹೆಜ್ಜೆಯಾಗಿ. ಶಾಸಕ ಮಹಾಂತೇಶ ಕೌಜಲಗಿ ಅವರ ಶಿಫಾರಸು ಮೇರೆಗೆ ಹಾಗೂ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಆದೇಶದನ್ವಯ ಬೈಲಹೊಂಗಲ ಮತಕ್ಷೇತ್ರದ ಶಾಲಾ ಸುಧಾರಣಾ ಸಮಿತಿಗೆ ಸರ್ಕಾರದಿಂದ ನಾಮ ನಿರ್ದೇಶಿತ ಸದಸ್ಯರನ್ನು ಆಯ್ಕೆ ಮಾಡಲಾಗಿದೆ.

ಈ ಸಮಿತಿಗೆ ಶಂಕರ ಸಾಗರ, ಸುಜಾತ ಚಿಕ್ಕಮಠ, ಸುರೇಶ ಅನಿಕಿವಿ, ಜಗದೀಶ ತೋಟಗಿ ಮತ್ತು ಹಸನ ಗೊರವನಕೊಳ್ಳ ಅವರನ್ನು ಸದಸ್ಯರಾಗಿ ನೇಮಕ ಮಾಡಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ತರುವ ಉದ್ದೇಶದಿಂದ ಈ ನೇಮಕಾತಿ ಮಹತ್ವದ್ದಾಗಿದೆ ಎಂದು ತಿಳಿದುಬಂದಿದೆ.

ನಾಮ ನಿರ್ದೇಶಿತ ಸದಸ್ಯರು ಶನಿವಾರ ಶಾಸಕ ಮಹಾಂತೇಶ ಕೌಜಲಗಿ ಅವರನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿ, ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿ, ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವುದು ಹಾಗೂ ಸರ್ಕಾರಿ ಶಾಲೆಗಳ ಬಲವರ್ಧನೆಗಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಿದರು.



ಶಾಸಕ ಮಹಾಂತೇಶ ಕೌಜಲಗಿ ಮಾತನಾಡಿ, ಸಮಿತಿಯ ಸದಸ್ಯರು ತಮ್ಮ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸಿ ಕ್ಷೇತ್ರದ ಶಿಕ್ಷಣ ಮಟ್ಟವನ್ನು ಇನ್ನಷ್ಟು ಉತ್ತೇಜಿಸಬೇಕು ಎಂದು ತಿಳಿಸಿದರು.

ಈ ವೇಳೆ ಕ್ಷೇತ್ರ ಸಮನ್ವಯಾಧಿಕಾರಿ ರವಿ ಹಿರೇಮಠ, ಮುಖ್ಯೋಪಾಧ್ಯಾಯ ಬಸವರಾಜ ವಾಲಿ, ರಾಜಶೇಖರ ಗಣಾಚಾರಿ ಸೇರಿದಂತೆ ಅನೇಕರು ಇದ್ದರು.

ಬೋರಗಾಂವದಲ್ಲಿ ರೈತರಿಗೆ ವಿಶೇಷ ಮಾರ್ಗದರ್ಶನ ಶಿಬಿರ ಯಶಸ್ವಿ

ಚಿಕ್ಕೋಡಿ: ದಿ.ರಾವಸಾಹೇಬ ಪಾಟೀಲ ಅವರು ನಿಪ್ಪಾಣಿ ಭಾಗದಲ್ಲಿ ಶಿಕ್ಷಣ, ಸಹಕಾರ, ನೀರಾವರಿ, ಕೃಷಿ, ಆರೋಗ್ಯ ಸೇರಿದಂತೆ ವಿವಿಧ ಕ್ಷೇತ್ರಕ್ಕೆ ಆದ್ಯತೆ ನೀಡಿ ಅಭಿವೃದ್ಧಿ ಮಾಡಿದ್ದಾರೆ. ಇದೀಗ ಅವರು ಹಾಕಿಕೊಟ್ಟ ಹಾದಿಯಲ್ಲಿಯೇ ಅರಿಹಂತ ಉದ್ಯೋಗ ಸಮೂಹ ಜವಳಿ, ಸಕ್ಕರೆ, ಸಹಕಾರ ಕ್ಷೇತ್ರದಲ್ಲಿ ಸಹಸ್ರಾರು ಜನರಿಗೆ ಉದ್ಯೋಗ ಸೃಷ್ಟಿಸಿದೆ ಎಂದು ಯುವ ಮುಖಂಡ ಉತ್ತಮ ಪಾಟೀಲ ಹೇಳಿದರು.

ನಿಪ್ಪಾಣಿ ತಾಲ್ಲೂಕಿನ ಬೋರಗಾಂವ ಪಟ್ಟಣದಲ್ಲಿ ಅರಿಹಂತ ಉದ್ಯೋಗ ಸಮೂಹ, ದಕ್ಷಿಣ ಭಾರತ ಜೈನಸಭೆ ಪದವಿ ಸಂಘಟನೆ ಹಾಗೂ ವೃಷಭನಾಥ ಕೃಷಿ ಸಮಿತಿ ಸಹಯೋಗದಲ್ಲಿ ದಿ.ರಾವಸಾಹೇಬ ಪಾಟೀಲ ಅವರ 82ನೇ ಜನ್ಮದಿನಾಚರಣೆ ನಿಮಿತ್ತ ಶನಿವಾರ ''ರೈತರಿಗೆ ವಿಶೇಷ ಮಾರ್ಗದರ್ಶನ ಶಿಬಿರ''ಉದ್ಘಾಟಿಸಿ ಮಾತನಾಡಿದರು.

ಕಳೆದ ಹಲವು ದಶಕಗಳಿಂದ ಅರಿಹಂತ ಉದ್ಯೋಗ ಸಮೂಹ ಗಡಿ ಭಾಗದಲ್ಲಿ ಉದ್ಯೋಗ ಸೃಷ್ಠಿ ಮಾಡುವ ಮೂಲಕ ಜನರ ಪ್ರೀತಿಗೆ ಪಾತ್ರವಾಗಿದೆ. ವರ್ಷದಿಂದ ವರ್ಷಕ್ಕೆ ಅರಿಹಂತ ಉದ್ಯೋಗ ಸಮೂಹ ದಾಪುಗಾಲು ಇಡುತ್ತಿದ್ದು, ಸಾರ್ವಜನಿಕರ ಸಹಕಾರದಿಂದ ಇದೆಲ್ಲ ಸಾಧ್ಯವಾಗಿದೆ ಎಂದರು.

ದಕ್ಷಿಣ ಭಾರತ ಜೈನ ಸಭಾ ಅಧ್ಯಕ್ಷ ಬಾಲಚಂದ್ರ ಪಾಟೀಲ ಮಾತನಾಡಿ, ರಾವಸಾಹೇಬ ಪಾಟೀಲರು ಕೊಡುಗೈ ದಾನಿಯಾಗಿದ್ದರು. ಕರ್ನಾಟಕ, ಮಹಾರಾಷ್ಟ್ರ ಸೇರಿದಂತೆ ದಕ್ಷಿಣ ಭಾರತದಲ್ಲಿ ಜೈನ ಸಮುದಾಯಕ್ಕೆ ಇವರ ಕೊಡುಗೆ ಸಾಕಷ್ಟಿದೆ. ತಂದೆ ಹಾಕಿಕೊಟ್ಟ ಹಾದಿಯಲ್ಲಿ ಅವರ ಪುತ್ರರಾದ ಅಭಿನಂದನ ಪಾಟೀಲ ಹಾಗೂ ಉತ್ತಮ ಪಾಟೀಲ ಅವರು ನಡೆಯುವ ಮೂಲಕ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ ಎಂದರು.



ಮಹಾರಾಷ್ಟ್ರ ಕೃಷಿ ವಿಜ್ಞಾನಿ ಅಂಕುಶ ಪಾಟೀಲ ರಚಿಸಿದ ''ಕೃಷಿ ತಂತ್ರಜ್ಞಾನ'' ಕೈಪಿಡಿಯನ್ನು ವೇದಿಕೆಯ ಮೇಲಿದ್ದ ಗಣ್ಯರು ಬಿಡುಗಡೆ ಮಾಡಿದರು.

ಕೃಷಿವಿಜ್ಞಾನಿ ಅಂಕುಶ ಪಾಟೀಲ ಮಾತನಾಡಿ, ಕೃಷಿ ಕ್ಷೇತ್ರದಲ್ಲಿ ಕಡಿಮೆ ವೆಚ್ಚದಲ್ಲಿ ಉತ್ಪಾದನೆ, ಆಧುನಿಕ ಕೃಷಿ, ಸಾವಯವ ಕೃಷಿ, ಮನೆಯಲ್ಲಿ ಕೃಷಿ ಗೊಬ್ಬರ ಮುಂತಾದ ವಿಷಯಗಳ ಕುರಿತು ರೈತರಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ದಕ್ಷಿಣ ಭಾರತ ಜೈನಸಭಾ ಉಪಾಧ್ಯಕ್ಷ ಅಭಿನಂದನ ಪಾಟೀಲ, ಕೇಂದ್ರೀಯ ಉಪಾಧ್ಯಕ್ಷ ರಾವಸಾಹೇಬ ಪಾಟೀಲ, ಸಂಜಯ ಶೇಠ, ಅನಿಲ ಬಾಗಣೆ, ಬಾಳಾಸಾಹೇಬ ಪಾಟೀಲ, ಶರತಚಂದ್ರ ಪಾಟಕ, ಚೇತನ ಪಾಟೀಲ, ಪಂಕಜ ಪಾಟೀಲ, ಇಂದ್ರಜೀತ ಪಾಟೀಲ, ಸಂಜಯ ದೇಸಾಯಿ, ಸುದರ್ಶನ ಖೋತ, ಸತೀಶ ಪಾಟೀಲ, ದಿಗಂಬರ ಕಾಂಬಳೆ, ಭಾರತಿ ವಸವಾಡೆ ಇತರರು ಇದ್ದರು.

ಮಹಾತ್ಮರ ತತ್ವ ಸಿದ್ಧಾಂತ ಅಳವಡಿಸಿಕೊಳ್ಳಿ

ಕಬ್ಬೂರು: ಮಹಾತ್ಮರ ಜಯಂತಿ ಆಚರಿಸಿದರೆ ಸಾಲದು. ಅವರ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಕಾರ್ಯವಾಗಬೇಕು ಎಂದು ಶಾಸಕ ದುರ್ಯೋಧನ ಐಹೊಳಿ ಹೇಳಿದರು.

ಶ್ರೀಮಲ್ಲಿಕಾರ್ಜುನ ಮಾಳಿ ಸಮಾಜ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಪಟ್ಟಣದಲ್ಲಿ ಶನಿವಾರ ಆಯೋಜಿಸಿದ್ದ ಜ್ಯೋತಿಬಾ ಫುಲೆಯವರ 199ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಾಜಿ ಜಿಲ್ಲಾ ಪಂಚಾಯತ ಸದಸ್ಯ ಪವನ ಕತ್ತಿ ಮಾತನಾಡಿ, ದೇಶದಲ್ಲಿ ಶೈಕ್ಷಣಿಕ ಕ್ರಾಂತಿಗೆ ನಾಂದಿ ಹಾಡಿದ ಜ್ಯೋತಿಬಾ ಫುಲೆಯವರ ಜೀವನ, ಸಾಧನೆಯನ್ನು ಪ್ರತಿಯೊಬ್ಬರೂ ಅರಿಯಬೇಕು ಎಂದರು.

ಮಹಾತ್ಮ ಜ್ಯೋತಿಬಾ ಫುಲೆಯವರ ಭಾವಚಿತ್ತಕ್ಕೆ ಹಲವು ಗಣ್ಯರಿಂದ ಚಾಲನೆಗೊಂಡು ಮಲ್ಲಿಕಾರ್ಜುನ ಮಂದಿರದಿಂದ ಆರಂಭಗೊಂಡು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜ್ಯೋತಿಬಾ ಫುಲೆಯವರ ಭಾವಚಿತ್ರ ಮೆರವಣಿಗೆ ನೂರಾರು ಸುಮಂಗಲೇಯರಿಂದ ಪೂರ್ಣಕೊಂಬದೊಂದಿಗೆ ನಡೆಯಿತು. ಕಬ್ಬೂರಿನ ರೇವಣಸಿದ್ದ ಶಿವಾಚಾರ್ಯ ಸ್ವಾಮೀಜಿ, ಸುರೇಶ ಬೆಲ್ಲದ, ಡಾ.ಆರ್.ಕೆ.ಬಾಗಿ, ಡಾ.ರವಿ ಕುರಬೇಟ, ಮಹಾದೇವ ಬಾನಿ, ಮಹಾದೇವ ಜಿವಣಿ, ಶ್ರೀಶೈಲ ತೇರದಾಳೆ, ಮಂಜುನಾಥ ಪಾಟೀಲ, ಮಹಾಲಿಂಗ ಹಂಜಿ, ಜಿ.ಆರ್.ಪಾಟೀಲ, ಜಿ.ಬಿ.ಸಂಗಟೆ, ಎಸ್.ಕೆ.ಕಾಮಗೌಡ, ಮಹಾದೇವ ಪ್ರಧಾನಿ, ರಮೇಶ ಕುರಬೇಟ, ಅಬ್ಬಾಸ ನದಾಫ, ಎಂ.ಕೆ.ಪೋಜೇರಿ, ಜಡೆಪ್ಪ ಬಂಬಲವಾಡೆ, ಸುರೇಶ ಅಳಗುಂಡಿ, ಶ್ರೀಶೈಲ ಕುರಬೇಟ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.



ಮಹಾರಾಷ್ಟ್ರ ಸಚಿವರಿಂದ ದೇಣಿಗೆ



ಚಿಕ್ಕೋಡಿ: ತೋರಣಹಳ್ಳಿಯ ಮಾರುತಿ ದೇವರ ಕೃಪೆಯಿಂದ ನನಗೆ ಒಳ್ಳೆಯ ಅನುಭವವಾಗಿದೆ. ಹಾಗಾಗಿ ಇಲ್ಲಿಗೆ ಆಗಾಗ ಭೇಟಿ ನೀಡಿ ದೇವರ ಆಶೀರ್ವಾದವನ್ನು ಪಡೆದುಕೊಳ್ಳುತ್ತೇನೆ ಎಂದು ಮಹಾರಾಷ್ಟ್ರ ಸಚಿವ ಹಸನ್ ಮುಶ್ರೀಫ್ ಹೇಳಿದರು.

ತಾಲೂಕಿನ ತೋರಣಹಳ್ಳಿ ಗ್ರಾಮದ ಮಾರುತಿ ದೇವಸ್ಥಾನಕ್ಕೆ ಶನಿವಾರ ಭೇಟಿ ನೀಡಿ ಮಾತನಾಡಿ, ಮಾರುತಿ ದೇವರು ಅನೇಕ ಜನರ ಕಷ್ಟ ನಿವಾರಣೆ ಮಾಡಿದಂತೆ ನನ್ನ ಕಷ್ಟವನ್ನೂ ನಿವಾರಣೆ ಮಾಡಿದ್ದಾನೆ. ಹೀಗಾಗಿ ಈ ದೇವಸ್ಥಾನಕ್ಕೆ ವೈಯಕ್ತಿಕವಾಗಿ ತಾನು ರೂ.30 ಲಕ್ಷ ದೇಣಿಗೆ ನೀಡಿದ್ದು, ದೇವಸ್ಥಾನದ ದೀಪ ಸ್ತಂಭ ನಿರ್ಮಾಣಕ್ಕೆ ಇದನ್ನು ದೇವಸ್ಥಾನ ಕಮೀಟಿಯವರು ವಿನಿಯೋಗಿಸುತ್ತಿದ್ದಾರೆ ಎಂದರು.

ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ, ಚಿಕ್ಕೋಡಿ-ಸದಲಗಾ ಶಾಸಕ ಗಣೇಶ ಹುಕ್ಕೇರಿ ಅವರು ದೇವಸ್ಥಾನದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದು, ತಾನೂ ಕೂಡ ದೇವಸ್ಥಾನದ ಅಭಿವೃದ್ಧಿ ಕಾರ್ಯದಲ್ಲಿ ಭಾಗಿಯಾಗಿದ್ದು ಸಂತಸ ತಂದಿದೆ ಎಂದು ಹೆಮ್ಮೆ ಪಟ್ಟರು. ಈ ವೇಳೆ ಸ್ಥಳೀಯರಾದ ಕುಮಾರ ಪಾಟೀಲ, ಬಸವರಾಜ ಮಾಳಗೆ, ಕಿಶೋರ ಪವಾರ, ದೇವಸ್ಥಾನ ಸಮಿತಿ ಪದಾಧಿಕಾರಿಗಳು, ಗ್ರಾಮಸ್ಥರು ಇದ್ದರು.

ಕಿರುಸುದ್ದಿ

ಉತ್ತಮ ಸಾಧನೆ

◆**ಜಮಖಂಡಿ:** 2024-25ನೇಯ ಸಾಲಿನ ಕನ್ನಡ ಸ್ನಾತಕೋತ್ತರ ವಿಭಾಗದಲ್ಲಿ ರೇಖಾ ದೊಡವಾಡ ಅವರಿಗೆ ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಿಂದ ಎಂ.ಎ. ಕನ್ನಡ ಸ್ನಾತಕೋತ್ತರ ವಿಭಾಗದಲ್ಲಿ ಪ್ರಥಮ ರ‍್ಯಾಂಕ್‌ದೊಂದಿಗೆ ನಾಲ್ಕು ಬಂಗಾರದ ಪದಕಗಳನ್ನು ಪಡೆದಿದ್ದಾರೆ.



'ಭಾರತೀಯ ಕಾವ್ಯ ಮೀಮಾಂಸೆ' ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಆರತಿ ತಳವಾರ ಬಂಗಾರದ ಪದಕ ಗಳಿಸಿದ್ದಾಳೆ. ಸವಿತಾ ಗುಡ್ಲಮನಿ ನಾಲ್ಕನೇ ರ‍್ಯಾಂಕ್ ಮತ್ತು ಶ್ರುತಿ ನಾವಿ ಐದನೇ ರ‍್ಯಾಂಕ್ ಪಡೆಯುವ ಮೂಲಕ ಮಹಾವಿದ್ಯಾಲಯದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಪ್ರಾಂಶುಪಾಲ ಡಾ. ಸುನಂದಾ ಎಸ್. ಶಿರೂರ, ಸಂಯೋಜಕ ಡಾ.ವೈ.ವೈ.ಕೊಕ್ಕನವರ, ಡಾ.ವಿ.ಆರ್ .ದಳವಾಯಿ, ಡಾ.ಎಂ.ಎಂ.ಮಂಟೂರ ಎಲ್ಲ ಸಿಬ್ಬಂದಿ ವರ್ಗ ವಿದ್ಯಾರ್ಥಿನಿಯರಿಗೆ ಶುಭಕೋರಿದ್ದಾರೆ.

ರನ್ನ ಬೆಳಗಲಿ ಎಸ್‌ಜಿಎಂ ಕಾಲೇಜಿನ ಸಾಧನೆ


◆**ರನ್ನ ಬೆಳಗಲಿ:** ಪಟ್ಟಣದ ಹೆಸರಾಂತ ಶ್ರೀ ಗುರು ಮಹಾಲಿಂಗೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು ವಾಣಿಜ್ಯ ವಿಭಾಗದಲ್ಲಿ ಬೊರವ್ವ ಕುಳಲಿ(95.50%) ಪ್ರಥಮ, ಕೃಷ್ಣವ್ವ ಕುಡಚಿ(95.16%) ದ್ವಿತೀಯ, ಮೇಘಾ ಹಿಕಡಿ(94.66%) ತೃತೀಯ, ದಾನಮ್ಮ ಚಮಕೇರಿ (94.50%), ಭುವನೇಶ್ವರಿ ಮಸರಗುಂಪಿ(94.33%), ಸುಜಾತ ನಾಡಗೌಡ(93.83%), ಲಕ್ಷ್ಮೀ ಕುಲಗೂಡ (93.16%), ಸಹನಾ ತೋಳನೂರ(92.33%), ಜಯಶ್ರೀ ಮಲಾವಡಿ(91%), ಮಹಾನಂದ ಪೂಜಾರಿ(90%) ಹಾಗೂ ಕಲಾ ವಿಭಾಗದಲ್ಲಿ ಭಾಗ್ಯಶ್ರೀ ತಳೆವಾಡ(96.50%) ಪ್ರಥಮ, ಭೈರವಿ ಸಿದ್ದಾಪೂರ(93.50%) ದ್ವಿತೀಯ, ಪವಿತ್ರಾ ಬಿಳ್ಳೂರ(93.16%) ತೃತೀಯ, ಹನಮಂತ ಸಂಕ್ರಟ್ಟಿ(90.83%), ಮಹೇಶ್ವರಿ ಮುಗಳಖೋಡ(90.83%), ದರ್ಶನ ದೊಬಸಿ(90.33%), ಕಾವೇರಿ ಕುಂಬಾಳಿ(90.33%), ಲಕ್ಷ್ಮಿ ಪೂಜೇರಿ(90.33%), ದೀಪಾ ನ್ಯಾಮಗೌಡ(90.16) ಒಟ್ಟಾರೆ 39 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, ಪ್ರಥಮ ದರ್ಜೆಯಲ್ಲಿ 61, ದ್ವಿತೀಯ ದರ್ಜೆಯಲ್ಲಿ 10 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಕಾಲೇಜಿನ ಫಲಿತಾಂಶ 85% ಆಗಿದ್ದು, ಕನ್ನಡ ವಿಷಯದಲ್ಲಿ 03, ರಾಜ್ಯಶಾಸ್ತ್ರ 01, ಇತಿಹಾಸ 02, ಸಮಾಜಶಾಸ್ತ್ರ 03, ಅರ್ಥಶಾಸ್ತ್ರ 02 ವಿಷಯಗಳಲ್ಲಿ ನೂರಕ್ಕೆ ನೂರು ಅಂಕ ಪಡೆದಿರುತ್ತಾರೆ. ಉತ್ತಮ ಫಲಿತಾಂಶ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷ ದುಂಡಪ್ಪ ಬರಮನಿ, ಕಾರ್ಯಾಧ್ಯಕ್ಷ ಪಂಡಿತ ಪೂಜಾರಿ, ಕಾರ್ಯದರ್ಶಿ ಶ್ರೀಮಂತ ಒಂಟಗೋಡಿ, ಆಡಳಿತ ಮಂಡಳಿಯ ಪದಾಧಿಕಾರಿಗಳು ಹಾಗೂ ಪ್ರಾಚಾರ್ಯ ಪರಶುರಾಮ ನಾಯಕ ಮತ್ತು ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.



ಉತ್ತಮ ಸಾಧನೆ

◆**ಬಾದಾಮಿ:** ಸರ್ಕಾರಿ ಪದವಿ ಪೂರ್ವ ಕಾಲೇಜು ಇಬಿ 0245 ದ್ವಿತಿಯ ವಾರ್ಷಿಕ ಪರೀಕ್ಷೆಯಲ್ಲಿ ವಾಣಿಜ್ಯ ಮತ್ತು ವಿಜ್ಞಾನ ವಿಭಾಗದಲ್ಲಿ ಉತ್ತಮ ಫಲಿತಾಂಶ ತರುವುದರ ಜೊತೆಗೆ ಈ ಕೆಳಗಿನ ವಿದ್ಯಾರ್ಥಿಗಳು ಒಳ್ಳೆಯ ಸಾಧನೆ ಮಾಡಿದ್ದಾರೆ. ಸುಷ್ಮಾ ಎಂ. ತಳವಾರ (540), ಐಶ್ವರ್ಯ ಹೂಗಾರ (507), ಅಶ್ವಿನಿ ಬಿ. ಪಾಟೀಲ (507) ಅಂಕ ಪಡೆದು ವಾಣಿಜ್ಯ ವಿಭಾಗಕ್ಕೆ ಗೌರವ ತಂದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಪವಿತ್ರ ಎಫ್. ರಾಮನಗೌಡ್ರ (446), ಸಂಗೀತ ಎ.ಭೂಮಿ (428), ಪವಿತ್ರ ಎಫ್. ಯಮನಪ್ಪನವರ 371 ಅಂಕ ಪಡೆದು ವಿಜ್ಞಾನ ವಿಭಾಗಕ್ಕೆ ಸಂತಸ ತಂದಿದ್ದಾರೆ. ಸಂಸ್ಥೆಯ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶಾಸಕ ಬಿ.ಬಿ.ಚಿಮ್ಮನಕಟ್ಟಿ, ಉಪಾಧ್ಯಕ್ಷರಾದ ನಾಗರಾಜ ಅರಕೇರಿ, ನಾಗರಾಜ ಹೊಸಮನಿ, ಸದಸ್ಯರುಗಳಾದ ಕಂಬಳಿ, ಮೃತ್ಯುಂಜಯ, ಮಡಿವಾಳರ, ಗುದಗಿ ಎಲ್ಲರೂ ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತ ಪಡಿಸಿದ್ದಾರೆ.





ಬಾದಾಮಿ: ತುಮಕೂರಿನ ಪ್ರಸಿದ್ಧ ಸಿದ್ದಗಂಗಾ ಮಠದ ಧರ್ಮಾಧಿಕಾರಿ, ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಶುಕ್ರವಾರ ಶಾಸಕ ಭೀಮಸೇನ ಬಿ ಚಿಮ್ಮನಕಟ್ಟಿ ಅವರ ನಿವಾಸಕ್ಕೆ ಆಗಮಿಸಿ, ಆತಿಥ್ಯ ಸ್ವೀಕರಿಸಿ, ಕುಟುಂಬಸ್ಥರಿಗೆ ಆಶೀರ್ವದಿಸಿದರು.

ಆಶಾ ಕಾರ್ಯಕರ್ತೆಯರ ತರಬೇತಿ ಕಾರ್ಯಾಗಾರ

◆**ಬಾದಾಮಿ:** ಮೆದುಳು ಆರೋಗ್ಯ ಕಾಪಾಡಿಕೊಂಡು ಉತ್ತಮ ಜೀವನ ನಿರ್ವಹಿಸಬೇಕು ಎಂದು ತಾಲೂಕಾ ಆರೋಗ್ಯಾಧಿಕಾರಿ ಡಾ.ಎಂ.ಬಿ.ಪಾಟೀಲ ಹೇಳಿದರು.

ಅವರು ಪಟ್ಟಣದ ತಾಲೂಕಾ ಆರೋಗ್ಯಾಧಿಕಾರಿಗಳ ಕಚೇರಿಯ ಸಭಾಭವನದಲ್ಲಿ ಶುಕ್ರವಾರ 'ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ' ದ ಕುರಿತು ತಾಲೂಕಾ ಮಟ್ಟದಲ್ಲಿ ಎಲ್ಲಾ ಆಶಾ ಕಾರ್ಯಕರ್ತೆಯರಿಗೆ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಜಿಲ್ಲಾ ಮೆದುಳು ಆರೋಗ್ಯ ಉಪಕ್ರಮದ ಜಿಲ್ಲಾ ಸಂಯೋಜಕ ಬಸವರಾಜ ಹೂಗಾರ ತರಬೇತಿ ನೀಡುತ್ತಾ ಮೆದುಳು ಸಂಬಂಧಿ ರೋಗಗಳಾದ ಪಾರ್ಶ್ವ ವಾಯು, ತಲೆನೋವು, ಅಪಸ್ಮಾರ ಹಾಗೂ ಮರೆವಿನ ಕಾಯಿಲೆಗಳ ಲಕ್ಷಣಗಳು ಹಾಗೂ ತಡೆಗಟ್ಟುವಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಹಾಗೂ ಮುಂಜಾಗ್ರತಾ ಕ್ರಮಗಳಾದ ದೈಹಿಕ ಚಟುವಟಿಕೆ ಆರೋಗ್ಯಕರ ಹವ್ಯಾಸಗಳು, ಯೋಗ ಮತ್ತು ಧ್ಯಾನ, ಸಂಘ ಜೀವಿಯಾಗುವದು, ಸಾಕಷ್ಟು ನಿದ್ರೆಯಿಂದ ಮೆದುಳು ಆರೋಗ್ಯ ವೃದ್ಧಿಯಾಗುತ್ತದೆ ಎಂದು ತಿಳಿಸಿದರು.

ತಾಲೂಕಾ ಆಸ್ಪತ್ರೆ ದಂತ ತಜ್ಞ ವೈದ್ಯ ಡಾ.ಜಯಂತ ರಾಷ್ಟ್ರೀಯ ಬಾಯಿ ಆರೋಗ್ಯದ ಬಗ್ಗೆ ಉಪನ್ಯಾಸ ನೀಡಿದರು. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಪಿ.ಎಚ್.ಮಹಾಲಿಂಗಮಠ ಪ್ರಾಸ್ತಾವಿಕವಾಗಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಾದ ಆಶಾ ಕಿರಣ, ಸ್ವಯಂ ಗಣತಿ ಬಗ್ಗೆ ಮಾತನಾಡಿದರು. ಆಶಾ ಮೆಂಟರ್ ಲಕ್ಷ್ಮೀ ಡಬಗಲ್, ಎಲ್.ಎಚ್. ಗೋಪಾಲಗೌಡರ, ಸೇರಿದಂತೆ ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕು ಆಶಾ ಕಾರ್ಯಕರ್ತೆಯರು ಹಾಜರಿದ್ದರು. ಆರ್.ಬಿ.ಅಂಬಿಗರ ಸ್ವಾಗತಿಸಿದರು. ಎಂ.ಎಸ್. ಅಂಗಡಿ ವಂದಿಸಿದರು.



ಬಾದಾಮಿ: ಪಟ್ಟಣದ ತಾಲೂಕಾ ಆರೋಗ್ಯಾಧಿಕಾರಿಗಳ ಕಚೇರಿಯ ಸಭಾಭವನದಲ್ಲಿ ಶುಕ್ರವಾರ 'ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ' ದ ಕುರಿತು ತಾಲೂಕಾ ಮಟ್ಟದಲ್ಲಿ ಎಲ್ಲಾ ಆಶಾ ಕಾರ್ಯಕರ್ತೆಯರಿಗೆ ತರಬೇತಿ ಕಾರ್ಯಾಗಾರವನ್ನು ತಾಲೂಕಾ ಆರೋಗ್ಯಾಧಿಕಾರಿ ಡಾ.ಎಂ.ಬಿ.ಪಾಟೀಲ ಅವರು ಉದ್ಘಾಟಿಸಿದರು.

ಮಾಜಿ ಶಾಸಕ ಎಂ.ಕೆ. ಪಟ್ಟಣಶೆಟ್ಟಿ ಸಲಹೆ

ಸಂಸ್ಕಾರದ ಜೊತೆಗೆ ಉತ್ತಮ ಶಿಕ್ಷಣ ನೀಡಿ

◆**ಗುಳೇದಗುಡ್ಡ:** ಜಂಗಮರಿಗೆ ಸಮಾಜದಲ್ಲಿ ಅತ್ಯುನ್ನತ ಸ್ಥಾನವಿದೆ. ನಮ್ಮ ಸಂಪ್ರದಾಯ, ಸಂಸ್ಕೃತಿಯನ್ನು ಕಾಪಾಡಿಕೊಂಡು ಬೆಳೆಸಿಕೊಂಡು ಬರುವಲ್ಲಿ ಜಂಗಮ ಸಮಾಜ ತನ್ನದೇ ಆದ ಮಹತ್ವಹೊಂದಿದೆ. ನಮ್ಮ ಹಿರಿಯರು ಹಾಕಿಕೊಟ್ಟ ಸಂಪ್ರದಾಯವನ್ನು ಉಳಿಸಿಕೊಂಡರೆ ಮಾತ್ರ ನಮ್ಮ ಸಮಾಜ, ನಮ್ಮ ಧರ್ಮವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಮಾಜಿ ಶಾಸಕ ಎಂ.ಕೆ. ಪಟ್ಟಣಶೆಟ್ಟಿ ಹೇಳಿದರು.

ಅವರು ಶನಿವಾರ ಮುರುಘಾಮಠದ ಕುಮಾರೇಶ್ವರ ಕಲ್ಯಾಣಮಂಟಪದಲ್ಲಿ ಗುಳೇದಗುಡ್ಡ ತಾಲೂಕು ವೀರಶೈವ ಜಂಗಮಕ್ಷೇಮಾಭಿವೃದ್ಧಿ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿದ್ದ ಶ್ರೀ. ಜ.ರೇಣುಕಾಚಾರ್ಯರು, ಶ್ರೀ ಬಸವೇಶ್ವರರು ಹಾಗೂ ಶ್ರೀ ಹಾನಗಲ್‌ಕುಮಾರ ಶಿವಯೋಗಿಗಳ ತಾಲೂಕು ಮಟ್ಟದ ಜಯಂತ್ಯುತ್ಸವ ಸಮಾರಂಭದಲ್ಲಿ ಮಾತನಾಡಿ, ನಮ್ಮ ಮಕ್ಕಳಿಗೆ ನಮ್ಮ ಸಂಸ್ಕೃತಿ, ಸಂಸ್ಕಾರದ ಜೊತೆಗೆ ಉತ್ತಮ ಶಿಕ್ಷಣವನ್ನೂ ನೀಡಬೇಕು ಎಂದರು.

ಮಾಜಿ ಶಾಸಕ ರಾಜಶೇಖರ ಶೀಲವಂತ ಮಾತನಾಡಿ, ಶ್ರೀ ರೇಣುಕಾಚಾರ್ಯರು ಹಾಕಿಕೊಟ್ಟ ಭಕ್ತಿ ಮಾರ್ಗ ನಮಗೆಲ್ಲ ಮಾರ್ಗದರ್ಶನವಾಗಿದೆ. ಸಾಮರಸ್ಯ ಜೀವನಕ್ಕೆ ಎಲ್ಲರೂ ಒಟ್ಟಾಗಿ, ಸಮಾನತೆಯಿಂದ ಇರಬೇಕು ಎಂಬ ತತ್ವವನ್ನು ಬೋಧಿಸಿದ ರೇಣುಕಾಚಾರ್ಯರು ಸಮಾಜದಲ್ಲಿ ಸಮಾನತೆಯನ್ನು ತಂದವರು ಅದೇ ರೀತಿ ಜಂಗಮ ಸಮಾಜ ಎಲ್ಲರಿಗೂ ಬೇಕಾದ ಸಮಾಜವಾಗಿದೆ ಎಂದರು.

ಸಾನ್ನಿಧ್ಯವಹಿಸಿದ್ದ ಮುರುಘಾಮಠದ ಶ್ರೀ ಕಾಶಿನಾಥ ಮಹಾಸ್ವಾಮಿಗಳು ಮಾತನಾಡಿ, ವೀರಶೈವ ಲಿಂಗಾಯತರು ಒಮ್ಮೆ ಲಿಂಗಧಾರಣೆ ಮಾಡಿದ ಮೇಲೆ



» ಜ.ರೇಣುಕಾಚಾರ್ಯರು, ಬಸವೇಶ್ವರರು, ಹಾನಗಲ್‌ಕುಮಾರ ಶಿವಯೋಗಿಗಳ ತಾಲೂಕು ಮಟ್ಟದ ಜಯಂತ್ಯುತ್ಸವ

ಜಾತಿ ರಹಿತ, ವರ್ಗ ರಹಿತ, ವರ್ಣ ರಹಿತವಾಗುತ್ತಾನೆ. ವೀರಶೈವ ಲಿಂಗಾಯತ ತತ್ವಪ್ರದಾನವಾಗಿದೆ ಎಂದರು.

ಜೆಡಿಎಸ್‌ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಶಿವಯೋಗ ಮಂದಿರಿದ ಧರ್ಮದರ್ಶಿ ಎಂ.ಬಿ. ಹಂಗರಗಿ ಮಾತನಾಡಿದರು. ಬಾಲಕರ ಸರಕಾರಿ ಪ.ಪೂ.ಕಾಲೇಜಿನ ಶಿಕ್ಷಕ ಸಂಗಯ್ಯ ಗಣಾಚಾರಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು. ಒಪ್ಪತ್ತೇಶ್ವರ ಮಠದ ಶ್ರೀ ಒಪ್ಪತ್ತೇಶ್ವರ ಸ್ವಾಮೀಜಿ, ಮರಡಿಮಠದ ಶ್ರೀ ಅಭಿನವ ಕಾಡಸಿದ್ದೇಶ್ವರ ಸ್ವಾಮಿಗಳು ಸಾನಿಧ್ಯ, ಟೆಂಗಿನಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿಗಳು ಸಾನಿಧ್ಯವಹಿಸಿ ಮಾತನಾಡಿದರು. ಸಂಸ್ಥೆಯ ಅಧ್ಯಕ್ಷ ಶಿವಾನಂದ ಮಳಿಮಠ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಸಂಸ್ಥೆಯ ಉಪಾಧ್ಯಕ್ಷ ಮಹಾಂತೇಶ ಸರಗಣಾಚಾರಿ, ಎಪಿಎಂಸಿ ಮಾಜಿ ಅಧ್ಯಕ್ಷ ಪ್ರಭುಸ್ವಾಮಿ ಸರಗಣಾಚಾರಿ, ವಿಶ್ವನಾಥ ಹಿರೇಮಠ, ಉಮೇಶ ಶಿವನಗೌಡರ, ಪ್ರಭು ತಟ್ಟಿಮಠ, ಸಂಗಯ್ಯ ಗವಿಮಠ, ಶಿವಕುಮಾರ ಸಾವಳಗಿಮಠ, ಪಡದಯ್ಯ ಕಕ್ಕಯ್ಯನಮಠ, ಜಗದೀಶ ಕಾರುಡಗಿಮಠ, ಸಿದ್ದು ಸಂಕಿನಮಠ, ರಾಚಯ್ಯ ಸ್ಥಾವರಮಠ, ವಿ.ಬಿ. ಹಿರೇಮಠ, ನಿಜಗುಣಯ್ಯ ಹಿರೇಮಠ, ಮಲ್ಲಯ್ಯ ಭಂಡಾರಿ, ಬಂಡಯ್ಯ ಹಿರೇಮಠ, ಚನಬಸಯ್ಯ ಸಿಂದಗಿಮಠ, ಈರಯ್ಯ ಚನ್ನಸಂಗಯ್ಯನಮಠ, ಶ್ರೀಕಾಂತ ಸರಗಣಾಚಾರಿ, ಶಿವಯ್ಯ ಕಕ್ಕಯ್ಯನಮಠ, ಜಗದೀಶ ಸರಗಣಾಚಾರಿ, ಸಂಗಯ್ಯ ಶಿವಪ್ಪಯ್ಯನಮಠ, ಸಂಗಯ್ಯ ಹಿರೇಮಠ, ಶಂಕ್ರಯ್ಯ ವಿಭೂತಿಮಠ, ಬಸವರಾಜ ಸರಗಣಾಚಾರಿ, ಸಿದ್ದಲಿಂಗಯ್ಯ ಬೂದಿಹಾಳಮಠ, ಮಲ್ಲಯ್ಯ ಹೊದ್ಲೂರಮಠ, ಗೀತಾ ಸಾರಂಗಮಠ, ಸುಧಾ ಪೂಜಾರಿ, ದ್ರಾಕ್ಷಾಯಣಿ ಹಿರೇಮಠ, ಚನ್ನಮ್ಮ ತಟ್ಟಿಮಠ, ಸುಮಾ ಸಾವಳಗಿಮಠದ, ಸುವರ್ಣಾ ಮಳಿಮಠ, ನೀಲಮ್ಮ ಚನ್ನಸಂಗಯ್ಯನಮಠ ಸೇರಿದಂತೆ ಸಮಾಜಬಾಂಧವರು ಉಪಸ್ಥಿತರಿದ್ದರು ಇದೇ ಸಂದರ್ಭದಲ್ಲಿ ಜ್ಞಾನಸಿಂಧು ಕಲಾಬಳಗದ ಶಂಕರ ಮುಂದಿನಮನಿ, ಚಿದಾನಂದಸಾ ಕಟವಾ ಹಾಗೂ ಬಸವರಾಜ ಸಿಂದಗಿಮಠ ಅವರಿಂದ ವಚನಗಾಯನ ಕಾರ್ಯಕ್ರಮ ನಡೆಯಿತು.

ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಿ: ರಾಯನಗೌಡ್ರ

◆**ಬಾದಾಮಿ:** ವಿದ್ಯಾರ್ಥಿಗಳು ಶಿಬಿರದ ಪ್ರಯೋಜನವನ್ನು ಪಡೆದುಕೊಂಡು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಶಿವಾನಂದ್ ರಾಯನಗೌಡ ಹೇಳಿದರು.

ಸರ್ಕಾರಿ ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಾದಾಮಿ, ಬಾಗಲಕೋಟೆ ವಿಶ್ವವಿದ್ಯಾಲಯ ಜಮಖಂಡಿ ಸಂಯೋಜನೆಯಲ್ಲಿ ಏ.16ರವರೆಗೆ ಏಳು ದಿನಗಳ ಕಾಲ ಬಾದಾಮಿ ತಾಲೂಕಿನ ಮುಷ್ಠಿಗೇರಿ ಗ್ರಾಮದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಎರಡು ಘಟಕಗಳ ವತಿಯಿಂದ ವಾರ್ಷಿಕ ವಿಶೇಷ ಶಿಬಿರದಲ್ಲಿ ಅವರು ಮಾತನಾಡಿದರು.

ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಹನುಮಂತ ಅಪ್ಪಣ್ಣವರ ಮಾತನಾಡಿ, ಬಾದಾಮಿ ತಾಲೂಕಿನ ಮುಷ್ಠಿಗೇರಿ ಗ್ರಾಮವು ವೈವಿಧ್ಯತೆಗಳಿಂದ ಕೂಡಿದ ಊರಾಗಿದ್ದು ವಿದ್ಯಾರ್ಥಿಗಳು ಇಲ್ಲಿ ಅನೇಕ ವಿಷಯಗಳನ್ನು ಕಲಿಯಬಹುದು ಎಂದರು.

ಶಿಬಿರದ ಉದ್ಘಾಟನಾ ಸಮಾರಂಭವನ್ನು ಶುಕ್ರವಾರ ಮುಷ್ಠಿಗೇರಿ ಗ್ರಾಪಂ ಅಧ್ಯಕ್ಷರಾಗಿದ್ದ ಹನುಮಂತ ದ್ಯಾ. ಶಿದ್ದಣ್ಣವರ ಉದ್ಘಾಟಿಸಿದರು.

ಊರಿನ ಹಿರಿಯರಾದ ಅಪ್ಪಣ್ಣ ಕುರಿ, ಯಲ್ಲಪ್ಪ ಕತ್ತಿ, ಮುಷ್ಠಿಗೇರಿಯ ಪಿಕೆಪಿಎಸ್ ಕಾರ್ಯದರ್ಶಿ ಬಾಳಪ್ಪ ಬಾಲನಾಯ್ಕರ, ಸೆಕ್ಷನ್ ಆಫೀಸರ್ ಸೋಮಪ್ಪ ಕೊನೇರಿ, ಗ್ರಾಮದ ಹಿರಿಯರಾದ ಬಸವರಾಜ ನರೇನೂರ, ಅಪ್ಪಣ್ಣ ಕೊನೇರಿ ವೇದಿಕೆ ಮೇಲೆ ಉಪಸ್ಥಿತರಿದ್ದರು.

ರಾಷ್ಟ್ರೀಯ ಸೇವಾ ಯೋಜನೆ ಒಂದನೇ ಘಟಕದ ಶಿಬಿರಾಧಿಕಾರಿಗಳಾದ ಪ್ರೊ. ಗೋವರ್ಧನಪಿ.ಬಿ. ಪ್ರಾಸ್ತಾವಿಕ ಮಾತನಾಡಿ ಸ್ವಾಗತಿಸಿದರು. ಎರಡನೇ ಘಟಕದ ಶಿಬಿರಾಧಿಕಾರಿಗಳಾದ ಡಾ.ಬಾಬುರಾಯಣ್ಣ ಧನ್ನೂರ ಶಿಬಿರಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸುವುದರೊಂದಿಗೆ ವಂದಿಸಿದರು. ಕಾಲೇಜಿನ ವಿದ್ಯಾರ್ಥಿನಿ ಸ್ಫೂರ್ತಿ ಸುತಗೊಂಡಿ ನಿರೂಪಿಸಿದರು.



ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಗೆ ಕೈಜೋಡಿಸಿ



◆**ಜಮಖಂಡಿ:** ನೈಸರ್ಗಿಕ ಸಂಪನ್ಮೂಲಗಳನ್ನು ಮಿತವಾಗಿ ಬಳಸಬೇಕು, ಮರುಬಳಕೆ ಮಾಡಬೇಕು. ಐಷಾರಾಮಿ ಜೀವನವನ್ನು ಕೈಬಿಟ್ಟು ಸರಳ ಜೀವನ ನಡೆಸುವ ಮೂಲಕ ಪರಿಸರ ಸಂರಕ್ಷಣೆಗೆ ಕೈಜೋಡಿಸಬೇಕು ಎಂದು ನಿವೃತ್ತ ಪ್ರಾಚಾರ್ಯ ಡಾ.ಎಸ್.ಎಸ್. ಸುವರ್ಣಖಂಡಿ ಹೇಳಿದರು.

ಸ್ಥಳೀಯ ರೋಟರಿ ಭವನದಲ್ಲಿ ಸ್ಥಳೀಯ ರೋಟರಿ ಸಂಸ್ಥೆ ಆಯೋಜಿಸಿದ್ದ ವಾರದ ಸಭೆಯ ಮುಖ್ಯ ಅತಿಥಿಯಾಗಿ ಪರಿಸರ ಸಂರಕ್ಷಣೆಯ ಮಹತ್ವ ಕುರಿತು ಅವರು ವಿಶೇಷ ಉಪನ್ಯಾಸ ನೀಡಿದ ಅವರು ಪ್ರಾಣಿ ಜನ್ಯ ವಸ್ತುಗಳನ್ನು ಉಪಯೋಗಿಸಬಾರದು. ಸಸಿಗಳನ್ನು ನೆಟ್ಟು ಪೋಷಿಸಿ ಗಿಡಮರಗಳನ್ನು ಬೆಳೆಸಬೇಕು. ಆಹಾರ ಧಾನ್ಯ, ನೀರು, ಮಣ್ಣು ಕಲುಷಿತ ಆಗದಂತೆ ಜಾಗ್ರತೆ ವಹಿಸಬೇಕು. ಮುಂದಿನ ಪೀಳಿಗೆಗಾಗಿ ಸ್ವಚ್ಛ ಪರಿಸರ ಉಳಿಸಬೇಕು ಎಂದರು.

ಶ್ರೀಧರ ಕಾಖಂಡಕಿ ರೋಟರಿ ಸಂಸ್ಥೆಯ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು. ರೋಟರಿ ಸಂಸ್ಥೆಯ ಅಧ್ಯಕ್ಷ ರಾಜಶೇಖರ ಕೋವಳ್ಳಿ ಸ್ವಾಗತಿಸಿದರು. ಸಂತೋಷ ಹಿರೇಮಠ ಅತಿಥಿಗಳನ್ನು ಪರಿಚಯಿಸಿದರು. ಮಹಾದೇವ ಕಂಕಾಳೆ ರೋಟರಿ ಸಂಸ್ಥೆಯ ಫೋರ್ ವೇ ಟೆಸ್ಟ್ ಓದಿದರು. ಕಾರ್ಯದರ್ಶಿ ಎಂ.ಎಚ್. ಕಡ್ಲಿಮಟ್ಟಿ ವಂದಿಸಿದರು.

ಜನಪದ ಸಂಸ್ಕೃತಿ ಉಳಿಸಬೇಕಿದೆ: ಶಿವಸ್ವಾಮಿ

◆**ಗುಳೇದಗುಡ್ಡ:** ಆಧುನಿಕತೆಯ ಅಬ್ಬರದಲ್ಲಿ ಜನಮಾನಸದಿಂದ ಮರೆಯಾಗುತ್ತಿರುವ ನಮ್ಮ ಶ್ರೀಮಂತ ಜಾನಪದ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಅದರ ಮಹತ್ವ ಹಾಗೂ ಅಗತ್ಯವನ್ನು ಇಂದಿನ ಪೀಳಿಗೆಗೆ ತಿಳಿಸುವ ಕೆಲಸ ಆಗಬೇಕು ಎಂದು ಚಾಮರಾಜನಗರದ ವಿಶ್ರಾಂತ ಪ್ರೊ.ಎ.ಎಂ.ಶಿವಸ್ವಾಮಿ ಹೇಳಿದರು.

ಪಟ್ಟಣದ ಭಂಡಾರಿ ಹಾಗೂ ರಾಠಿ ಮಹಾವಿದ್ಯಾಲಯದಲ್ಲಿ ನಡೆದ ಪಠ್ಯಪೂರಕ ಸಾಂಸ್ಕೃತಿಕ ಸಮಾರೋಪ ಸಮಾರಂಭ ಹಾಗೂ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿ, ನಮ್ಮ ಜಾನಪದ ಕಲೆ, ಸಂಸ್ಕೃತಿ ವಿಶೇಷವಾಗಿದ್ದು, ಜಾನಪದದಲ್ಲಿ ಮೌಲ್ಯಗಳು ತುಂಬಿಕೊಂಡಿವೆ. ಇಂತಹ ಶ್ರೀಮಂತ ಜಾನಪದ ಕಲೆ, ಸಾಹಿತ್ಯ ಗ್ರಾಮೀಣ ಭಾಗಗಳಲ್ಲಿ ಇನ್ನೂ ಜೀವಂತವಾಗಿದ್ದು, ಅವುಗಳನ್ನ ಉಳಿಸಿ ಬೆಳೆಸುವ ಕಾರ್ಯವಾಗಬೇಕಿದೆ. ಇದೇ ಸಂದರ್ಭದಲ್ಲಿ ಶಿವಸ್ವಾಮಿ ಅವರು ಜಾನಪದ ಹಾಡುಗಳನ್ನು ಹಾಡಿ ಸಂಭ್ರಮಿಸಿದರು. ಸಂಸ್ಥೆಯ ಗೌರವಕಾರ್ಯದರ್ಶಿ ರವೀಂದ್ರಣ್ಣ ಪಟ್ಟಣಶೆಟ್ಟಿ ಅವರು ಡೊಳ್ಳು ಬಾರಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಪ್ರಾಚಾರ್ಯ ಡಾ.ಎಸ್.ವೈ.ಬಡಣ್ಣವರ ಅಧ್ಯಕ್ಷತೆವಹಿಸಿದ್ದರು. ಈ ಸಂದರ್ಭದಲ್ಲಿ ಮಂಡಳಿಯ ಸದಸ್ಯರಾದ ಪ್ರೊ.ಎಸ್.ಬಿ.ಬರಗುಡಿ, ಪಿ. ಎಂ.ಝುಂವರ, ರಾಜು ತಾಪಡಿಯಾ, ಶ್ಯಾಮಸುಂದರ ಮಾಲಪಾಣಿ, ಪ್ರೊ.ಎಸ್.ಎಸ್.ನಾಯನೇಗಲಿ, ಸಿದ್ರಾಮಯ್ಯ ಪುರಾಣಿಕಮಠ, ಪ್ರೊ. ಕೆಂಪರಾಜು, ಡಾ.ಮಂಜಣ್ಣ, ಡಾ.ಎಂ.ಎಸ್.ಪಾಟೀಲ, ಪ್ರೊ.ಎಂ.ಎಂ.ಪಾಟೀಲ, ಡಾ.ಸಿ.ಕೆ.ನಂದಾರ ಮತ್ತಿತರು ಉಸ್ಥಿತರಿದ್ದರು.



ಡಾ.ಬಿ.ಆರ್.ಅಂಬೇಡ್ಕರ್‌ರ ಭಾವಚಿತ್ರ ಮೆರವಣಿಗೆಗೆ ಚಾಲನೆ

◆**ಇಳಕಲ್:** ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವದ ಅಂಗವಾಗಿ ಏ.9ರಿಂದ 14ರ ವರೆಗೆ ಹಮ್ಮಿಕೊಳ್ಳಲಾದ ವಿವಿಧ ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು.

ನಗರದ ಅಂಬೇಡ್ಕರ್ ಕಾಲೋನಿಯಿಂದ ಆರಂಭಗೊಂಡ ಭವ್ಯ ಮೆರವಣಿಗೆಯು ಸಾರ್ವಜನಿಕರ ಗಮನ ಸೆಳೆಯಿತು. ಸಂಜೆ ಅಂಬೇಡ್ಕರ್ ಕಾಲೋನಿಯಿಂದ ಹೊರಟ ಕಾರ್ಯಕರ್ತರು ಮತ್ತು ಸಮಾಜದ ಮುಖಂಡರು ಕೈಯಲ್ಲಿ ಮುಂಬತ್ತಿ ಹಿಡಿದು ಶಾಂತಿಯುತವಾಗಿ ಸಾಗಿ ಬಂದರು. ಗುರು ಮಹಾಂತ ಶ್ರೀಗಳು ಡಾ.ಬಿ.ಆರ್. ಅಂಬೇಡ್ಕರ್ ಬೃಹತ್ ಬ್ಯಾನರ್ ಅನ್ನು ಅನಾವರಣಗೊಳಿಸಿದರು. ನಂತರ ಮಾತನಾಡಿದ ಶ್ರೀಗಳು, ಅಂಬೇಡ್ಕರ್ ಅವರ ವಿಚಾರಧಾರೆಗಳು ಕೇವಲ ಒಂದು ವರ್ಗಕ್ಕೆ ಸೀಮಿತವಲ್ಲ, ಅವು ಇಡೀ ಮಾನವಕುಲಕ್ಕೆ ದಾರಿದೀಪ ಎಂದು ಸಂದೇಶ ನೀಡಿದರು. ಹಿರಿಯರಾದ ಶರಣಪ್ಪ ಆಮದಿಹಾಳ, ನಗರಸಭೆ ಸದಸ್ಯ ಸುರೇಶ ಜಂಗ್ಲಿ, ಕಾಂಗ್ರೆಸ್ ಪಕ್ಷದ ಯುವ ಮುಖಂಡ ಪ್ರವೀಣ ಹೊಳಿ, ವರದಿಗಾರ ಸಿದ್ದಾರ್ಥ ಚಲವಾದಿ ಮತ್ತಿತರ ಗಣ್ಯರು ಹಾಗೂ ನೂರಾರು ಅಭಿಮಾನಿಗಳು, ಯುವಕರು ಇದ್ದರು.



ಗುರುವಂದನಾ ಕಾರ್ಯಕ್ರಮ ಇಂದು

◆**ಗುಳೇದಗುಡ್ಡ:** ಪಟ್ಟಣದ ಶ್ರೀಮತಿ ಆರ್.ಡಿ. ಸೋನಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ.3ರ 1981-87ನೇ ಸಾಲಿನ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯಕ್ರಮ ಏ.12ರಂದು ಬೆಳಿಗ್ಗೆ 10.30ಕ್ಕೆ ಸ್ಥಳೀಯ ವಾಸವಿ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಕೋಟೆಕಲ್- ಗುಳೇದಗುಡ್ಡ ಅಮರೇಶ್ವರ ಮಠದ ಶ್ರೀ ಡಾ. ನೀಲಕಂಠ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಲಿದ್ದು, ಶಾಲೆಯ ಮುಖ್ಯಗುರುಗಳಾದ ಜಿ.ಎಸ್. ಸೂಳಿಕೇರಿ ಅಧ್ಯಕ್ಷತೆ ವಹಿಸುವರು. ಕಲಿಸಿದ ಗುರುಗಳಾದ ಅನ್ನಪೂರ್ಣಾ ಯರಗುಂಟಿ, ವಾದೀಂದ್ರ ಕಟ್ಟಿ, ಸಂಗನಬಸವ್ವ ಹುಳಿಪಲ್ಲೇದ, ಜಯಶ್ರೀ ರಂಗರೇಜ ಹಾಗೂ ಚನ್ನಪ್ಪ ದಾಡವೋಡೆ ಉಪಸ್ಥಿತರಿರಲಿದ್ದು, ಸಹಶಿಕ್ಷಕರಾದ ಎಸ್.ಜಿ. ಮುಸಬಿನಾಳ, ಎಚ್.ಎಸ್.ನರಕಿ, ಎ.ಆರ್. ಬಾರಟಕ್ಕೆ, ವಸಂತಕುಮಾರ ಕುರಿ ಭಾಗವಹಿಸುವರು ಎಂದು ಸಂಘಟಕರು ತಿಳಿಸಿದ್ದಾರೆ.

ಪಿಯು ವಿದ್ಯಾರ್ಥಿಗಳ ಉತ್ತಮ ಸಾಧನೆ

◆**ತೇರದಾಳ:** ಪಟ್ಟಣದ ಪ್ರತಿಷ್ಠಿತ ಎಸ್.ಡಿ.ಎಮ್. ಟ್ರಸ್ಟನ ದಾನಿಗೊಂಡ ಪದವಿ ಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆದು ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಒಟ್ಟು 74 ವಿದ್ಯಾರ್ಥಿಗಳಲ್ಲಿ 29 ವಿದ್ಯಾರ್ಥಿಗಳು ಉನ್ನತಶ್ರೇಣಿಯಲ್ಲಿ 23 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಇದರಲ್ಲಿ ಸೌಂದರ್ಯ ಐನಾಪೂರ 600 ಅಂಕಗಳಿಗೆ 572 (95.33%) ಅಂಕ ಪಡೆದು ಕಾಲೇಜಿಗೆ ಮೊದಲನೆ ರ‍್ಯಾಂಕ್ ಗಳಿಸಿದ್ದಾಳೆ ಆದೇ ರೀತಿಯಾಗಿ ಅಕ್ಷತಾ ಹುನಚಾಳ 570(95%) ಮತ್ತು ಪ್ರತಿಕ್ಷಾ ಆಕ್ಕಿವಾಟ 570(95%) ಅಂಕ ಗಳಿಸಿ ದ್ವಿತಿಯ ರ‍್ಯಾಂಕ್ ಪಡೆದಿದ್ದಾರೆ. ಹರ್ಷಾ ಹರವಿ ಇವಳು 567 ಅಂಕಗಳಿಸಿ ಮೂರನೇ ರ‍್ಯಾಂಕ ಬಂದಿದ್ದಾಳೆ. ಆದೇ ರೀತಿಯಾಗಿ ವಿಜ್ಞಾನ ವಿಭಾಗದ ಒಟ್ಟು 138 ವಿದ್ಯಾರ್ಥಿಗಳಲ್ಲಿ 113 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ 22 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಇದರಲ್ಲಿ ಅಂಜುಮ ನಧಾಪ ಇವಳು 576 (96%) ಅಂಕಗಳಿಸಿ ಕಾಲೇಜಿಗೆ ಮೊದಲನೇ ರ‍್ಯಾಂಕ ಹಾಗೂ ತಹಶೀನ ಮುಲ್ಲಾ 575 (95.83%) ಪಡೆದು ಎರಡನೇ ರ‍್ಯಾಂಕ ಆದೇ ರೀತಿಯಾಗಿ ಶ್ರೇಯಾ ಸಾಂಗವೆ 573 (95.50%)ತೃತಿಯ ರ‍್ಯಾಂಕ ಬಂದಿದ್ದಾಳೆ. ಈ ಎಲ್ಲ ವಿದ್ಯಾರ್ಥಿಗಳಿಗೆ ದಾನಿಗೊಂಡ ಸಮೂಹ ಸಂಸ್ಥೆಯ ಚೇರಮನ್‌ರಾದ ಡಾ. ಎಮ್.ಎಸ್ .ದಾನಿಗೊಂಡ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಡಾ.ಪುಷ್ಪದಂತ ದಾನಿಗೊಂಡ ಮತ್ತು ಕಾಲೇಜಿನ ಪ್ರಾಚಾರ್ಯರು ಹಾಗೂ ಶಿಕ್ಷಕ ವೃಂದದವರು ಶುಭಕೋರಿದ್ದಾರೆ.



ಧ್ವನಿ ವರ್ಧಕದ ಮೂಲಕ ಸಾರ್ವಜನಿಕರಲ್ಲಿ ಅರಿವು

ಸ್ವಯಂ ಗಣತಿ ಜಾಗೃತಿಗಾಗಿ ಬೈಕ್ ರ‍್ಯಾಲಿ



◆**ಮಹಾಲಿಂಗಪುರ:** ಸ್ಥಳೀಯ ಪುರಸಭಾ ಮುಖ್ಯಾಧಿಕಾರಿ ನಾಮದೇವ ಲಮಾಣಿ ನೇತೃತ್ವ ದಲ್ಲಿ ಪುರಸಭಾ ಅಧಿಕಾರಿಗಳು, ಸಿಬ್ಬಂದಿ ಮತ್ತು ಪೌರಕಾರ್ಮಿಕರು ಶುಕ್ರವಾರ ಸ್ಥಳೀಯ ಪ್ರಮುಖ ಬೀದಿಗಳಲ್ಲಿ ಬೈಕ್ ರ‍್ಯಾಲಿ ಮಾಡಿ ಸ್ವಯಂ ಗಣತಿಯ https://se.census.gov.in ಎಂಬ ಈ ಲಿಂಕನ್ನು ಬಳಸಿ ಸ್ವಯಂ ಗಣತಿಯನ್ನು ಮಾಡಿಕೊಳ್ಳಲು ಹಾಗೂ ಸ್ವಯಂ ಗಣತಿಯ ಐಡಿ ಯನ್ನು ತಪ್ಪದೇ ಸಂಗ್ರಹಿಸಿಟ್ಟು ಗಣತಿದಾರರು ಮನೆಗೆ ಬಂದಾಗ ನೀಡುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು. ಸ್ವಯಂ ಗಣತಿ ಜಾಗೃತಿ ಘೋಷಣೆಗಳ ಪೋಸ್ಟರ್ ಪ್ರದರ್ಶಿಸುತ್ತಾ, ಧ್ವನಿವರ್ಧಕದ ಮೂಲಕವೂ ಸ್ವಯಂ ಗಣತಿಯ ಮಹತ್ವ ಮತ್ತು ಪಾಲ್ಗೊಳ್ಳುವಿಕೆಯ ಜಾಗೃತಿ ಮೂಡಿಸಲಾಯಿತು.

ಮಹಿಷವಾಡಗಿ ಸೇತುವೆ ಕಾರ್ಯ ಚುರುಕು

▸**ಮಲ್ಲಿಕಾರ್ಜುನ ತುಂಗಳ**

◆**ರಬಕವಿ-ಬನಹಟ್ಟಿ:** ಅಥಣಿ ಹಾಗೂ ರಬಕವಿ-ಬನಹಟ್ಟಿ ತಾಲೂಕಿನ ಬೆಸಿಗೆಗೆ ಕ್ರಾಂತಿಯಾಗಲಿರುವ 55 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಮಹಿಷವಾಡಗಿ ಸೇತುವೆ ಕಾಮಗಾರಿಗೆ ಅಂತೂ ವೇಗ ಪಡೆದುಕೊಂಡಿರುವದು ಕೊಂಚ ನಿರಾಳಕ್ಕೆ ಕಾರಣವಾಗಿದೆ.

ಕಳೆದ ಏಳೆಂಟು ವರ್ಷಗಳಿಂದ ನಡೆಯುತ್ತಿರುವ ಕಾಮಗಾರಿಯು ಕಳೆದ 3 ವರ್ಷಗಳಿಂದ ಕಾಮಗಾರಿ ಸ್ಥಗಿತಗೊಂಡಿತ್ತು. ಇದೀಗ 10 ಕೋಟಿ ರೂ.ಗಳ ಹೆಚ್ಚುವರಿ ಕಾಮಗಾರಿಯಿಂದ ಒಟ್ಟು 55 ಕೋಟಿ ರೂ.ಗಳ ಕಾರ್ಯ ನಿರ್ಮಾಣವಾಗುತ್ತಿದೆ.

ಬೇಸಿಗೆಯೊಳಗಾಗಿ ನದಿಯೊಳಗಿನ ಎಲ್ಲ ಫಿಲ್ಲರ್‌ಗಳ ಕಾರ್ಯ ಸಂಪೂರ್ಣಗೊಳ್ಳಬೇಕಿದೆ. ಈಗಾಗಲೇ ಅಥಣಿ ತಾಲೂಕಿನ ಮಹಿಷವಾಡಗಿ ಗ್ರಾಮದತ್ತ ಸೇತುವೆಗೆ ಸಂಬಂಧಿಸಿದ ಕಾರ್ಯಕ್ಕೆ ವೇಗ ಪಡೆದಿದೆ.. ಮುಂದಿನ ದಿನಗಳಲ್ಲಿ ರಬಕವಿ-ಬನಹಟ್ಟಿ ಕಡೆ ಭೂಸ್ವಾಧೀನ ಪ್ರಕ್ರಿಯೆ ಸಂಪೂರ್ಣಗೊಳ್ಳಲಿದ್ದು, ಶೀಘ್ರವೇಯು ಕಾಮಗಾರಿ ನಡೆಯಲಿದೆ. ಸದ್ಯ ನದಿಯೊಳಗೆ ಎರಡು ಪಿಲ್ಲರ್ ಳವಡಿಕೆ ಕಾರ್ಯ ನಡೆಯಬೇಕಿದೆ. ನದಿಯೊಳಗೆ ನೀರಿನ ಪ್ರಮಾಣ ಕಡಿಮೆಯಿದ್ದು, ಈಗಲೇ ಕಾರ್ಯ ಚುರುಕುಗೊಳಿಸಬೇಕಿದೆ. ಇನ್ನೆರಡು ತಿಂಗಳ ನಂತರ ಮಳೆಗಾಲ ಕಾರಣ ಮತ್ತೇ ಮಹಾರಾಷ್ಟ್ರದಿಂದ ನೀರು ಕೃಷ್ಣೆಗೆ ಹರಿದು ಬರುವದರಿಂದ ನದಿಯೊಳಗಿನ ಕಾಮಗಾರಿಗೆ ಸಮಸ್ಯೆ ಎದುರಾಗಲಿದ್ದು, ತಕ್ಷಣವೇ ಪಿಲ್ಲರ್ ಅಳವಡಿಕೆ ಕಾರ್ಯ ನಡೆಯಬೇಕೆಂಬುದು ಅವಳಿ ನಗರದ ಜನರ ಒತ್ತಾಯವಾಗಿದೆ.



ಕಿರುಸುದ್ದಿ

ಸಿಎಂ ಪದಕ ಪುರಸ್ಕೃತ ಡಿವೈಎಸ್‌ಪಿಗೆ ಸನ್ಮಾನ

ಬಸವನಬಾಗೇವಾಡಿ: ಕರ್ನಾಟಕ ರಾಜ್ಯ ಎಂಬಿಕೆ, ಎಲ್‌ಸಿ ಆರ್‌ಪಿ ಹಾಗೂ ಸಖಿಯರ ಮಹಾಒಕ್ಕೂಟದ ಬಗ್ಗೆ ಹಾಗೂ ಎನ್ ಆರ್ ಎಲ್ ಎಂ ಇಲಾಖೆಯ ಕುರಿತು ಮುಖ್ಯಮಂತ್ರಿ ಪದಕ ಪುರಸ್ಕೃತ ಡಿವೈಎಸ್‌ಪಿ ಬಲ್ಲಪ್ಪ ನಂದಗಾವಿ ಅವರನ್ನು ಭೇಟಿಯಾಗಿ ಅವರಿಗೆ ಪರಿಚಯಿಸಿ, ಸ್ವತಂತ್ರ ಯೂನಿಯನಿಗೆ ತಮ್ಮ ಸಹಕಾರ ತುಂಬಾ ಮುಖ್ಯವಾಗಿದೆ ಎಂದು ಹೇಳಿ ನಂತರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಯೂನಿಯನ್ ರಾಜ್ಯ ಉಪಾಧ್ಯಕ್ಷರಾದ ಹೇಮಾ ದಳವಾಯಿ, ಬೋರಮ್ಮ ಬಿರಾದಾರ ಹಾಗೂ ಯೂನಿಯನ್ ಪದಾಧಿಕಾರಿಗಳು ಇದ್ದರು.

ಎನ್‌ಎಂಎಂಎಸ್ ಪರೀಕ್ಷೆಯಲ್ಲಿ ಸಾಧನೆ

ಕೊಲ್ಹಾರ: ತಾಲೂಕಿನ ಕುಪಕಡ್ಡಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ಕೀರ್ತಿ ಶಿವಪ್ಪ ಹೊರಟ್ಟಿ ಇವರು 2025-26 ನೇ ಸಾಲಿನ ಎನ್‌ಎಂಎಂಎಸ್ ಪರೀಕ್ಷೆಯಲ್ಲಿ 114 ಅಂಕಗಳನ್ನು ಪಡೆದು ಅಖಂಡ ಬಸವನ ತಾಲೂಕಿಗೆ ಪ್ರಥಮ ಸ್ಥಾನ ಪಡೆದು ಶಾಲೆಯ ಕೀರ್ತಿ ಹೆಚ್ಚಿಸಿದ್ದಾಳೆ.



ಕಳೆದ ಫೆಬ್ರವರಿ ತಿಂಗಳಲ್ಲಿ ಜರುಗಿದ ಪರೀಕ್ಷೆಯಲ್ಲಿ ಗ್ರಾಮೀಣ ಭಾಗದ ಸರಕಾರಿ ಶಾಲೆಯ ವಿದ್ಯಾರ್ಥಿನಿ ಈ ಸಾಧನೆ ಮಾಡಿದ್ದಾಳೆ. ಅದೇ ಶಾಲೆಯ ಮಕ್ಕಳಾದ ಗಾಯಿತ್ರಿ ಬಡಿಗೇರ- 92, ಅಪೇಕ್ಷಾ ಕೋಲಕಾರ-86, ಮಲ್ಲಪ್ಪ ಬಿಜ್ಜರಗಿ-84, ಸಾಕ್ಷಿ ಮ್ಯಾಗೇಡಿ-81, ಲಕ್ಷ್ಮೀ ತಿಳಗುಳ-77 ಅಂಕಗಳನ್ನು ಪಡೆದುಕೊಂಡಿದ್ದಾರೆ. ಮಕ್ಕಳ ಈ ಸಾಧನೆಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ವಸಂತ ರಾಠೋಡ, ಸಮನ್ವಯಾಧಿಕಾರಿಗಳಾದ ಸುನೀಲ ನಾಯಕ, ಎನ್‌ಎಂಎಂಎಸ್ ತಾಲೂಕು ನೋಡಲ್ ಅಧಿಕಾರಿಗಳಾದ ಅನುಜಾ ಗುಬ್ಬಾ ಸೇರಿದಂತೆ ಶಾಲೆಯ ಅಧ್ಯಕ್ಷರಾದ ಮುರಗೇಶ ಹಳ್ಳಿ, ಮುಖ್ಯ ಗುರುಗಳಾದ ಸಿದ್ದಪ್ಪ ಕೋಟ್ಯಾಳ, ಹಣಮಂತ ಬಿರಾದಾರ. ಸಂಗಮೇಶ ಎಲಬಳ್ಳಿ, ಶಾಂತಪ್ಪ ನಾಗರಳ್ಳಿ, ಕವಿತಾ ಹಿರೇಮಠ, ಹೇಮಾವತಿ, ಲಕ್ಷ್ಮೀ ವನೇಶಿ, ಅನೀಲ ಗಣಿ ಸೇರಿದಂತೆ ಸಮಸ್ತ ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

ಚಿಕ ಆಸಂಗಿ ವಿದ್ಯಾರ್ಥಿನಿಯರ ಸಾಧನೆ

ಕೊಲ್ಹಾರ: ತಾಲೂಕಿನ ಚಿಕ್ಕ ಆಸಂಗಿ ಗ್ರಾಮದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಯರಾದ ಸೃಷ್ಟಿ ಮಲ್ಲಿಕಾರ್ಜುನ್ ಮಾಚಕನೂರು ಇವರು 2025-26 ನೇ ಸಾಲಿನ ಎನ್‌ಎಂಎಂಎಸ್ ಪರೀಕ್ಷೆಯಲ್ಲಿ 101 ಅಂಕಗಳನ್ನು ಪಡೆದು ಅಖಂಡ ಬಸವನ ತಾಲೂಕಿಗೆ ದ್ವಿತೀಯ ಸ್ಥಾನ ಹಾಗೂ ಇದೇ ಶಾಲೆಯ ಸುಮನ ರಮೇಶ ಪತ್ತಾರ 95 ಅಂಕ ಗಳಿಸುವುದರೊಂದಿಗೆ ತೃತೀಯ ಸ್ಥಾನ ಪಡೆದು ಶಾಲೆಯ ಕೀರ್ತಿ ಹೆಚ್ಚಿಸಿದ್ದಾರೆ.





ಕಳೆದ ಫೆಬ್ರವರಿ ತಿಂಗಳಲ್ಲಿ ಜರುಗಿದ ಪರೀಕ್ಷೆಯಲ್ಲಿ ಗ್ರಾಮೀಣ ಭಾಗದ ಸರಕಾರಿ ಶಾಲೆಯ ವಿದ್ಯಾರ್ಥಿನಿಗಳು ಈ ಸಾಧನೆ ಮಾಡಿದ್ದಾರೆ. ಮಕ್ಕಳ ಈ ಸಾಧನೆಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ವಸಂತ ರಾಠೋಡ, ಸಮನ್ವಯಾಧಿಕಾರಿಗಳಾದ ಸುನೀಲ ನಾಯಕ, ಎನ್‌ಎಂಎಂಎಸ್ ತಾಲೂಕು ನೋಡಲ್ ಅಧಿಕಾರಿಗಳಾದ ಅನುಜಾ ಗುಬ್ಬಾ ಸೇರಿದಂತೆ ಶಾಲೆಯ ಅಧ್ಯಕ್ಷರು , ಮುಖ್ಯ ಗುರುಗಳು, ಸಹ ಶಿಕ್ಷಕರು ಸೇರಿದಂತೆ ಸಮಸ್ತ ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

ಏ.17ರಂದು ಪ್ರಶಸ್ತಿ ಪ್ರದಾನ

ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಕಂಥಿ ಹಿರೇಮಠದ 2026ನೇ ಸಾಲಿನ 'ಶ್ರೀ ಗುರು ಮಹಾಂತೇಶ್ವರ ಪ್ರಶಸ್ತಿ' ಹಾಗೂ 'ಭೂ ಜನ ಆರೋಗ್ಯ ರಕ್ಷಕ ಪ್ರಶಸ್ತಿ' ಎರಡೂ ಪ್ರಶಸ್ತಿಗಳನ್ನು ಏ.17ರಂದು ಬೆಳಗ್ಗೆ 11ಗಂಟೆಗೆ ವಿವಿಧ ಮಠಾಧೀಶರ, ರಾಜಕೀಯ ನಾಯಕರ ಮತ್ತು ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ನೀಡಲಾಗುವುದು.





ಈ ವರ್ಷದ 'ಶ್ರೀ ಗುರು ಮಹಾಂತೇಶ್ವರ ಪ್ರಶಸ್ತಿ' ಯನ್ನು ತಾಲೂಕಿನ ಇಂಗಳೇಶ್ವರದ ನಿವೃತ್ತ ಮುಖ್ಯಶಿಕ್ಷಕರಾದ ಸಿದ್ದಪ್ಪ ಶಿವಪ್ಪ ಗುಬ್ಬಾ ಹಾಗೂ ರತ್ನಾಬಾಯಿ ದಂಪತಿಗಳವರಿಗೆ ನೀಡಲಾಗುತ್ತಿದೆ. ಈ ವರ್ಷದ 'ಭೂ ಜನ ಆರೋಗ್ಯ ರಕ್ಷಕ ಪ್ರಶಸ್ತಿ' ಯನ್ನು ತಾಲೂಕಿನ ಮನಗೂಳಿಯ ತನ್ನ ಬದುಕನ್ನೇ ಭೂಮಿಯ ಆರೋಗ್ಯ ಮತ್ತು ಜನರ ಆರೋಗ್ಯ ರಕ್ಷಣೆಗೋಸ್ಕರ ಮೀಸಲಾಗಿರಿಸಿದ ಹಾಗೂ ಸಾವಯವ ಕೃಷಿಯನ್ನು ಉಳಿಸಿ ಬೆಳೆಸಲು ಶ್ರಮಿಸುತ್ತಿರುವ ಆದರ್ಶ ಯುವ ಕೃಷಿಕ ಈರೇಶ ಗುಂಡಪ್ಪ ಗೂಡಲಮನಿ ಅವರಿಗೆ ನೀಡಲಾಗುತ್ತಿದೆ.



ಬಸವನಬಾಗೇವಾಡಿ: ಕರ್ನಾಟಕ ರಾಜ್ಯ ಎಂಬಿಕೆ, ಎಲ್‌ಸಿ ಆರ್‌ಪಿ ಹಾಗೂ ಸಖಿಯರ ಮಹಾಒಕ್ಕೂಟದ ಬಗ್ಗೆ ಹಾಗೂ ಎನ್ ಆರ್ ಎಲ್ ಎಂ ಇಲಾಖೆಯ ಕುರಿತು ಮುಖ್ಯಮಂತ್ರಿ ಪದಕ ಪುರಸ್ಕೃತ ಡಿವೈಎಸ್‌ಪಿ ಬಲ್ಲಪ್ಪ ನಂದಗಾವಿ ಅವರನ್ನು ಭೇಟಿಯಾಗಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಪ್ರವಚನ ಆಲಿಸುವುದರಿಂದ ಮನಸ್ಸು ಶುದ್ಧಿ

ಸಿಂದಗಿ: ಧಾರ್ಮಿಕ ಕಾರ್ಯಕ್ರಮಗಳು ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿ ನೀಡುತ್ತವೆ. ಪುರಾಣ ಪ್ರವಚನ ಆಲಿಸುವುದರಿಂದ ಮನಸ್ಸು ಶುದ್ಧಗೊಳ್ಳುತ್ತದೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ನಗರದ ನಂದಿಕೋಲ್ ಓಣಿಯಲ್ಲಿ ಮಲ್ಲಿಕಾರ್ಜುನ ಜಾತ್ರೆ ಮಹೋತ್ಸವ ನಿಮಿತ್ತ ಹಮ್ಮಿಕೊಂಡ ಶ್ರೀಶೈಲ ಮಲ್ಲಿಕಾರ್ಜುನ ಪುರಾಣ ಪ್ರವಚನ ಮಂಗಲೋತ್ಸವ ಸಮಾರಂಭದಲ್ಲಿ ಮಾತನಾಡಿದರು.ದೇವರು, ಧರ್ಮ, ಆಚಾರ-ವಿಚಾರ, ಸಂಪ್ರದಾಯ, ಸಂಸ್ಕೃತಿ, ಸಂಸ್ಕಾರ, ಮಾನವೀಯ ಮೌಲ್ಯಗಳಿಂದ ಕೂಡಿದ ಸುಸಂಸ್ಕೃತ ಸಮಾಜ ನಿರ್ಮಾಣ ಮಾಡುವಲ್ಲಿ ಪುರಾಣ, ಸತ್ಸಂಗ ಕಾರ್ಯಕ್ರಮಗಳು ಅತ್ಯವಶ್ಯಕ. ಮಾನವ ತನ್ನ ಬದುಕಿನ ಜಟಾಪಟಿಯ ಮಧ್ಯೆಯೂ ಜೀವನ ಪವಿತ್ರಗೊಳಿಸಲು ಆಧ್ಯಾತ್ಮಿಕ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು. ಶರಣ-ಶರಣೆಯರ, ಮಹಾತ್ಮರ ಜೀವನ ಚರಿತ್ರೆಗಳನ್ನು ಆಲಿಸುವ ಮೂಲಕ ಸನ್ಮಾರ್ಗದತ್ತ ಸಾಗಬೇಕು ಎಂದರು. ದಿವ್ಯ ಸಾನ್ನಿಧ್ಯ ವಹಿಸಿದ ಸಾರಂಗಮಠದ ಪೀಠಾಧಿಪತಿ ಡಾ.ಪ್ರಭುಸಾರಂಗದೇವ ಶಿವಾಚಾರ್ಯ ಆಶೀರ್ವಚನ ನೀಡಿದರು. ಸಾನಿಧ್ಯವನ್ನು ಸಾರಂಗಮಠದ ಉತ್ತರಾಧಿಕಾರಿ ಡಾ.ವಿಶ್ವಪ್ರಭುದೇವ ಶಿವಾಚಾರ್ಯ, ಮಾಜಿ ಶಾಸಕ ಶರಣಪ್ಪ ಸುಣಗಾರ, ಅಖಿಲ ಭಾರತ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಅಶೋಕ ವಾರದ, ಯೋಜನಾ ಪ್ರಾಧಿಕಾರ ಅಧ್ಯಕ್ಷ ಹಣಮಂತ ಸುಣಗಾರ, ಗಣ್ಯ ವ್ಯಾಪಾರಸ್ಥ ಬಸವರಾಜ್ ವಸ್ತ್ರದ, ಚನ್ನು ಪಟ್ಟಣಶೆಟ್ಟಿ, ಸಂಗನಬಸವ ಬಿರಾದಾರ ಸೇರಿದಂತೆ ಭಕ್ತರು ಇದ್ದರು.



ಸಿಂದಗಿ: ನಗರದ ನಂದಿಕೋಲ್ ಓಣಿಯಲ್ಲಿ ಮಲ್ಲಿಕಾರ್ಜುನ ಜಾತ್ರೆ ಮಹೋತ್ಸವ ನಿಮಿತ್ತ ಹಮ್ಮಿಕೊಂಡ ಶ್ರೀಶೈಲ ಮಲ್ಲಿಕಾರ್ಜುನ ಪುರಾಣ ಪ್ರವಚನ ಮಂಗಲೋತ್ಸವ ಸಮಾರಂಭದಲ್ಲಿ ಶಾಸಕ ಅಶೋಕ ಮನಗೂಳಿ ಮಾತನಾಡಿದರು. ಸಾರಂಗಮಠದ ಪೀಠಾಧಿಪತಿ ಡಾ.ಪ್ರಭುಸಾರಂಗದೇವ ಶಿವಾಚಾರ್ಯ,ಸಾರಂಗಮಠದ ಉತ್ತರಾಧಿಕಾರಿ ಡಾ.ವಿಶ್ವಪ್ರಭುದೇವ ಶಿವಾಚಾರ್ಯ ಇತರರು ಇದ್ದರು.

ಪಿಯುಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸನ್ಮಾನ

ಬಡ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸದಾ ನೆರವು

ವಿಜಯಪುರ: ಬಿಎಲ್‌ಡಿಇ ಸಂಸ್ಥೆ ಜಿಲ್ಲೆಯ ಬಡ ಮತ್ತುಪ್ರತಿಭಾವಂತವಿದ್ಯಾರ್ಥಿಗಳಿಗೆಗುಣಮಟ್ಟದ ಶಿಕ್ಷಣ ಒದಗಿಸಲು ಸದಾ ನೆರವು ನೀಡುತ್ತ ಬಂದಿದೆ ಎಂದು ಬಿಎಲ್‌ಡಿಇ ಸಂಸ್ಥೆಯ ನಿರ್ದೇಶಕ ಮತ್ತು ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ಬಸನಗೌಡ ಎಂ. ಪಾಟೀಲ ಹೇಳಿದರು.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದ ಎಸ್.ಎಸ್ ಪಿ.ಯು ಕಾಲೇಜಿನ ವಿದ್ಯಾರ್ಥಿನಿ ಸಾನಿಕಾ ಮಟಗಾರ, ತೃತೀಯ ಸ್ಥಾನ ಪಡೆದ ಅಕ್ಷತಾ ಚವ್ಹಾಣ ಮತ್ತು ಬರಡೋಲ ಸರ್ಕಾರಿ ಪಿಯು ಕಾಲೇಜಿನ ಲಕ್ಷ್ಮೀ ಶ್ರೀಕಾಂತ ನಂದೂರ ಹಾಗೂ ನಾಲ್ಕನೇ ಸ್ಥಾನ ಪಡೆದ ಎಸ್.ಎಸ್ ಪಿಯು ಕಾಲೇಜಿನ ವಿದ್ಯಾರ್ಥಿ ಯುವರಾಜ ಬಗಲಿ ಅವರನ್ನು ಸನ್ಮಾನಿಸಿ ಮತ್ತು ಆರ್ಥಿಕ ನೆರವು ನೀಡಿ ಅವರು ಮಾತನಾಡಿದರು.

ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ. ಕೆ. ಹೊಸಮನಿ ಮಾತನಾಡಿ, ಸಚಿವ ಎಂ.ಬಿ. ಪಾಟೀಲರ ಕಟ್ಟುನಿಟ್ಟಿನ ಸೂಚನೆ ಹಿನ್ನಲೆಯಲ್ಲಿ ಫಲಿತಾಂಶ ಸುಧಾರಣೆಗೆ ಇಲಾಖೆ ವತಿಯಿಂದ ಸಾಕಷ್ಟು ಸಿದ್ಧತೆ ಮಾಡಲಾಗಿತ್ತು. ವಿದ್ಯಾರ್ಥಿಗಳಿಗೆ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ನೀಡುವ ಮೂಲಕ ಎರಡು ಬಾರಿ ಪೂರ್ವ ಸಿದ್ಧತೆ ಪರೀಕ್ಷೆ ನಡೆಸಲಾಗಿತ್ತು. ಇದರ ಪರಿಣಾಮವಾಗಿ ಜಿಲ್ಲೆಯ ಫಲಿತಾಂಶ ಹೆಚ್ಚಾಗಿದ್ದು ನಾಲ್ಕು ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿ ರ‍್ಯಾಂಕ್ ಪಡೆದಿದ್ದಾರೆ ಎಂದು ಹೇಳಿದರು.

ಕಗ್ಗೋಡ ಸರಕಾರಿ ಪಿಯು ಕಾಲೇಜಿನ ಪ್ರಾಚಾರ್ಯ ಕೆ.ಎ. ಉಪ್ಪಾರ ಮಾತನಾಡಿ, ರಾಜ್ಯಕ್ಕೆ ರ‍್ಯಾಂಕ್ ಪಡೆದಿರುವ ನಾಲ್ಕೂ ವಿದ್ಯಾರ್ಥಿಗಳು ಗ್ರಾಮೀಣ ಭಾಗದವರಾಗಿದ್ದಾರೆ. ಈ ಪ್ರತಿಭಾವಂತ ವಿದ್ಯಾರ್ಥಿಗಳು ಜೀವನದಲ್ಲಿ ದೊಡ್ಡ ಗುರಿಯನ್ನು ಇಟ್ಟುಕೊಂಡು ಯು.ಪಿ.ಎಸ್.ಸಿ ಮತ್ತು ಕೆ.ಪಿ.ಎಸ್.ಸಿ ಸಿದ್ದತೆ ನಡೆಸಿ ಉನ್ನತ ಅಧಿಕಾರಿಗಳಾಗಬೇಕು ಎಂದು ಕಿವಿಮಾತು ಹೇಳಿದರು.

ಇದೇ ವೇಳೆ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ. ಕೆ. ಹೊಸಮನಿ ಅವರನ್ನು ಬಸನಗೌಡ ಎಂ. ಪಾಟೀಲ ಸನ್ಮಾನಿಸಿ ಗೌರವಿಸಿದರು.

ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯ ರಜಿಸ್ಟ್ರಾರ್ ಡಾ. ಆರ್.ವಿ. ಕುಲಕರ್ಣಿ, ಬಿ. ಎಲ್.ಡಿ.ಇ ಸಂಸ್ಥೆಯ ಆಡಳಿತಾಧಿಕಾರಿಗಳಾದ ಐ. ಎಸ್. ಕಾಳಪ್ಪನವರ, ಎಸ್. ಎ. ಬಿರಾದಾರ(ಕನ್ನಾಳ), ಬರಡೋಲ ಸರಕಾರಿ ಪಿಯು ಕಾಲೇಜಿನ ಪ್ರಾಚಾರ್ಯ ಸುರೇಶ ನಾರಾಯಣಕರ, ಉಪನ್ಯಾಸಕ ಟಿ.ಎಂ. ಪವಾರ, ವಿದ್ಯಾರ್ಥಿಗಳ ಪೋಷಕರು ಮುಂತಾದವರು ಉಪಸ್ಥಿತರಿದ್ದರು.

ಸಂತೋಷ ಲೋಕುರಿ ಸ್ವಾಗತಿಸಿ, ಪರಿಚಯಿಸಿ, ವಂದಿಸಿದರು.



ದ್ವಿತೀಯ ಪಿ.ಯು ಪರೀಕ್ಷೆಯಲ್ಲಿ ವಿಜಯಪುರ ಜಿಲ್ಲೆ 29ನೇ ಸ್ಥಾನದಲ್ಲಿತ್ತು ಈ ಹಿನ್ನಲೆಯಲ್ಲಿ ಬೋಧನೆ ಗುಣಮಟ್ಟ ಸುಧಾರಿಸಿ, ಪರೀಕ್ಷೆಗೆ ಸಾಕಷ್ಟು ಪೂರ್ವ ಸಿದ್ಧತೆ ನಡೆಸುವಂತೆ ಸಚಿವ ಎಂ. ಬಿ. ಪಾಟೀಲ ಅವರು ಶಿಕ್ಷಣ ಇಲಾಖೆಗೆ ಸೂಚನೆ ನೀಡಿದ್ದರು. ಅದರಂತೆ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಮಂಡಳಿ ಅಧಿಕಾರಿಗಳು, ಶಿಕ್ಷಕರು ಸಾಕಷ್ಟು ತಯಾರಿ ನಡೆಸಿ, ವಿದ್ಯಾರ್ಥಿಗಳು ಮತ್ತು ಪೋಷಕರೊಂದಿಗೆ ಸಂವಾದ ನಡೆಸಿ ವಿದ್ಯಾರ್ಥಿಗಳಿಗೆ ಸೂಕ್ತ ತರಬೇತಿ ನೀಡಿದ್ದರು. ಇದರಿಂದಾಗಿ ವಿಜಯಪುರ ಜಿಲ್ಲೆ ಈ ಬಾರಿ ಫಲಿತಾಂಶದಲ್ಲಿ ನಾಲ್ಕನೇ ಸ್ಥಾನಕ್ಕೇರಿದೆ.

■ ಬಸನಗೌಡ ಎಂ. ಪಾಟೀಲ. ಬಿಎಲ್‌ಡಿಇ ಸಂಸ್ಥೆಯ ನಿರ್ದೇಶಕ ಮತ್ತು ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ

ಸಂವಿಧಾನಕ್ಕಿದೆ ಸಮಾಜ ಒಗ್ಗೂಡಿಸುವ ಶಕ್ತಿ

ಫಾತಿಮಾ ಶೇಖ, ಶಂ.ಗು. ಬಿರಾದಾರ, ಸಿಸು ಸಂಗಮೇಶ ವೇದಿಕೆ

ವಿಜಯಪುರ: ಮಹಾತ್ಮಾ ಜ್ಯೋತಿಬಾ ಫುಲೆ ಸಮಾಜದಲ್ಲಿ ತುಳಿತಕ್ಕೆ ಒಳಗಾದ ಜನರಿಗೆ ನ್ಯಾಯ ಒದಗಿಸಲು ಶೈಕ್ಷಣಿಕ ಕ್ರಾಂತಿ ಮಾಡಿದವರು. ಹನ್ನೆರಡನೆ ಶತಮಾನದಲ್ಲಿ ಅಪ್ಪನು ಮಾದರ ಚೆನ್ನಯ್ಯ, ಬಪ್ಪನು ಡೋಹರ ಕಕ್ಕಯ್ಯ ಎನ್ನುವ ಮೂಲಕ ಒಂಬತ್ತು ನೂರು ವರ್ಷಗಳ ಹಿಂದೆ ಬಸವಣ್ಣ ಎರಡು ಸಾವಿರ ವರ್ಷಗಳ ಹಿಂದೆ ಬುದ್ಧ, ನಾಲ್ಕು ನೂರು ವರ್ಷಗಳ ಹಿಂದೆ ಸಮಾಜದಲ್ಲಿ ಮಾನವ ಹಕ್ಕುಗಳ ಬಗ್ಗೆ ಮಾತನಾಡಿದರು, ಅದನ್ನು ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಜಾರಿಗೊಳಿಸಿದರು. ಇಂತಹ ಬುದ್ಧ, ಬಸವ, ಕಬೀರ, ಫುಲೆ ಮತ್ತು ಅಂಬೇಡ್ಕರ್ ಜಗತ್ತಿಗೆ ಮಾದರಿ ಎಂದು ಕಲಬುರಗಿ ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ. ಎಚ್.ಟಿ.ಪೋತೆ ಹೇಳಿದರು.

ವಿಜಯಪುರ ನಗರದ ದರಬಾರ್ ಪ್ರೌಢ ಶಾಲೆ ಮೈದಾನದಲ್ಲಿ ಮೇ ಸಾಹಿತ್ಯ ಮೇಳ ವಿಜಯಪುರ ಬಳಗ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಏಪ್ರಿಲ್ 10 ರಿಂದ 14ರ ವರೆಗೆ 5ದಿನಗಳ ಕಾಲ ಹಮ್ಮಿಕೊಂಡಿರುವ ಬಿಜಾಪುರ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದಲ್ಲಿ ಎರಡನೇ ದಿನದ ಮೊದಲ ಗೋಷ್ಠಿ ಮಹಾತ್ಮಾ ಜ್ಯೋತಿಬಾ ಫುಲೆ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಉಪನ್ಯಾಸ ನೀಡಿ ಅವರು ಮಾತನಾಡಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಕಲಬುರಗಿಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಸವರಾಜ ಹೂಗಾರ ಮಾತನಾಡಿ, ಮಕ್ಕಳಿಗೆ ಬುದ್ಧ, ಬಸವ, ಅಂಬೇಡ್ಕರ್ ಪುಸ್ತಕ ಓದುವ ಸಂಸ್ಕೃತಿ ಬೆಳೆಸಬೇಕಿದೆ ಆಗ ಮಾತ್ರ ನಮ್ಮ ಮಕ್ಕಳು ನವ ಸಮಾಜ ನಿರ್ಮಾಣ ಮಾಡಲು ಸಾಧ್ಯವಿದೆ ಎಂದರು.

ಈ ಸಂದರ್ಭ ಮುಖಂಡ ಸುರೇಶ ಘೊಣಸಗಿ, ಬಂಜಾರ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಿಎಲ್. ಚವ್ಹಾಣ ಮಾತನಾಡಿದರು.

ಪ್ರಾಸ್ತಾವಿಕವಾಗಿ ಎಸ್.ಸಿ.ಎಸ್.ಟಿ ನೌಕರರ ಸಮನ್ವಯ ಸಮಿತಿ ಅಧ್ಯಕ್ಷ ಬಿ ಎಚ್ ನಾಡಗಿರಿ ಇದ್ದರು. ಕಾರ್ಯಕ್ರಮದಲ್ಲಿ ಶಿಕ್ಷಕ ದಂಪತಿಗಳ ಜಾಥಾದಲ್ಲಿ ಪಾಲ್ಗೊಂಡಿದ್ದ ಶಿಕ್ಷಕರಿಗೆ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭ ಚಿದಾನಂದ ಕಾಂಬಳೆ, ಸುರೇಖಾ ರಜಪೂತ, ಸಿದ್ದಪ್ಪ ಹೊಸಮನಿ ಬಿರಾದಾರ, ಸತ್ಯಪ್ಪ ಚಲವಾದಿ, ಸುರೇಶ ಗೊಣಸಗಿ, ಕೆ.ಎಂ. ಕೂಡಲಗಿ, ಸಿದ್ದನಗೌಡ ಪಾಟೀಲ, ಬಸವರಾಜ ತಾಳಿಕೋಟಿ, ಶಬ್ಬೀರ ಕಾಗಜಕೋಟಿ, ಸಾಹೇಬಗೌಡ ಪಾಟೀಲ, ಚಂದ್ರಕಾಂತ ಸಿಂಗೆ, ರವಿ ಕಿತ್ತೂರ, ಬಸವರಾಜ ಸೂಳಿಬಾವಿ ಇದ್ದರು.

ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ

ದೇವರಹಿಪ್ಪರಗಿ: ಕ್ಷೇತ್ರದ ಜನರಿಗೆ ಅಗತ್ಯವಿರುವ ಗುಣಮಟ್ಟದ ಶಿಕ್ಷಣ, ನೀರಾವರಿ ಮತ್ತು ಆರೋಗ್ಯ ಉತ್ತಮ ಪಡಿಸುವ ಜೊತೆಗೆ ಕೋರವಾರ ಒಂದೇ ಗ್ರಾಮದಲ್ಲಿ ಸುಮಾರು 387ಲಕ್ಷ ರೂ ವೆಚ್ಚದ ಕಾಮಗಾರಿಗಳ ಭೂಮಿ ಪೂಜೆ ನೆರವೇರಿಸುವುದರ ಮೂಲಕ ಗ್ರಾಮದ ಜೊತೆ ಕ್ಷೇತ್ರದ ಸಮಗ್ರ ಎಲ್ಲ ಸಮುದಾಯದ ಅಭಿವೃದ್ಧಿಗೆ ಶ್ರಮಿಸುವೆ ಎಂದು ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ ತಿಳಿಸಿದರು.

ತಾಲೂಕಿನ ಕೋರವಾರ ಗ್ರಾಮದಲ್ಲಿ ಶುಕ್ರವಾರ ಸುಮಾರು 387 ಲಕ್ಷ ರೂ, ವೆಚ್ಚದ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕಳೆದ ಚುನಾವಣೆಯಲ್ಲಿ ಗ್ರಾಮದ ಜನರಿಗೆ ಕೊಟ್ಟ ಭರವಸೆಗಳನ್ನು ಈಡೇರಿಸಿದ್ದೇನೆ,ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ ದುಡಿಯುವುದರ ಜೊತೆಗೆ ಎಲ್ಲಾ ವರ್ಗದ ಜನರಿಗೆ ಪ್ರಾಮಾಣಿಕವಾಗಿ ಸರ್ಕಾರಿ ಸೌಲತ್ತುಗಳನ್ನು ತಲುಪಿಸಲು ಬದ್ಧನಾಗಿದ್ದೇನೆ. ಸರ್ಕಾರದ ಅನುದಾನದ ಕೊರತೆಯಲ್ಲಿ ಗ್ರಾಮದಲ್ಲಿ ಸುಮಾರು 100ಲಕ್ಷ ರೂ, ವೆಚ್ಚದ ಸಿ.ಸಿ.ರಸ್ತೆ, ವಿವಿಧ ಯೋಜನೆಗಳ ಅಡಿಯಲ್ಲಿ ಕೈಲಾಸ ಮಠ, ಮಾಂತೇಶ್ವರ ಮಠ, ಬೀರಲಿಂಗೇಶ್ವರ ದೇವಸ್ಥಾನದ ಸಮುದಾಯ ಭವನ ಸೇರಿ ಸುಮಾರು 20 ಲಕ್ಷ ರೂ ವೆಚ್ಚದಲ್ಲಿ ಸಮುದಾಯ ಭವನಗಳ ನಿರ್ಮಾಣ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ನೂತನ ಕಟ್ಟಡದ ಕಾಮಗಾರಿಗೆ ಸುಮಾರು 266 ಲಕ್ಷ ರೂ ಅನುದಾನವನ್ನು ನೀಡುವ ಮೂಲಕ ಗ್ರಾಮದ ಅಭಿವೃದ್ಧಿಗೆ ಇಂದು ಸುಮಾರು 387 ಲಕ್ಷ ರೂ ವೆಚ್ಚದಲ್ಲಿ ವಿವಿಧ ಕಾಮಗಾರಿಗಳ ಭೂಮಿ ಪೂಜೆ ನೆರವೇರಿಸುವ ಚುನಾವಣೆಯಲ್ಲಿ ಕೊಟ್ಟ ಮಾತನ್ನು ಈಡೇರಿಸಿದ್ದೇನೆ ಎಂದರು.

ಗ್ರಾಮದ ಪ್ರಮುಖರಾದ ಶೇಖರಗೌಡ ಪಾಟೀಲ ಹಾಗೂ ಎಂ.ಡಿ ವನಹಳ್ಳಿ ಮಾತನಾಡಿದರು. ಸಾನಿಧ್ಯವನ್ನು ಸ್ಥಳೀಯ ಮಠದ ಕಾಶೀಲಿಂಗ ಮಹಾರಾಜರು ವಹಿಸಿದ್ದರು.

ಬಾಪುಗೌಡ ಪಾಟೀಲ,ಮಾಂತಗೌಡ ಸುಂಬಡ, ಗುರು ಹುಣಸಗಿ, ಮಲ್ಲಿಕಾರ್ಜುನ ಕಲಬುರ್ಗಿ, ಆರೋಗ್ಯ ಇಲಾಖೆಯ ಎಇಇ ಪ್ರಶಾಂತ ವಲ್ಯಾಪುರ,ಎಇ ಮಹೇಶ ಜಾದವ, ಸಿಂಗಾಡಿ ಕನ್ಸ್ಟ್ರಕ್ಷನ್ ಗುತ್ತಿಗೆದಾರರಾದ ಪ್ರತೀಕ ಬಿರಾದಾರ, ಆನಂದ ದೇಸಾಯಿ, ರವಿ ಮಲಗೊಂಡ, ಆರೋಗ್ಯ ಇಲಾಖೆಯ ಡಾ.ಅನಿಲ ಕುಮಾರ ಬಿರಾದಾರ, ಎಂ.ಎಸ್. ಬಾಗೇವಾಡಿ, ಮಲ್ಲನಗೌಡ ಸಾಲವಾಡಗಿ, ಸಿದ್ದು ತಿಮ್ಮಾಪುರ, ಬಸವರಾಜು ಬಡಿಗೇರ ಸೇರಿದಂತೆ ಗ್ರಾಮದ ಪ್ರಮುಖರು, ಗಣ್ಯರು ಹಾಗೂ ಸದಸ್ಯರು ಉಪಸ್ಥಿತರಿದ್ದರು.



ಮಕ್ಕಳ ಸರಳ ಕಲಿಕೆಗೆ ದ್ವಿಭಾಷಾ ಮಾಧ್ಯಮ ಅಗತ್ಯ: ನಡುಗಡ್ಡಿ

ಇಂಡಿ: ದ್ವಿಭಾಷಾ ಮಾಧ್ಯಮವು 2026-27ನೇ ಶೈಕ್ಷಣಿಕ ವರ್ಷದಿಂದ 1ರಿಂದ 5ನೇ ವರ್ಗದ ವಿಷಯಗಳನ್ನು ಮಾತೃಭಾಷೆ ಮತ್ತು ಇಂಗ್ಲಿಷ್‌ನಲ್ಲಿ ಬೋಧಿಸಲು ಬಳಸುವ ಶಿಕ್ಷಣ ಪದ್ಧತಿಯಾಗಿದ್ದು, ಇದು ಜಾಗತಿಕ ಸ್ಪರ್ಧೆಗೆ ಮಕ್ಕಳನ್ನು ಸಿದ್ಧಗೊಳಿಸುತ್ತದೆ ಎಂದು ಕ್ಷೇತ್ರ ಸಮನ್ವಯಾಧಿಕಾರಿ ಎಸ್.ಆರ್. ನಡುಗಡ್ಡಿ ಹೇಳಿದರು.

ಶನಿವಾರ ಪಟ್ಟಣದ ಆದರ್ಶ ವಿದ್ಯಾಲಯದಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ವಿಜಯಪುರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಇಂಡಿ ಇವರ ಸಹಯೋಗದಲ್ಲಿ ಜರುಗಿದ 1-5 ನೇ ವರ್ಗದ ಶಿಕ್ಷಕರ ದ್ವಿಭಾಷಾ ತರಬೇತಿಯ 2ನೇ ಹಂತದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ದ್ವಿಭಾಷಾ ಮಾಧ್ಯಮವು ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಗೆ, ವಿಷಯದ ಆಳವಾದ ತಿಳುವಳಿಕೆಗೆ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಅತ್ಯಗತ್ಯ. ಇದು ಶಿಕ್ಷಕರ-ವಿದ್ಯಾರ್ಥಿಗಳ ಸಂವಹನ ಕೌಶಲ್ಯಗಳನ್ನು ಸುಧಾರಿಸಿ ಕಲಿಕಾ ಪ್ರಕ್ರಿಯೆ ಸರಳಗೊಳಿಸುತ್ತದೆ ಎಂದು ಹೇಳಿದರು.

ಬಿಆರ್‌ಪಿ ಅಶೋಕ ರಾಠೋಡ ಮಾತನಾಡಿ,1ನೇ ವರ್ಗದಿಂದಲೇ ವಿದ್ಯಾರ್ಥಿಗಳಿಗೆ ಸ್ಥಳೀಯ ಸಂಪನ್ಮೂಲ ಬಳಸಿ, ಮಾತೃಭಾಷೆ ಮತ್ತು ಇಂಗ್ಲಿಷ್ ಎರಡರಲ್ಲೂ ಶಿಕ್ಷಣ ನೀಡಿ, ಅವರ ಕಲಿಕೆಯನ್ನು ಬೆಂಬಲಿಸಿ, ಜಾಗತಿಕ ಸ್ಪರ್ಧೆಗೆ ಮಕ್ಕಳನ್ನು ಸಜ್ಜುಗೊಳಿಸುವದು ಈ ದ್ವಿಭಾಷಾ ಮಾಧ್ಯಮದ ಗುರಿಯಾಗಿದೆ ಎಂದು ಹೇಳಿದರು.



ಸಂಪನ್ಮೂಲ ವ್ಯಕ್ತಿ ಸಂತೋಷ ಬಂಡೆ ಮಾತನಾಡಿ, ದ್ವಿಭಾಷಾ ಮಾಧ್ಯಮವು ವಿದ್ಯಾರ್ಥಿಗಳ ಆತ್ಮವಿಶ್ವಾಸ ಹೆಚ್ಚಿಸಿ, ಉನ್ನತ ಶಿಕ್ಷಣಕ್ಕೆ ಭದ್ರ ಬುನಾದಿ ಹಾಕುತ್ತದೆ. ಅದು ಮಾತೃಭಾಷೆಯ ಅಡಿಪಾಯದೊಂದಿಗೆ ಜಾಗತಿಕ ಜ್ಞಾನವನ್ನು ಪಡೆಯಲು ಒಂದು ಸಮತೋಲಿತ ಮಾರ್ಗವಾಗಿದೆ ಎಂದು ಹೇಳಿದರು.

ಬಿಆರ್‌ಪಿಗಳಾದ ಆಂಜನೇಯ ಸ್ವಾಮಿ ಹೊಸಮನಿ, ರಂಗರಾವ ಕುಲಕರ್ಣಿ, ಸಿಆರ್‌ಪಿ ಗಳಾದ ಸಂಜೀವ ಬೋರಗಿ, ಬಿ.ಡಿ. ಚಪ್ಪರಬಂದ, ಭಾಷಾಸಾಬ ಕುಮಸಗಿ, ತಾಲೂಕ ಸಂಪನ್ಮೂಲ ವ್ಯಕ್ತಿಗಳಾಗಿ ಆರ್.ಎಲ್. ಹಜೇರಿ, ದಾದಾ ಶ್ಯಾಮನವರ, ಎಸ್.ಎ. ಮೊಮಿನ್, ಆರ್.ಎಸ್. ಸುರಗಿಹಳ್ಳಿ, ಜಟ್ಟಪ್ಪ ಮಾದರ, ಶಿವಾನಂದ ಡಬ್ಬಿಗಾರ, ಎಚ್. ಆರ್. ಪೂಜಾರಿ, ರಾಹುಲ ಭೀಮನಗರ, ಸಂಜೀವ ಗುಡಿಮನಿ, ಕವಿತಾ, ಕೆಂಪರಾಜು, ರಮೇಶ ಸೇರಿದಂತೆ ಅನೇಕ ಸಂಪನ್ಮೂಲ ವ್ಯಕ್ತಿಗಳು ಹಾಗೂ 1-5 ನೇ ವರ್ಗ ಬೋಧಿಸುವ 400ಕ್ಕೂ ಅಧಿಕ ಶಿಕ್ಷಕರು ಭಾಗವಹಿಸಿದ್ದರು.

ಹನುಮಪ್ಪ ನಾಯಕನ 540ನೇ ಜಯಂತಿ

ಬಸವನಬಾಗೇವಾಡಿ: ತಾಲೂಕಿನ ಮುತ್ತಗಿ ಗ್ರಾಮದಲ್ಲಿ ಹಂಡೇ ಅರಸ ರಾಜಾ ಬಲದ ಹನುಮಪ್ಪ ನಾಯಕನ ವೃತ್ತದಲ್ಲಿ ಹನುಮಪ್ಪ ನಾಯಕನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸುವುದರ ಮೂಲಕ 540ನೇ ಜಯಂತಿ ಆಚರಿಸಲಾಯಿತು.

ಸ್ಥಳೀಯ ಮಠದ ವೀರ ರುದ್ರಮುನಿ ಶಿವಾಚಾರ್ಯ ಶ್ರೀಗಳ ಸಾನಿಧ್ಯವಹಿಸಿದರು ಬಿಜೆಪಿ ಮಂಡಲ ಉಪಾಧ್ಯಕ್ಷ ಮಲ್ಲನಗೌಡ ರಾಯಗೊಂಡ, ನಿವೃತ್ತ ಶಿಕ್ಷಕ ಬಿ.ಎನ್.ನಾಯಕರ, ಸಿದ್ರಾಮಪ್ಪಗೌಡ ನಾಯಕರ, ಮುತ್ತು ಬಂದಾಳ, ಗುರು ಮಿಂಚನಾಳ, ಗಿರೀಶ ಬಿರಾದಾರ, ಅಪ್ಪುಗೌಡ, ಮಲ್ಲಿಕಾರ್ಜುನ ಬಿರಾದಾರ, ವಿರೇಶ ರಾಯಗೊಂಡ, ದೇವೇಂದ್ರ ಬಿರಾದಾರ, ಮಲ್ಲು ರಾಯಗೊಂಡ, ಅಭಿಷೇಕ ನಾಯಕರ, ಯಮುನಪ್ಪಗೌಡ ಹುಣಶ್ಯಾಳ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಜಗದೇವನಗರದ 200 ಕುಟುಂಬಗಳಿಗೆ ಶೀಘ್ರ ನ್ಯಾಯ: ಶಾಸಕ ನಾಡಗೌಡ

ನಾಲತವಾಡ: ಪಟ್ಟಣದ ಜಗದೇವನಗರದ ಸುಮಾರು 200 ಆಶ್ರಯ ಮನೆಗಳ ಕುಟುಂಬಗಳಿಗೆ ಅನ್ಯಾಯವಾಗಲು ಬಿಡುವುದಿಲ್ಲ, ಅವರ ಎಲ್ಲಾ ಸಮಸ್ಯೆಗಳನ್ನು ಶೀಘ್ರದಲ್ಲೇ ಬಗೆಹರಿಸಲಾಗುವುದು ಎಂದು ಶಾಸಕ ಹಾಗೂ ಸಾಬೂನು ಮಾರ್ಜಕ್ ನಿಗಮದ ಅಧ್ಯಕ್ಷ ಸಿ.ಎಸ್.ನಾಡಗೌಡ ಭರವಸೆ ನೀಡಿದರು.



ಶನಿವಾರ ಬೆಳಿಗ್ಗೆ ಜಗದೇವನಗರದ ಆಂಜನೇಯ ದೇವಸ್ಥಾನದಲ್ಲಿ ನಡೆದ ವಾರ್ಡ್ ಸಭೆಯಲ್ಲಿ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿ ಅವರು ಮಾತನಾಡಿದರು.

ಜಗದೇವನಗರದಲ್ಲಿ ಬಡ ಕುಟುಂಬಗಳಿಗೆ 1987ರಲ್ಲಿ ಆಶ್ರಯ ಮನೆಗಳನ್ನು ಹಂಚಿಕೆ ಮಾಡಲಾಗಿದ್ದು, ಆ ಸಂದರ್ಭದಲ್ಲಿ ಹಕ್ಕುಪತ್ರಗಳನ್ನು ವಿತರಿಸಲಾಗಿದೆ. ಆದರೆ ಕೆಲವರ ಬಳಿ ದಾಖಲೆಗಳಿದ್ದರೂ ಅನೇಕ ಕುಟುಂಬಗಳ ಬಳಿ ಸೂಕ್ತ ದಾಖಲೆಗಳಿಲ್ಲದ ಕಾರಣ ಪಟ್ಟಣ ಪಂಚಾಯತಿಯಲ್ಲಿ ಉತಾರಿಗಳು ಪೂರ್ಣಗೊಳ್ಳುತ್ತಿಲ್ಲ ಎಂಬ ವಿಷಯ ನನ್ನ ಗಮನಕ್ಕೆ ಬಂದಿದೆ ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ ಸಮಸ್ಯೆ ಪರಿಹರಿಸಲು ತಹಶೀಲ್ದಾರರನ್ನು ಸ್ಥಳಕ್ಕೆ ಕರೆಯಲಾಗಿದೆ. ಸುಮಾರು 200 ಮನೆಗಳಿಗೆ ಸಂಬಂಧಿಸಿದ ಹಕ್ಕುಪತ್ರ ಹಾಗೂ ದಾಖಲೆಗಳ ಕೊರತೆಯಿಂದ ನಿವಾಸಿಗಳು ಅತಂತ್ರ ಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ. ಈ ಕುರಿತು ಹಲವಾರು ಬಾರಿ ಪಟ್ಟಣ ಪಂಚಾಯತಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಬಳಿಕ ಶಾಸಕರಿಗೆ ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಅವರು ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ಫಲಾನುಭವಿಗಳ ಸಭೆ ನಡೆಸಿದರು.

94ಡಿ ವಿಧಾನದಡಿ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದು ಭರವಸೆ ನೀಡಿದ ಅವರು, ಆಶ್ರಯ ಮನೆಗಳಿಗೆ ಸಂಬಂಧಿಸಿದ ದಾಖಲೆಗಳು ಇದ್ದಲ್ಲಿ ಹಕ್ಕುಪತ್ರ ಅಥವಾ ದಾನಪತ್ರಗಳನ್ನು ಸೇರಿಸಿ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಗಳಿಗೆ ಅರ್ಜಿ ಸಲ್ಲಿಸುವಂತೆ ಸೂಚಿಸಿದರು.

1987ರಲ್ಲಿ ನಕ್ಷೆ ಸಿದ್ಧಪಡಿಸದಿರುವುದರಿಂದ ಈ ಸಮಸ್ಯೆಗಳು ಉಂಟಾಗಿವೆ. ಆದರೂ ನಿಮ್ಮ ಪರವಾಗಿ ನಾವು ಇದ್ದೇವೆ, ಯಾವುದೇ ಭಯಪಡುವ ಅಗತ್ಯವಿಲ್ಲ. ಅಧಿಕೃತ ದಾಖಲೆಗಳನ್ನು ಸಿದ್ಧಪಡಿಸಲು ತಹಶೀಲ್ದಾರರಿಗೆ ಸೂಚನೆ ನೀಡಲಾಗಿದೆ. ಅಗತ್ಯವಿದ್ದಲ್ಲಿ ಕಂದಾಯ ಸಚಿವರಿಗೂ ಪತ್ರ ಬರೆಯಲಾಗುವುದು ಎಂದು ಹೇಳಿದರು.

ಈ ವೇಳೆ ತಹಶೀಲ್ದಾರ್ ಕೀರ್ತಿ ಚಾಲಕ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರಾದ ಪೃಥ್ವಿರಾಜ್ ನಾಡಗೌಡ, ಉಪಾಧ್ಯಕ್ಷ ಬಸವರಾಜ ಗಂಗನಗೌಡರ, ಸದಸ್ಯರಾದ ವಿಜಯಲಕ್ಷ್ಮೀ ಇಲಕಲ್, ಬಾಬು ಕ್ಷತ್ರಿ, ರಮೇಶ ಆಲಕೊಪ್ಪರ, ಸಂಗಣ್ಣ ಬಾರಡ್ಡಿ, ಮುಖಂಡರಾದ ಮುತ್ತು ಗೊರಬಾಳ, ಸಿದ್ದಣ್ಣ ಆಲಕೊಪ್ಪರ, ಮಹ್ಮದ ನಾಡದಾಳ, ಬಾಬು ತೆಗ್ಗಿನಮನಿ, ಸೈಯದ ಡಖನಿ, ಗುರು ತಂಗಡಗಿ, ಸರ್ಕಲ್ ವಿ.ವಿ. ಅಂಬಿಗೇರ ಹಾಗೂ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಈರಣ್ಣ ಕೊಣ್ಣೂರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಖಾಕಿ ಪಡೆಯಿಂದ ಭರ್ಜರಿ ಕಾರ್ಯಾಚರಣೆ: 340 ಮೊಬೈಲ್ ಜಪ್ತಿ

ವಿಜಯಪುರ: ಜಿಲ್ಲೆಯಲ್ಲಿ ಸಿಇಐಆರ್ ಪೋರ್ಟ್‌ಲ್ ಬಲದ ಮೂಲಕ ಕಳ್ಳತನವಾಗಿರುವ ಮೊಬೈಲ್ ಪತ್ತೆ ಹಚ್ಚುವಲ್ಲಿ ಪೊಲೀಸರು ಯಶಸ್ವಿಯಾಗಿದ್ದು, ವಿವಿಧ ಮೊಬೈಲ್ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರ್ಯಾಚರಣೆ ನಡೆಸಿ 340 ಮೊಬೈಲ್‌ಗಳನ್ನು ಜಪ್ತು ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಜಿಲ್ಲೆಯ 26 ಪೊಲೀಸ್ ಠಾಣೆಗಳಲ್ಲಿ ದಕಲಾಗಿದ್ದ ದೂರುಗಳನ್ನು ಆಧರಿಸಿ ಮೊಬೈಲ್ ಪತ್ತೆ ಹಚ್ಚಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ವಿವರಣೆ ನೀಡಿದ ಜಿಲ್ಲಾ ಪೊಲೀಸ್ ಅಧೀಕ್ಷಕ ಲಕ್ಷ್ಮಣ ನಿಂಬರಗಿ, ಮೊಬೈಲ್ ಕಳ್ಳತನ ಪ್ರಕರಣಗಳು ಇತ್ತೀಚೆಗೆ ಹೆಚ್ಚುತ್ತಿದ್ದು, ಇದನ್ನು ತಪ್ಪಿಸುವ ನಿಟ್ಟಿನಲ್ಲಿ ಸೆಂಟ್ರಲ್ ಇಕ್ವಿಪಮೆಂಟ್ ಐಡೆಂಟಿಟಿ ರಜಿಸ್ಟರ್ ದೂರ ಸಂಪರ್ಕ ಇಲಾಖೆ ನಿರ್ಮಿಸಿದ ಡಿಜಿಟಲ್ ವ್ಯವಸ್ಥೆಯಾಗಿದ್ದು, ಮೊಬೈಲ್ ಕಳೆದು ಹೋದಾಗ ಟ್ರ್ಯಾಕ್, ಬ್ಲಾಕ್ ಹಾಗೂ ರಿಕವರಿ ಮಾಡಲು ಸಹಾಯಕವಾಗಿದೆ, ಈ ತಂತ್ರಾಂಶ ಆಧರಿಸಿ 340 ಮೊಬೈಲ್‌ಗಳನ್ನು ವಿವಿಧ ರಾಜ್ಯಗಳಿಂದ ಪತ್ತೆ ಹಚ್ಚಿ ಅದನ್ನು ಸಂಬಂಧಿಸಿದವರಿಗೆ ಹಸ್ತಾಂತರಿಸಲಾಗಿದೆ ಎಂದು ವಿವರಿಸಿದರು.

ಮೊಬೈಲ್ ಬಳಕೆದಾರರು ತಮ್ಮ ಸಾಧನವನ್ನು ಐಎಂಇಐ ಸಂಖ್ಯೆಯ ಮೂಲಕ ಟ್ರ್ಯಾಕ್ ಮಾಡಲು ಸಹಾಯಕವಾಗಿದ್ದು, ಮೊಬೈಲ್ ಕಳ್ಳತನ ಪ್ರಕರಣವನ್ನು ಪತ್ತೆ ಹಚ್ಚುವಲ್ಲಿ ಅನುಪಮ ಪಾತ್ರ ವಹಿಸಿದೆ ಎಂದು ವಿವರಿಸಿದರು.



ಪೆರೋಲ್ ರಜೆ ಮೇಲೆ ಜೈಲಿನಿಂದ ಹೊರಗೆ ಬಂದು ಕಳೆದ 2 ವರ್ಷ 10 ತಿಂಗಳಿನಿಂದ ನಾಪತ್ತೆಯಾಗಿದ್ದ ಕೈದಿ ಮೈಸೂರಿನಲ್ಲಿ ಇರುವ ಖಚಿತ ಮಾಹಿತಿ ಆಧರಿಸಿ ಆ ಕೈದಿಯನ್ನು ಬಂಧಿಸುವಲ್ಲಿ ವಿಜಯಪುರ ಪೊಲೀಸರು ಯಶಸ್ವಿಯಾಗಿದ್ದಾರೆ.

ಬಂಧಿತನಾಗಿರುವ ಸಜಾ ಬಂಧಿಯನ್ನು ಹಾವೇರಿ ಜಿಲ್ಲೆಯ ಶಿಗ್ಗಾಂವಿಯ ಕಿರಣಕುಮಾರ ಆನಂದಯ್ಯ ಹಿರೇಮಠ (30) ಎಂದು ಗುರುತಿಸಲಾಗಿದೆ. ಈ ಸಜಾ ಬಂಧಿಯ ಮೇಲೆ ಬಾದಾಮಿ ಪೊಲೀಸ್ ಠಾಣೆಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಗಲಕೋಟೆ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯ ಈ ಪ್ರಕರಣದ ವಿಚಾರಣೆ ನಡೆಸಿ ಜೀವಾವಧಿ ಶಿಕ್ಷೆಯನ್ನು ಪ್ರಕಟಿಸಿ ಕಳೆದ 2017 ರ ಡಿಸೆಂಬರ್ 3 ರಂದು ತೀರ್ಪು ಪ್ರಕಟಿಸಿತ್ತು. ಆದರನ್ವಯ ಈ ಬಂಧಿಯನ್ನು ಬಾಗಲಕೋಟೆ ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿತ್ತು. ನಂತರ ಆತನನ್ನು ಜಿಲ್ಲಾ ಕೇಂದ್ರ ಕಾರಾಗೃಹಕ್ಕೆ ಹಸ್ತಾಂತರಿಸಲಾಗಿತ್ತು. ಕಳೆದ 2023 ರ ಆಗಸ್ಟ್ 11 ರಿಂದ 2023 ರ ಆಗಸ್ಟ್ 23 ರವರೆಗೆ 13 ದಿನಗಳ ಕಾಲ ಪೆರೋಲ್ ರಜೆ ಪಡೆದು ಕೇಂದ್ರ ಕಾರಾಗೃಹದಿಂದ ತೆರಳಿದ್ದ, ಆದರೆ ಪೆರೋಲ್ ರಜೆ ಅವಧಿ ಮುಗಿದರೂ ವಾಪಾಸ್ಸಾಗದೇ ತಲೆ ಮರೆಸಿಕೊಂಡಿದ್ದ, ಈ ಹಿನ್ನೆಲೆಯಲ್ಲಿ ಕೇಂದ್ರ ಕಾರಾಗೃಹದ ಉಪಾಧೀಕ್ಷಕ ಡಾ.ಎಚ್.ಜಿ. ಮಂಜುನಾಥ ಆದರ್ಶ ನಗರ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದರು.

ಈ ಪ್ರಕರಣ ದಾಖಲಿಸಿಕೊಂಡು ನಿರಂತರವಾಗಿ ಆರೋಪಿ ಪತ್ತೆ ಜಾಲ ಬೀಸಿದ್ದ ಪೊಲೀಸರು ಆರೋಪಿ ಮೈಸೂರಿನಲ್ಲಿರುವ ಖಚಿತ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಆದರ್ಶ ನಗರ ಪೊಲೀಸ್‌ರ ತಂಡ ಮೈಸೂರಿಗೆ ತೆರಳಿ ಸಜಾ ಬಂಧಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿ ನ್ಯಾಯಾಲಯದ ಮೇಲೆ ಹಾಜರು ಪಡಿಸಲಾಗಿದೆ ಎಂದು ವಿವರಿಸಿದರು. ಎಎಸ್‌ಪಿ ರಾಮನಗೌಡ ಹಟ್ಟಿ, ಡಿವೈಎಸ್‌ಪಿಗಳಾದ ಸುನೀಲ್ ಕಾಂಬಳೆ, ಟಿ.ಎಸ್. ಸುಲ್ಪಿ, ಸಿಪಿಐಗಳಾದ ಮಲ್ಲಯ್ಯ ಮಠಪತಿ ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

ಕಿರುಸುದ್ದಿ

ಅಂಜಲಿ ಚಳಗೇರಿಗೆ ಶೇ.96.83ಅಂಕ

ಕುಷ್ಟಗಿ: ತಾಲೂಕಿನ ಚಳಗೇರಿ ಗ್ರಾಮದ ವೀರ ಸ್ವಾತಂತ್ರ್ಯ ಹೋರಾಟಗಾರ ಸೋಮಪ್ಪ ಹಿರೇಕುರುಬರ ಹಾಗೂ ಹಿರಿಯ ನ್ಯಾಯಾವಾಧಿ ಫಕೀರಪ್ಪ ಸೋಮಪ್ಪ ಹಿರೇಕುರುಬರ ಅವರ ಮಗಳು ಗಂಗಾವತಿ ತಾಲೂಕಿನ ವಿದ್ಯಾನೀಕೇತ ಪಿಯು ಕಾಲೇಜಿನಲ್ಲಿ ಓದಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.96.83ರಷ್ಟು ಅಂಕವನ್ನು ಗಳಿಸಿ ತಾಲೂಕಿಗೆ ಕೀರ್ತಿ ತಂದಿದ್ದಾಳೆ.



ಈ ವಿದ್ಯಾರ್ಥಿ ಕೀರ್ತಿ ತಂದಿದ್ದಕ್ಕೆ ಚಳಗೇರಿ ಗ್ರಾಮದ ಹಿರೇಕುರುಬರು ಕುಟುಂಬದವರು, ಚಳಗೇರಿ ಗ್ರಾಮದ ಗುರು ಹಿರಿಯರು, ಕುಷ್ಟಗಿ ತಾಲೂಕು ಹಾಲುಮತ ಸಮಾಜದವರು ಸೇರಿದಂತೆ ಕುಷ್ಟಗಿ ತಾಲೂಕು ವಕೀಲರ ಸಂಘದವರು ಅಭಿನಂದನೆ ಸಲ್ಲಿಸಿದ್ದಾರೆ.

ಕುಡಿಯುವ ನೀರಿನ ಸಮಸ್ಯೆಗೆ ಸಹಾಯವಾಣಿ

ಮಸ್ಕಿ: ಬೇಸಿಗೆ ಆರಂಭವಾಗಿರುವ ಹಿನ್ನಲೆಯಲ್ಲಿ ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸದಂತೆ ಮುಂಜಾಗ್ರತಾ ಕ್ರಮವಾಗಿ ಮಸ್ಕಿ ತಾಲೂಕು ಪಂಚಾಯತಿಯಲ್ಲಿ ಸಹಾಯವಾಣಿ ಆರಂಭಿಸಲಾಗಿದೆ. ಬೇಸಿಗೆ ಕಾಲ ಮುಗಿಯುವವರೆಗೆ ಸಾರ್ವಜನಿಕರಿಂದ ಸ್ವೀಕೃತವಾಗುವ ಕುಡಿಯುವ ನೀರಿನ ಸಮಸ್ಯೆ/ದೂರುಗಳನ್ನು ದಾಖಲಿಸಿ, ಪರಿಹರಿಸಲು ಸಹಾಯವಾಣಿ ಸಂಖ್ಯೆ 08537-270122 ಗೆ ಬೆಳಗ್ಗೆ 8 ಗಂಟೆಯಿಂದ ಸಂಜೆ 5.30ರವರೆಗೆ ಕರೆ ಮಾಡಿ, ಸಮಸ್ಯೆ ದಾಖಲಿಸಬಹುದಾಗಿದೆ ಎಂದು ಮಸ್ಕಿ ತಾಪಂ ಕಾರ್ಯ ನಿರ್ವಾಹಕ ಅಧಿಕಾಧಿಕಾರಳು ತಿಳಿಸಿದ್ದರು.

ಇಂದು ರಾಜ್ಯ ಮಟ್ಟದ ರಸಪ್ರಶ್ನೆ ಕಾರ್ಯಕ್ರಮ

ಕುಷ್ಟಗಿ: ಪಟ್ಟಣದ ಕ್ರೈಸ್ತ ಕಿಂಗ್ ಸ್ಕೂಲ್‌ನಲ್ಲಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಬದುಕು ಮತ್ತು ಬರಹದ ಕುರಿತು ರಾಜ್ಯ ಮಟ್ಟದ ರಸಪ್ರಶ್ನೆ ಕಾರ್ಯಕ್ರಮ ಏ.12ರಂದು ಬೆಳಗ್ಗೆ 9ಗಂಟೆಗೆ ಆಯೋಜಿಸಲಾಗಿದೆ. ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಎಚ್.ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಂಸದ ಕೆ.ರಾಜಶೇಖರ್ ಹಿಟ್ನಾಳ್, ಮಾಜಿ ಸಚಿವರಾದ ಅಮರೇಗೌಡ ಎಲ್.ಪಾಟೀಲ ಬಯ್ಯಾಪುರ, ಕಾಡಾ ಅಧ್ಯಕ್ಷರಾದ ಹಸನಸಾಬ್ ದೋಟಿಹಾಳ್, ಮಾಜಿ ಶಾಸಕರಾದ ಕೆ.ಶರಣಪ್ಪ ವಕೀಲರು, ಸಹಾಯಕ ಆಯುಕ್ತ ಕ್ಯಾಪ್ಟನ್ ಮಹೇಶ್ ಮಾಲಗತ್ತಿ, ಕೊಪ್ಪಳ ವಿವಿ ಕುಲಸಚಿವ ಡಾ. ಎಸ್.ವಿ.ಡಾಣಿ, ಮುಖ್ಯ ಲೆಕ್ಕಾಧಿಕಾರಿ ಅಮೀನ್ ಅತ್ತಾರ್, ತಹಸೀಲ್ದಾರ್ ಅಶೋಕ್ ಶಿಗ್ಗಾವಿ, ತಾಪಂ ಇಒ ಪಂಪಾಪತಿ ಹಿರೇಮಠ, ಸಿಪಿಐ ವಿಶ್ವನಾಥ್ ಹಿರೇಗೌಡ್ರ, ಪಿಎಸ್ಐ ಹನುಮಂತಪ್ಪ ಇತರರು ಇರಲಿದ್ದಾರೆ. ಬೆಳಿಗ್ಗೆ 9:30ರಿಂದ 10:30ಗಂಟೆಗೆ ಪ್ರವೇಶ ಪರೀಕ್ಷೆ ನಡೆಯುವುದು. ಸರಿಯಾಗಿ 12ಗೆ ಕ್ವಿಜ್ ನಡೆಸಲಾಗುವುದು. ಭಾಗವಹಿಸಿದ ಸಹಸ್ರಾರು ಸಂಖ್ಯೆಯ ಎಲ್ಲ ಅಭ್ಯರ್ಥಿಗಳಿಗೆ ಈ ಮೇಲಿನಂತೆ ಅಭಿನಂದನಾ ಪತ್ರವನ್ನು ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಜಿಲ್ಲೆಗೆ ಪ್ರಥಮ ಸ್ಥಾನ

ಕೊಪ್ಪಳ: 2025-26ನೇ ಸಾಲಿಗೆ ಯಶಸ್ವಿನಿ ಯೋಜನೆಯಡಿ ಜಿಲ್ಲೆಗೆ ನೀಡಿದ ಗುರಿ ಸಾಧಿಸುವಲ್ಲಿ ಕೊಪ್ಪಳ ಜಿಲ್ಲೆಯು ರಾಜ್ಯಕ್ಕೆ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ ಎಂದು ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು ತಿಳಿಸಿದ್ದಾರೆ. 2025-26ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಜಾರಿಗೊಳಿಸಿ ಸದಸ್ಯರನ್ನು ನೋಂದಾಯಿಸಲು ಮಾರ್ಗಸೂಚಿಗಳೊಂದಿಗೆ ಸರ್ಕಾರವು ಆದೇಶವನ್ನು ಹೊರಡಿಸಲಾಗಿತ್ತು. ಅದರಂತೆ ಈ ಯೋಜನೆಯಡಿ ಕೊಪ್ಪಳ ಜಿಲ್ಲೆಗೆ 90 ಸಾವಿರ ಸದಸ್ಯರನ್ನು ನೋಂದಾಯಿಸುವ ಗುರಿಯನ್ನು ನಿಗದಿಪಡಿಸಲಾಗಿತ್ತು. ಈ ಗುರಿ ಅನ್ವಯ ಕೊಪ್ಪಳ ಜಿಲ್ಲೆಯು ಶೇ 122 ರಷ್ಟು ಗುರಿ ಸಾಧಿಸಿ, ಕರ್ನಾಟಕ ರಾಜ್ಯಕ್ಕೆ ಪ್ರಥಮ ಸ್ಥಾನದಲ್ಲಿರುತ್ತದೆ.

ಈ ಗುರಿ ಸಾಧನೆಗೆ ಶ್ರಮಿಸಿದ ಸಹಕಾರ ಕ್ಷೇತ್ರದಲ್ಲಿನ ಎಲ್ಲಾ ಸದಸ್ಯರಿಗೆ, ಸಹಕಾರ ಇಲಾಖಾ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ, ಆರ್.ಕೆ.ಡಿ.ಸಿ.ಸಿ.ಬ್ಯಾಂಕಿನ ವ್ಯವಸ್ಥಾಪಕರಿಗೆ, ವೃತ್ತ ವೀಕ್ಷಕರಿಗೆ, ಕೆ.ಎಂ.ಎಫ್. ಸಂಸ್ಥೆಯ ಅಧಿಕಾರಿ, ಸಿಬ್ಬಂದಿಗಳಿಗೆ ಹಾಗೂ ಜಿಲ್ಲೆಯ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸಹಕಾರ ಇಲಾಖಾ ಪರವಾಗಿ ತುಂಬು ಹೃದಯದ ಧನ್ಯವಾದಗಳನ್ನು ತಿಳಿಸಲಾಗಿದೆ ಎಂದು ಕೊಪ್ಪಳ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.



ಯಲಬುರ್ಗಾ: ಮಾಜಿ ಸಚಿವ ಹಾಲಪ್ಪ ಆಚಾರ ಅವರನ್ನು ಮಂತ್ರಾಲಯ ಶ್ರೀರಾಘವೇಂದ್ರ ಸ್ವಾಮೀಜಿ ಪೀಠದ ಶ್ರೀಡಾ. ಸುಬುಧೇಂದ್ರತೀರ್ಥ ಸ್ವಾಮೀಜಿ ಆಶೀರ್ವದಿಸಿ ಅನುಗ್ರಹಿಸಿದರು. ಬಿಜೆಪಿ ವಕ್ತಾರ ವೀರಣ್ಣ ಹುಬ್ಬಳ್ಳಿ, ಪಪಂ ಮಾಜಿ ಅಧ್ಯಕ್ಷ ಅಮರೇಶ ಹುಬ್ಬಳ್ಳಿ, ಕುಕನೂರು ಪಪಂ ಸದಸ್ಯ ಸಿದ್ದು ಉಳ್ಳಾಗಡ್ಡಿ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಸಂತೋಷಿಮಾ ಜೋಶಿ, ಭಾಪುಗೌಡ ಪಾಟೀಲ ಮತ್ತಿತರರಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ಮುನಿರಾಬಾದ್: ಕಲ್ಯಾಣ ಕರ್ನಾಟಕದ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯಿಂದ ಹಿಟ್ನಾಳ್ ಹೋಬಳಿಯ ಹುಲಿಗಿ ಗ್ರಾಮದಲ್ಲಿ ಬುಧವಾರ 4.90 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿಗೆ ಶಾಸಕ ಕೆ.ರಾಘವೇಂದ್ರ ಹಿಟ್ನಾಳ್, ಸಂಸದ ರಾಜಶೇಖರ ಹಿಟ್ನಾಳ್ ಪೂಜೆ ನೆರವೇರಿಸಿದರು.

ಕಳೆದ ಹತ್ತು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಹಿಟ್ನಾಳ್-ಹುಲಿಗಿ ರಸ್ತೆ ತಗ್ಗು ಗುಂಡಿಗಳಿಂದ ಕೂಡಿದ್ದು ವಾಹನ ಸವಾರರಿಗೆ ಹಾಗೂ ಹುಲಿಗಿ ಕ್ಷೇತ್ರಕ್ಕೆ ಬರುವ ಭಕ್ತರಿಗೆ ತೊಂದರೆಯಾಗಿ ಪರಿಣಮಿಸಿತ್ತು. ಈ ಹಿಂದೆ ಮಾಧ್ಯಮಗಳಲ್ಲಿ ಸಹ ಪ್ರಸಾರವಾಗಿದ್ದು ಎಚ್ಚೆತ್ತುಕೊಂಡ ಶಾಸಕ ಸಂಸದರು 2025-26ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃ ಮಂಡಳಿಯ ಬಡ್ಡಿ ಮೊತ್ತದಲ್ಲಿ ಲೋಕಸಭಾ ಸದಸ್ಯ ರಾಜಶೇಖರ ಹಿಟ್ನಾಳ ಅವರಿಗೆ ಹಂಚಿಕೆಯಾದ 4.90 ಕೋಟಿ ರೂಪಾಯಿ ವೆಚ್ಚದಲ್ಲಿ ಕಾಮಗಾರಿ ಪೂಜೆ ನೆರವೇರಿಸಿದ್ದು ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ. ಎಪಿಎಂಸಿ ಅಧ್ಯಕ್ಷ ವಿಶ್ವನಾಥ ರಾಜು, ಕೆ.ಎಂ. ಸೈಯದ್ ಪಾಲಕ್ಷಪ್ಪ ಗುಂಗಾಡಿ, ಹನುಮಂತಪ್ಪ ಹ್ಯಾಟಿ, ಈರಣ್ಣ ಈಡಿಗೇರ, ಯಂಕಪ್ಪ ಹೊಸಳ್ಳಿ, ಬಾಲಚಂದ್ರ,ಚನ್ನಕೃಷ ಗೊಲ್ಲರ, ವೀರಭದ್ರಪ್ಪ ಭೂಸನೂರಮಠ, ಶರಣಪ್ಪ ಹೊಟ್ಟಿ, ಚಂದನ್, ಶಿವು ದಳಪತಿ, ರಾಜು ಜವಳಿ, ಹನುಮಂತಪ್ಪ ಗಿಡ್ಡಾಲಿ, ಸೇರಿದಂತೆ ಅನೇಕರು ಊರಿನ ಮುಖಂಡರು ಉಪಸ್ಥಿತರಿದ್ದರು.



ಮುನಿರಾಬಾದ್: ಕಲ್ಯಾಣ ಕರ್ನಾಟಕದ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯಿಂದ ಹಿಟ್ನಾಳ್ ಹೋಬಳಿಯ ಹುಲಿಗಿ ಗ್ರಾಮದಲ್ಲಿ ಬುಧವಾರ 4.90 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿಗೆ ಶಾಸಕ ಕೆ.ರಾಘವೇಂದ್ರ, ಹಿಟ್ನಾಳ್, ಸಂಸದ ರಾಜಶೇಖರ ಹಿಟ್ನಾಳ್ ಪೂಜೆ ನೆರವೇರಿಸಿದರು. ಎಪಿಎಂಸಿ ಅಧ್ಯಕ್ಷ ವಿಶ್ವನಾಥ ರಾಜು, ಕೆ.ಎಂ. ಸೈಯದ್ ಪಾಲಕ್ಷಪ್ಪ ಗುಂಗಾಡಿ, ಹನುಮಂತಪ್ಪ ಹ್ಯಾಟಿ, ಈರಣ್ಣ ಈಡಿಗೇರ, ಯಂಕಪ್ಪ ಹೊಸಳ್ಳಿ, ಬಾಲಚಂದ್ರ,ಚನ್ನಕೃಷ ಗೊಲ್ಲರ ಇದ್ದರು.

ಪ್ರಗತಿ ಪರಿಶೀಲನಾ ಸಭೆ | ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ

ತೆರಿಗೆ ಪಾವತಿಸದಿದ್ದರೆ ವಿದ್ಯುತ್ ಕಡಿತಗೊಳಿಸಿ

ಕಲಬುರಗಿ: ಮಹಾನಗರ ಪಾಲಿಕೆಯ ವ್ಯಾಪ್ತಿಯ ಆಸ್ತಿಗಳಿಗೆ ಮೇ ಅಂತ್ಯದ ವೇಳೆಗೆ ತೆರಿಗೆ ಪಾವತಿಸಿ ನೋಂದಣಿ ಮಾಡಿಸಿಕೊಳ್ಳದೇ ಇದ್ದರೆ ಅಂತಹ ಆಸ್ತಿಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುವುದು ಎಂದು ಆಸ್ತಿದಾರರಿಗೆ ಹೇಳಿ ಎಂದು ಜಿಲ್ಲಾ ಸಚಿವ ಪ್ರಿಯಾಂಕ್ ಖರ್ಗೆ ಅಧಿಕಾರಿಗಳಿಗೆ ಸೂಚಿಸಿದರು.

ಕಲಬುರಗಿ ಮಹಾನಗರ ಪಾಲಿಕೆ ಸಭಾಂಗಣದಲ್ಲಿ ನಡೆದ ಪ್ರಗತಿ ಪರಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು,ವಸೂಲಾದ ತೆರಿಗೆಯಲ್ಲಿ ಒಂದು ರೂಪಾಯಿ ಕೂಡಾ ರಾಜ್ಯ ಸರ್ಕಾರಕ್ಕೆ ಹೋಗುವುದಿಲ್ಲ.ಆ ಹಣವನ್ನು ನಗರದ ಸಾರ್ವಜನಿಕರಿಗೆ ಮೂಲಭೂತ ಸೌಲಭ್ಯ ಒದಗಿಸಲು ಬಳಸಿಕೊಳ್ಳಬೇಕು.ಆಸ್ತಿ ತೆರಿಗೆ ವಸೂಲು ವಿಚಾರದಲ್ಲಿ ಯಾವ ಒತ್ತಡಕ್ಕೂ ಮಣಿಯಬಾರದು ಎಂದು ಒತ್ತಿ ಹೇಳಿದರು.

ಮಹಾನಗರ ಪಾಲಿಕೆಯ 2025-26 ಸಾಲಿನ ಜೋನ್ 1ರ ವಾರ್ಷಿಕ ತೆರಿಗೆ ಬೇಡಿಕೆ ರೂ 26.ಕೋಟಿ ಇತ್ತು ಅದರಲ್ಲಿ 20 ಕೋಟಿ ರೂ. ವಸೂಲಾಗಿದೆ. ಜೋನ್ 2 ರಲ್ಲಿ 20 ಕೋಟಿ ಬೇಡಿಕೆ ಇತ್ತು ಅದರಲ್ಲಿ ರೂ 17 ಕೋಟಿ ವಸೂಲಾಗಿದೆ ಹಾಗೂ ಜೋನ್ 3 ರಲ್ಲಿ ರೂ 9 ಕೋಟಿ ಬೇಡಿಕೆ ಇತ್ತು ಅದರಲ್ಲಿ ರೂ 7 ಕೋಟಿ ವಸೂಲಾಗಿದೆ.ನಾಗರಿಕರು ಕೂಡಾ ಆನ್ ಲೈನ್ ನಲ್ಲಿ ನೇರವಾಗಿ ನೋಂದಣಿ ಮಾಡಿಕೊಳ್ಳುವ ಅವಕಾಶ ನೀಡಲಾಗಿದೆ. ಮಹಾನಗರ ಪಾಲಿಕೆಯಲ್ಲಿ ಪ್ರಸ್ತುತ 1297 ಅರ್ಜಿಗಳನ್ನು ಸ್ವೀಕರಿಸಲಾಗಿದೆ ಎಂದು ಕಮಿಷನರ್ ಮಾಹಿತಿ ಸಭೆಯ ನೀಡಿ, ಆಗ ಈ ಕುರಿತು ಸಾರ್ವಜನಿಕರಿಗೆ ಸರಿಯಾದ ಮಾಹಿತಿ ಒದಗಿಸಿ ಎಂದು ಸಚಿವರು ಸೂಚಿಸಿದರು.

ಪೌರಕಾರ್ಮಿಕರಿಗೆ ಬೇರೆ ದಿನನೂ ರಜೆ ನೀಡಿ: ಕಲಬುರಗಿ ಮಹಾನಗರ ಪಾಲಿಕೆಯ ಪೌರಕಾರ್ಮಿಕರಿಗೆ ಭಾನುವಾರ ರಜೆ ದಿನವನ್ನಾಗಿ ನೀಡಿದ್ದು ಅವೈಜ್ಞಾನಿಕ. ಎಲ್ಲರಿಗೂ ಒಂದೇ ದಿನ ರಜೆ ನೀಡಿದರೆ ನಗರದಲ್ಲಿ ಕಸ ಸಂಗ್ರಹವಾಗಿ ಮರುದಿನ ಅಂದರೆ ಸೋಮವಾರ ಅವರಿಗೆ ಹೆಚ್ಚಿನ ಒತ್ತಡವಾಗಲಿದೆ. ಹಾಗಾಗಿ, ಎಲ್ಲರಿಗೂ ಒಂದೇ ದಿನ ರಜೆ ನೀಡುವ ಬದಲು ಬೇರೆ ಬೇರೆ ದಿನ ರಜೆ ನೀಡಿ ಎಂದು ಸಲಹೆ ನೀಡಿದರು. ಮಹಾನಗರ ಪಾಲಿಕೆಯ ಪೌರಕಾರ್ಮಿಕರು ರಜೆ ಬೇಡಿಕೆಯೊಂದಿಗೆ ಕೋರ್ಟ್‌ಗೆ ಹೋಗಿದ್ದರಿಂದ ಅವರಿಗೆ ರವಿವಾರ ರಜೆ ನೀಡಲಾಗಿದೆ ಎಂದು ಅಧಿಕಾರಿಗಳು ವಿವರಿಸಿದಾಗ, ರಜೆ ನೀಡಿ ಆದರೆ,ಎಲ್ಲರಿಗೂ ರವಿವಾರ ರಜೆ ನೀಡುವ ಬದಲು ಬೇರೆ ಬೇರೆ ದಿನ ರಜೆ ನೀಡಿ ಇದರಿಂದ ಕಸ ವಿಲೇವಾರಿಗೆ ಅನುಕೂಲವಾಗಲಿದೆ ಎಂದ ಅವರು,ಪ್ರಸ್ತುತ ಮಹಾನಗರ ಪಾಲಿಕೆಯಡಿಯಲ್ಲಿ 935 ಪೌರಕಾರ್ಮಿಕರಿದ್ದು ಭಾನುವಾರ ದಿನ ಎಲ್ಲರೂ ರಜೆ ತೆಗೆದುಕೊಳ್ಳುವ ವಿಚಾರ ಚರ್ಚೆಗೆ ಬಂದಾಗ ಸಚಿವರು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಶಾಸಕರಾದ ಅಲ್ಲಮಪ್ರಭು ಪಾಟೀಲ, ಕನೀಜ್ ಫಾತೀಮಾ, ಎಂ.ಎಲ್.ಸಿ.ಜಗದೇವ ಗುತ್ತೇದಾರ, ತಿಪ್ಪಣ್ಣಪ್ಪ ಕಮಕನೂರು, ಮಹಾಪೌರ ವರ್ಷಾ ಜಾನೆ, ಕಮೀಷನರ್ ಅವಿನಾಶ್ ಶಿಂಧೆ ಸಿಇಒ ಭಂವರ್ ಸಿಂಗ್ ಮೀನಾ ಸೇರಿದಂತೆ ಇತರೆ ಅಧಿಕಾರಿಗಳಿದ್ದರು.



> ಅಧಿಕಾರಿಗಳು ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ಸಾರ್ವಜನಿಕರ ಫೋನ್ ಕರೆ ಸ್ವೀಕರಿಸಿ ನಿಮ್ಮ ಅಸಮರ್ಪಕ ಸ್ಪಂದನೆಗಳಿಂದಲೇ ಮಹಾನಗರ ಪಾಲಿಕೆಗೆ ಕೆಟ್ಟ ಹೆಸರು ಬರುತ್ತದೆ.ನಿಮ್ಮ ವ್ಯಾಪ್ತಿಗೆ ಬರದಿದ್ದರೂ ಕೂಡಾ ಸೌಜನ್ಯಯುತವಾಗಿ ಸ್ಪಂದಿಸಿ.
>
> ■ ಪ್ರಿಯಾಂಕ್ ಖರ್ಗೆ, ಉಸ್ತುವಾರಿ ಸಚಿವ

ಕಾರ್ಮಿಕರ ಹಕ್ಕು ರಕ್ಷಿಸಿ: ನಾಗಲಿಂಗಸ್ವಾಮಿ

ಮಾನ್ವಿ: ಕನಿಷ್ಠ ವೇತನವನ್ನು ತಕ್ಷಣ ಪರಿಷ್ಕರಿಸಿ ತಿಂಗಳಿಗೆ ಕನಿಷ್ಠ ರೂ. 42,000 ನಿಗದಿ ಮಾಡಬೇಕು, ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸಬೇಕು ಹಾಗೂ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಬೇಕು ಎಂದು ಆಗ್ರಹಿಸಿ ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ (ಎಐಸಿಸಿಟಿಯು) ರಾಜ್ಯ ಸಮಿತಿ ನೀಡಿರುವ ಕರೆಗೆ ಬೆಂಬಲವಾಗಿ ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘದ ವತಿಯಿಂದ ಇಂದು ಪ್ರತಿಭಟನೆ ನಡೆಸಿ, ಕಾರ್ಮಿಕ ನಿರೀಕ್ಷಕರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಬಳಿಕ ಮಾತನಾಡಿದ ಸಂಘದ ಕೇಂದ್ರ ಸಮಿತಿ ಅಧ್ಯಕ್ಷ ಕೆ.ನಾಗಲಿಂಗಸ್ವಾಮಿ ಅವರು,ಕಾರ್ಮಿಕರಹಕ್ಕುಬಾಧ್ಯತೆಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಹಲವು ವರ್ಷಗಳಿಂದ ಸಂಘಟನೆಗಳು ಹೋರಾಟ ನಡೆಸುತ್ತಿವೆ. ಆದರೂ ರಾಜ್ಯದಲ್ಲಿ ಕಾರ್ಮಿಕರಹಕ್ಕುಗಳ ಸಮರ್ಪಕ ಅನುಷ್ಠಾನವಾಗದಿರುವುದು ವಿಷಾದನೀಯ ಎಂದು ಹೇಳಿದರು.

ವೇತನ, ಉದ್ಯೋಗ ಭದ್ರತೆ ಹಾಗೂ ಸಂಘಟನಾಹಕ್ಕುಗಳರಕ್ಷಣೆಯನ್ನು ಕಡಿಮೆ ಮಾಡುವ ಮೂಲಕ ಕಾರ್ಮಿಕರನ್ನು ನಿಯಂತ್ರಣವಿಲ್ಲದ ಶೋಷಣೆಯ ಯುಗಕ್ಕೆ ತಳ್ಳುವ ಅಪಾಯವಿದೆ ಎಂದು ಎಚ್ಚರಿಸಿದ ಅವರು, "ನೆಲವೇತನ ಕಲ್ಪನೆಯೂ ಕನಿಷ್ಠ ವೇತನ ಹಕ್ಕಿಗೆ ಧಕ್ಕೆ ತರುವ ಸಾಧ್ಯತೆ ಇದೆ ಎಂದು ಹೇಳಿದರು. ಆಹಾರ, ಬಟ್ಟೆ, ಮನೆ ಬಾಡಿಗೆ, ಶಿಕ್ಷಣ ಸೇರಿದಂತೆ ಮೂಲಭೂತ ಅಗತ್ಯಗಳನ್ನು ಪರಿಗಣಿಸಿದರೆ, ಒಬ್ಬ ಕಾರ್ಮಿಕನು ಗೌರವಯುತ ಜೀವನ ನಡೆಸಲು ತಿಂಗಳಿಗೆ ಕನಿಷ್ಠ ರೂ. 42,000 ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು. ಇದಕ್ಕಿಂತ ಕಡಿಮೆ ವೇತನವು ಕಾರ್ಮಿಕರು ಮತ್ತು ಅವರ ಕುಟುಂಬಗಳನ್ನು ದಾರಿದ್ರ್ಯದತ್ತ ತಳ್ಳುತ್ತದೆ ಎಂದರು. ಕನಿಷ್ಠ ವೇತನ ನೀಡದಿರುವುದು ಬಲವಂತದ ಕೆಲಸಕ್ಕೆ ಸಮಾನ ಎಂದು ಸುಪ್ರೀಂ ಕೋರ್ಟ್ ಹೇಳಿರುವುದನ್ನು ಅವರು ಸ್ಮರಿಸಿದರು. ಸರ್ಕಾರಿ ಹಾಗೂ ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡುವ ಗುತ್ತಿಗೆ ಕಾರ್ಮಿಕರಿಗೆ ಕಾನೂನುಬದ್ಧ ಕನಿಷ್ಠ ವೇತನವೇ ನೀಡಲಾಗುತ್ತಿಲ್ಲ ಎಂದು ಆರೋಪಿಸಿದರು. ಕಾರ್ಮಿಕ ಇಲಾಖೆ ಕಾನೂನು ಜಾರಿಗೆ ತರಲು ವಿಫಲವಾಗಿದೆ ಎಂದು ಟೀಕಿಸಿದರು. ಕಾರ್ಮಿಕ ವರ್ಗ ಒಗ್ಗೂಡಿ ಹೋರಾಟ ನಡೆಸುವುದು ಅನಿವಾರ್ಯವಾಗಿದೆ ಎಂದು ಹೇಳಿದರು. ಸಂಘದ ಖಜಾಂಚಿ ಜಲೀಲ್ ಪಾಷ, ಗೋಪಾಲ ರಾವ್, ಶಿವಣ್ಣ, ನಾಗರಾಜ್, ರಾಮಣ್ಣ, ಗೌಸಿಯು, ಯೂಸುಫ್, ಮಹಾಬಲಿ, ದುರುಗಪ್ಪ ಇದ್ದರು.



ಸುಸಜ್ಜಿತ ಕನ್ವೆನ್ಷನ್ ಸೆಂಟರ್ ಕಟ್ಟಡ ಕಾಮಗಾರಿಗೆ ಸಚಿವರಿಂದ ಚಾಲನೆ



ರಾಯಚೂರು: ನಗರದ ಕೃಷಿ ವಿಶ್ವವಿದ್ಯಾಲಯದ ಮೈದಾನದ ಆವರಣದಲ್ಲಿ ಈಗಾಗಲೇ ಕಾಯ್ದಿರಿಸಿದ ಎರಡು ಎಕರೆ ಜಾಗದಲ್ಲಿ ಸುಮಾರು 2000ಕ್ಕೂ ಹೆಚ್ಚು ಆಸನವುಳ್ಳ ಸುಸಜ್ಜಿತವಾದ ಕನ್ವೆನ್ಷನ್ ಸೆಂಟರ್ ನಿರ್ಮಿಸಲು ಕೆಕೆಆರ್ ಡಿಬಿ ಅಡಿ 40ಕೋಟಿ ರೂ. ಅಂದಾಜು ಮೊತ್ತದ ಕಟ್ಟಡ ನಿರ್ಮಾಣದ ಭೂಮಿ ಪೂಜೆ ಕಾರ್ಯಕ್ರಮಕ್ಕೆ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ಆಗಿರುವ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಬುಧವಾರ ನಗರದ ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿ ಚಾಲನೆ ನೀಡಿದರು.

ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಈಶ್ವರ್ ಕುಮಾರ ಕಾಂದೂ, ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹಾಪಾತ್ರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಕ್ಷು ಗಿರಿ, ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎಂ.ಹನುಮಂತಪ್ಪ, ಅಪರ ಜಿಲ್ಲಾಧಿಕಾರಿ ಶಿವಾನಂದ, ಜಿಲ್ಲಾ ಪಂಚಾಯತ ಯೋಜನೆ ಅಧಿಕಾರಿ ಶರಣಬಸವರಾಜ, ಜಿಲ್ಲಾ ಪಂಚಾಯತ ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ಜಿಪಂ ಲೆಕ್ಕಾಧಿಕಾರಿ ವಿಜಯಶಂಕರ್, ಕೃಷಿ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಬಸವನ ಗೌಡ ಬ್ಯಾಗವಾಟ್, ಮಲ್ಲೇಶ್ ಕೊಲಿಮಿ, ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಾದ ವೆಂಕಟೇಶ್ ಗಲಗ, ಅಭಿಯಂತರರಾದ ರಾಘವೇಂದ್ರ, ಮಹೇಶಕುಮಾರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

ಶ್ರೀಗಳಿಗೆ ಶಾಸಕ ರಾಯರೆಡ್ಡಿಯಿಂದ ತುಲಾಭಾರ ಸೇವೆ

ಯಲಬುರ್ಗಾ: ಮಂತ್ರಾಲಯ ಶ್ರೀ ರಾಘವೇಂದ್ರಸ್ವಾಮಿಗಳ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರತೀರ್ಥ ಶ್ರೀ ಪಾದಂಗಳವರಿಗೆ ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ, ಶಾಸಕ ಬಸವರಾಜ ರಾಯರಡ್ಡಿ ಅವರು ತುಲಾಭಾರ ಸೇವೆ ಸಲ್ಲಿಸಿದರು.

ಶುಕ್ರವಾರ ರಾತ್ರಿ ಪಟ್ಟಣದ ಶ್ರೀ ರಾಘವೇಂದ್ರಸ್ವಾಮಿಗಳ ಮಠದ ಸುವರ್ಣ ಮಹೋತ್ಸವ ಸಮಾರಂಭ ಉದ್ಘಾಟನೆಯ ಕಾರ್ಯಕ್ರಮದಲ್ಲಿ ಬಸವರಾಜ ರಾಯರಡ್ಡಿ ಅವರು ಮಂತ್ರಾಲಯದ ಸ್ವಾಮಿಗಳಿಗೆ ತುಲಾಭಾರ ಸೇವೆಯನ್ನು ಸಮರ್ಪಿಸಿದರು.

ಬಳಿಕ ಮಂತ್ರಾಲಯ ಮಠದ ಪಂಡಿತರಾದ ವಾದಿರಾಜ ಆಚಾರ ಉಪನ್ಯಾಸ ನೀಡಿ, ರಾಯರನ್ನು ಸ್ತೋತ್ರದ ಮೂಲಕ ನಿತ್ಯ ಪಠಿಸಿ ಸ್ಮರಿಸುವ ಜತೆಗೆ ಭಕ್ತರನ್ನು ಗುರುಗಳು ಸದಾ ಕಾಯುತ್ತಾರೆ.ಭಕ್ತರಿಗೆ ವೆಂಕಟೇಶಸ್ವಾಮಿ ತಂದೆ ಇದ್ದಂತೆ. ರಾಯರು ತಾಯಿಯಿದ್ದಂತೆ ರಾಯರು ಎಲ್ಲಾ ಇಷ್ಟಾರ್ಥಗಳನ್ನು ಈಡೇರಿಸುತ್ತಾರೆ ಅಂತ ಯಲಬುರ್ಗಾ ವೃಂದಾವನದಲ್ಲಿ ಸುಮಾರು ಐವತ್ತು ವರ್ಷಗಳಿಂದ ನೆಲೆಸಿದ್ದಾರೆ. ಐವತ್ತು ವರ್ಷದ ಈ ಸುವರ್ಣ ಮಹೋತ್ಸವ ಕಾರ್ಯಕ್ರಮಕ್ಕೆ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು ಸಾಕ್ಷಿಕರಿಸಿದ್ದಾರೆ.ಭಕ್ತರು ಭಕ್ತಿ ಭಾವದಿಂದ ರಾಯರಿಗೆ ಪುನೀರಾಗಬೇಕು ಅಂದಾಗ ನೆಮ್ಮಲ್ಲರ ಬದುಕು ಸಾರ್ಥಕವಾಗುತ್ತದೆ ಎಂದರು.

ಈ ವೇಳೆಯಲ್ಲಿ ಪಟ್ಟಣದ ರಾಯರ ಮಠದ ಸೇವಾ ಸಮಿತಿ ಅಧ್ಯಕ್ಷ ಸುನೀಲ ಕುಲಕರ್ಣಿ, ಸುವರ್ಣ ಮಹೋತ್ಸವ ಸಮಿತಿ ಅಧ್ಯಕ್ಷ ರಾಘವೇಂದ್ರಚಾರ ಜೋಶಿ ದಂಪತಿಗಳು,ಮಠದ ಕಾರ್ಯದರ್ಶಿ ಸುಧೀರ ಕೊರ್ಲಳ್ಳಿ, ಬ್ರಾಹ್ಮಣ ಸಮಾಜದ ಮುಖಂಡರಾದ ಗೋವಿಂದಾಚಾರ, ಅಪ್ಪಣ ಜೋಶಿ ಶೇಷಗಿರಿರಾವ್ ಪಟವಾರಿ, ಅರ್ಚಕ ಗುರುರಾಜ ಪುರೋಹಿತ್, ಮುಖಂಡರಾದ ಡಾ.ಶಿವನಗೌಡ ದಾನರಡ್ಡಿ ಮತ್ತಿತರರು ಇದ್ದರು.



ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ಕೇಂದ್ರಕ್ಕೆ ಚಾಲನೆ

ಸಿಂಧನೂರು: ನಗರದ ಕನಕದಾಸರ ವೃತ್ತದಲ್ಲಿ ದಿವಂಗತ ಕೆ.ನಾಗಪ್ಪ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ಹಾಗೂ ಕೆಎಂಎಸ್ ಗ್ರೂಪ್ ಸಿಂಧನೂರು ವತಿಯಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆಯ ಕೇಂದ್ರವನ್ನು ಮಾಜಿ ಸಚಿವ ಬಿ.ಶ್ರೀರಾಮುಲು ಹಾಗೂ ಬಿಜೆಪಿ ಹಿರಿಯ ಮುಖಂಡ ಕೆ.ಕರಿಯಪ್ಪ ನವರು ಭಾಗವಹಿಸಿ ಅರವಟ್ಟಿಗೆ ಕೇಂದ್ರವನ್ನು ಉದ್ಘಾಟಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿದರು.

ಈ ವೇಳೆ ಬಿಜೆಪಿ ನಗರ ಮಂಡಲ ಅಧ್ಯಕ್ಷ ಸಿದ್ದರಾಮೇಶ ಮನ್ನಾಪುರು ಸಿರಾಜ್ ಪಾಷಾ, ಜಗದೀಶ ಕೆ., ಮಲ್ಲಿಕಾರ್ಜುನ ನೆಕ್ಕುಂಟ್ಟಿ,ಫಕೀರಪ್ಪ ಬಾಗೋಡಿ, ಶರಣು ಗೋರೆಬಾಳ, ಶರಣಪ್ಪ ಬಂಡಿ,ಮೌನೇಶ ಹೊಸಮನಿ, ಲಿಂಗಪ್ಪ ದಿದ್ದಿಗಿ, ಸೇರಿದಂತೆ ಪಕ್ಷದ ಮುಖಂಡರು, ಅಧ್ಯಕ್ಷರು, ಮಂಡಲ ಅಧ್ಯಕ್ಷರು ಎಲ್ಲ ವಿವಿಧ ಸ್ತರದ ಪದಾಧಿಕಾರಿಗಳು ಎಲ್ಲ ಕಾರ್ಯಕರ್ತ ಬಂಧುಗಳು ಆಗಮಿಸಿ ಈ ಶುಭ ಕಾರ್ಯಕ್ಕೆ ಹಾರೈಸಿದರು.



ಏ.16ರಂದು ಗುರುವಂದನಾ ಕಾರ್ಯಕ್ರಮ



ಕಲಬುರಗಿ: ಶ್ರೀಸಿದ್ದಗಂಗಾ ಹಳೆಯ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಸಂಘ ಮತ್ತು ಜಿಲ್ಲಾ ವೀರಶೈವ ಸಮಾಜದ ವತಿಯಿಂದ ಡಾ.ಶಿವಕುಮಾರ ಮಹಾಶಿವಯೋಗಿಗಳ 119ನೇ ಜನ್ಮದಿನೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮವನ್ನು ಇದೇ ಏ.16ರಂದು ಬೆಳಿಗ್ಗೆ 11.15ಕ್ಕೆ ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ಭಕ್ತಿಭಾವದಿಂದ ಹಾಗೂ ವಿಜೃಂಭಣೆಯಿಂದ ಆಯೋಜಿಸಲಾಗಿದೆ ಎಂದು ಜಿಲ್ಲಾ ವೀರಶೈವ ಸಮಾಜದ ಅಧ್ಯಕ್ಷ ಅರುಣಕುಮಾರ ಪಾಟೀಲ್ ಕೊಡಲಹಂಗರಗಾ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಕಳೆದ 20 ವರ್ಷಗಳಿಂದ ನಿರಂತರವಾಗಿ ನಡೆಯುತ್ತಿರುವ ಈ ಕಾರ್ಯಕ್ರಮವನ್ನು ಪ್ರತಿವರ್ಷ ಏ.1ರಂದು ಆಚರಿಸಲಾಗುತ್ತಿತ್ತು. ಆದರೆ ಈ ಬಾರಿ ಸಿದ್ದಗಂಗಾ ಮಠದ ಉತ್ತರಾಧಿಕಾರಿ ಶ್ರೀಶಿವಸಿದ್ದೇಶ್ವರ ಮಹಾಸ್ವಾಮಿಗಳು ಆಗಮಿಸುವ ಹಿನ್ನೆಲೆಯಲ್ಲಿ ದಿನಾಂಕದಲ್ಲಿ ಬದಲಾವಣೆ ಮಾಡಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಂದಗೋಕುಲದ ಮಕ್ಕಳಿಗೆ ದೇಣಿಗೆ ನೀಡುವುದರ ಜೊತೆಗೆ ಸಮಾಜ, ಕೃಷಿ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಗಣ್ಯರನ್ನು ಸನ್ಮಾನಿಸುವುದು ವಿಶೇಷವಾಗಿದ್ದು, ಈ ವರ್ಷ ಮಾತೋಶ್ರೀಸುಧಾ ನಾಯಕ ಅವರಿಗೆ 'ಸಿದ್ದಗಂಗಾಶ್ರೀ', ರೈತ ಹಣಮಂತಪ್ಪ ಬೆಳಗುಂಪಾ ಹಾಗೂ ಕಾಶೀನಾಥ ಬಿ.ಪಾಟೀಲ ಅವರಿಗೆ 'ಶಿವಕುಮಾರಶ್ರೀ' ಮತ್ತು ಮಂಜುಳಾ ಬಿ. ಅವರಿಗೆ 'ಸಂಘಸಿರಿ' ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತದೆ.ಜೊತೆಗೆ ಪಿಡಿಎ ಕಾಲೇಜಿನ ನಿವೃತ್ತ ಉಪನ್ಯಾಸಕ ಮಹೇಂದ್ರ ಬಿರಾದಾರ ಅವರನ್ನು ವಿಶೇಷವಾಗಿ ಸನ್ಮಾನಿಸಲಾಗುವುದು ಎಂದರು.

ಕಾರ್ಯಕ್ರಮವನ್ನು ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪ ಉದ್ಘಾಟಿಸಲಿದ್ದು, ತುಮಕೂರಿನ ಸಿದ್ದಗಂಗಾ ಮಠದ ಶಿವಸಿದ್ದೇಶ್ವರ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಜಗದ್ಗುರು ಡಾ.ಸಾರಂಗಧರ ದೇಶಿಕೇಂದ್ರ ಮಹಾಸ್ವಾಮೀಜಿ ನೇತೃತ್ವ ವಹಿಸಲಿದ್ದಾರೆ.ಇದೇ ಸಂದರ್ಭದಲ್ಲಿ ನಿಡಗುಂದಾದ ಕರುಣೇಶ್ವರ ಶಿವಾಚಾರ್ಯರು, ಚೌದಾಪುರಿಯ ರಾಜಶೇಖರ ಶಿವಾಚಾರ್ಯರು, ಬೆಳಗುಂಪಾದ ಪರ್ವತೇಶ್ವರ ಶಿವಾಚಾರ್ಯರು ಸೇರಿದಂತೆ ಅನೇಕ ಧಾರ್ಮಿಕ ಮುಖಂಡರು ಭಾಗವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಅಫಜಲಪುರ ಶಾಸಕ ಎಂ.ವೈ. ಪಾಟೀಲ್, ವಿಧಾನ ಪರಿಷತ್ ಸದಸ್ಯರು ಶಶೀಲ್ ನಮೋಶಿ ಮತ್ತು ಬಿ.ಜಿ. ಪಾಟೀಲ್, ಕಲಬುರಗಿ ದಕ್ಷಿಣ ಶಾಸಕ ಅಲ್ಲಂಪ್ರಭು ಪಾಟೀಲ್, ಮಾಜಿ ಸಂಸದ ಡಾ. ಉಮೇಶ ಜಾಧವ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿರುವರು.

ಹಿತೈಷಿಗಳ ಸಂಘದ ಕಾರ್ಯದರ್ಶಿ ದೇವೇಂದ್ರಪ್ಪ ಅವಂಟಿ,ಚನ್ನಬಸಯ್ಯ ಗುರುವಿನ ಸೇರಿದಂತೆ ಇತರರು ಇದ್ದರು.

ಬಿಜೆಪಿ ಮುಖಂಡರ ಹೇಳಿಕೆ ಹಾಸ್ಯಾಸ್ಪದ: ವಸಂತಕುಮಾರ

ರಾಯಚೂರು: ಎಐಸಿಸಿ ಅಧ್ಯಕ್ಷ ಕಾಂಗ್ರೆಸ್ ಹಿರಿಯ ಮುಖಂಡ ಮಲ್ಲಿಕಾರ್ಜುನ ಖರ್ಗೆ ಅವರು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹೇಳಿರುವ ಹೇಳಿಕೆಗಳಲ್ಲಿ ಯಾವುದೇ ಅತಿಶಯೋಕ್ತಿಗಳಿಲ್ಲ. ಬಿಜೆಪಿಯ ಕೆಲ ಮುಖಂಡರು ಹೇಳಿಕೆಗಳನ್ನು ನೀಡುತ್ತಿರುವುದು ಹಾಸ್ಯಾಸ್ಪದ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ವಿಪ ಸದಸ್ಯ ಎ.ವಸಂತಕುಮಾರ ಹೇಳಿದರು.



ಶುಕ್ರವಾರ ನಗರದ ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಮಾಜ್ ಮಾಡುವ ಸಂದರ್ಭದಲ್ಲಿ ವಿಷ ಹಾವುಗಳು ಬಂದರೆ ದೂರವಿಡಿ ಎಂಬ ಹೇಳಿಕೆಯನ್ನು ಬೇರೆ ರೀತಿಯಲ್ಲಿ ಅರ್ಥೈಸುತ್ತಿದ್ದಾರೆ ಕೆಲ ಬಿಜೆಪಿ ಮುಖಂಡರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಕಾಂಗ್ರೆಸ್ ಅಧಿಕಾರದ ಸಂದರ್ಭದಲ್ಲಿ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಬಹಳ ಭ್ರಷ್ಟಾಚಾರವನ್ನು ಮಾಡಿದ್ದರು ಈ ಸಂದರ್ಭದಲ್ಲಿ ಅವರ ಮೇಲೆ ಸಿಬಿಐ ಸೇರಿದಂತೆ ಇನ್ನು ಕೆಲ ಸಂಸ್ಥೆಗಳಿಂದ ತನಿಖೆ ನಡೆಯುತ್ತಿದ್ದವು. ಹೀಗಾಗಿ ಅವರನ್ನು ಕಾಂಗ್ರೆಸ್‌ನಿಂದ ಹೊರ ಹಾಕುವುದಕ್ಕೆ ಹೈಕಮಾಂಡ್ ಚಿಂತನೆ ಮಾಡುತ್ತಿತ್ತು. ಈ ಸಂದರ್ಭದಲ್ಲಿ ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಹಿಮಂತ ಬಿಸ್ವಾ ಶರ್ಮಾ ಬಿಜೆಪಿ ಸೇರಿದರು ಎಂದರು ತಿಳಿಸಿದರು.

ಹಿಮಂತ ಬಿಸ್ವಾ ಶರ್ಮಾ ಅವರ ಪತ್ನಿ ಮೂರು ದೇಶಗಳ ಪಾಸ್‌ಪೋರ್ಟ್ ಹೊಂದಿರುವ ಬಗ್ಗೆ ವಿದೇಶಾಂಗ ಇಲಾಖೆಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ತನಿಖೆ ನಡೆಸುವಂತೆ ಹಾಗೂ ಈ ಕುರಿತು ಮಾಹಿತಿ ಕೇಳಿದ್ದಕ್ಕೆ ಒಂದು ರಾಜ್ಯದ ಮುಖ್ಯಮಂತ್ರಿ ಆಗಿರುವ ಶರ್ಮಾ ಅಸಂವಿಧಾನಿಕ ಪದಗಳನ್ನು ಬಳಸಿ ಮಲ್ಲಿಕಾರ್ಜುನ ಖರ್ಗೆ ಕುರಿತು ಮಾತನಾಡಿರುವುದು ಖಂಡನಾರ್ಹವಾದುದು ಎಂದರು.

ಬಾಗಲಕೋಟೆ ಉಪ ಚುನಾವಣೆಯ ಉಸ್ತುವಾರಿಯಾಗಿದ್ದೆ. ಈ ಕ್ಷೇತ್ರದಲ್ಲಿ ಲಿಂಗಾಯತ ಸಮುದಾಯ ಸ್ವಲ್ಪ ಮುನಿಸಿಕೊಂಡಿತ್ತು. ಈ ಸಮುದಾಯವಲ್ಲದೆ ಪ್ರತಿಯೊಂದು ಸಮಾಜದ ಪ್ರತಿ ಮನೆ ಮನೆಗೆ ಭೇಟಿ ನೀಡಿ ಕಾಂಗ್ರೆಸ್‌ನ ಅಭ್ಯರ್ಥಿ ಹಾಗೂ ರಾಜ್ಯ ಸರ್ಕಾರದ ಸಾಧನೆಗಳನ್ನು ತಿಳಿಸಿ ಕಾಂಗ್ರೆಸ್ಸಿಗೆ ಮತ ಯಾಚನೆ ಮಾಡಿದ್ದೇವೆ. ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಎಲ್ಲ ಸಮುದಾಯಗಳು ಪಕ್ಷಕ್ಕೆ ಉತ್ತಮ ಬೆಂಬಲ ನೀಡಿದ್ದು ಅಲ್ಲಿ ಕಾಂಗ್ರೆಸ್ ಗೆಲುವನ್ನು ಸಾಧಿಸಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಮುಖಂಡರಾದ ಬಸವರಾಜ ಪಾಟೀಲ ಇಟಗಿ, ಬಸವರಾಜ ದರೂರ, ಅಸ್ಲಂ ಪಾಷಾ, ಅಬ್ದುಲ್ ಖರೀಂ, ಮುರಳಿ ಯಾದವ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ಸ್ವಯಂಪ್ರಭಾಗೆ ಬೀಳ್ಕೊಡುಗೆ

ಕುರುಗೋಡು: ಸಮೀಪದ ಎಮ್ಮಿಗನೂರು ಸರ್ಕಾರಿ ಶತಮಾನ ಶಾಲೆಯಲ್ಲಿ ಎಮ್ಮಿಗನೂರು ಕ್ಲಸ್ಟರ್ನ ಸಿಆರ್‌ಪಿ ಸ್ವಯಂಪ್ರಭಾ ಅಶ್ವಥ್ ಅವರ ವರ್ಗಾವಣೆ ಹಿನ್ನೆಲೆ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಮುಖ್ಯ ಗುರು ಬಿ.ಎಸ್.ಸದ್ಯೋಜಾತಪ್ಪ ಮಾತನಾಡಿ, ಸಿಆರ್‌ಪಿ ಸ್ವಯಂಪ್ರಭಾ ನಾಲ್ಕು ವರ್ಷ ಕ್ಲಸ್ಟರ್ ವ್ಯಾಪ್ತಿಯ ಎಲ್ಲ ಶಾಲೆಯ ಶಿಕ್ಷಕರೊಂದಿಗೆ ಸಮನ್ವತೆಯಿಂದ ಕಾರ್ಯಗಳನ್ನು ಮಾಡುವುದರ ಮೂಲಕ ದಕ್ಷತೆ ಬದ್ಧತೆ ಮತ್ತು ಪ್ರಾಮಾಣಿಕತೆಗೆ ಹೆಸರಾದ ಸಂಪನ್ಮೂಲ ವ್ಯಕ್ತಿಯಾಗಿದ್ದರು ಆಡಳಿತಾತ್ಮಕವಾಗಿ ಬಹಳ ಸಹಕಾರ ನೀಡಿದ್ದಾರೆ ಎಂದರು. ನಂತರ ಸಿಆರ್‌ಪಿ ಸ್ವಯಂಪ್ರಭ ಸನ್ಮಾನ ಸ್ವೀಕರಿಸಿ ಮಾತನಾಡಿ, ಮುಖ್ಯ ಗುರುಗಳು ಶಿಕ್ಷಕರು ಸುಗಮವಾಗಿ ಇಲಾಖೆಯ ಕಾರ್ಯಗಳನ್ನು ಮಾಡಲು ಸಹಕಾರಿ ನೀಡಿದ ತಮ್ಮೆಲ್ಲರಿಗೂ ಕೂಡ ಧನ್ಯವಾದಗಳು ಎಂದು ತಿಳಿಸಿದರು. ನಿವೃತ್ತ ಮುಖ್ಯಗುರು ಎರಿಸ್ವಾಮಿ, ಶಿಕ್ಷಕರಾದ ಸರ್ವೇಶ್, ಆದಿಶ್ ಜವಳಿ, ಮಂಜುನಾಥ, ಕೋರಿ ತಿಪ್ಪಣ್ಣ, ಉಮೇಶ್, ಶಿವನೇಗೌಡರ ರಾಮಪ್ಪ, ಕವಿತಾ, ಶ್ರುತಿ ಇತರರಿದ್ದರು.

ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ರಾಜ್ಯ ಪುರಸ್ಕಾರಕ್ಕೆ ಆಯ್ಕೆ

ಕೊಟ್ಟೂರು: ತಾಲೂಕಿನ ಹ್ಯಾಳ್ಯ ಗ್ರಾಮದ ಜೀವನಕುಮಾರ್ ಕೆ. ಅವರಿಗೆ ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ರಾಜ್ಯಪುರಸ್ಕಾರ ಲಭಿಸಿದೆ.



ಈ ವಿದ್ಯಾರ್ಥಿಯು ಪ್ರಸ್ತುತ ಮಹದೇವ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಓದುತ್ತಿದ್ದು, ಮಹದೇವ ಶಾಲೆಯ ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿ ಮತ್ತು ಇಂದು ಶಾಲೆಯ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಕರು ಅಭಿನಂದನೆ ತಿಳಿಸಿದ್ದಾರೆ. ರಾಜ್ಯ ಪುರಸ್ಕಾರ ದೊರಕಿದ್ದಕ್ಕೆ ತಂದೆ, ತಾಯಿ ಭಾಗ್ಯಲಕ್ಷ್ಮಿ ಕೊಟ್ರೇಶ್ ಕುಟುಂಬದವರು, ಊರಿನ ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

ಡಾ.ಸುಬುಧೇಂದ್ರತೀರ್ಥ ಶ್ರೀಗಳಿಗೆ ಸ್ವಾಗತ

ಯಲಬುರ್ಗಾ: ಪಟ್ಟಣದ ಶ್ರೀರಾಘವೇಂದ್ರ ಸ್ವಾಮಿಗಳವರ ಮಠದ 50ನೇ ವರ್ಷದ ಸುವರ್ಣ ಮಹೋತ್ಸವದ ನಿಮಿತ್ತ ಮಂತ್ರಾಲಯದ ಡಾ.ಸುಬುಧೇಂದ್ರ ತೀರ್ಥ ಸ್ವಾಮೀಗಳನ್ನು ಪಟ್ಟಣದ ಮುರುಡಿ ಶ್ರೀಧರ ಮಠದ ಹಿರೇಮಠದ



ಶ್ರೀ ಬಸವಲಿಂಗೇಶ್ವರ ಸ್ವಾಮೀಜಿ ಸ್ವಾಗತಿಸಿ, ಗೌರವ ಸಮರ್ಪಣೆ ಮಾಡಿದರು. ಬಳಿಕ ಶೋಭಯಾತ್ರೆ ಶುಕ್ರವಾರ ಸಂಜೆ ವಿಜೃಂಭಣೆಯಿಂದ ನಡೆಯಿತು. ಇಲ್ಲಿಯ ಪಾಂಡುರಂಗ ದೇವಸ್ಥಾನದಿಂದ ಆರಂಭಗೊಂಡ ಮಂತ್ರಾಲಯದ ಡಾ.ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಶೋಭಯಾತ್ರೆ ವಿವಿಧ ವಾದ್ಯ ಮೇಳದೊಂದಿಗೆ ಪಟ್ಟಣದ ಪ್ರಮುಖ ರಸ್ತೆಗಳ ಮೂಲಕ ಶೋಭಯಾತ್ರೆ ನಡೆಯಿತು. ನಂತರ ಮಂತ್ರಾಲಯದ ಡಾ.ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಶೋಭಯಾತ್ರೆಯು ರಾಘವೇಂದ್ರ ಸ್ವಾಮಿಗಳ ಮಠಕ್ಕೆ ತೆರಳಿತು. ಈ ಶೋಭಯಾತ್ರೆಯಲ್ಲಿ ರಾಘವೇಂದ್ರ ಸ್ವಾಮಿಗಳ ಮಠದ ಅಪಾರ ಭಕ್ತ ಸಮೂಹ ಭಾಗವಹಿಸಿ ಶ್ರೀಗಳ ಆಶೀರ್ವಾದ ಪಡೆದು ಪುನೀತರಾದರು.

ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿದ ಶಾಸಕ ಭರತ್ ರೆಡ್ಡಿ

ಬಳ್ಳಾರಿ: ಬಳ್ಳಾರಿ ನಗರ ಕ್ಷೇತ್ರದ ಶಾಸಕ ನಾರಾ ಭರತ್ ರೆಡ್ಡಿ ಅವರು, ಗುರುವಾರ ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿ (ಎಐಸಿಸಿ)ಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ದೆಹಲಿಯ ಅವರ ನಿವಾಸದಲ್ಲಿ ಭೇಟಿ ಮಾಡಿ, ಕೆಲ ಕಾಲ ಕ್ಷೇತ್ರದ ಅಭಿವೃದ್ಧಿ ಕುರಿತು



ಚರ್ಚಿಸಿದರು. ಎಐಸಿಸಿ ಅಧ್ಯಕ್ಷರೊಂದಿಗೆ ಔಪಚಾರಿಕ ಮಾತುಕತೆಯ ಜೊತೆಗೆ ಬಳ್ಳಾರಿ ನಗರದ ಅಭಿವೃದ್ಧಿಗೆ ಸಂಬಂಧಿಸಿ ವರದಿ ನೀಡುವುದರ ಜೊತೆಗೆ, ರಾಜಕೀಯ ವಿದ್ಯಮಾನಗಳ ಬಗ್ಗೆಯೂ ಕೆಲ ಕಾಲ ಚರ್ಚಿಸಿದರು. ಈ ವೇಳೆ ತಮಗೆ ಹಲವು ಸೂಚನೆಗಳನ್ನು ನೀಡಿ, ಮಾರ್ಗದರ್ಶನ ಮಾಡಿದ್ದಾರೆ ಎಂದು ಶಾಸಕ ನಾರಾ ಭರತ್ ರೆಡ್ಡಿ ಅವರು ತಿಳಿಸಿದ್ದಾರೆ.



ಕುಷ್ಟಗಿ: ತಾಲೂಕಿನ ಕಳಮಳ್ಳಿ ಗ್ರಾಮದಲ್ಲಿ 2023-24ನೇ ಸಾಲಿನ ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆಯಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಂಸದ ಕೆ.ರಾಜಶೇಖರ್ ಹಿಟ್ನಾಳ್ ಚಾಲನೆ ನೀಡಿದರು. ಕಾಂಗ್ರೆಸ್ ಧುರೀಣರಾದ ದೊಡ್ಡ ಬಸವನಗೌಡ ಪಾಟೀಲ, ಮಾಲತಿ ನಾಯಕ, ಜಿಪಂ ಮಾಜಿ ಸದಸ್ಯ ಹನುಮನಗೌಡ ಪಾಟೀಲ, ಕಿಲಾರಹಟ್ಟಿ ಭೀಮರಾವ್ ಕುಲಕರ್ಣಿ ಇತರರಿದ್ದರು.

ಗ್ರಾಮಗಳ ಅಭಿವೃದ್ಧಿಗೆ ಆದ್ಯತೆ

ಕುಷ್ಟಗಿ: ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಮೊದಲ ಆದ್ಯತೆ ನೀಡಲಾಗುವುದು ಎಂದು ಸಂಸದ ಕೆ.ರಾಜಶೇಖರ್ ಹಿಟ್ನಾಳ್ ಹೇಳಿದರು.

ತಾಲೂಕಿನ ಕಳಮಳ್ಳಿ ಗ್ರಾಮದಲ್ಲಿ 2023-24ನೇ ಸಾಲಿನ ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆಯಡಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಶನಿವಾರ ಮಾತನಾಡಿದರು.

ತಾಲೂಕಿನ ಹಳ್ಳಿಗಳಲ್ಲಿ ಮೂಲ ಸೌಕರ್ಯ ಜೊತೆ ಪ್ರಗತಿ ಕಾರ್ಯಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಜನ ಸೇವೆಯು ಜನಾರ್ಧನನ ಸೇವೆ ಎನ್ನುವುದು ಕೆಲಸ ಹಳ್ಳಿಗೆ ಸೌಲಭ್ಯ ಒದಗಿಸುವ ಕೆಲಸವಾಗಬೇಕು. ಇಂದು ಬದಲಾವಣೆ ಹಳ್ಳಿ ಕಾಣಬೇಕು. ಈ ಗ್ರಾಮದಲ್ಲಿ ಕೆಆರ್ ಐಬಿಡಿಎಲ್ ವತಿಯಿಂದ ಅಂದಾಜು 20 ಲಕ್ಷ ರೂ. ಅಭಿವೃದ್ಧಿಗೆ ಪ್ರಾಧಾನ್ಯತೆ ನೀಡುವುದು ಎಂದು ತಿಳಿಸಿದರು.

ಕಾಂಗ್ರೆಸ್ ಧುರೀಣರಾದ ದೊಡ್ಡ ಬಸವನಗೌಡ ಪಾಟೀಲ, ಮಾಲತಿ ನಾಯಕ, ಜಿಪಂ ಮಾಜಿ ಸದಸ್ಯ ಹನುಮನ ಗೌಡ ಪಾಟೀಲ, ಕಿಲಾರಹಟ್ಟಿ ಭೀಮರಾವ್ ಕುಲಕರ್ಣಿ, ಗ್ರಾಪಂ ಮಾಜಿ ಅಧ್ಯಕ್ಷ ಶರಣೇಗೌಡ ಪಾಟೀಲ, ಗ್ರಾಪಂ ಮಾಜಿ ಸದಸ್ಯರಾದ ಭೀಮಣ್ಣ ಬೇವಿನಾಳ್, ಗ್ಯಾನಪ್ಪ ಕಿಲಾರ ಹಟ್ಟಿ, ಶಂಕ್ರಪ್ಪ, ಅಧಿಕಾರಿಗಳು ಹಾಗೂ ಮುಖಂಡರು ಭಾಗವಹಿಸಿದ್ದರು.



ಕುರುಗೋಡು: ಸಮೀಪದ ಎಮ್ಮಿಗನೂರು ಸರ್ಕಾರಿ ಶತಮಾನ ಶಾಲೆಯಲ್ಲಿ ಎಮ್ಮಿಗನೂರು ಕ್ಲಸ್ಟರ್ನ ಸಿಆರ್‌ಪಿ ಸ್ವಯಂಪ್ರಭಾ ಅಶ್ವಥ್ ಅವರ ವರ್ಗಾವಣೆ ಹಿನ್ನೆಲೆ ಬೀಳ್ಕೊಡಲಾಯಿತು. ನಿವೃತ್ತ ಮುಖ್ಯಗುರು ಎರಿಸ್ವಾಮಿ, ಶಿಕ್ಷಕರಾದ ಸರ್ವೇಶ್, ಆದಿಶ್ ಜವಳಿ, ಮಂಜುನಾಥ, ಕೋರಿ ತಿಪ್ಪಣ್ಣ, ಉಮೇಶ್, ಶಿವನೇಗೌಡರ ರಾಮಪ್ಪ, ಕವಿತಾ, ಶ್ರುತಿ ಇತರರಿದ್ದರು.

ಕರ್ನಾಟಕ ಲೇಖಕಿಯರ ಸಂಘದ ರಾಜ್ಯಾಧ್ಯಕ್ಷೆ ಸುನಂದಮ್ಮ ಅಭಿಮತ

ಹೆಣ್ಣನ್ನು ಗುರುತಿಸುವ ಕೆಲಸವಾಗಲಿ

ವಿಜಯನಗರ: ಮಾತೃವಾತ್ಸಲ್ಯದ ಹೆಣ್ಣನ್ನು ಸಮಾಜ ತಾಯ್ತನಕ್ಕೆ ಸೀಮಿತವಾಗಿ ಗೌರವಿಸುತ್ತದೆ. ಆದರೆ, ಅದನ್ನೂ ಮೀರಿ ಮಹಿಳೆ ಸಾಕಷ್ಟು ಕೆಲಸ ಮಾಡಿರುತ್ತಾಳೆ. ಅದನ್ನೂ ಗುರುತಿಸುವ ಕೆಲಸ ಮಾಡಬೇಕಿದೆ ಎಂದು ಕರ್ನಾಟಕ ಲೇಖಕಿಯರ ಸಂಘದ ರಾಜ್ಯಾಧ್ಯಕ್ಷೆ ಆರ್.ಸುನಂದಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾಹಿತಿ ಕೇಂದ್ರದ ನಿವೃತ್ತ ಉಪನಿರ್ದೇಶಕಿ ಡಿ.ಮೀನಾಕ್ಷಿ ಅವರ ಅಭಿನಂದನಾ ಗ್ರಂಥ 'ಏನೂ ಬೇಡದವಳು...' ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿ, ಅನೇಕ ಸಂದರ್ಭಗಳಲ್ಲಿ ಪುರುಷರಿಗಿಂತ ಹೆಣ್ಣು ಮಕ್ಕಳು ಹೆಚ್ಚು ಸಾಧನೆ ಮಾಡಿರುತ್ತಾರೆ. ಆಗಲೂ ಆಕೆಯನ್ನು ಸೀಮಿತ ಚೌಕಟ್ಟಿನಲ್ಲೇ ಗುರುತಿಸಲಾಗುತ್ತದೆ. ಹೆಚ್ಚೆಂದರೆ ಮಾತೃವಾತ್ಸಲ್ಯದವರು ಎಂಬ ಏಕನಾಮ ಪದದೊಂದಿಗೆ ಅವರನ್ನು ಗೌರವ ಸೂಚಿಸಲಾಗುತ್ತದೆ. ಆಮೂಲಕ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳಾ ಸಾಧನೆಯನ್ನು ಮರೆ ಮಾಚಲಾಗುತ್ತದೆ ಎಂದು ಬೇಸರವ ವ್ಯಕ್ತಪಡಿಸಿದರು.

ಆದರಂತೆ ಡಾ.ಮೀನಾಕ್ಷಿ ಅವರು ಸರಳ, ಸಜ್ಜನಿಕೆ ಹಾಗೂ ಅಪ್ಪಿಕೊಳ್ಳುವ ಮನೋಭಾವ ಎಲ್ಲರಿಗೂ ಮಾದರಿಯಾಗಿದೆ. ಕನ್ನಡ ವಿಶ್ವವಿದ್ಯಾಲಯದ ವಾರ್ಡನ್ ನಿಂದ ಸೇವೆ ಆರಂಭಿಸಿ, ಕನ್ನಡ ವಿವಿಯಲ್ಲಿ ಮಹಿಳಾ ದೌರ್ಜನ್ಯ ವಿರೋಧಿ ಸಮಿತಿ ಅಧ್ಯಕ್ಷರಾಗಿ, ಮಾಹಿತಿ ಕೇಂದ್ರದ ಉಪನಿರ್ದೇಶಕರಾಗಿದ್ದರು. ಈ ನಡುವೆ ಅನೇಕ ಜವಾಬ್ದಾರಿಗಳನ್ನು ಅವರು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಈ ವೇಳೆ ಅವರು ತೋರಿದ ವೃತ್ತಿಪರ ಕೌಶಲ್ಯಗಳು, ಎದುರಿಸಿದ ಸವಾಲುಗಳನ್ನೂ ಪುಸ್ತಕದಲ್ಲಿ ಚಿತ್ರಿಸಬೇಕಿತ್ತು.



> ಕುಟುಂಬ ನಿರ್ವಹಣೆಯಲ್ಲಿ ಹೆಣ್ಣುಮಗಳ ಜವಾಬ್ದಾರಿ ದೊಡ್ಡದು. ದೇಶದಲ್ಲಿ ಶೇ.64ರಷ್ಟು ಮಹಿಳೆಯರು ಮನೆಯೊಂದಿಗೆ ಹೊಲದಲ್ಲೂ ಕೆಲಸ ಮಾಡುತ್ತಾರೆ. ಆದರೆ, ಅವರನ್ನು ಗುರುತಿಸುವಲ್ಲೂ ತಾರತಮ್ಯವಾಗುತ್ತಿದೆ. ಸರ್ಕಾರದ ದಾಖಲೆಗಳಲ್ಲೂ ರೈತ ಎಂದು ಉಲ್ಲೇಖಿಸಿದ್ದು, ಮಹಿಳೆಯನ್ನು ಕಡೆಗಣಿಸಿದೆ. ಮಹಿಳೆ ಪರ ಬರೆಯುವವರೂ ಪುರುಷರೇ. ಇಂದಿಗೂ ಮಹಿಳೆಯರು ಮಾತನಾಡಿದರೂ ಅದು ಗಂಡಿನ ನಾಲಿಗೆಯಲ್ಲೇ ಮಾತನಾಡುತ್ತಾರೆ. ಹೀಗಾಗಿ ಮಹಿಳೆಯರಿಗೆ ಸಿಗಬೇಕಾದ ಸ್ಥಾನಮಾನ ಸಿಕ್ಕಿಲ್ಲ.
>
> ■ ಡಿ.ಉಮಾಪತಿ, ಹಿರಿಯ ಪತ್ರಕರ್ತ

ಈ ನಿಟ್ಟಿನಲ್ಲಿ ಮತ್ತೊಂದು ಅಭಿನಂದನಾ ಗ್ರಂಥ ಹೊರತರುವ ಪ್ರಯತ್ನವಾಗಬೇಕು. ಮಹಿಳಾ ಚರಿತ್ರೆಯನ್ನು ಕಟ್ಟುವಾಗ ಕುಟುಂಬ ನಿರ್ವಹಣೆ, ಮಾತೃವಾತ್ಸಲ್ಯ, ತಾಯ್ತನದ ಹೊರಗಿನ ಸಾಧನೆಯನ್ನೂ ಲೇಖಕರು ಕಟ್ಟಿಕೊಡಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಹಿರಿಯ ಪತ್ರಕರ್ತರೂ ಆಗಿರುವ ಮೀನಾಕ್ಷಿ ಅವರ ಸಹೋದರ ಡಿ.ಉಮಾಪತಿ ಮಾತನಾಡಿ, ಹಂಪಿ ವಿಶ್ವವಿದ್ಯಾಲಯದ ಮಾಹಿತಿ ಕೇಂದ್ರದ ನಿವೃತ್ತ ನಿರ್ದೇಶಕ ಕೆ.ಬಿ.ವಾಸುಕಿ ಅವರು ಮೀನಾಕ್ಷಿ ಅವರ ಬಹುಮುಖ ವ್ಯಕ್ತಿತ್ವವನ್ನು ಕೊಂಡಾಡಿದರು ಹಾಗೂ ಕೃತಿಯನ್ನು ಸಂಪಾದಿಸಿದ ಅಪೇಕ್ಷ ಬಡಿಗೇರ ಅವರಂತಹ ಹೊಸ ತಲೆಮಾರಿನವರಲ್ಲಿ ಉಜ್ವಲ ಭವಿಷ್ಯ ಕಾಣುವಂತಾಗಬೇಕು ಎಂದರು.

ಮುರನಾಳ ಮಳೆರಾಜೇಂದ್ರ ಮಠದ ಜಗನ್ನಾಥ ಮಹಾಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ವೀರೇಶ ಬಡಿಗೇರ ಪ್ರಾಸ್ತಾವಿಕ ಮಾತನಾಡಿದರು.

ಕೃತಿಯ ಸಂಪಾದಕಿ ಅಪೇಕ್ಷ ಬಡಿಗೇರ ತನಗೆ ವಹಿಸಿದ ಹೊಣೆಯನ್ನು ನಿಭಾಯಿಸಿದ್ದರ ಕುರಿತು ಮಾತನಾಡಿದರು.

ಧರ್ಮದ ದಾರಿಯಲ್ಲಿ ನಡೆಯಿರಿ: ಗವಿಶ್ರೀ

ಬಳ್ಳಾರಿ: ದೇವರನ್ನು ಮನಸ್ಸಿನಲ್ಲಿಟ್ಟುಕೊಂಡು ಯಾವುದೇ ಕೆಲಸ, ದಾನ, ನಡೆ, ನುಡಿಗಳನ್ನು ಶುದ್ಧ ಮನಸ್ಸಿನಿಂದ ಮಾಡಿದರೆ ಪುಣ್ಯ ಪ್ರಾಪ್ತಿಯಾಗಲಿದೆ. ನಿತ್ಯ ದೇವರ ಧ್ಯಾನ, ಪೂಜೆ ಮಾಡಿದರೆ ಜೀವನ ಸಾರ್ಥಕವಾಗಲಿದೆ ಎಂದು ಶ್ರೀಕೊಪ್ಪಳ ಗವಿ ಮಠದ ಅಭಿನವ ಶ್ರೀ ಗವಿಸಿದ್ಧೇಶ್ವರ ಸ್ವಾಮೀಜಿ ಹೇಳಿದರು.

ತಾಲೂಕಿನ ಹಂದಿಹಾಳು ಗ್ರಾಮದ ಜಡೆಸಿದ್ಧೇಶ್ವರ ಮಠದ ಆವರಣದಲ್ಲಿ ಜಡೆಸಿದ್ದೇಶ್ವರರಥೋತ್ಸವನಿಮಿತ್ತಹಮ್ಮಿಕೊಂಡಿದ್ದ ಪ್ರವಚನ ಕಾರ್ಯಕ್ರಮದಲ್ಲಿ ಶುಕ್ರವಾರ ಆಶೀರ್ವಚನ ನೀಡಿದರು.

ಧರ್ಮದ ದಾರಿಯಲ್ಲಿ ನಡೆಯುವುದನ್ನು ಕಲಿಯಿರಿ. ನಾನು ಎಂಬ ಅಹಂಕಾರ ಬಿಟ್ಟರೆ ಮಾತ್ರ ಜೀವನ ನಡೆಸಲು ಸಾಧ್ಯ. ಕಾಲ ಕೆಟ್ಟಿದೆ ಎನ್ನುವ ಬದಲು, ಮೊದಲು ನಮ್ಮ ಮನಸ್ಸು, ಭಾವನೆಗಳ ದೃಷ್ಟಿಕೋನವನ್ನು ಬದಲಿಸಿಕೊಳ್ಳುವುದನ್ನು ಕಲಿಯಬೇಕು ಎಂದರು.

ಜೀವನದಲ್ಲಿ ಮನುಷ್ಯನಿಗೆ ದುಃಖ ಯಾಕೆ ಆಗುತ್ತದೆ ಎಂದರೆ, ಇರುವುದನ್ನು ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳದಿರುವುದೇ ಇದಕ್ಕೆ ಮೂಲ ಕಾರಣ ಎಂದರು. ದೇವರು ನಮಗೇನು ಮಾಡಿದ್ದಾನೆ ಎನ್ನುವ ಬದಲು ದೇವರಿಗೆ ನಾವೇನು ಮಾಡಿದ್ದೇವೆ ಎಂಬುದು ಬಹು ಮುಖ್ಯವಾಗಿದೆ. ದೇವರನ್ನು ಬಿಟ್ಟರೆ ನಮಗೆ ಗತಿಯಿಲ್ಲ, ನಿತ್ಯ ದೇವರನ್ನು ಭಕ್ತಿಯಿಂದ ಪೂಜಿಸಿ ಆರಾಧಿಸಬೇಕು, ಸ್ಮರಿಸಬೇಕು ಎಂದರು.

ಶ್ರೀಧರಗಡ್ಡೆ ಶಾಖಾ ವಿರಕ್ತ ಮಠದ ಮರಿ ಕೊಟ್ಟೂರು ಸ್ವಾಮಿ ಮಾತನಾಡಿದರು.

ಇದಕ್ಕೂ ಮುನ್ನ ಶ್ರೀ ಆಂಜನೇಯ ಸ್ವಾಮಿ ದೇವಾಲಯದಿಂದ ಜಡೆಸಿದ್ಧೇಶ್ವರ ಮಠದ ವರೆಗೆ ಕೊಪ್ಪಳ ಗವಿ ಮಠದ ಅಭಿನವ ಗವಿ ಸಿದ್ಧೇಶ್ವರ ಸ್ವಾಮಿಜಿ ಹಾಗೂ ಶ್ರೀಧರಗಡ್ಡೆ ಶಾಖಾ ವಿರಕ್ತ ಮಠದ ಮರಿ ಕೊಟ್ಟೂರು ಸ್ವಾಮಿ ಅವರನ್ನು ಭಜನೆ ಮೂಲಕ ಅದ್ಧೂರಿಯಾಗಿ ಸ್ವಾಗತಿಸಲಾಯಿತು. ಕಂಪ್ಲಿ ಶಾಸಕ ಜೆ.ಎನ್. ಗಣೇಶ್ ಸೇರಿದಂತೆ ಗ್ರಾಮದ ಹಿರಿಯರು, ಭಕ್ತರು, ಸುತ್ತಲಿನ ವಿವಿಧ ಗ್ರಾಮಗಳಿಂದ ಭಕ್ತ ಸಮೂಹವೇ ನೆರೆದಿತ್ತು.



ವಿವಿಧ ಬೇಡಿಕೆ ಈಡೇರಿಕೆ ಆಗ್ರಹಿಸಿ ಮನವಿ

ಬಳ್ಳಾರಿ: ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರಾಜ್ಯದಲ್ಲಿ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಶೇ. 5ರಷ್ಟು ಮೀಸಲಾತಿ ಕಲ್ಪಿಸಬೇಕು ಸೇರಿದಂತೆ ನಾನಾ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ, ಗಡಿಗೆ ಹೊಂದಿಕೊಂಡಿರುವ ಆಂಧ್ರಪ್ರದೇಶದ ಕರ್ನೂಲು, ಅನಂತಪುರ ಜಿಲ್ಲೆಯ ಆಲೂರು, ಆದೋನಿ, ರಾಯದುರ್ಗ ಹಾಗೂ ಮಡಕಶಿರ ತಾಲೂಕುಗಳ ಕನ್ನಡಿಗರು ಜಿಲ್ಲಾಧಿಕಾರಿಗಳವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

1956ರ ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯ ಸಂದರ್ಭದಲ್ಲಿ ಅಚ್ಚಕನ್ನಡ ಮಾತನಾಡುವ ಈ ಪ್ರದೇಶಗಳು ಅನಿವಾರ್ಯವಾಗಿ ಆಂಧ್ರಪ್ರದೇಶಕ್ಕೆ ಸೇರ್ಪಡೆಯಾದವು. ಭೌಗೋಳಿಕವಾಗಿ ನಾವು ಬೇರೆ ರಾಜ್ಯದಲ್ಲಿದ್ದರೂ, ಸಾಂಸ್ಕೃತಿಕವಾಗಿ ಮತ್ತು ಭಾವನಾತ್ಮಕವಾಗಿ ಇಂದಿಗೂ ಕರ್ನಾಟಕದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದೇವೆ. ಪ್ರಸ್ತುತ ಈ ಭಾಗಗಳಲ್ಲಿ 65ಕ್ಕೂ ಹೆಚ್ಚು ಕನ್ನಡ ಮಾಧ್ಯಮ ಶಾಲೆಗಳಿದ್ದು, ಸುಮಾರು 12 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕನ್ನಡವನ್ನೇ ಉಸಿರಾಗಿಸಿಕೊಂಡು ವ್ಯಾಸಂಗ ಮಾಡುತ್ತಿದ್ದಾರೆ.

ಆದರೆ, ಈ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಮತ್ತು ಉದ್ಯೋಗದ ವಿಷಯದಲ್ಲಿ ತೀವ್ರ ತಾರತಮ್ಯವನ್ನು ಎದುರಿಸುತ್ತಿರುವುದು ಅತ್ಯಂತ ಖಂಡನೀಯ, ದುರಂತದ ಸಂಗತಿ. 10ನೇ ತರಗತಿಯ ನಂತರ ಉನ್ನತ ಶಿಕ್ಷಣಕ್ಕಾಗಿ ಕರ್ನಾಟಕಕ್ಕೆ ಬರುವ ನಮ್ಮ ಮಕ್ಕಳಿಗೆ 'ಹೊರನಾಡು ಕನ್ನಡಿಗರು' ಅಥವಾ 'ಕರ್ನಾಟಕೇತರರು' ಎಂಬ ಹಣೆಪಟ್ಟಿ ಹಚ್ಚಿ, ವೃತ್ತಿಪರ ಕೋರ್ಸ್‌ಗಳಲ್ಲಿ ಡಿ ಎಡ್, ಬಿಇಡ, ಇಂಜನಿಯರಿಂಗ್, ಮೆಡಿಕಲ್ ಪ್ರವೇಶ ನಿರಾಕರಿಸಲಾಗುತ್ತಿದೆ. ಇದರಿಂದಾಗಿ ಕನ್ನಡ ಮಾಧ್ಯಮದಲ್ಲಿ ಓದಿದ ನಮ್ಮ ಮಕ್ಕಳು ಭವಿಷ್ಯದ ಭರವಸೆ ಕಳೆದುಕೊಳ್ಳುತ್ತಿದ್ದಾರೆ ಎಂದರು.

ಜಿ.ದೊಡ್ಡಬಸಪ್ಪ, ಎಚ್.ಎಂ.ಶಾಂತವೀರ ಮೂರ್ತಿ, ಪಿ.ಕಬೀರ್ ಸಾಬ್, ಡಿ.ರಾಮದಾಸ್, ಜೆ.ಗವಿಸಿದ್ದಪ್ಪ, ಜೆ.ಮಂಜುನಾಥ, ಡಿ.ಸಿದ್ದನಗೌಡ, ಕೆ.ಆರ್.ನಾಗರಾಜ ಶೆಟ್ಟಿ ಸೇರಿದಂತೆ ಎಂ.ಗಿರಿಜಾಪತಿ, ಈರಾಳಪ್ಪ, ಡಿ.ದೇವರಾಜ ನಾಯಕ್, ಜಿ.ಬಸಣ್ಣ, ಜಿ.ತಿಪ್ಪೇಸ್ವಾಮಿ, ಎಂ.ಶಶಿಧರ ಸೇರಿದಂತೆ ಇತರರಿದ್ದರು.



ಕಾರ್ಯಕರ್ತರೇ ಪಕ್ಷದ ಜೀವಾಳ: ವಿಪ ಸದಸ್ಯ ಸತೀಶ್

ಬಳ್ಳಾರಿ: ಕಾರ್ಯಕರ್ತರೇ ಪಕ್ಷದ ಜೀವಾಳ, ಕಾರ್ಯಕರ್ತರೇ ಪಕ್ಷದ ಶಕ್ತಿ. ನಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ ಹಾಗೂ ನಮ್ಮ ಹಿಂದಿನ ಅವಧಿಯ ರಾಜ್ಯ ಸರ್ಕಾರದ ಸಾಧನೆಗಳನ್ನು, ಜನಪರ ಕಾರ್ಯಕ್ರಮಗಳನ್ನು ಮನೆ ಮನೆಗೆ ತಲುಪಿಸಲು ಕಾರ್ಯಕರ್ತರು ಮುಂದಾಗಬೇಕು. ಪಕ್ಷವನ್ನು ಮತ್ತಷ್ಟು ತಳಮಟ್ಟದಿಂದ ಸಂಘಟಿಸಲು ಎಲ್ಲರೂ ಶ್ರಮಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್ ಹೇಳಿದರು.

ನಗರದ 22ನೇ ವಾರ್ಡ್‌ಗೆ ಭೇಟಿ ನೀಡಿ, ಬಿಎಲ್‌ಎ 2 ಗಳಿಗೆ



ಮುಂಬರುವ ಎಸ್‌ಐಆರ್ (ವಿಶೇಷ ತೀವ್ರ ಪರಿಷ್ಕರಣೆ) ಕುರಿತು ಚರ್ಚಿಸಿ ಮಾತನಾಡಿದರು.

ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಸದಾನಂದಗೌಡ, ಎಸ್.ಆರ್.ಬೊಮ್ಮಾಯಿ ಸೇರಿದಂತೆ ನಮ್ಮ ಹಿಂದಿನ ರಾಜ್ಯ ಬಿಜೆಪಿ ಸರ್ಕಾರದ ಅವಧಿಯಲ್ಲಿ ಜನಪರ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದ್ದು, ಪ್ರತಿಯೊಬ್ಬ ಕಾರ್ಯಕರ್ತರು ಪ್ರತಿ ಮನೆ ಮನೆಗೆ ತಲುಪಿಸಲು ಶ್ರಮಿಸಬೇಕು. ನಮ್ಮ ಹೆಮ್ಮೆಯ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅವಧಿಯಲ್ಲಿ ದೇಶದ ಅಭಿವೃದ್ಧಿಯೇ ಬದಲಾಗಿದೆ. ಅತ್ಯಂತ ಕಡಿಮೆ ಅವಧಿಯಲ್ಲೇ ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರು ಅನೇಕ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೂಲಕ ಇಡೀ ವಿಶ್ವದ ಗಮನಸೆಳೆದಿದ್ದಾರೆ. ಎಲ್ಲ ಕ್ಷೇತ್ರಗಳಲ್ಲಿಯೂ ವಿಶ್ವದಲ್ಲೇ ಭಾರತ ಮುಂದಿದೆ, ಇದು ನಮ್ಮ ಮೋದಿ ಅವರ ತಾಕತ್ತು. ಇದನ್ನು ಸಹಿಸದ ಕಾಂಗ್ರೆಸ್ ನಾಯಕರು ಬಿಜೆಪಿ ವಿರುದ್ಧ ಅಪಪ್ರಚಾರಕ್ಕೆ ಮುಂದಾಗಿದ್ದಾರೆ. ಅದಕ್ಕೆ ಕಿವಿ ಕೊಡದೇ ನಮ್ಮ ಕಾರ್ಯಕರ್ತರು ಪಕ್ಷ ಸಂಘಟನೆಗೆ ಮುಂದಾಗಬೇಕು ಎಂದರು. ಮಹಾನಗರ ಪಾಲಿಕೆ ಸದಸ್ಯ ಕೆ.ಹನುಮಂತಪ್ಪ ಸೇರಿದಂತೆ, ಪಕ್ಷದ ವಿವಿಧ ಪದಾಧಿಕಾರಿಗಳು ಇತರರು ಉಪಸ್ಥಿತರಿದ್ದರು.

ಮಹದೇವ ಪಿಯು ಸೈನ್ಸ್ ಕಾಲೇಜಿನ ಉತ್ತಮ ಸಾಧನೆ

ಕೊಟ್ಟೂರು: ಕೊಟ್ಟೂರಿನ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಒಂದಾದ ಶ್ರೀಮಹದೇವ ಸೈನ್ಸ್ ಪಿಯು ಕಾಲೇಜಿನಲ್ಲಿ ಈ ಬಾರಿಯೂ ಶೇ. ನೂರು ಫಲಿತಾಂಶ ಪಡೆದು ಮತ್ತೊಮ್ಮೆ ಸಾಧನೆ ಮೆರೆದಿದೆ. ಈ ಬಾರಿಯ ಪಿಯು ಪರೀಕ್ಷೆಯಲ್ಲಿ ಹಾಜರಾದ ಎಲ್ಲ ವಿದ್ಯಾರ್ಥಿಗಳು ಉತ್ತೀರ್ಣ ರಾಗುವ ಮೂಲಕ ಪೂರ್ಣ ಫಲಿತಾಂಶದೊಂದಿಗೆ ಕಾಲೇಜಿನ ಕೀರ್ತಿ ಎತ್ತಿ ಹಿಡಿದಿದ್ದಾರೆ. ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಲ್ಲಿ ರಮ್ಯಾ ಟಿ. ಹಾಗೂ ಮೋನಿಕಾ ಎಂಬ ವಿದ್ಯಾರ್ಥಿನಿಯರು ಶೇ.96



ಫಲಿತಾಂಶದೊಂದಿಗೆ ಕಾಲೇಜಿನ ಟಾಪರ್‌ಗಳಾಗಿ ಹೊರಹೊಮ್ಮಿದ್ದಾರೆ. ಅದೇ ರೀತಿಯಾಗಿ ಶಾಂಭವಿ ಮತ್ತು ಸುನೀತಾ ಕೆ. ವಿದ್ಯಾರ್ಥಿನಿಯರು ಶೇ.95 ಅಂಕಗಳೊಂದಿಗೆ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ. ರಮ್ಯಾ ಮತ್ತು ಸುನೀತಾ ವಿದ್ಯಾರ್ಥಿನಿಯರು ಗಣಿತ ವಿಷಯದಲ್ಲಿ ನೂರಕ್ಕೆ ನೂರು ಅಂಕಗಳನ್ನು ಪಡೆದಿದ್ದಾರೆ. ಈ ವಿದ್ಯಾರ್ಥಿನಿಯರು ಭೌತಶಾಸ್ತ್ರದಲ್ಲಿ 99, ರಸಾಯನ ಶಾಸ್ತ್ರದಲ್ಲಿ 98, ಜೀವಶಾಸ್ತ್ರದಲ್ಲಿ 98 ಅಂಕಗಳನ್ನು ಪಡೆದಿದ್ದಾರೆ. ಉಳಿದ ವಿದ್ಯಾರ್ಥಿಗಳು ಸಹ ಇದೇ ರೀತಿಯ ಉತ್ತಮ ಸಾಧನೆ ಮಾಡಿದ್ದು ಎಲ್ಲ ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಮತ್ತು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಈ ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಆಡಳಿತ ಅಧಿಕಾರಿ ಬಿ.ಪಂ ಪಾಪತಿ. ಕಾರ್ಯದರ್ಶಿ ಬಿ.ಸರೋಜಾ ಪಂಪಾಪತಿ, ಟ್ರಸ್ಟ್‌ನ ಅಧ್ಯಕ್ಷ ಆರ್. ಮಧುಸೂದನ್, ಎಲ್ಲಾ ಬೋಧಕ ಸಿಬ್ಬಂದಿ ಸಾಧನೆಗೈದ ಎಲ್ಲ ವಿದ್ಯಾರ್ಥಿಗಳಿಗೂ ಅಭಿನಂದಿಸಿದ್ದಾರೆ. ಕಾಲೇಜು ಪ್ರಾರಂಭವಾಗಿ ಎರಡನೇ ಫಲಿತಾಂಶದಲ್ಲಿ ಜಿಲ್ಲಾ ಮಟ್ಟದಲ್ಲಿ ಅತ್ಯುತ್ತಮ ಫಲಿತಾಂಶದೊಂದಿಗೆ ಮಹದೇವ ಕಾಲೇಜ್ ಉತ್ತಮ ಗುಣಮಟ್ಟದ ಕಾಲೇಜೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಯೋಜನೆಗಳ ಅನುಷ್ಠಾನ ವಿಳಂಬ ಸಲ್ಲದು: ಡಾ.ಜಗದೀಶ

ವಿಜಯನಗರ: ಜಿಲ್ಲೆಯಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳು ಮತ್ತು ನೀರು ಸರಬರಾಜು ಯೋಜನೆಗಳನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು. ಯಾವುದೇ ಕಾರಣಕ್ಕೂ ತಾಂತ್ರಿಕ ನೆಪವೊಡ್ಡಿ ವಿಳಂಬ ಮಾಡಬಾರದು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಕೆ.ಜಿ.ಜಗದೀಶ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಹೊಸಪೇಟೆಯ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಗುರುವಾರ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಹೊಸಪೇಟೆ ಸೇರಿದಂತೆ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ನೀರು ಸರಬರಾಜು ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಿದ ಅವರು, ಖಾಸಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳು ಲಾಭದ ಉದ್ದೇಶದಿಂದಲೇ ಕೆಲಸ ಮಾಡುತ್ತಾರೆ. ಆದ್ದರಿಂದ ಯಾವುದೇ ಕಾಮಗಾರಿ ಅನುಷ್ಠಾನಗೊಳಿಸ ಬೇಕಾದರೆ ಗುಣಮಟ್ಟ ಕಾಯ್ದುಕೊಳ್ಳಬೇಕು. ಕೆಲಸದಲ್ಲಿ



ವಿಳಂಬವಾದರೆ ಅಥವಾ ಗುಣಮಟ್ಟದಲ್ಲಿ ರಾಜಿ ಮಾಡಿಕೊಂಡರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಜಿಪಂ ಸಿಇಓ ನೋಂಗ್ಜಾಯ್ ಮೊಹಮ್ಮದ್ ಅಕ್ರಂ ಷಾ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜಿ.ಪಂ. ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ 33777.93 ಲಕ್ಷ ರೂ., ತಾಪಂಗೆ 82787.39 ಲಕ್ಷ ರೂ. ಸೇರಿ ಒಟ್ಟು 116565.32 ಲಕ್ಷ ರೂ. ಹಂಚಿಕೆ ಮಾಡಲಾಗಿದೆ. ಈ ಪೈಕಿ ಲೋಕೋಪಯೋಗಿ ಇಲಾಖೆಗೆ 600 ಲಕ್ಷ ರೂ., ಶಿಕ್ಷಣ ಇಲಾಖೆ 81450.28 ಲಕ್ಷ ರೂ., ಆರೋಗ್ಯ ಇಲಾಖೆಗೆ 1084.36 ಲಕ್ಷ ರೂ., ಕುಟುಂಬ ಕಲ್ಯಾಣ ಇಲಾಖೆ 1452.33 ಲಕ್ಷ ರೂ. ಹೀಗೆ ಒಟ್ಟು 29 ಇಲಾಖೆಗಳಿಗೆ 116565.32 ಲಕ್ಷ ರೂ. ಹಂಚಿಕೆ ಮಾಡಲಾಗಿದೆ. ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿ ಸದ್ಯ ಹೆಚ್ಚಿನ ನೀರಿನ ಸಮಸ್ಯೆಯಾಗಿದ್ದು, ಖಾಸಗಿ ಕೊಳವೆ ಬಾವಿ ಹಾಗೂ ಟ್ಯಾಂಕರ್ ಮೂಲಕ ಸಮರ್ಪಕವಾಗಿ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಜಿಪಂ ಸಿಇಓ ನೋಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ, ಜಿ.ಪಂ. ಉಪ ಕಾರ್ಯದರ್ಶಿ ಕೆ. ತಿಮ್ಮಪ್ಪ, ಯೋಜನಾ ನಿರ್ದೇಶಕ ಅನ್ನದಾನಸ್ವಾಮಿ, ಗ್ರಾಮೀಣ ಕುಡಿಯುವ ಮತ್ತು ನೈರ್ಮಲ್ಯ ಇಲಾಖೆ ಇಂಜಿನಿಯರ್ ಎಸ್. ದೀಪಾ, ಡಿಡಿಪಿಐ ವೆಂಕಟೇಶ್ ರಾಮಚಂದ್ರಪ್ಪ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

> **ಮಾದರಿ ಅಂಗನವಾಡಿ ಕಟ್ಟಡ ನಿರ್ಮಿಸಿ**
>
> ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ ಜಿಲ್ಲೆಯಲ್ಲಿ ಆಯ್ದ ಐದು ಸ್ಥಳಗಳಲ್ಲಿ ಮಕ್ಕಳಿಗೆ ಆಟೋಟಕ್ಕೆ ಪೂರಕವಾಗಿರುವಂತೆ ಕ್ರೀಡಾ ಪರಿಕರ ಅಳವಡಿಸುವ ಮೂಲಕ ಉತ್ತಮವಾದ ಮಾದರಿ ಅಂಗನವಾಡಿ ಕಟ್ಟಡ ನಿರ್ಮಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸೂಚನೆ ನೀಡಿದರು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದರು.

ಏ.27ರಂದು ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ

ಬಳ್ಳಾರಿ: ಗೋಮಾತೆಯ ಗೌರವ ದಿನಾಚರಣೆಯನ್ನು ಏ.27 ರಂದು ಇಡೀ ದೇಶಾದ್ಯಂತ ಆಚರಿಸಲಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ದೇಶದ ಗೋವು ಭಕ್ತರು ಹಮ್ಮಿಕೊಂಡಿರುವ ಸಹಿ ಸಂಗ್ರಹ ಅಭಿಯಾನಕ್ಕೆ ನಗರದ ಸತ್ಯನಾರಾಯಣ ಪೇಟೆ ಬಡಾವಣೆಯ ಶ್ರೀರಾಘವೇಂದ್ರ ಸ್ವಾಮಿ ಶ್ರೀಮಠದಲ್ಲಿ, ಶ್ರೀಮಠದ ಪ್ರಧಾನ ವ್ಯವಸ್ಥಾಪಕ ಪಂ.ಪ್ರಸನ್ನಾಚಾರ್ ಅವರು ಗುರುವಾರ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಏ.27ರಂದು ಇಡೀ ವಿಶ್ವದಾದ್ಯಂತ ಗೋಮಾತಾ ಗೌರವ ದಿನವನ್ನು ಆಚರಿಸಲಾಗುತ್ತಿದೆ. ಇದರ ಭಾಗವಾಗಿ ಗೋಮಾತೆಯ ಸಂರಕ್ಷಣೆಗೆ, ಸಹಿ ಸಂಗ್ರಹ ಅಭಿಯಾನವನ್ನು ಹಮ್ಮಿಕೊಂಡಿದೆ. ಈ ದಿನಾಂಕದಂದು ಭಾರತೀಯ ಎಲ್ಲ ಗೋವು ಭಕ್ತರು, ತಮ್ಮ ತಮ್ಮ ವ್ಯಾಪ್ತಿಯ ತಹಶೀಲ ಕಚೇರಿ, ಬ್ಲಾಕ್ ಕಚೇರಿಗಳಿಗೆ ತೆರಳಿ ತಹಸೀಲ್ದಾರ್ ಅಥವಾ ಬ್ಲಾಕ್ ಅಧಿಕಾರಿಗಳವರ ಮೂಲಕ ದೇಶದ ರಾಷ್ಟ್ರಪತಿಗಳು, ಪ್ರಧಾನ ಮಂತ್ರಿ ನರೇಂದ್ರ ಮೋದಿ, ರಾಜ್ಯದ ರಾಜ್ಯಪಾಲರಿಗೆ ಹಾಗೂ ಮುಖ್ಯಮಂತ್ರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಬೇಕು ಎಂದರು. ಗೋಮಾತೆಗೆ ರಾಷ್ಟ್ರೀಯ ತಾಯಿ, ರಾಷ್ಟ್ರೀಯ ದೇವರ, ರಾಷ್ಟ್ರೀಯ ದೇವತೆ, ರಾಷ್ಟ್ರೀಯ ಪರಂಪರೆ ಅಥವಾ ರಾಷ್ಟ್ರೀಯ ಗುರುತಿನ ಗೌರವಾನ್ವಿತ ಸ್ಥಾನವನ್ನು ನೀಡಬೇಕು, ಗೋವಿನ ಸೇವೆಗಾಗಿ ಕೇಂದ್ರ ಕಾನೂನು ರೂಪಿಸಬೇಕು, ಭಾರತದಲ್ಲಿ ಗೋಹತ್ಯೆಯನ್ನು ಸಂಪೂರ್ಣ ಕೊನೆಗೊಳಿಸಬೇಕು. ಆಯುರ್ವೇದ ಆಸ್ಪತ್ರೆಗಳಲ್ಲಿ ಪಂಚಗವ್ಯ



ಔಷಧಿಯನ್ನು ಉಚಿತವಾಗಿ ವಿತರಿಸಬೇಕು. ಕೈಬಿಟ್ಟ ದನಗಳ ಸೇವೆಗಾಗಿ ಎಲ್ಲ ರಾಜ್ಯಗಳು ಗೋಶಾಲೆಗೆ ಅನುದಾನವನ್ನು ಒದಗಿಸಬೇಕು. ಸರ್ಕಾರಿ ನಿಯಂತ್ರಿತ ದೇವಾಲಯಗಳಲ್ಲಿ ನೈವೇದ್ಯ, ಆರತಿ, ಪೂಜೆ, ಪ್ರಸಾದಕ್ಕಾಗಿ ಕಡ್ಡಾಯವಾಗಿ ದೇಸಿ ಹಸುಗಳ ಹಾಲು, ಮೊಸರು ಹಾಗೂ ತುಪ್ಪವನ್ನು ಬಳಸಬೇಕು. ರಾಸಾಯನಿಕ ಕೃಷಿಯನ್ನು ನಿಯಂತ್ರಿಸಿ, ಗೋಮಯ ಆಧಾರಿತ ಕೃಷಿಯನ್ನು ಸರ್ಕಾರಗಳು ಉತ್ತೇಜಿಸಬೇಕು, ಪ್ರತಿಯೊಬ್ಬರೂ ಈ ಅಭಿಯಾನದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಶ್ರೀಮಠಕ್ಕೆ ಶ್ರೀಗುರುರಾಯರ ದರ್ಶನಕ್ಕೆ ಆಗಮಿಸಿದ ಭಕ್ತರು ಸಹಿ ಸಂಗ್ರಹ ಅಭಿಯಾನದಲ್ಲಿ ಭಾಗವಹಿಸಿ, ಗೋವು ಭಕ್ತರ ಈ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ನಿವೃತ್ತ ತಹಸೀಲ್ದಾರ್ ಅಜಿತ್ ಸಿಂಗ್, ಲೆಕ್ಕ ಪರಿಶೋಧಕ ಕೆ.ನರಸಿಂಹ ಮೂರ್ತಿ, ಗೋವು ಭಕ್ತರಾದ ಸೂರಜ್, ಸುಬ್ರಹ್ಮಣ್ಯ ಸಿ.ವಿ.ಸೇರಿದಂತೆ ನೂರಾರು ಭಕ್ತರು ಇತರರಿದ್ದರು.